ಕಸ್ತೂರಿ

ಡಿಸೆಂಬರ್ ೧೯೬೮








ಉಸಿರಿನ ದುರ್ವಾಸನೆಯನ್ನು ನಿವಾರಿಸಿರಿ...
ದಂತಕ್ಷಯವನ್ನು ಎದುರಿಸಿರಿ

ಪ್ರತಿ ಸಲ ಊಟವಾದ ಮೇಲೆ ಕೋಲ್ಗೇಟ್‌ನಿಂದ ಹಲ್ಲುಜ್ಜಿರಿ. ಅದು ಜಗತ್ತಿನಾದ್ಯಂತ ದಂತವೈದ್ಯರು ಶಿಫಾರಸು ಮಾಡುವ ರೀತಿಯಲ್ಲಿ ನಿಮ್ಮ ಹಲ್ಲುಗಳಿಗೆ ರಕ್ಷಣೆ ನೀಡುತ್ತದೆ.


ಹಲ್ಲುಗಳೆಡೆಯಲ್ಲಿ ಉಳಿಯುವ ಆಹಾರ ಕಣಗಳಲ್ಲಿ ರೋಗಾಣುಗಳು ಬೆಳೆಯುತ್ತವೆ. ಇವು ಉಸಿರಿನ ದುರ್ವಾಸನೆಗೆ ಕಾರಣವಾಗುತ್ತವೆ —ಆಮೇಲೆ ಇವು ನೋಯುವ ದಂತ ಕ್ಷಯವನ್ನು ಉಂಟುಮಾಡುತ್ತವೆ.

ಆದುದರಿಂದ ಯಾವಾಗಲೂ ಆಹಾರವನ್ನು ಸೇವಿಸಿದ ನಂತರ ಕೂಡಲೇ ಕೋಲ್ಗೇಟ್ ರೀತಿಯಲ್ಲಿ ಹಲ್ಲುಜ್ಜಿರಿ. ನಿಮ್ಮ ಶ್ವಾಸವನ್ನು ಶುಚಿಗೊಳಿಸಲು, ಹಲ್ಲುಗಳನ್ನು ಬಿಳುಪಾಗಿಸಲು ಮತ್ತು ದಂತಕ್ಷಯವನ್ನು ಎದುರಿಸಲು ಅದು ಅತ್ಯಂತ ಪರಿಣಾಮಕಾರಿ ಎಂದು ಪ್ರಮಾಣಿತವಾಗಿದೆ.


ಕೋಲ್ಗೇಟ್‌ನ ವಿಶ್ವಸನೀಯ ಸೂತ್ರವು ಕೆಲಸ ಮಾಡುವ ರೀತಿ :



ಉಸಿರಿನ ದುರ್ವಾಸನೆಯನ್ನು ಮತ್ತು ದಂತ ಕ್ಷಯವನ್ನು ಉಂಟುಮಾಡುವ ರೋಗಾಣುಗಳು ನಿಮ್ಮ ಹಲ್ಲುಗಳೆಡೆಯಲ್ಲಿ ಸಿಕ್ಕಿಕೊಂಡ ಆಹಾರ ಕಣಗಳಲ್ಲಿ ಬೆಳೆಯುತ್ತವೆ.



ಕೋಲ್ಗೇಟ್‌ನ ಅಪೂರ್ವವಾದ ಕಾರ್ಯಶೀಲ ನೊರೆ ಹಲ್ಲುಗಳೆಡೆಯನ್ನು ಆಳವಾಗಿ ಪ್ರವೇಶಿಸುತ್ತದೆ ಮತ್ತು ಅಪಾಯಕರವಾದ ಆಹಾರ ಕಣಗಳನ್ನೂ ರೋಗಾಣುಗಳನ್ನೂ ಹೋಗಲಾಡಿಸುತ್ತದೆ.



ಫಲಿತಾಂಶ : ಆಕರ್ಷಕವಾದ, ಬಿಳುಪಾದ ಹಲ್ಲುಗಳು, ಆತ್ಮವಿಶ್ವಾಸವನ್ನುಂಟುಮಾಡುವ ಶುಚಿಯಾದ ಉಸಿರು ಮತ್ತು ದಂತಕ್ಷಯದ ವಿರುದ್ಧ ರಕ್ಷಣೆ.

ಅಧಿಕ ಶುಚಿಯಾದ, ದುರ್ವಾಸನೆ ರಹಿತವಾದ ಉಸಿರಿಗಾಗಿ ಮತ್ತು ಅಧಿಕ ಬಿಳುಪಾದ ಹಲ್ಲುಗಳಿಗಾಗಿ ಹೆಚ್ಚು ಜನರು ಜಗತ್ತಿನಲ್ಲಿ ಬೇರೆ ಯಾವುದೇ ಟೂಥ್‌ಪೇಸ್ಟಿಗಿಂತ ಅಧಿಕವಾಗಿ ಕೋಲ್ಗೇಟನ್ನು ಕೊಳ್ಳುತ್ತಾರೆ.



ದಂತವೈದ್ಯರು ಮಾತ್ರ ನಿಮಗೆ ಉತ್ತಮತರ ದಂತರಕ್ಷಣೆಯನ್ನು ನೀಡಬಲ್ಲರು

[illegible]

DC.G.64 KN



Nestle
NESCAFE
instant coffee
ಸದಾ ಲವಲವಿಕೆಯಿಂದಿರಲು
ನೆಸ್‌ಕಾಫೆ®
100% ಶುದ್ಧವಾದ ಕಾಫಿಯಿಂದ
ತಯಾರಿಸಲ್ಪಟ್ಟ ಏಕಮಾತ್ರ ಇನ್‌ಸ್ಟೆಂಟ್ ಕಾಫಿ
NS/CAS-1/78 KAN

ಕಸ್ತೂರಿ

✡

ವ್ಯವಸ್ಥಾಪಕ ಸಂಪಾದಕ
ಎಚ್. ಆರ್. ಬಸವರಾಜ್

✡

ಸಂಪಾದಕ :
ಪ. ಸು. ಭಟ್ಟ

✡

ಕಲೆ :
ಕೆ ಬಿ. ಕುಲಕರ್ಣಿ

✡

ಮುಖಪುಟ :
'ನೆರಳಲ್ಲೂ ಬೆಳಕು!'
ಚಿತ್ರ:
ದೇವಿದಾಸ ಕಸಬೇಕರ

✡

ಚಂದಾದರ

೩ ವರ್ಷ (ಅಂಚೆ ಸೇರಿ)		ರೂ. ೩೫-೦೦
೨ ವರ್ಷ	,,	ರೂ. ೨೫-೦೦
೧ ವರ್ಷ	,,	ರೂ. ೧೪-೦೦
ಅರ್ಧ ವರ್ಷ	,,	ರೂ. ೭-೫೦

KASTURI December 1978

ಬೆಳಕಿಂಡಿ

'ವಿವಾಹವಯಸ್ಕ' ಎನಿಸಿದಾಗ ನಾನು ಆದರ್ಶ ಹೆಣ್ಣು ಸಿಗುವವರೆಗೂ ಮದುವೆಯಾಗದಿರಲು ನಿರ್ಧರಿಸಿದೆ. ಕೆಲ ವರ್ಷ ಕಳೆದವು. ಅಂಥ ಹೆಣ್ಣು ಸಿಕ್ಕಳು ಆದರೆ, 'ಆದರ್ಶ ಮನುಷ್ಯನಿಗಾಗಿ ದಾರಿ ಕಾಯುತ್ತಿದ್ದೇನೆ' ಅಂದಳು.

-ಮೈಕೆಲ್ ಸ್ಮೈಮನ್

ಹೆಂಡತಿ ಖರ್ಚು ಮಾಡಬಹುದಾದುದಕ್ಕಿಂತ ಹೆಚ್ಚು ಗಳಿಸುವವನೇ ಜಾಣ. ಅಂಥವನನ್ನು ಮದುವೆಯಾಗುವವಳು ಅತಿ ಜಾಣೆ.

-ಅನಾಮಿಕ

ಪತ್ನಿ ಮತ್ತು ಉಪಪತ್ನಿ ಇವರಲ್ಲಿರುವ ಅಂತರ?

ಹಗಲು ಮತ್ತು ರಾತ್ರಿಯದು.

-'ವರ್ಲ್ಡ್ ಡೈಜೆಸ್ಟ್'ನಿಂದ

ಹೆಣ್ಣು (ಲೇಡಿ) ಮತ್ತು ಚುಟ್ಟ (ಬೀಡಿ) ಎರಡೂ ಒಂದೇ ರೀತಿ. ತಮ್ಮನ್ನು ಅತ ಆಸ್ವಾದಿಸುತ್ತಿಲ್ಲ ಎಂದು ಗೊತ್ತಾದೊಡನೆಯೇ ಆರಿ ತಣ್ಣಗಾಗಿಬಿಡುತ್ತವೆ.

-ಇಂಗ್ಲಿಷ್ ಗಾದೆ

✡

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ಆನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ

ಈ ಸಂಚಿಕೆಯಲ್ಲಿ

ಸಹಚಿಂತನ	...		೭
ಸಂಸಾರ ಸುಖ	...	ಎಸ್ಸಾರ್ಜಿ	೯
ಕಲೆ	...		೧೧
ಪೋಪ್ ಜಗದ್ಗುರುಗಳು	...	ಎಡ್ವರ್ಡ್ ನರೋನ್ಹಾ	೧೫
ಇದುವೇ ಜೀವ......	...		೨೧
ಕನ್ನಡ 'ಕಸ್ತೂರಿ'	...	ಕೆ. ಚಂದ್ರಮೌಳಿ	೨೪
ಪ್ರಥಮ ಬೇಟೆ ಅನುಭವ	...	ಡಿ. ಆರ್. ಕುಲಕರ್ಣಿ	೩೨
ತೇಲುವ ಕಾರಖಾನೆ	...		೩೯
ಯಾಕೆ ? (ಕಥೆ)	...	ಗೀತಾ ಕುಲಕರ್ಣಿ	೪೧
ಉಗ್ರಾಣ (ಕವನ)	...	ಸಿದ್ದಯ್ಯ ಪುರಾಣಿಕ	೪೯
ಭಾರತೀಯ ಶಿಲ್ಪದಲ್ಲಿ ಸರಸ್ವತಿ	...	ಪುಂಡಿಕ್ಯಾ ಗಣಪಯ್ಯಭಟ್ಟ	೫೦
ಕಣ್ಣಾಲೆಯ ಕಸಿ ಮಾಡುವುದ ಕಂಡೆ	...	ಬಾಲಕೃಷ್ಣ	೫೬
ಶಬ್ದಭಾಂಡಾರ	...		೬೧
ಕವಿ ಮತ್ತು ಕೋಗಿಲೆ (ಕವನ)	...	ಪಾ. ವೆಂ. ಆಚಾರ್ಯ	೬೩
ಕಾವ್ಯ–ನಾಟಕ (ಕಥೆ)	...	ಸತ್ಯಕಾಮ	೬೫
ಕತ್ತೆಗೊಂದು ಕಾಲ (ವಿಡಂಬನೆ)	...	ಪ.ಲೋ. ಬಂಕಾಪುರ	೭೧
ಡಾಕ್ಟರ ಷಾಪಿನ ಘಟನೆಗಳು (ನಗೆಬರಹ)	...	ಎಚ್.ಎಲ್. ಕೇಶವಮೂರ್ತಿ	೭೫
ನಗೆಮಲ್ಲಿಗೆ	...		೭೭
ಒಬ್ಬ ಹುಚ್ಚನ ದಿನಚರಿ (ಚೀನೀ ಕಥೆ)	...	ಲೂ ಶೂನ್	೭೯
ಭಾರತಾಂಬೆಗೊಂದು ನಾಲಾಮಾಲೆ	...	ಟಿ. ಎಸ್. ಸಂಜೀವರಾವ್	೯೧
ಪರಕಾಯ ಪ್ರವೇಶ (ವೈಜ್ಞಾನಿಕ ಕಥೆ)	...	ರಾಜಶೇಖರ ಭೂಸನೂರಮಠ	೯೮
ಫರ್ಮಾನ ಅಂತಿಮ ಪ್ರಮೇಯ	...	ಜಿ.ಟಿ. ನಾರಾಯಣರಾವ್	೧೦೫

ಪುಸ್ತಕ ವಿಭಾಗ

ಅಸ್ವೀಕೃತ (ನೀಳ್ಗತೆ)	...	ಎ. ವಿ. ಲಕ್ಷ್ಮೀನಾರಾಯಣ್	೧೧೪

ಸ್ವಾಗತಾರ್ಹ ವಿಶೇಷಾಂಕ

'ಕಸ್ತೂರಿ' ದೀಪಾವಳಿ ವಿಶೇಷ ಸಂಚಿಕೆ ಉತ್ತಮವಾಗಿ ಮೂಡಿ ಬಂದಿದೆ 'ಕುಂಟು ಕಾಲಿನ ಕತೆ' ನಿಜಕ್ಕೂ ಒಂದು ಸುಂದರ ಕತೆ. ಕಳ್ಳ ಸಾಗಾಣಿಕೆಯನ್ನು ವಿರೋಧಿಸಿ, ಸ್ವದೇಶಿ ವಸ್ತುಗಳ ಬಗ್ಗೆ ಹೊಗಳುತ್ತಾ, "ಆಡುವುದು ಆಚಾರ ಮಾಡುವುದು ಭ್ರಷ್ಟಾಚಾರ" ಎಂಬುದನ್ನು ತೋರಿಸಲು ಹೋಗಿ ಕತೆ ಕೊನೆಗೊಳ್ಳುತ್ತದೆ. 'ಕಲಿಯುಗದ ದೇವರುಗಳು' ಕತೆ ಅಸಂಬದ್ಧವೇನಲ್ಲ. ತುದಿಯಿಂದ ಬುಡದ ವರೆಗೂ ತಾಂಡವವಾಡುವ ಭ್ರಷ್ಟಾಚಾರ ಎಲ್ಲೆಲ್ಲೂ ಹರಡಿರುವಾಗ, ಶ್ರಮಕ್ಕೆ ಬೆಲೆ ಇಲ್ಲದಿರುವಾಗ ಯಾವ ನೌಕರ ತಾನೇ ಶ್ರದ್ಧೆ ವಹಿಸಿ ಕೆಲಸ ಮಾಡುತ್ತಾನೆ? ಇತರ ಪ್ರಿಯವಾದ ಲೇಖನಗಳು, 'ಮೂಕಜ್ಜಿಯ ಕನಸುಗಳು,' 'ವಿಶೇಷ,' 'ದೀಪಾವಳಿಯ ಧೂಳು' ಮುಂತಾದವು.

ಗುಂಡ್ಲುಪೇಟೆ –ಎಂ. ಎಸ್. ರಮೇಶ್

ದೀಪಾವಳಿ ಸಂಚಿಕೆಯಾಗಿ ಬಂದ 'ಕಸ್ತೂರಿ'ಯಲ್ಲಿ ಮುಖ್ಯ ಆಕರ್ಷಣೆಯೆಂದರೆ 'ಮೂಕಜ್ಜಿಯ ಕನಸುಗಳು,' 'ಓ ಎಂತಹ ಅನುಭವಗಳು!' ಎಂದು ಉದ್ಗರಿಸುವ ಆನಂದದಲ್ಲಿ, ಈ ಸಂಗ್ರಹ ಚಿಕ್ಕದಾಯಿತು, ಎಂಬ ಅನಿಸಿಕೆ. 'ಇಲ್ಲಿ ಸಲ್ಲದವರು,' 'ಕುಬೇರ ರಾಜ್ಯದ ಚಿತ್ರ ವಿಚಿತ್ರ!' ನವೀನತೆಯಲ್ಲಿ ಬಂದ 'ಸಂಬಂಧ,' 'ಇಂದಿರಾ ಗಾಂಧಿ ಇಳಿದ ಮೇಲೆ ಬರುತ್ತೇನೆ' 'ಮುರಳಿ ಯತ್ನವ ಮಾಡು' (ರೇಡಿಯೋ ನಾಟಕ) ಇವು ಸ್ವಾಗತಾರ್ಹ ಲೇಖನಗಳು.

ಮತ್ತು ಸಂಚಿಕೆಯ ಮೊದಲ ಎಂಟು. ಕೊನೆಯ ಎಂಟು ಹಾಳೆಗಳು ಮತ್ತು ನಡುವೆಯೂ ಸಾಕಷ್ಟು ಜಾಹೀರಾತುಗಳು ತುಂಬಿಕೊಂಡಿವೆಯಲ್ಲ? ಇಷ್ಟೊಂದು ಜಾಹೀರಾತುಗಳಿಲ್ಲದಿದ್ದರೆ ಇದೊಂದು ನಿಜವಾಗಿಯೂ ಅಪೂರ್ವ 'ಕಸ್ತೂರಿ'ಯೇ ಸರಿ.

ಅಳ್ನಾವರ –ಸು. ಶ.

ದೃಷ್ಟಿಕೋನ ನಮಗೆ ಅರ್ಥವಾಗುತ್ತದೆ. ಆದರೆ 'ಕಸ್ತೂರಿ'ಯು ಈ ಸಂಚಿಕೆಯಲ್ಲಿ ಓದುಗರಿಗೆ ಜಾಹೀರಾತನ್ನು ಹೊರತುಪಡಿಸಿ ನೀಡಲಾದ ವಾಚನೀಯ ಸಂಗ್ರಹ ನೂರಕ್ಕೆ ೭೨ ರಷ್ಟಿದೆ ಯೆಂಬುದನ್ನು ನಿಮ್ಮ ಗಮನಕ್ಕೆ ತರಬಯಸುತ್ತೇವೆ. –ಸಂ]

ಒಳ್ಳೆಯ ಕಥೆ

ನವೆಂಬರ್ 'ಕಸ್ತೂರಿ'ಯಲ್ಲಿ ಪ್ರಕಟವಾದ 'ಇಂದಿರಾ ಗಾಂಧಿ ಇಳಿದ ಮೇಲೆ ಬರುತ್ತೇನೆ' (ವಿಶುಕುಮಾರರ ಕಥೆ) ತುರ್ತುಪರಿಸ್ಥಿತಿಯಲ್ಲಿ ನಡೆದ ನೈಜ ಘಟನೆಯೇನೋ ಎಂಬಂತೆ ಕಣ್ಣಿಗೆ ಕಾಣುವಂತೆ ತುಂಬಾ ಮಾರ್ಮಿಕವಾಗಿದೆ. ಅಂಥ ಕಥೆಗಳನ್ನು ಇನ್ನಷ್ಟು ಪ್ರಕಟಿಸಬೇಕಾಗಿ ಅಪೇಕ್ಷೆ. 'ಕಲಿಯುಗದ ದೇವರುಗಳು' ಹರಟೆ ಚೆನ್ನಾಗಿದೆ.

ಕಾಸರಗೋಡು –ಪಂಜಜೆ ಕೃಷ್ಣಭಟ್ಟ

'ನನ್ನನ್ನು ನಾನು ಕಂಡಂತೆ'

ನವೆಂಬರ್ ಸಂಚಿಕೆಯಲ್ಲಿ ದೇ. ಜವರೇಗೌಡ ಅವರು ಬರೆದ, 'ನನ್ನನ್ನು ನಾನು ಕಂಡಂತೆ' ಎಂಬ ಸ್ವ-ಸಂದರ್ಶನ ನನಗೆ ತುಂಬಾ ಹಿಡಿಸಿತು. ಅವರು ತಮ್ಮ ವಾಸ್ತವಿಕ ಜೀವನದ ಚಿತ್ರಣವನ್ನು ಬಿಚ್ಚು ಮನಸ್ಸಿನಿಂದ ಓದುಗರ ಮುಂದಿಟ್ಟಿದ್ದಾರೆ.

ಚನ್ನಸಂದ್ರ –ಸಿ. ಎಂ. ಮಹದೇವಯ್ಯ

ಸುಂದರ ಸಂಚಿಕೆ

ನವೆಂಬರ್ ೭೮ರ 'ಕಸ್ತೂರಿ ದೀಪಾವಳಿ ವಿಶೇಷಾಂಕ' ಚೆನ್ನಾಗಿದೆ. ಎಲ್ಲ ಕಥೆಗಳೂ ಕವನಗಳು ಸುಂದರವಾಗಿದೆ. ವಿಶುಕುಮಾರ್‌ರವರು ಬರೆದಿರುವ 'ಇಂದಿರಾ ಗಾಂಧಿ ಇಳಿದ ಮೇಲೆ ಬರುತ್ತೇನೆ' ಕಥೆ ಬಹಳ ಚೆನ್ನಾಗಿದೆ. ಎಚ್. ಆರ್. ಮಧುರಾನಾಥರವರ ಮುಖಪುಟ 'ಅಹಾ! ದೀಪಾವಳಿ' ತುಂಬಾ ಸುಂದರವಾಗಿದೆ.

ಉಡಿಗಾಲ –ಎಸ್. ಸಂಜುಂಡಸ್ವಾಮಿ

ವಿಶೇಷತೆ ಏನಿಲ್ಲ!

ಕಸ್ತೂರಿಯು ಮಾಸಿಕ ಸಂಚಿಕೆಗಳೇ ವಿಶಿಷ್ಟ, ವೈವಿಧ್ಯ– ವಿಚಾರಪೂರ್ಣವಾಗಿರುವಾಗ, ಇನ್ನು

ವಿಶೇಷ ಸಂಚಿಕೆ ಹೇಗಿರಬೇಡ ಎಂದೆಲ್ಲಾ ಕನಸು ಕಟ್ಟಿಕೊಂಡಿದ್ದ ನನಗೆ ಕನಸೇ ಉಳಿಯಿತು, ವಿಶೇಷ ಸಂಚಿಕೆಯನ್ನು ಕಂಡಾಗ. ಕನ್ನಡ ಸಾಹಿತ್ಯ ಇಂದು ಭಾಷೆ, ವಸ್ತು, ತಂತ್ರಗಳಲ್ಲಿ ಎಷ್ಟೆಲ್ಲಾ ವೈವಿಧ್ಯವಾಗಿ ಪುಷ್ಟವಾಗಿ ಹೊರ ಬರುತ್ತಿರುವಾಗ ಆದರ್ಶದ ಅಂಚಿನಲ್ಲೇ ನಡೆವ ಭಾವುಕತೆಯ ಮಾತುಗಳಲ್ಲೇ ಮೆರೆವ ಲೇಖನ-ಗಳೇ ಹೆಚ್ಚಾಗಿ ಕಂಡುಬರುತ್ತಿವೆಯಲ್ಲ? ಇದ್ದುದರಲ್ಲಿ ಕವನಗಳೇ ಚೆನ್ನಾಗಿವೆ.

ಬೆಂಗಳೂರು —ಮು. ಅ. ಶ್ರೀರಂಗ

ಮಾರ್ಮಿಕ

ದೀಪಾವಳಿ ವಿಶೇಷಾಂಕದಲ್ಲಿನ ಪಿ. ವಿ. ಶಾಸ್ತ್ರಿ ಕಿಬ್ಬಳ್ಳಿಯವರ 'ಸಂಬಂಧ' ಕಥಾವಸ್ತು ಉತ್ತಮವಾಗಿರುವುದಲ್ಲದೆ, ಶೈಲಿಯೂ ಗಂಭೀರವಾಗಿದೆ. ಸಹಜವಾದ ನೈಸರ್ಗಿಕ ಆಕರ್ಷಣೆಗೊಳಗಾದ ಹೆಣ್ಣು—ಗಂಡುಗಳು ವ್ಯವಸ್ಥಿತ ಸಮಾಜದ ಬೇಲಿಯನ್ನು ದಾಟಿದಾಗ ತಮ್ಮಲ್ಲಿಯೇ ಸುಪ್ತವಾಗಿ ಅಂತರಾಳದಲ್ಲಡಗಿದ್ದ ದೌರ್ಬಲ್ಯದಿಂದಾಗಿ ಒಮ್ಮೆಲೇ ಯಾವ ರೀತಿಯ ಮಾನಸಿಕ ತೊಳಲಾಟಕ್ಕೀಡಾಗುವರೆಂಬ ದುರಂತ ಹೃದಯಂಗಮವಾಗಿ ಮಾರ್ಮಿಕವಾಗಿ ಮೂಡಿ ಬಂದಿದೆ.

ಬೆಂಗಳೂರು —ಬಿ. ಲಕ್ಕಣ್ಣ

ಕುಬೇರ ರಾಜ್ಯದಲ್ಲಿ...

'ಕಸ್ತೂರಿ' ದೀಪಾವಳಿ ಸಂಚಿಕೆಯಲ್ಲಿನ 'ರಂಜನ' ಭಟ್ಟರ 'ಕುಬೇರ ರಾಜ್ಯದ ಚಿತ್ರ ವಿಚಿತ್ರ'ವನ್ನು ಓದಿದ ನಂತರ ಅನಿಸಿದ್ದನ್ನು ಬರೆಯುತ್ತಿದ್ದೇನೆ. ಅವರೆನ್ನುತ್ತಾರೆ- ಕೆನ್ನೆಡಿ ಕೊಲೆಯಾದಾಗ ಅಮೇರಿಕನ್ನರ ನಡವಳಿಕೆ ಘನ ಶಿಸ್ತು ಸಂಯಮದಿಂದ ಕೂಡಿತ್ತೆಂದು. ಆ ಸಂದರ್ಭಕ್ಕೆ ಅವರು ಗಾಂಧೀ ಕೊಲೆಯ ಸಂದರ್ಭವನ್ನು ತುಲನೆ ಮಾಡುತ್ತಾರೆ. ಗಾಂಧೀ ಕೊಲೆ ಸಂದರ್ಭದಲ್ಲಿ ನಡೆದ ಉದ್ರೇಕಕಾರಿ ಗಲಭೆ ವಿಷಾದನೀಯವಾದರೂ, ಜನ ಶೋಕ ಸೂಚಕವಾಗಿ ಅಂಗಡಿಗಳನ್ನು ಮುಚ್ಚಿ ಹರತಾಳ ಆಚರಿಸುವುದರಲ್ಲಿ ಇತರೆ ಎಲ್ಲಾ ಕಾರ್ಯ-ಗಳನ್ನು ಸ್ಥಗಿತಗೊಳಿಸುವುದರಲ್ಲಿ ತಪ್ಪೇನಿದೆ?— ಅದೂ ದೇಶದ ಒಬ್ಬ ಮಹಾನಾಯಕ ದುರ್ಮರಣಕ್ಕೀಡಾದಾಗ ? ಆ ಸನ್ನಿವೇಶ-ದಲ್ಲಿಯೂ ಏನೂ ಆಗದಿದ್ದವರಂತೆ ಮನೋ-ರಂಜನ, ವಿಹಾರ, ವಿನೋದಗಳಲ್ಲಿ ಮುಳು-ಗಿರಬೇಕೆ? ಕೊಲೆಯಾದದ್ದು ವ್ಯಕ್ತಿಯೊಬ್ಬರದು, ರಾಷ್ಟ್ರಾಧ್ಯಕ್ಷರದಲ್ಲ ಎನ್ನುವಷ್ಟು ವ್ಯಾವಹಾರಿಕ ನಡವಳಿಕೆ ಪ್ರಶಂಸನೀಯವೇ? ಅಥವಾ "ಕೆನ್ನೆಡಿ ಮಡಿದುದರಿಂದ ನಮ್ಮ ಸರಕಾರದ ರೀತಿ ನೀತಿಗಳು ಬದಲಾಗುವುದಿಲ್ಲ" ಎಂದು ಭಾಷಣ ಬಿಗಿಯುವಷ್ಟು ನಮ್ಮ ಭಾವನೆಗಳು ಬರಡಾಗ-ಬೇಕೆ? ಕುಬೇರ ರಾಜ್ಯದ ಜನಸಾಮಾನ್ಯರಲ್ಲಿ ಸಹ ಕಂಡುಬರುವ ಈ ಘನ ಶಿಸ್ತು ಸಂಯಮ-ಗಳನ್ನು ನಮ್ಮ ದೇಶದಲ್ಲಿ ನಾವು ಕಾಣದಿದ್ದರೆ ನಷ್ಟವೇನಿಲ್ಲ ಎಂದು ಅನಿಸುತ್ತದೆ.

ಬೆಂಗಳೂರು —ನಾರಾಯಣರಾವ್

[ಗಾಂಧೀ ಕೊಲೆಯ ನಂತರ ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿ ಮತ್ತು ಮುಂಬಯಿ ಕರ್ನಾಟಕದ ಉತ್ತರ ಗಡಿಭಾಗದ ಕೆಲವೆಡೆ ಗಲಭೆಗಳನ್ನು ಕಣ್ಣಾರೆ ಕಂಡು ಅನುಭವಿಸಿದ ಲೇಖಕರಿಗೆ ಅಮೇರಿಕದಲ್ಲಿಯ ಪ್ರತಿಕ್ರಿಯೆ ತಟ್ಟನೆ ಹಿಡಿಸಿರಬಹುದಾಗಿದೆ. ಗಾಂಧೀಹತ್ಯೆಯ ನಂತರ ದೇಶದ ಈ ಭಾಗದಲ್ಲಿ ನಡೆದಷ್ಟು ತೀವ್ರ ಹಿಂಸಾಚಾರ ಬೇರೆಲ್ಲೂ ನಡೆಯಲಿಲ್ಲ-ವೆನ್ನುವುದು ಮರೆಯಲಿಕ್ಕಾಗದ ಇತಿಹಾಸವಾಗಿ ಉಳಿದಿದೆ. ಪ್ರಸ್ತುತ ಲೇಖನದಲ್ಲಿ ಒಬ್ಬ ವಿದ್ಯಾರ್ಥಿನಿ "ಕೆನ್ನೆಡಿ ಮಡಿದುದರಿಂದ ನಮ್ಮ ಸರಕಾರದ ರೀತಿನೀತಿಗಳು ಬದಲಾಗುವುದಿಲ್ಲ" ಎಂದುದನ್ನು ಲೇಖಕರು ಮೆಚ್ಚುತ್ತಾರೆಂಬ ಧ್ವನಿ ಹೊರಡುವುದಿಲ್ಲವಲ್ಲ? ಇನ್ನುಳಿದುದೆಲ್ಲ ಅಭಿಪ್ರಾಯದ ಮಾತು. ಸಂ.]

ಕಸ್ತೂರಿ

ಸಂಚಿಕೆ: ೪ ಕಸ್ತೂರಿ, ಡಿಸೆಂಬರ್ ೧೯೭೪ ವರ್ಷ: ೨೩

ಸಂಸಾರ ಸುಖ

-ಎಸ್ವಾಜಿ

ಜಂಜಾಟವಿಲ್ಲದ ಸಂನ್ಯಾಸವೇ ನೆಮ್ಮದಿಯ ಮೂಲ ಎಂದುಕೊಂಡಿದ್ದ ಒಬ್ಬ ಸಂನ್ಯಾಸಿ ಊರ ಮುಂದಿನ ಹಾಳು ಗುಡಿಯ ಮೂಲೆಯಲ್ಲಿ ಬೆಚ್ಚಗೆ ಮುದುರಿ ಕುಳಿತಿದ್ದ. ಹೊರಗೆ ಕೊರೆಯುವ ಚಳಿಗಾಳಿಯೊಂದಿಗೆ ತುಂತುರು ಮಳೆಯೂ ಉದುರುತ್ತಿತ್ತು. ಎಲ್ಲೆಲ್ಲೂ ಕೆಸರು, ನೀರು. ಆಗ ಸಂಪೂರ್ಣ ತೋಯ್ದು ಹೋಗಿದ್ದ ಒಬ್ಬ ರೈತ ಎತ್ತುಗಳ ಜೊತೆ ನೇಗಿಲನ್ನು ಹೊತ್ತುಕೊಂಡು ಗಡಗಡ ನಡಗುತ್ತಾ ಮನೆಯ ಕಡೆಗೆ ನಡೆದು ಹೋದ. ಅವನನ್ನು ಕಂಡ ಸಂನ್ಯಾಸಿಗೆ ನಗು ಬಂತು. 'ಸಂಸಾರವೆಂಬ ಬಂಧನಕ್ಕೆ ಸಿಲುಕಿ ಕಷ್ಟಪಡುತ್ತಿರುವ ಆ ರೈತನಿಗಿಂತ ನಾನೇ ಸುಖಿ; ನನಗೆ ಯಾವ ತಾಪತ್ರಯಗಳೂ ಇಲ್ಲ' ಎಂದುಕೊಂಡು ತನ್ನ ಬಗ್ಗೆ ಹೆಮ್ಮೆಪಟ್ಟುಕೊಂಡ.

ಸ್ವಲ್ಪ ಹೊತ್ತಿನ ನಂತರ ಮಳೆ ಕಡಿಮೆಯಾಯಿತು. ಸಂನ್ಯಾಸಿಯ ಹೊಟ್ಟೆ ಹಸಿದಿತ್ತು. ಭಿಕ್ಷಾಪಾತ್ರೆಯನ್ನು ಕೈಗೆತ್ತಿಕೊಂಡು ಕೆಸರು, ನೀರಿನಲ್ಲಿ ಜಾರುತ್ತ ಕೆಲವು ಮನೆಗಳಿಗೆ ಹೋಗಿ ಅನ್ನ ಬೇಡಿದ. ಆದರ ಫಲವಾಗಿ ಎರಡು ತುತ್ತು ಅನ್ನವೂ ದೊರೆತಿರಲಿಲ್ಲ. ತನ್ನ ದುರದೃಷ್ಟದ ಬಗ್ಗೆ ನೊಂದುಕೊಳ್ಳುತ್ತಾ ಮತ್ತೊಂದು ಮನೆಯ ಮುಂದೆ ನಿಂತು "ಭವತಿ ಭಿಕ್ಷಾನ್ ದೇಹಿ" ಎಂದ. ಬೇಡಿದ್ದು ಯಾರಿಗೂ ಕೇಳಿಸಿದಾತಾಗಲಿಲ್ಲ. ಮತ್ತೊಮ್ಮೆ ದೊಡ್ಡ ದನಿಯಿಂದ ..."ಭಿಕ್ಷಾನ್

ಮೇಲೆ ಏಳುತ್ತಾ ನೃತ್ಯವನ್ನು ಮಾಡುವ [illegible] ನೃತ್ಯವನ್ನು ಕಂಡು [illegible] ಹೊತ್ತು ಗದಗದ ನಡುಗುತ್ತಾ ಮನೆಯ ಕಡೆಗೆ ನಡೆಯುತ್ತಿದ್ದ ಆ ರೈತನ ಸಂಸಾರ! ಹೆಂಡತಿಯೊಂದಿಗೆ ಸಲ್ಲಾಪ. ಮಕ್ಕಳೊಂದಿಗೆ ಅಕ್ಕರೆ[illegible]! [illegible] ಮಾತು, ಮಧುರವಾದ ನಗೆ.

ಸಂಸಾರದಲ್ಲೂ ಸುಖ-ಶಾಂತಿ ಇವೆ ಎಂಬುದಕ್ಕೆ ಸಾಕ್ಷಿ ಉದಾಹರಣೆಯಾಗಿದ್ದ ಆ ನೃತ್ಯವನ್ನು ಕಂಡು. '[illegible] ಈ ಸೌಂದರ್ಯಕ್ಕಿಂತ [illegible] ಇರುವ ಸಂಸಾರ [illegible] ಅರ್ಥ [illegible] ಸೌಂದರ್ಯವನ್ನು [illegible] ತನ್ನ [illegible] ಕಡೆಗೆ [illegible].




ವರ್ಗರಹಸ್ಯ

ಯಾವುದಾದರೂ ಸಂಖ್ಯೆಯ ಕೊನೆಯ ಅಂಕಿ ೫ ಇದ್ದು ಆ ಸಂಖ್ಯೆಯ ವರ್ಗವನ್ನು ಕಂಡುಹಿಡಿಯುವ ಸುಲಭ ವಿಧಾನವೊಂದಿದೆಯೆಂಬುದನ್ನು ನೀವು ಬಲ್ಲಿರಾ? ಅದು ಹೀಗೆ: ಕೊನೆಯ ಅಂಕಿ (೫)ರ ವರ್ಗವನ್ನು ಮೊದಲು ಬರೆಯಬೇಕು. ಬಳಿಕ ಅದರ ಹಿಂದಿನ ಸಂಖ್ಯೆಗೆ ಒಂದು ಸೇರಿಸಿ ಅದನ್ನು ಆ ಸಂಖ್ಯೆಗೆ ಗುಣಿಸಿ ಗುಣಲಬ್ಧವನ್ನು ೨೫ರ ಹಿಂದೆ ಬರೆಯಬೇಕು. ಅದೇ ಮೊದಲು ಕೊಟ್ಟ ಸಂಖ್ಯೆಯ ವರ್ಗ. ಉದಾಹರಣೆಗೆ ೨೫ರ ವರ್ಗವನ್ನು ಕಂಡುಹಿಡಿಯಬೇಕಾಗಿದೆಯೆನ್ನಿ. ೫ರ ವರ್ಗ ೨೫. ದಶಕ ಸ್ಥಾನದಲ್ಲಿರುವ ಅಂಕಿ ೨. ಅದಕ್ಕೆ ೧ ಸೇರಿಸಿದರೆ ೩. ೩ಅನ್ನು ೨ ರಿಂದ ಗುಣಿಸಿದರೆ ಬರುವ ಗುಣಲಬ್ಧ ೬. ಆದ್ದರಿಂದ ೨೫ರ ವರ್ಗ ೬೨೫. ಈ ತತ್ವವನ್ನು ಎಷ್ಟು ಅಂಕಿಗಳ ಸಂಖ್ಯೆಗಾದರೂ ಅನ್ವಯಿಸಬಹುದು. ಆದರೆ ಹಾಗೆ ಮಾಡಿದಾಗಲೆಲ್ಲ ೫ ಅನ್ನು ಹೊರತುಪಡಿಸಿ ಉಳಿದ ಅಂಕಿಗಳನ್ನು ಒಂದೇ ಅಂಕಿಯೆಂದು ಪರಿಗಣಿಸಬೇಕು. ಈಗ ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ೧೧೫ರ ವರ್ಗವನ್ನು ಕಂಡುಹಿಡಿಯಬೇಕಾಗಿದೆಯೆಂದರೆ ಮೊದಲು ೫ರ ವರ್ಗ(೨೫)ವನ್ನು ಬರೆಯಬೇಕು. ಬಳಿಕ ಅದರ ಹಿಂದಿನ ಸಂಖ್ಯೆಯಾದ ೧೧ಕ್ಕೆ ೧ ಸೇರಿಸಿ (೧೨) ಅದನ್ನು ೧೧ ರಿಂದ ಗುಣಿಸಬೇಕು. ಆಗ ದೊರೆಯುವ ಗುಣಲಬ್ಧ ೧೩೨. ಆದ್ದರಿಂದ ೧೧೫ರ ವರ್ಗ ೧೩೨೨೫.


– ಶ್ರೀಕಾಂತ



ಹನ್ನೊಂದು ಅಥವಾ ಹನ್ನೆರಡನೇ ಶತಮಾನದ ದ್ರಾವಿಡ ಶಿಲ್ಪ, ೬೯ ಸೆಂ. ಮೀ. ಎತ್ತರದ ಕಂಚಿನ ವೀಣಾಧಾರಿ ಶಿವ. (ಪ್ಯಾರೀಸಿನ ಗಿಮೆಟ್ ವಸ್ತು ಸಂಗ್ರಹಾಲಯದಲ್ಲಿದೆ.)



ಇದೇ ವಿಗ್ರಹದ ಹಿಂಭಾಗದ ನೋಟ.



ಇದೇ ಸುಮಾರದ ದ್ರಾವಿಡ ಶಿಲ್ಪದಲ್ಲಿಯ ದೇವತೆಯ ಕಂಚಿನ ವಿಗ್ರಹ, ಎತ್ತರ ೯೦ ಸೆಂ. ಮೀ. ಪಾರ್ವತಿಯಾಗಿರಬಹುದೆ?(ಇದೂ ಪ್ರಾಚೀಶಿನ ಅದೇ ವಸ್ತುಸಂಗ್ರಹಾಲಯದಲ್ಲಿದೆ.)



ಇದೇ ವಿಗ್ರಹದ ಹಿಂಭಾಗದ ನೋಟ.

ಪೋಪ್

ಜಗದ್ಗುರುಗಳು



ಎಡ್ವರ್ಡ್ ನರೋನ್ಹಾ

ಕ್ರೈಸ್ತ ಧರ್ಮಗುರುಗಳಲ್ಲಿ ಅತ್ಯುನ್ನತ ಸ್ಥಾನವ ಪ್ರಹುದ್ದೆಗೆ ಕಾರ್ಡಿನಲ್ ಲುಚಿಯಾನಿ ಆಯ್ಕೆಗೊಂಡು ಒಂದೇ ಒಂದು ತಿಂಗಳು ಸಂದಿತ್ತು. ಅಧಿಕಾರವನ್ನು ವಹಿಸಿಕೊಳ್ಳುವಾಗ ಪೋಪ್ ಜಾನ್ ಪಾಲ್ ಎಂಬ ಹೆಸರನ್ನು ಇವರು ಇಟ್ಟುಕೊಂಡಿದ್ದರು; ಕ್ರೈಸ್ತರಲ್ಲಿ ಕ್ರೈಸ್ತೇತರರಲ್ಲಿ ಅನೇಕ ನಿರೀಕ್ಷೆಗಳನ್ನು ಮೂಡಿಸಿದ್ದರು; ಅಲ್ಪಾವಧಿಯಲ್ಲಿಯೇ ತಮ್ಮ ಸರಳಸ್ವಭಾವದ ದೆಸೆಯಿಂದ ಜನಪ್ರಿಯರಾಗಿದ್ದರು. ಇಂಥವರು ಇದ್ದಕ್ಕಿದ್ದಂತೆ ಹೃದಯಾಘಾತಕ್ಕೆ ತುತ್ತಾಗಿ ನಿಧನರಾದರೆಂಬ ವಾರ್ತೆ ಇಡೀ ಮಾನವ ಕೋಟಿಯ ಹೃದಯದಲ್ಲಿ ಅನುಕಂಪೆಯನ್ನು ಉಂಟು ಮಾಡಿದುದರಲ್ಲಿ ಆಶ್ಚರ್ಯವಿಲ್ಲ. ಅಕ್ಟೋಬರ್ ನಾಲ್ಕರಂದು (೧೯೭೮) ವ್ಯಾಟಿಕನ್ನಿನಲ್ಲಿ ಇವರ ಅಂತ್ಯವಿಧಿಗಳು ನಡೆದಾಗ ಜಗತ್ತಿನ ಹಲವು ರಾಷ್ಟ್ರಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು. ನಮ್ಮ ದೇಶದ ರಾಜಧಾನಿಗಳಲ್ಲೂ ಧ್ವಜಗಳನ್ನು ಅರ್ಧ ಸ್ತಂಭದಲ್ಲಿ ಹಾರಿಸಿದ್ದರು.

ಪೋಪ್ ಧರ್ಮಗುರುಗಳು ಕ್ರೈಸ್ತರಲ್ಲಿ ಕ್ಯಾಥೊಲಿಕರಿಗೆ ಸರ್ವೋಚ್ಚ ಧರ್ಮಾಧಿಕಾರಿಗಳಾಗಿದ್ದರೂ ಈ ಹುದ್ದೆಗೆ ಬಂದವರು ಇತ್ತೀಚೆಗೆ ಕ್ರೈಸ್ತರ ಮತ್ತು ಕ್ರೈಸ್ತೇತರರ ಗೌರವಕ್ಕೆ ಸಮಾನವಾಗಿ ಪಾತ್ರರಾಗಿದ್ದಾರೆ. ಜಾನ್ ಪಾಲರ ಪೂರ್ವಾಧಿಕಾರಿಯಾಗಿದ್ದ ಆರನೇ ಪಾಲ್ ಅವರು ಶಾಂತಿ ಸ್ಥಾಪನೆಗೋಸ್ಕರ ಕೈಗೊಂಡ ಅನೇಕ ಪ್ರಯತ್ನಗಳು ವಿಶ್ವಪ್ರಜೆಗಳ ಮಟ್ಟದಲ್ಲಿ ಅವರ ಅಭಿಮಾನವನ್ನು ಅವರಿಗೆ ದೊರಕಿಸಿ ಕೊಟ್ಟಿದ್ದುವು. ಅವರ ಹಿಂದಿನ ಪೋಪ್ ಜಾನ್ ಅವರ ಹೃದಯ ಮರಿಕೆ ಯಾರ ಮನಸ್ಸನ್ನೂ ಸೆರೆಹಿಡಿಯುವಂಥದ್ದು. ತಮ್ಮಲ್ಲಿರುವ ಧಾರ್ಮಿಕ ನೇತೃತ್ವದಿಂದಲೂ ಅಪೂರ್ವ ಮಾನವೀಯ ಗುಣಗಳಿಂದಲೂ ಅಧಿಕಾರವನ್ನು ಸ್ವಾರ್ಥರಹಿತವಾಗಿ ಉಪಯೋಗಿಸಿ, ಮಾನವಕುಲವನ್ನು ಪೀಡಿಸುವ ಎಲ್ಲ ಬಗೆಯ ಸಮಸ್ಯೆಗಳನ್ನು ಕುರಿತು ವಿಶೇಷವಾಗಿ ಆಸಕ್ತಿಯನ್ನು ತೋರಿಸಿದುದರಿಂದಲೂ ಇಪ್ಪತ್ತನೆ ಶತಮಾನದಲ್ಲಿ ಪೋಪ್ ಎಂಬ ಧಾರ್ಮಿಕ ಅಧಿಕಾರಸ್ಥಾನ ಧರ್ಮದ ಸಂಕುಚಿತತೆಗಳನ್ನು ಮೀರಿ ಎತ್ತರಕ್ಕೇರುವುದು ಸಾಧ್ಯವಾಯಿತು; ನಾಸ್ತಿಕವಾದದನ್ನು ಪ್ರತಿಪಾದಿಸುವ ಸರಕಾರಗಳ ನಾಯಕರಿಂದಲೂ ಮನ್ನಣೆಯನ್ನು ಪಡೆಯುವುದು ಸಾಧ್ಯವಾಯಿತು. ಅಂತಾರಾಷ್ಟ್ರೀಯ ಸ್ನೇಹ, ಸಹಕಾರಗಳ ಈ ಯುಗದಲ್ಲಿ ಶಾಂತಿ, ಸೌಹಾರ್ದ,

ಮೂಲಭೂತ ಹಕ್ಕುಗಳು, ಸಾಮಾಜಿಕ ನ್ಯಾಯನೀತಿ–ಇಂಥ ಮೌಲ್ಯಗಳ ಪರವಾಗಿ ನಿರ್ದಾಕ್ಷಿಣ್ಯವಾಗಿ, ತಮ್ಮ ಅಂತರಂಗದ ಅಧಿಕಾರದಿಂದ, ಧಾರ್ಮಿಕ ನಿಷ್ಠೆಯಿಂದ ಹೋರಾಡುವವರು ಎಂದು ಜನಮನಗಳಲ್ಲಿ ಪ್ರಸಿದ್ಧರಾಗಿದ್ದರೂ ಪೋಪ್ ಧರ್ಮಗುರುಗಳ ಪ್ರಧಾನ ಕರ್ತವ್ಯ ಅದಲ್ಲ.

ಯೇಸು ಕ್ರಿಸ್ತ ಬದುಕಿದ್ದಾಗ ತನ್ನ ಹನ್ನೆರಡು ಮಂದಿ ಶಿಷ್ಯರಲ್ಲಿ ಪೀಟರ್ ಎಂಬವನನ್ನು ಅಗ್ರಸ್ಥಾನದಲ್ಲಿ ನಿಯಮಿಸಿದನು ಎಂದು ಹೊಸ ಒಡಂಬಡಿಕೆಯಲ್ಲಿ ಹೇಳಿದೆ. ರೋಮ್ ನಗರದ ಧರ್ಮ ಸಭೆಗೆ (ಚರ್ಚ್, ಕ್ರೈಸ್ತವಿಶ್ವಾಸಿಗಳ ಸಮುದಾಯ) ಧರ್ಮಾಧಿಕಾರಿ(ಬಿಶಪ್)ಯಾಗಿದ್ದವನು ಪೀಟರನ ಉತ್ತರಾಧಿಕಾರಿ; ಆದುದರಿಂದ ಪೀಟರನಿಗೆ ಕೊಟ್ಟಿರುವ ಅಧಿಕಾರ, ಹೊಣೆ ಪರಂಪರಾನುಗತವಾಗಿ ರೋಮನ್ ಧರ್ಮಾಧಿಕಾರಿಗೆ ಲಭಿಸತಕ್ಕದ್ದು–ಇದಿಷ್ಟು, ಪೋಪನ ಅಧಿಕಾರದ ಬಗೆಗೆ ಕ್ರೈಸ್ತ ಧರ್ಮದರ್ಶನ (theology) ನೀಡುವ ವಿವರಣೆ. ಇದಲ್ಲದೆ ಧಾರ್ಮಿಕ ನಂಬಿಕೆಗಳು ಮತ್ತು ನೀತಿ ನಡವಳಿಕೆಗೆ ಸಂಬಂಧಿಸಿದಂತೆ ಇಡೀ ಧರ್ಮಸಭೆಯನ್ನು ಉದ್ದೇಶಿಸಿ ಈ ಅಧಿಕಾರಸ್ಥಾನದಿಂದ ವಿಧ್ಯುಕ್ತವಾಗಿ ಘೋಷಿಸಿದ ಬೋಧನೆಯಲ್ಲಿ ತಪ್ಪು ಇರುವುದು ಸಾಧ್ಯವಿಲ್ಲವೆಂದೂ ಕ್ಯಾಥೊಲಿಕರು ನಂಬುತ್ತಾರೆ. ಪೋಪ್ ಗುರುಗಳ ಸ್ಥಾನಮಾನಗಳು, ಅಧಿಕಾರವ್ಯಾಪ್ತಿ ಇಷ್ಟೆಲ್ಲ ಪರಿಷ್ಕೃತವಾಗಿ ರೂಪುಗೊಂಡದ್ದು ಚರಿತ್ರೆಯುದ್ದಕ್ಕೂ ಸತತವಾಗಿ ನಡೆದು ಬಂದ ಧಾರ್ಮಿಕ ವಿಚಾರ ವಿಮರ್ಶೆಯ, ಚಾರಿತ್ರಿಕ, ರಾಜಕೀಯ ಸನ್ನಿವೇಶಗಳ ಪರಿಣಾಮ.

ಕನ್ನಡದಲ್ಲಿ 'ಪಾಪು ಸ್ವಾಮಿ' ಎಂಬ ಸಮಾನಾರ್ಥ ಪದವನ್ನು ಪಡೆದಿರುವ 'ಪೋಪ್' ಪದ ಮೂಲತಃ ಗ್ರೀಕ್ ಭಾಷೆಯಲ್ಲಿ ಪಾಪ್ಪ ಎಂದರೆ ತಂದೆ ಎಂಬರ್ಥವನ್ನು ಕೊಡುತ್ತದೆ. ಮೊತ್ತಮೊದಲಿನ ಶತಮಾನದಲ್ಲಿ ಎಲ್ಲ ಧರ್ಮಾಧಿಕಾರಿಗಳನ್ನು 'ಪಾಪಾ' ಎಂದು ಕರೆಯುವ ರೂಢಿ ಇತ್ತಾದರೂ ಸುಮಾರು ನಾಲ್ಕನೆ ಶತಮಾನದಿಂದೀಚೆಗೆ ರೋಮನ್ ಧರ್ಮಾಧಿಕಾರಿಗೆ ಈ ಅಭಿಧಾನ ಸೀಮಿತವಾಯಿತು. ಇಂದು, ಕ್ರಮಬದ್ಧವಾದ ವ್ಯಾಸಂಗ, ತರಬೇತಿ ಪಡೆದು ಪುರೋಹಿತ ದೀಕ್ಷೆಯನ್ನು ಪಡೆದವರು ಮಾತ್ರ ಧರ್ಮಾಧಿಕಾರಿಗಳಾಗಿ ನೇಮಕಗೊಳ್ಳುವ ಅರ್ಹತೆಯನ್ನು ಪಡೆದಿರುತ್ತಾರೆ. ಆದರೆ ಕ್ರೈಸ್ತ ಮತವನ್ನು ಯೇಸುವಿನ ಶಿಷ್ಯರು ಮೊದಲಬಾರಿ ಪ್ರಚಾರ ಮಾಡಿದಾಗ ತಾವು ಅಲ್ಲಲ್ಲಿ ಸ್ಥಾಪಿಸಿದ ಕ್ರೈಸ್ತಸಮುದಾಯದಲ್ಲಿ ಯೋಗ್ಯನಾದ ಒಬ್ಬನನ್ನು ಅಲ್ಲಲ್ಲೇ ಆರಿಸಿ ಅವನಿಗೆ ಧರ್ಮಾಧಿಕಾರಿಯನ್ನಾಗಿ ನಿಯಮಿಸುವುದು ಕ್ರಮವಾಗಿತ್ತು. ಪ್ರಾರ್ಥನಾಸಭೆಗಳಲ್ಲಿ ಅಧ್ಯಕ್ಷತೆಯನ್ನೂ ಮುಂದಾಳುತನವನ್ನೂ ವಹಿಸುವುದು, ಕ್ರೈಸ್ತ ಭಕ್ತಿ ಜೀವನವನ್ನು, ಕ್ರೈಸ್ತರ ದೈನಂದಿನ ನಡವಳಿಕೆಯನ್ನು ಕುರಿತು ಮಾರ್ಗದರ್ಶನ ಮಾಡುವುದು ಇವರ ಮುಖ್ಯ ಕರ್ತವ್ಯ. ಚಾರಿತ್ರಿಕವಾಗಿ, ರೋಮ್ ನಗರಕ್ಕೆ ವಿಶೇಷವಾದ ಪ್ರಾಧಾನ್ಯ, ಹಿರಿಮೆ ಇದ್ದುದರಿಂದ ರೋಮನ್ ಧರ್ಮಕ್ಷೇತ್ರ ಉಳಿದ ಧರ್ಮಕ್ಷೇತ್ರಗಳ ಮೇಲೆ ಪ್ರಾಧಾನ್ಯವನ್ನು ಪಡೆಯಿತು. ರೋಮನ್ ಧರ್ಮಾಧಿಕಾರಿ ಇತರ ಧರ್ಮಾಧಿಕಾರಿಗಳ ಮುಂದಾಳುತನವನ್ನು ವಹಿಸಿಕೊಂಡ. ಧರ್ಮದರ್ಶನದ ಕಡೆಯಿಂದ, ಅಪೋಸ್ತಲ ಪೀಟರನ ಉತ್ತರಾಧಿಕಾರಿ ಎಂಬುದರಿಂದ ಪೋಪನ ಈ ಪ್ರಾಶಸ್ತ್ಯಕ್ಕೆ ತಾತ್ತ್ವಿಕ ತಳಹದಿ ಲಭಿಸಿತು.

ಕ್ರೈಸ್ತ ಧರ್ಮ ಪ್ರಚಲಿತವಿದ್ದಲ್ಲೆಲ್ಲ ಧರ್ಮಾಧಿಕಾರಿಗಳು ನಡೆಸಬೇಕಾದ ಎಲ್ಲ ಕರ್ತವ್ಯಗಳನ್ನು ಪೋಪ್ ಗುರುಗಳು ರೋಮನ್ ಧರ್ಮಕ್ಷೇತ್ರದಲ್ಲಿ ನಡೆಸುತ್ತಾರೆ. ರೋಮನ್ ಧರ್ಮ ಸಭೆಯ ವಿಶ್ವಾಸಿಗಳ ಧಾರ್ಮಿಕ, ಲೌಕಿಕ ಹಿತಾಸಕ್ತಿಗಳನ್ನು ಕಾಪಾಡುವುದು, ಯೋಗ್ಯರಾದ ತರುಣರನ್ನು ಆರಿಸಿ, ತರಬೇತುಗೊಳಿಸಿ ವಿಧ್ಯುಕ್ತವಾಗಿ ಧರ್ಮಗುರುಗಳ ದೀಕ್ಷೆಯನ್ನು ಕೊಡುವುದು, ಬದಲಾಗುತ್ತಿರುವ ಧಾರ್ಮಿಕ ಸಾಮಾಜಿಕ, ಸಾಂಸ್ಕೃತಿಕ ಪರಿಸ್ಥಿತಿಗಳಲ್ಲಿ ಕ್ರೈಸ್ತ ಬೋಧನೆಗೆ ಅನುಗುಣವಾದ ನಾಯಕತ್ವವನ್ನು ವಹಿಸಿ ಸೂಕ್ತ ಮಾರ್ಗದರ್ಶನವನ್ನು ನೀಡುವುದು ಇವೇ ಮೊದಲಾದ ಹೊಣೆಗಾರಿಕೆಗಳನ್ನು ಪೋಪ್ ಗುರುಗಳು ಹೊತ್ತಿರುತ್ತಾರೆ. ಈ ದೃಷ್ಟಿಯಲ್ಲಿ ರೋಮ್ ನಗರ ಹಾಗೂ ಅದರ ಸುತ್ತುಮುತ್ತಲಿನ ಕ್ರೈಸ್ತ ವಿಶ್ವಾಸಿಗಳ ಅಧ್ಯಾತ್ಮಿಕ, ಲೌಕಿಕ ಹಿತರಕ್ಷಣೆ ಪೋಪ್‌ನ ಕರ್ತವ್ಯದ ಒಂದು ಮುಖ್ಯ ಅಂಗ.

ಇದಲ್ಲದೆ ಪ್ರಪಂಚದಲ್ಲಿರುವ ಎಲ್ಲ ಕ್ಯಾಥೊ

ಲಿಕರ ಆಧ್ಯಾತ್ಮಿಕ ಹಿತರಕ್ಷಣೆಯೂ ಪೋಪ್‌ನ ಹೊಣೆಯಾಗಿರುತ್ತದೆ. ಧರ್ಮತತ್ತ್ವಗಳ ಬಗೆಗೆ ಸಂದೇಹವೋ, ಅಸ್ಪಷ್ಟತೆಯೋ ಉಂಟಾದಾಗ ಅಧ್ಯಯನ ಚಿಂತನಗಳನ್ನು ನಡೆಸಿ ಅಧಿಕೃತ ಬೋಧನೆಯನ್ನು ವಿಧ್ಯುಕ್ತವಾಗಿ ಘೋಷಿಸುವುದು, ಕ್ರೈಸ್ತರ ಧಾರ್ಮಿಕ ಪ್ರಜ್ಞೆಯನ್ನು ಹೊಸತಾಗಿ ಸೆಳೆಯುವ ಧರ್ಮತತ್ತ್ವಗಳ ಬಗೆಗೆ ಸ್ಪಷ್ಟೀಕರಣವನ್ನು, ವ್ಯಾಖ್ಯಾನವನ್ನು ನೀಡುವುದು, ಕಾಲಕಾಲಕ್ಕೆ ಹೊಸತಾಗಿ ಕಾಣಿಸಿಕೊಳ್ಳುವ ಪರಿಸ್ಥಿತಿಗಳನ್ನು, ಅವಶ್ಯಕತೆಗಳನ್ನು ಸಮಗ್ರವಾಗಿ ಒಳಗೊಳ್ಳುವಂಥ ನೀತಿ ನಡವಳಿಕೆಯ ಸೂತ್ರಗಳನ್ನು ರೂಪಿಸುವುದು ಪೋಪ್ ಅಧಿಕಾರಸ್ಥಾನದ ಬೋಧನಾಂಶಕ್ಕೆ ಸೇರಿದ ಕರ್ತವ್ಯಗಳು. ಯೇಸುವಿನ ತಾಯಿಯಾದ ಮೇರಿಯನ್ನು ದೇವರು ಸಶರೀರವಾಗಿ ಸ್ವರ್ಗಕ್ಕೊಯ್ದರು ಎಂಬುದನ್ನು ವಿಧ್ಯುಕ್ತವಾಗಿ ಘೋಷಿಸಿದ್ದು (೧೯೫೦) ಇಂಥ ಬೋಧನೆಯ ಇತ್ತೀಚಿನ ಒಂದು ಉದಾಹರಣೆ. ಹೀಗೆ ಘೋಷಿಸಿದನ್ನು ವಿಶ್ವಾಸಿಗಳು ನಂಬಲೇಬೇಕು.

ಇದಲ್ಲದೆ ಆಗಾಗ ಎನ್ಸಿಕ್ಲಿಕಲ್ ಎಂಬ ಸುತ್ತೋಲೆಯನ್ನು ಕಳಿಸಿ ಅನೇಕ ಸಂದಿಗ್ಧ ವಿಷಯಗಳ ಮೇಲೆ ಕ್ರೈಸ್ತ ಧರ್ಮದ ಅಧಿಕೃತ ನಿಲುವನ್ನು ಪೋಪ್ ಸ್ಪಷ್ಟಗೊಳಿಸುತ್ತಾರೆ. ಪ್ರಪಂಚದ ಕ್ರೈಸ್ತ ಸಮುದಾಯವನ್ನು ಉದ್ದೇಶಿಸಿದಂಥವುಗಳಾದರೂ, ವಿಷಯದ ಸಾರ್ವತ್ರಿಕತೆಯ ದೃಷ್ಟಿಯಿಂದ ಮತ್ತು ಪೋಪ್‌ಗುರುಗಳು ಪಡೆದಿರುವ ಸರ್ವಮಾನ್ಯತೆಯ ದೃಷ್ಟಿಯಿಂದ ಎನ್ಸಿಕ್ಲಿಕಲ್ ಪತ್ರಗಳು ವಿಶ್ವಮಟ್ಟದ ಮಾನವೀಯ ದಾಖಲೆಗಳೆಂದು ಕ್ರೈಸ್ತೇತರ ವಲಯಗಳಲ್ಲಿಯೂ ಪ್ರಸಿದ್ಧಿಯನ್ನು ಪಡೆದಿವೆ. ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದ ಪೋಪ್ ಜಾನನ ಪತ್ರ, ಮನುಷ್ಯನ ಶರೀರದ ಪಾವಿತ್ರ್ಯವನ್ನು ಅಲ್ಲಗಳೆದು ವ್ಯಕ್ತಿತ್ವಕ್ಕೆ ಕುಂದನ್ನು ಉಂಟುಮಾಡುವಂಥ ಸಂತಾನ ನಿಯಂತ್ರಣದ ಕೆಲವು ವಿಧಾನಗಳನ್ನು ಖಂಡಿಸಿದ್ದ ಪೋಪ್ ಪೌಲನ ಪತ್ರ ಈ ವರ್ಗಕ್ಕೆ ಸೇರಿದಂಥವು.

ಪ್ರಪಂಚದ ಎಲ್ಲ ಧರ್ಮಾಧಿಕಾಗಳನ್ನೊಳಗೊಂಡ ಎಕ್ಯುಮೆನಿಕಲ್ ಮಹಾಸಭೆಯನ್ನು ಕರೆಯುವುದು, ಅದರ ಅಧ್ಯಕ್ಷತೆಯನ್ನು ವಹಿಸುವುದು ಧಾರ್ಮಿಕ ರಂಗದಲ್ಲಿ ಪೋಪನಿಗಿರುವ ಇನ್ನೊಂದು ಅಧಿಕಾರ. ಈ ಮಹಾಸಭೆಗಳಲ್ಲಿ ಇಡೀ ಧರ್ಮಸಭೆಗೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಚರ್ಚಿಸಲವಕಾಶವಿದೆ. ಪೋಪ್ ಜಾನ್ ಮತ್ತು ಪೌಲರ ಅವಧಿಯಲ್ಲಿ ನಡೆದ ಎರಡನೆ ವ್ಯಾಟಿಕನ್ ಸಭೆಯಲ್ಲಿ ಧರ್ಮಸಭೆಯ ನವೀಕರಣ ಮತ್ತು ಕ್ರೈಸ್ತರಲ್ಲಿ ಒಕ್ಕೂಟ ಇದೇ ಮೊದಲಾದ ಮುಖ್ಯ ವಿಷಯಗಳ ಪ್ರಸ್ತಾಪ ಬಂದಿತ್ತು. ಇವುಗಳೂ ಸೇರಿದಂತೆ ಅನೇಕ ಪ್ರಧಾನ ಧರ್ಮತತ್ತ್ವಗಳನ್ನು ವಿಸ್ತಾರವಾಗಿಯೂ ಖಚಿತವಾಗಿಯೂ ಈ ಸಭೆಯಲ್ಲಿ ನಿರೂಪಿಸಲಾಯಿತು.

ಬೋಧನೆಯಲ್ಲದೆ ಇಡೀ ಕ್ಯಾಥೊಲಿಕ್ ಧರ್ಮಸಭೆಯ ಆಡಳಿತವನ್ನೂ ಪೋಪ್ ಗುರುಗಳು ನಡೆಸುತ್ತಾರೆ. ಧರ್ಮ ಪ್ರಚಾರ, ಆಚಾರ ವಿಧಿಗಳು, ಸಂನ್ಯಾಸ, ಸಂನ್ಯಾಸಿನಿಯರ ಸಂಸ್ಥೆಗಳು, ನೀತಿ ಸಂಹಿತೆ (ಕ್ಯಾನನ್ ಲಾ) ಇವೇ ಮೊದಲಾದ ಕ್ರೈಸ್ತ ಧಾರ್ಮಿಕ ಜೀವನದ ಎಲ್ಲ ಅಂಗಗಳ ಸಮಗ್ರ ಮೇಲ್ವಿಚಾರಣೆ ನಡೆಸುವ ಅವುಗಳಿಗೆ ಸಂದರ್ಭೋಚಿತವಾಗಿ ಮಾರ್ಗದರ್ಶನ ಮಾಡುವ ಅಂಗಸಂಸ್ಥೆಗಳು ವ್ಯವಸ್ಥಿತವಾಗಿ ಪೋಪ್‌ನ ಕೈಕೆಳಗೆ ಕೆಲಸ ಮಾಡುತ್ತವೆ. ಈ ಆಡಳಿತಾಂಗಗಳನ್ನು ನಡೆಸುವವರು ಕಾರ್ಡಿನಲ್ ಎಂಬ ಪದವಿಯನ್ನು ಪಡೆದಿರುವ ಧರ್ಮಾಧಿಕಾರಿಗಳು. ಕಾನೂನು, ಆಡಳಿತಗಳಲ್ಲಿ ನೈಪುಣ್ಯವನ್ನು, ಧರ್ಮದರ್ಶನದ ಅಧ್ಯಯನದಲ್ಲಿ ಪಾಂಡಿತ್ಯವನ್ನು, ಅಸಾಮಾನ್ಯ ಮಟ್ಟದ ನಾಯಕತ್ವವನ್ನು ತೋರ್ಪಡಿಸಿದ ಧರ್ಮಾಧಿಕಾರಿಗಳಿಗೆ, ಕಾರ್ಡಿನಲ್ ಎಂಬ ಪ್ರತಿಷ್ಠಿತ ಬಿರುದನ್ನು ಕೊಟ್ಟು ಸನ್ಮಾನಿಸಿ, ಧರ್ಮಸಭೆಯ ಉನ್ನತ ಹುದ್ದೆಗಳನ್ನು ಅವರಿಗೆ ವಹಿಸಿಕೊಡುವುದು ವಾಡಿಕೆ. ಈ ಕಾರ್ಡಿನಲ್ಲರೇ ತಮ್ಮೊಳಗೆ ಒಬ್ಬರನ್ನು ಪೋಪ್ ಹುದ್ದೆಗೆ ಚುನಾಯಿಸುವುದು. ಬೋಧನಾಂಗದಲ್ಲಿ ಮತ್ತು ಆಡಳಿತಾಂಗದಲ್ಲಿ ಪೋಪ್‌ಗುರುಗಳು ಧರ್ಮಶಾಸ್ತ್ರ ಪರಿಣತರ, ಅನುಭವಸ್ಥ ಆಡಳಿತಗಾರರ, ನ್ಯಾಯಾಂಗ ತಜ್ಞರ ನೆರವನ್ನು ಸದಾ ಪಡೆದಿರುತ್ತಾರೆ.

ಕ್ಯಾಥೊಲಿಕರಲ್ಲದ ಕ್ರೈಸ್ತರೊಡನೆಯೂ ಪೋಪ್

ಗುರುಗಳಿಗೆ ಸಂಬಂಧಪಿದೆ. ೧೬ನೆ ಶತಮಾನದಲ್ಲಿ ನಡೆದ ರೆಫಾರ್ಮೇಶನ್‌ನಲ್ಲಿ ಅದುವರೆಗೆ ಅಖಂಡ ವಾಗಿದ್ದ ಕ್ಯಾಥೊಲಿಕ್ ಧರ್ಮ ಸಮುದಾಯವನ್ನು ಪ್ರೊಟೆಸ್ಟಂಟ್ ಪಂಗಡಗಳು ತೊರೆದು ಹೋದವು. ಇದಕ್ಕೆ ಅಂದಿನ ಕೆಲವು ಅನಾಚಾರಗಳು ಕಾರಣವಾಗಿ ದ್ದುವು. ಲೂಥರ್‌ನಂಥವರ ಪ್ರತಿಭಟನೆಯ ಮರೆ ಯಲ್ಲಿದ್ದ ಸದುದ್ದೇಶಗಳನ್ನೂ ಅವರ ಪ್ರತಿಭಟ ನೆಯ ಪರಿಣಾಮಗಳನ್ನೂ ಪೋಪ್‌ಗುರುಗಳಾಗಲಿ ಅವರ ಸಹಾಯಕರಾಗಲಿ ಸಕಾಲದಲ್ಲಿ ಅರ್ಥ ಮಾಡಿಕೊಳ್ಳಲಿಲ್ಲ. ಇದರಿಂದ ಧರ್ಮಸಭೆಗೆ ಒಡಕುಗಳೆಂಬ ಶಾಶ್ವತವಾದ ಕಳಂಕ ತಟ್ಟಿತು. [illegible] [illegible] ಒಗ್ಗೂಡಿಸುವ ಪ್ರಯತ್ನಗಳಿಗೆ ಹಲವು ಕಾಲ ಸರಿಯಾದ ಪ್ರೋ- ತ್ಸಾಹ ದೊರೆಯಲಿಲ್ಲ. ಇಂಥ ಪ್ರಾಮಾಣಿಕ ಪ್ರಯ ತ್ನಗಳಿಗೆ ಕ್ಯಾಥೊಲಿಕರ ಕಡೆಯಿಂದ ಒಂದು ರೂಪ ವನ್ನೂ ನಿರ್ದೇಶನವನ್ನೂ ಒದಗಿಸಿದವರೆಂದರೆ ಇಪ್ಪತ್ತನೆ ಶತಮಾನದ ಪೋಪ್ ಜಾನ್. ಪೋಪ್ ಗುರುಗಳ ಸರ್ವಶ್ರೇಷ್ಠತೆಯೇ ಸಮಸ್ಯೆಯ ಒಂದು ಮೂಲವಾಗಿದ್ದಾಗ, ಸ್ವತಃ ಪೋಪ್ ಗುರುಗಳೇ ಈ ದಿಸೆಯಲ್ಲಿ ಮನಃಪೂರ್ವಕವಾಗಿ ಆಸಕ್ತಿ ವಹಿಸಿದುದು ಬಿಕ್ಕಟ್ಟನ್ನು ಎಷ್ಟೋ ಮಟ್ಟಿಗೆ ಸಡಿಲಗೊಳಿಸಿ, ಎರಡೂ ಕಡೆಗಳಲ್ಲಿ ಬಿಚ್ಚುಮನಸ್ಸಿನ ವಿಚಾರ ವಿನಿಮಯಕ್ಕೆ ಅವಕಾಶ ಮಾಡಿಕೊಟ್ಟಿತು.

ಕ್ರೈಸ್ತಧರ್ಮವನ್ನು ಒಪ್ಪಿಕೊಂಡ ಯುರೋಪಿನ ಚರಿತ್ರೆಯಲ್ಲಿ ಪೋಪ್‌ಗುರುಗಳ ರಾಜಕೀಯ ಪ್ರಭಾವ, ಆ ಪ್ರಭಾವದ ವ್ಯಾಪ್ತಿ ಸುಮಾರು ೧೩ನೆ ಶತಮಾನದ ಮಧ್ಯಭಾಗದಲ್ಲಿ ಉನ್ನತ ಶಿಖರವನ್ನು ತಲುಪಿ ಕೊನೆಗೆ ಇಳಿಮುಖವಾದುದನ್ನು ನೋಡ ಬಹುದು. ಪಟ್ಟವನ್ನೇರಿದ ರಾಜರುಗಳಿಗೆ ಚಕ್ರ ವರ್ತಿಗಳಿಗೆ ಧಾರ್ಮಿಕ ಸಮ್ಮತಿಯ ಮೂಲಕ ಬೆಂಬಲವನ್ನೀಯುವುದಲ್ಲದೆ, ಕೆಲವರನ್ನು ಪಟ್ಟ- ದಿಂದಿಳಿಸಿದ ಉದಾಹರಣೆಗಳೂ ಉಂಟು. ಯುರೋ



ಪಿನ ರಾಜರ, ಚಕ್ರವರ್ತಿಗಳ ಆಸ್ಥಾನದಲ್ಲಿ ಪೋಪನ ಪ್ರತಿನಿಧಿಯಾಗಿ ನುನ್ಸಿಯೊ ಎಂಬ ರಾಯಭಾರಿಗಳು ಇರುತ್ತಿದ್ದರು. ರಾಜಕಾರಣವಲ್ಲದೆ, ಅಲ್ಲಿನ ದೇಶಗಳಲ್ಲಿರುವ ಧರ್ಮಾಧಿಕಾರಿಗಳ, ಧರ್ಮಸಂಘಗಳ ಮೇಲ್ವಿಚಾರಣೆ, ನಿಯಂತ್ರಣವನ್ನು ಪೋಪನ ಪರವಾಗಿ ಇವರು ನೋಡಿಕೊಳ್ಳುತ್ತಿದ್ದರು. ಕಾಲಕ್ರಮೇಣ ಕೆಲವು ಮುಖ್ಯ ರಾಜ್ಯಗಳು ಪೋಪರ ವಶಕ್ಕೆ ಬಂದು, ಸ್ವಂತ ಸೈನ್ಯಗಳು, ಸ್ವಂತ ರಾಜ್ಯಭಾರ ಪದ್ಧತಿಯುಳ್ಳವನ್ನು ಬಗೆಗೊಂಡಂತೆ ಧಾರ್ಮಿಕ ಪ್ರಭುತ್ವದೊಡನೆ ರಾಜಕೀಯ ಪ್ರಭುತ್ವವೂ ಸೇರಿಕೊಂಡಿತು. ಆದರೆ ೧೮೭೦ರ ಅನಂತರ ಪೋಪರಿಗೆ ಉಳಿದುದೆಂದರೆ ವ್ಯಾಟಿಕನ್ ನಗರವೊಂದೇ. ಪೋಪ್ ಗುರುಗಳ ಧಾರ್ಮಿಕ ಆಡಳಿತ ಯಂತ್ರಗಳು, ಕಚೇರಿಗಳು ಈ ನಗರ ರಾಜ್ಯದಲ್ಲಿವೆ. ಪೂರ್ವ ಪ್ರಮಾಣದಲ್ಲಿ ಅಲ್ಲದಿದ್ದರೂ, ಜಗತ್ತಿನ ಅನೇಕ ರಾಷ್ಟ್ರಗಳೊಡನೆ ನುನ್ಸಿಯೊ ಇಂಟರ್ ನುನ್ಸಿಯೊ ಮಟ್ಟದ ಪ್ರತಿನಿಧಿಗಳನ್ನು ಪೋಪ್ ಕಟ್ಟಿದ್ದಾರೆ. ನವದೆಹಲಿಯಲ್ಲಿಯೂ ಪೋಪರ ಇಂಟರ್ ನುನ್ಸಿಯೊ ಒಬ್ಬರಿದ್ದಾರೆ. ಕ್ರೈಸ್ತ ಮತಾನುಯಾಯಿಗಳ ರಾಜಕೀಯ ಕ್ಷೇಮ. ಧಾರ್ಮಿಕ ಶೋಷಣೆ ಇದ್ದರೆ ಅಂಥ ಶೋಷಣೆಯನ್ನು ನಿಲ್ಲಿಸುವಂತೆ ಒತ್ತಡ. ರಾಷ್ಟ್ರಗಳ ನಡುವೆ ಬಿಕ್ಕಟ್ಟಿನಲ್ಲಿ ಶಾಂತಿ ಸಂಧಾನ ಪ್ರಯತ್ನಗಳು. ನೆರೆ, ಭೂಕಂಪ, ಮೊದಲಾದ ಕ್ಷೋಭೆಗಳ ಸಂದರ್ಭದಲ್ಲಿ ಸಂತ್ರಸ್ತರಿಗೆ ನೆರವು–ಇಂಥ ವಿವಿಧ ಕಾರ್ಯಗಳನ್ನು ನಡೆಸಲು ಈ ರಾಯಭಾರಿಗಳ ಮೂಲಕ ಪೋಪ್‌ಗುರುಗಳಿಗೆ ಅವಕಾಶವಿದೆ. ವಿಶ್ವ ರಾಷ್ಟ್ರಗಳ ಸಮುದಾಯದಲ್ಲಿ ಪೋಪರಿಗಿರುವ ಮನ್ನಣೆ ಇಂಥ ರಾಜತಾಂತ್ರಿಕ, ಮಾನವೀಯ ಕಾರ್ಯಕಲಾಪಗಳನ್ನು ಗೌರವದ ಅಂತಸ್ತಿನಲ್ಲಿ ಇರಿಸುತ್ತದೆ. ಲೋಕಾಭಿಪ್ರಾಯದ ಶಕ್ತಿಯಿಂದ ಬೇರೆ ಸಾಧನಗಳು. ಅವುಗಳನ್ನು ಬಲವಾಗಿ ಕಾಣುವುದಿಲ್ಲ.

ಹೀಗೆ ಧಾರ್ಮಿಕ ಅಧಿಕಾರ ಸ್ಥಾನವಾಗಿ ಅಸ್ತಿತ್ವಕ್ಕೆ ಬಂದ ಪೋಪ್‌ಗುರುಗಳ ಪೀಠ ಇಂದಿನ ಜಗತ್ತಿನಲ್ಲಿ ಧಾರ್ಮಿಕ ಪರಿಧಿಯನ್ನು ದಾಟಿ ವಿಶಾಲವಾಗಿರುವುದನ್ನು ಕಾಣುತ್ತೇವೆ. ೧೬ನೇ ಶತಮಾನದಿಂದೀಚೆಗಂತೂ ಪೋಪ್ ಗುರುಗಳು ತಮ್ಮ ಧಾರ್ಮಿಕ ದೃಷ್ಟಿ, ಮಾನವೀಯ ಕಳಕಳಿಗಳಿಂದ ಜನಾದರಣೀಯರಾಗಿದ್ದಾರೆ. ಇಪ್ಪತ್ತನೇ ಶತಮಾನದಲ್ಲಿ ಇವರು ಅನುಸರಿಸಿದ ರಾಜನೀತಿಯಿಂದಾಗಿ ಜಗತ್ತಿನ ಪ್ರಬಲ ಸರಕಾರಗಳು ಇವರಿಗೆ ಪೂರ್ಣ ಬೆಂಬಲವನ್ನು ಕೊಡುತ್ತವೆ. ಇವರ ಮಾತಿಗೆ ಬೆಲೆ ಕೊಡುವಂತಾಗಿದೆ. ನಾಸ್ತಿಕವಾದ ಅಜ್ಞೇಯತಾವಾದ ಇಂಥ ಅಧಾರ್ಮಿಕ ವಾದಗಳನ್ನು ಸಹನೆಯಿಂದಲೂ ತಡೆದ ಮನುಷ್ಯನೆದುರು ಪೋಪ್ ಗುರುಗಳು ಕರುಣೆಯಿಂದ. ಪ್ರಪಂಚದ ಬಹುಕೋಟಿ ಜನರೊಡನೆ ಒಂದಲ್ಲ ಒಂದು ಬಗೆಯಲ್ಲಿ ಸಂಪರ್ಕವನ್ನು ಇರಿಸುವುದು ಇವರಿಗೆ ಸಾಧ್ಯವಾಗಿದೆ. ಇಂದಿನ ಕ್ರೈಸ್ತರೂ ಪೋಪ್‌ಗುರುಗಳಿಂದ ನಿರೀಕ್ಷಿಸುವುದು ಧಾರ್ಮಿಕ ನಾಯಕತ್ವವೊಂದನ್ನೇ ಅಲ್ಲ. ಕ್ರೈಸ್ತ ಧರ್ಮ ಇಂದಿನ ಜಗತ್ತಿನಲ್ಲಿ ಅರ್ಥಪೂರ್ಣವಾಗಬೇಕಾದರೆ ಮಾನವಕೋಟಿ ಮೇಲೆ ಸತತವಾಗಿ ಬೀಳುತ್ತಿರುವ ನೈತಿಕ ರಾಜಕೀಯ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವುದರಲ್ಲಿ ಪೋಪ್ ಗುರುಗಳ ಧರ್ಮಾಧಿಕಾರ ನೆರವಾಗಬೇಕು. ನಿಸ್ವಾರ್ಥದ ಈ ಧರ್ಮನಿಷ್ಠೆಯಿಂದ ಪ್ರಪಂಚದಾದ್ಯಂತ ಸಾವಿರಾರು ಜನರು ಉಪಕೃತರಾಗುವರು: "ತನ್ನಂತೆ ಪರರನ್ನು ಪ್ರೀತಿಸು" ಎಂಬ ಕ್ರೈಸ್ತ ಧರ್ಮದ ಮೂಲಭೂತ ಸಂದೇಶವನ್ನು ಕಾರ್ಯಗತಗೊಳಿಸುವಂತೆಯೂ ಆಗುವುದು. ✡

ಸುಖದ ಒಂದು ಬಾಗಿಲು ನಮಗಾಗಿ ಮುಚ್ಚಲ್ಪಟ್ಟಾಗ ಮತ್ತೊಂದು ತೆರೆದೇ ಇರುತ್ತದೆಂಬುದು ಗೊತ್ತಾಗದೇ ಮುಚ್ಚಿದ ಬಾಗಿಲನ್ನೇ ನಾವು ಮತ್ತೆ ಮತ್ತೆ ಬಡಿಯತೊಡಗುತ್ತೇವೆ.

–ಹೆಲನ್ ಕೆಲೆರ್

ಘಟನೆ ಜೀವನ ನಿಜ ಜೀವನ

ಒಮ್ಮೆ ದೂರದ ಸಂಬಂಧಿಕನೊಬ್ಬ ಬೆಳಗಾಂವಿನಿಂದ ಕಚೇರಿಗೆ ಬಂದ. ಇನ್ನೂ ಹದಿನೇಳರ ಹುಡುಗ. ತಲೆಗೂದಲು ಕೆಂಜಾಗಿತ್ತು. ಬಟ್ಟೆಗಳು ಕೊಳೆಯಾಗಿದ್ದವು. ತುಂಬಾ ಬಳಲಿದವನಂತೆ ಕಂಡ. ತನ್ನಜ್ಜನನ್ನು ಇಲ್ಲಿಯ ಆಸ್ಪತ್ರೆಗೆ ಸೇರಿಸಿದ್ದಾರೆ. ಅವರನ್ನು ನೋಡಲು ಬಂದೆ ಎಂದ. (ಕೆಲ ದಿನಗಳ ಹಿಂದೆಯಷ್ಟೇ ಆಸ್ಪತ್ರೆಗೆ ಹೋಗಿ ಅವರನ್ನು ಭೇಟಿಯಾಗಿ ಬಂದಿದ್ದೆ) ಆಸ್ಪತ್ರೆಯಲ್ಲಿ ಸ್ನಾನದ ವ್ಯವಸ್ಥೆಯಿಲ್ಲದ್ದರಿಂದ ಎರಡು ದಿನ ಸ್ನಾನವಿಲ್ಲದೇ ಕಳೆದೆ, ಈವತ್ತು ಶನಿವಾರ; ಸ್ನಾನ ಮಾಡಲೇಬೇಕು ಅಂದ. ಅನಂತರ ನೂರು ರೂಪಾಯಿಗಳನ್ನು ನನ್ನ ಕೈಗಿತ್ತು, "ಇಟ್ಟುಕೊಂಡಿರು, ಆಸ್ಪತ್ರೆಯಲ್ಲಿ ಕಳ್ಳರ ಭಯ. ನಾಡಿದ್ದು ಕೊಡುವೆಯಂತೆ" ಅಂದ. ಆತ ನನ್ನ ಮನೆಯನ್ನು ನೋಡಿರಲಿಲ್ಲವಾದ್ದರಿಂದ ವಿಳಾಸ ಕೊಟ್ಟು ಕಳುಹಿಸಿದೆ.

ಅಂದು ಸಂಬಳದ ದಿನ. ಸಂಜೆ ಮನೆಗೆ ಹೋದೆ. ಆತ ಆದಾಗಲೇ ಮಲಗಿಬಿಟ್ಟಿದ್ದ. ಆತನಿಗೇನು ವ್ಯವಸ್ಥೆ ಮಾಡಿದೆಯೆಂದು ಕೇಳಿದಾಗ, ಸ್ನಾನ ಮುಗಿಸಿದ ಮೇಲೆ ಬಿಸಿ ಅಡುಗೆ ಮಾಡಿ ಊಟಕ್ಕೆ ಹಾಕಿದ್ದುದಾಗಿ ತಾಯಿ ಹೇಳಿದಳು. ಅನಂತರ ವಾಡಿಕೆಯಂತೆ ಸಂಬಳದ ಪೂರ್ತಿ ಹಣವನ್ನು ತಾಯಿಯ ಕೈಗೆ ಕೊಟ್ಟೆ.

ಮರುದಿನ ಭಾನುವಾರ, ಆಫೀಸಿಗೆ ರಜೆ. ಸಾಹೇಬರು ಮನೆಗೆ ಬರಲು ಹೇಳಿದ್ದರಿಂದ ಹೋದೆ. ತಿರುಗಿ ಬರಲು ತಡವಾಯಿತು, ಆತ ಮನೆಯಲ್ಲಿರಲಿಲ್ಲ. ತಾಯಿಯನ್ನು ಕೇಳಿದಾಗ ಅವಳು, "ಆಸ್ಪತ್ರೆಗೆ ಹೋಗುತ್ತೇನೆ. ಮಧ್ಯಾಹ್ನ ಊಟಕ್ಕೆ ಬರುತ್ತೇನೆ" ಅಂತ ಹೇಳಿ ಹೋದ ಅಂದಳು.

ಈಗ ಬಂದಾನು, ಆಗ ಬಂದಾನು ಅಂತ ಮಧ್ಯಾಹ್ನ ಎರಡೂವರೆಯುವರೆಗೂ ಕಾದು ನಂತರ ಊಟ ಮುಗಿಸಿದೆ. ಸಂಜೆಯಾಗುವುದರೊಳಗೆ ತಿಂಗಳ ಸಾಮಾನು ತರಬೇಕು ಎಂದುಕೊಂಡು ಕೈಚೀಲ ತೆಗೆದುಕೊಂಡು ನೂರು ರೂಪಾಯಿ ಕೊಡುವಂತೆ ತಾಯಿಗೆ ಹೇಳಿದೆ.

ಅವಳು ಒಮ್ಮೆಲೇ ಕೂಗಿಕೊಂಡಳು. ಏನಾಯಿತೆಂದು ಒಳಗೆ ಹೋದರೆ ಅವಳ ಕಣ್ಣಲ್ಲಿ ನೀರು. "ಯಾಕೆ?" ಅಂದೆ. "ಹಣ ಇಟ್ಟಲ್ಲಿ ಇಲ್ಲ. ಪ್ರತಿ ಸಲವೂ ಇಲ್ಲಿಯೇ ಇಡುವದು. ಈ ಸಲವೂ ಇಲ್ಲಿಯೇ ಇಟ್ಟಿದ್ದೆ" ಅನ್ನುತ್ತಾ ಟ್ರಂಕನ್ನು ತೋರಿಸಿದಳು. ನನ್ನನ್ನು ಸಿಗೋ ಹುಡುಗನ ಮೇಲೆಯೇ ಸಂಶಯ. ನಾನು, ಹಾಗೆಲ್ಲ ಒಮ್ಮೆಲೇ ಹೇಳಲಿಕ್ಕಾಗುವುದಿಲ್ಲ, ಬೇರೆಲ್ಲಿಯಾದರೂ ಇಟ್ಟಿರಬಹುದು, ಹುಡುಕು ಅಂದೆ.

ಬಾಯಲ್ಲಿ ಹಾಗೆ ಹೇಳಿದರೂ ನನಗೂ ಹುಡುಗನ ಮೇಲೆಯೆ ಗುಮಾನಿ. ನೇರವಾಗಿ ಆಸ್ಪತ್ರೆಗೆ ಹೋದೆ. ಹುಡುಗ ಅಲ್ಲಿರಲಿಲ್ಲ. ಕೇಳಿದರೆ, "ಎರಡು ದಿನದ ಹಿಂದೆ ನೂರು ರೂಪಾಯಿಗಳನ್ನು ಹಾರಿಸಿಕೊಂಡು ಹೋಗಿದ್ದಾನೆ, ಭಡವ," ಅಂದರು ಅಜ್ಜ. ಮನೆಯಲ್ಲಿ ಅವನ ಪುಸ್ತಕವೊಂದಿತ್ತು. ಅದರಲ್ಲಿ ಮನೆಯ ವಿಳಾಸವಿತ್ತು. ಆದರೂ ಊರಲ್ಲಿಯೇ ಇರಬಹುದೆಂದು ಸಂಭಾವ್ಯ ಸ್ಥಳಗಳಲ್ಲೆಲ್ಲ ಹುಡುಕಿದೆ. ಆದರೆ ಆತ ಸಿಗಲಿಲ್ಲ.

ಮರುದಿನ ಬೆಳಗಾವಿಗೆ ಹೋದೆ. ಮನೆ ಸಿಕ್ಕಿತು. ಆದರೆ ಒಮ್ಮೆಲೇ ಇದನ್ನೆಲ್ಲ ಹೇಳುವುದು ಹೇಗೆ? ಆ ಮಾತು ಈ ಮಾತು ಆಡಿ ಕೊನೆಗೆ ಮನೆಯಿಂದ ಹೊರಡುವಾಗ, ಅವನ ತಾಯಿಗೆ, "ಎಲ್ಲಿ, ಆ ಹುಡುಗ ಕಾಣುವುದೇ ಇಲ್ಲವಲ್ಲ?" ಅಂದೆ.

ಇಪ್ಪತ್ತು ದಿನಗಳ ಹಿಂದೆ ಕೈಗಡಿಯಾರದೊಂದಿಗೆ ಇನ್ನೂರು ರೂಪಾಯಿ

ಗಳನ್ನು ತೆಗೆದುಕೊಂಡು ಓಡಿಹೋಗಿದ್ದಾನೆ, ಎಷ್ಟು ಹುಡುಕಿದರೂ ಸಿಗಲಿಲ್ಲ ಅಂದಳು ಆ ತಾಯಿ, ಕಣ್ಣೀರು ಸುರಿಸುತ್ತ. ಬಂದ ದಾರಿಗೆ ಸುಂಕವಿಲ್ಲವೆಂದು ನಾನು ಹಾಗೆಯೇ ಹಿಂದಿರುಗಿದೆ.

ನಾಲ್ಕು ವರ್ಷಗಳ ನಂತರ ಕೆಲಸದ ನಿಮಿತ್ತ ಬೆಳಗಾವಿಗೆ ಹೋದಾಗ ಅವರ ಮನೆಗೂ ಹೋಗಿದ್ದೆ—ಆಗ ಆತ ಇನ್ನೂ ಬಂದೇ ಇಲ್ಲ ಎನ್ನುವುದು ತಿಳಿಯಿತು.

-ಗೋಪಾಲ ವಾಜಪೇಯಿ

ಒಮ್ಮೆ ನನ್ನ ಉಪಾಧ್ಯಾಯ ಮಿತ್ರರಲ್ಲಿ ಒಬ್ಬರು, ಅವರ ಚಿಕ್ಕಪ್ಪನ ಆರೋಗ್ಯ ಸರಿಯಿಲ್ಲವೆಂದು ಟೆಲಿಗ್ರಾಂ ಬಂದುದರಿಂದ, ಅವರ ಊರಿಗೆ ಹೋಗಿ ನೋಡಿಕೊಂಡು ಬಂದರು. ದುರದೃಷ್ಟವಶಾತ್ ಇವರು ಹೋಗುವ ವೇಳೆಗೆ ಅವರ ಚಿಕ್ಕಪ್ಪನವರು ಮೃತರಾಗಿದ್ದರಂತೆ. ಅವರ ಊರಿಗೆ ಹೋಗಿ ಬಂದ ನಂತರ ಸ್ವಾಭಾವಿಕವಾಗಿಯೇ ಬಹಳ ದುಃಖಗೊಂಡಿರುವವರಂತೆ ಕಾಣುತ್ತಿದ್ದರು.

ಶಾಲೆಯ ಕೆಲಸಗಳೆಲ್ಲಾ ಮುಗಿದ ನಂತರ ಉಪಾಧ್ಯಾಯ ಮಿತ್ರರೆಲ್ಲರೂ ಒಂದು ಮೈಲಿ ದೂರದಲ್ಲಿರುವ ಪಟ್ಟಣಕ್ಕೆ ಹೋಗಿ ಬರುವುದು ವಾಡಿಕೆ. ಎಂದಿನಂತೆ ಅವರೆಲ್ಲರೂ ಪಟ್ಟಣಕ್ಕೆ ಒಟ್ಟಾಗಿ ನಡೆದುಕೊಂಡು ಹೋಗುತ್ತಿದ್ದಾಗ, ಸ್ವಲ್ಪ ವಯಸ್ಸಾದವರೊಬ್ಬರು, ನಮ್ಮ ಸಹೋದ್ಯೋಗಿ ಉಪಾಧ್ಯಾಯ ಮಿತ್ರರ ಚಿಕ್ಕಪ್ಪನ ಆರೋಗ್ಯವನ್ನು ವಿಚಾರಿಸಿದರು. ಅದಕ್ಕೆ ಪ್ರತ್ಯುತ್ತರವಾಗಿ ನಮ್ಮ ಮಿತ್ರರು, ''ಚೆನ್ನಾಗಿದ್ದಾರೆ. ನೀವು ಬೇಕಾದರೆ ಅಲ್ಲಿಗೇ ಹೋಗಿ'' ಎಂದು ಮುಂದೆ ನಡೆದರು.

-ಎಚ್. ಎಸ್. ದತ್ತಾತ್ರಯರಾವ್

ಹಾರ್ಲಿಕ್ಸ್



ಪೋಷಣೆಯನ್ನು ನೀಡುತ್ತದೆ. ರೋಗ ನಿರೋಧಕ ಶಕ್ತಿಯನ್ನು ನಿರ್ಮಿಸುತ್ತದೆ. ದಿನೇ ದಿನೇ ಆರೋಗ್ಯವನ್ನು ರಕ್ಷಿಸುತ್ತದೆ.

ಹಾರ್ಲಿಕ್ಸ್ ಅನ್ನು ಪ್ರತಿ ದಿನ ತೆಗೆದುಕೊಳ್ಳಿ. ರೋಗ ನಿರೋಧಕ ಶಕ್ತಿಯನ್ನು ನಿರ್ಮಿಸಲು ಅದು ನಿಮ್ಮ ಕುಟುಂಬಕ್ಕೆ ಅತ್ಯುತ್ತಮ ಪೋಷಣೆ ನೀಡುತ್ತದೆ. ಅವರಿಗೆ ಅದು ಸಂಪೂರ್ಣ ಆರೋಗ್ಯವನ್ನು ಕೊಡುತ್ತದೆ.

ಹಾರ್ಲಿಕ್ಸ್, ವಿಶ್ವಾದ್ಯಂತ ಡಾಕ್ಟರ್‌ಗಳು ಶಿಫಾರ್ಸು ಮಾಡುತ್ತಿರುವ ಪಾನೀಯವಾಗಿದೆ. ಇದು ಅತ್ಯಧಿಕ ಪೋಷಣೆಯನ್ನು ನೀಡುವ ನಿಶ್ಚಿತ ಸಾಧನ. ಏಕೆಂದರೆ ವಿಶಿಷ್ಟ ಹಾರ್ಲಿಕ್ಸ್ ವಿಧಾನದಲ್ಲಿ ತಯಾರಾಗಿರುವ ಅದರಲ್ಲಿ ಸಮೃದ್ಧ ಹಾಗೂ ಪರಿಶುದ್ಧ ಪೋಷಕಾಂಶಗಳು ಮಿಳಿತಗೊಂಡಿವೆ. ಆದ್ದರಿಂದ ಸಹಜವಾದ ತನ್ನ ಉತ್ತಮತೆಯನ್ನು ಅದು ಉಳಿಸಿಕೊಂಡಿದೆ. ಇದರಿಂದಾಗಿ ಹಾರ್ಲಿಕ್ಸ್ ಅನ್ನು ಜೀರ್ಣಿಸಿಕೊಳ್ಳುವುದು ಬಲು ಸುಲಭ.

ಆದ್ದರಿಂದಲೇ ಸುಚಿತ್ರ ಹಾರ್ಲಿಕ್ಸ್ ಅನ್ನು ತನ್ನ ಕುಟುಂಬ ಜೀವನದ ಒಂದು ಅವಶ್ಯಕ ಸಾಧನವನ್ನಾಗಿ ಮಾಡಿಕೊಂಡಿದ್ದಾಳೆ.

ಸುಚಿತ್ರಳಂತೆ ನೀವೂ ಪ್ರತಿದಿನ ನಿಮ್ಮ ಕುಟುಂಬಕ್ಕೆ ಹಾರ್ಲಿಕ್ಸ್ ಅನ್ನು ತಪ್ಪದೇ ಕೊಡಿರಿ. ಅವರು ಹೇಗೆ ಆರೋಗ್ಯವಂತರಾಗಿ ಮತ್ತು ಶಕ್ತಿವಂತರಾಗಿ ಬೆಳೆಯುತ್ತಾ ಹೋಗುವರೆಂಬುದನ್ನು ನೀವೇ ನೋಡಿರಿ.

"ಹಾರ್ಲಿಕ್ಸ್ ಪೋಷಣೆಯ ಒಂದು ಮುಖ್ಯ ಸಾಧನ. ನಿಮ್ಮ ಕುಟುಂಬದ ರೋಗ ನಿರೋಧಕ ಶಕ್ತಿಯನು ನಿರ್ಮಿಸಲು ಮತ್ತು ಅನುದಿನವೂ ನಿಮ್ಮನ್ನು ಆರೋಗ್ಯವಂತರನ್ನಾಗಿ ಮತ್ತು ಕ್ರಿಯಾಶೀಲರನ್ನಾಗಿ ಇಡಲು ಹಾರ್ಲಿಕ್ಸ್ ಅನ್ನು ಸೇವಿಸಿರಿ."



ಸಂಪೂರ್ಣ ಪೋಷಣೆಯನ್ನು ಪಡೆಯಲು

ಹಾರ್ಲಿಕ್ಸ್

ಹಾರ್ಲಿಕ್ಸ್ ಒಂದು ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಮೊನ್ನೆ ಮೊನ್ನೆಯಷ್ಟೆ
ಕನ್ನಡ ರಾಜ್ಯೋತ್ಸವವನ್ನಾಚರಿಸಿದೆವು

ಕನ್ನಡ 'ಕಸ್ತೂರಿ'

ಕೆ. ಚಂದ್ರಮೌಳಿ

ಮೊನ್ನೆ ರೈಲಿನಲ್ಲಿ ಪ್ರಯಾಣ ಮಾಡುತ್ತಾ ಇರುತ್ತಿದ್ದಾಗ ನೆರೆಪ್ರಾಂತದವನೊಬ್ಬ ಅರೆಬೆರಕೆ ಕನ್ನಡದಲ್ಲಿ ಕಷ್ಟಪಟ್ಟು ಮಾತಾಡುತ್ತಾ "ನಿಮ್ಮ ಕನ್ನಡ ಭಾಷೆ ಬಲು ಚೆನ್ನ. ಕನ್ನಡ ಕಸ್ತೂರಿ" ಅಂದ. ಹೊಗಳಿಕೆ ಯಾರಿಗೆ ತಾನೇ ಅಮಲೇರಿಸುವುದಿಲ್ಲ. ಕನ್ನಡ ಕಸ್ತೂರಿ! ಅಬ್ಬ, ಅವನ ಮಾತು ಕೇಳಿ ಕಸ್ತೂರಿಯ ಗಮ ಮೂಗಿಗೇ ಬಡಿದಂತೆ ನನ್ನ ಮುಖವೆಲ್ಲಾ ಅರಳಿತು. ಯಾರಾದರೂ ಮುಖಸ್ತುತಿ ಮಾಡಿದರೆ ಮೂರ್ಖನ ಹಾಗೆ ಹಲ್ಲು ಗಿಂಜಬಹುದೇ ಹೊರತು, ತಕ್ಷಣ ಸರಿಯಾದ ಉತ್ತರ ಕೊಡಲು ಸ್ವಲ್ಪ ಕಷ್ಟ. ಅಷ್ಟರಲ್ಲಿ ಆ ಕಡೆ ಮೂಲೇಲಿ ಕಿಟಕಿಯಿಂದ ಹೊರನೋಡುತ್ತ ಕೂತಿದ್ದ ನಮ್ಮ ಮಾದೇವು ನನ್ನ ಕಡೆ ತಿರುಗಿ ಹರಕು ಮುರುಕು ಇಂಗ್ಲೀಷಿನಲ್ಲಿ "ಅರೇ ಕಮಾನ್ ಐ ಸೇ ಹೋಗಿ ಸ್ಟ್ರಾಂಗ್ ಕಾಫಿ ಕುಡಿದು ಬರೋಣ." ಎಂದು ಅಹ್ವಾನವಾಗಿ ಬಾಯಿ ಬಿಟ್ಟ. ಇವನ ಒಡಕು ಮಾತು ಕೇಳಿ ನೆರೆಯವನ ಹೊಗಳಿಕೆಗೆ ಕೊಡಬೇಕಾಗಿದ್ದ ಉತ್ತರ ತಕ್ಷಣ ಹೊಳೆಯಿತು. "ಹೌದು ಕನ್ನಡ ಭಾಷೆ ಕೇಳಿದರೆ...ಅಕಸ್ಮಾತ್ ಕೇಳಿ ಬಂದರೆ ಚೆನ್ನ ಕಸ್ತೂರಿಯ ಹಾಗೆ. ಆದರೆ ಅದು ಕೇಳಿ ಬರಬೇಕಲ್ಲ!" ಅಂದಾಗ ನೆರೆಪ್ರಾಂತದವನಿಗೇಕೆ ನಮ್ಮ ಮಾದೇವುಗೂ ಅದೆಷ್ಟು ಅರ್ಥವಾಯಿತೋ ಗೊತ್ತಿಲ್ಲ.

ಹೀಗೆಯೇ ಯೋಚನೆ ಮಾಡುತ್ತಾ ನಡೆದಂತೆಲ್ಲಾ "ಹೌದು, ನಮ್ಮ ಕನ್ನಡ ಯಾವುದರಲ್ಲಿ ಕಡಿಮೆ" ಎಂದು ಹೆಮ್ಮೆಯಾಯಿತು. ಕನ್ನಡ ಭಾಷೆ ಕಸ್ತೂರಿ, ಕನ್ನಡ ಸಾಹಿತಿಗಳಿಗೆ ಜ್ಞಾನಪೀಠ, ಕನ್ನಡ ಚಿತ್ರಗಳಿಗೆ ಸ್ವರ್ಣಕಮಲ, ಕನ್ನಡ ಕ್ರಿಕೆಟ್ ಪಟುಗಳು ವಿಶ್ವಮಾನ್ಯ, ಕರ್ನಾಟಕದ ಸಂಗೀತಗಾರರಿಗೆ ಎಲ್ಲೆಲ್ಲೂ ಬೇಡಿಕೆ, ಕರ್ನಾಟಕ ಕಲೆಗಳ ಬೀಡು, ಸೈನ್ಯದಲ್ಲಿ ಕನ್ನಡಿಗ ಜನರಲ್‌ಗಳು, ಕನ್ನಡಿಗರು ವೀರರು, ಸಹೃದಯಿಗಳು, ಕರ್ನಾಟಕದ ಪರಂಪರೆ ವೈಭವದ್ದು, 'ಮಾದರಿಯ ಮೈಸೂರು' ಎನಿಸಿ ಮೆರೆದ ನಮ್ಮ ಕನ್ನಡ ದೇಶ ದೊಡ್ಡದಾಗಿ ಬೆಳೆದು 'ಕಸ್ತೂರಿಯ ಕರ್ನಾಟಕವಾಗಿದೆ', ಕಂಪು ಹೊರಸೂಸುತ್ತಿದೆ. ಕರ್ನಾಟಕದ ಭವಿಷ್ಯ...ಭವಿಷ್ಯ ಭವ್ಯವಾದದ್ದು ಅನ್ನುವಷ್ಟರಲ್ಲಿ ಯಾಕೋ ಗಂಟ-

ಲ್ಲಿ ಏನೋ ಸಿಕ್ಕಿಕೊಂಡ ಹಾಗಾಯಿತು. ಏನೋ ಅಡ್ಡ ವಾಸನೆ ಮೂಗಿಗೆ ಬಡಿದಂತಾಗಿ ಕರವಸ್ತ್ರ ಹೊರತೆಗೆದೆ, ಇದ್ದಕ್ಕಿದ್ದ ಹಾಗೇ ತಲೆ ಗಿರ್ರನೆ ತಿರುಗಿದಂತಾಯಿತು. ಸ್ವಲ್ಪ ಸುಧಾರಿಸಿಕೊಂಡ ಮೇಲೆ ನಿಜಸ್ಥಿತಿ ಅರ್ಥವಾಯಿತು. ಈ ಹೊಗಳಿಕೆ ಇದೆ–ಯಲ್ಲ ಅದೊಂದು ದುಶ್ಚಟ, ಮದ್ಯಪಾನದಂತೆ. ಸುರೆ ಕುಡಿದಷ್ಟು ಸಿಹಿ, ಹೊಗಳಿಕೆ ಕೇಳಿದಷ್ಟು ಜೇನು. ಮತ್ತು ಬರಿಸಿ, ಮೈಮರಿಸಿ ದೊಪ್ಪೆಂದು ಬೀಳುವಂತಾದರೂ ಲೋಟದ ಕೆಳಗಿರುವ ಕೊನೆಯ ಗುಟುಕಿಗಾಗಿ ತುಟಿಯ ತುದಿಯಲ್ಲಿರುವ ಒಂದು ಹನಿಗಾಗಿ ನಾಲಿಗೆ ಚಡಪಡಿಸುತ್ತದೆ–ಹಾತೊರೆಯುತ್ತದೆ. ಹೊಗ–ಳಿಕೆಯೂ ಅಷ್ಟೇ. ಈ ಹಿಂದಿನ ರಾಜ್ಯೋತ್ಸವ–ಗಳಲ್ಲೆಲ್ಲಾ, ಎಲ್ಲಾ ಭಾಷಣಗಳಲ್ಲಿ, ಹಾಡು–ಗಳಲ್ಲಿ, ಉತ್ಸವಗಳಲ್ಲಿ ಬಾನುಲಿ ವರದಿಗಳಲ್ಲಿ, ಪತ್ರಿಕೆಗಳ ತಲೆಬರಹಗಳಲ್ಲಿ, ಲೇಖಕರ ವಿವರಗಳಲ್ಲಿ, ಕವಿಗಳ ಕವಿತೆಗಳಲ್ಲಿ, ಅಲ್ಲಿ ಇಲ್ಲಿ ಎಲ್ಲೆಲ್ಲೂ ಅಂದರೆ ವಿಶಾಲ ಮನೋಭಾವದವನು ಎನ್ನುವುದು. ಮನೋಭಾವ ಅಂದರೆ…ಭಾವ, ಭಾವನೆ, ಯೋಚನೆ, ಆಲೋಚನೆ…ಆಲೋಚನೆಯಲ್ಲಿ ವಿಶಾಲವಾದದ್ದೇನು? ಸಂಕುಚಿತ ಮನೋಭಾವ ಬಿಟ್ಟು ವಿಶಾಲವಾಗಿ ಯೋಚಿಸಿದರೆ ವಿಶಾಲ ಮನೋಭಾವ. ಸಂಕುಚಿತವಾಗಿ ಯೋಚಿಸುವುದೆಂದರೆ ಕನ್ನಡದವನಾಗಿ, ಕನ್ನಡದಲ್ಲಿ ಸೀಮಿತವಾಗಿ ಯೋಚಿಸುವುದು. ಅದಕ್ಕೇನೆ ಈಚೆಗೆ ಹೆಚ್ಚಿನ ಕನ್ನಡಿಗರೆಲ್ಲಾ ಯೋಚಿಸುವುದು ಇಂಗ್ಲೀಷಿನಲ್ಲಿ. ಹೀರೋ, ಮೆಗ್ನಿಫಿಸೆಂಟ್, ಪಿಟಿ, ಬ್ಯೂಟಿಫುಲ್, ಫಿಯರ್‌ಫುಲ್, ಡ್ರೆಡ್‌ಫುಲ್, ಹ್ಯೂಮರಸ್ ಅಂತ ಇಂಗ್ಲೀಷಿನಲ್ಲಿ ಯೋಚನೆಗಳು ಮೊದಲು ಓಡಿಬರುತ್ತವೆಯೇ ವಿನಾ 'ವೀರಾದ್ಭುತ ಕರುಣಾ ಶೃಂಗಾರ ಭಯಾನಕ ರೌದ್ರ ಭೀಭತ್ಸ ಮಹಾ ಸಾರತರ ಹಾಸ್ಯ ಶಾಂತಾಧಾರಂ ನವವಿಧ ವಿಕ–ಲ್ಪಮಾಂ ರಸಮಾರ್ಗಂ;' ಅನ್ನುವುದ್ಯಾವುದೂ ನಮ್ಮ ಯೋಚನೆಗೆ ನಿಲುಕುವುದೇ ಇಲ್ಲ. ಇಂಗ್ಲೀ–

ನಾವು ಅಭಿಮಾನಧನರು ?

ಕರ್ನಾಟಕದ ಪರಂಪರೆ, ಕನ್ನಡಿಗನ ಹಿರಿಮೆ, ಗರಿಮೆ…ಇವುಗಳೆಲ್ಲದರ ಬಗ್ಗೆ ಹೊಗಳಿಕೆ ಕೇಳಿ ಕೇಳಿ ಕನ್ನಡಿಗನ ತಲೆ ಗಿರ್ರೆಂದು ಬುಗುರಿಯಂತೆ ತಿರುಗುತ್ತಿರಬೇಕು. ಈ ವರ್ಷದ ರಾಜ್ಯೋತ್ಸವದಲ್ಲಾದರೂ ಹೊಗಳಿಕೆಯ ಬಾಯ್ಬಿಡದೆ, ಕಿವಿಗೊಡದೆ, ಹೊಗಳಿಕೆಯ ಹಿಂದಿನ ಅಡ್ಡ ವಾಸನೆಗಳನ್ನು ತಿಳಿದುಕೊಂಡು ಕನ್ನಡಿಗ ಕನ್ನಡಿಗನಾಗಿಯೇ ಉಳಿದರೆ ಚೆನ್ನ ಅನಿಸಿತು. ಅದಕ್ಕೋಸ್ಕರ ಕಳೆದ ಅನೇಕ ವರ್ಷಗಳಲ್ಲಿ ಕನ್ನಡಿಗನ ಮೇಲೆ ಮಿತಿ ಮೀರಿ ಹೇರಿರುವ ಹೊಗಳಿಕೆಯ ಹೂಮಾಲೆಗಳನ್ನೆಲ್ಲಾ ಒಂದೊಂದಾಗಿ ತೆಗೆಯೋಣ ಎಂದು ಕೂತರೆ ಅಡ್ಡ ವಾಸನೆ ಹೊಡೆಯಲು ಶುರುವಾ–ಯಿತು. ದೇವರ ಮೇಲಿನ ನಿರ್ಮಾಲ್ಯ ತೆಗೆದಂತೆ ಹೊಗಳಿಕೆಯ ಹೂಮಾಲೆಯ ಹಿಂದೆ ಅಡ್ಡ ವಾಸನೆ ಬಂದರೆ ದಯವಿಟ್ಟು ಕ್ಷಮಿಸಿ.

ಹೊಗಳಿಕೆಯ ಮಾಲೆಗಳಲ್ಲಿ ಮೊಟ್ಟ ಮೊದಲನೆಯದು–ಕನ್ನಡಿಗ ಬಹಳ broad minded ಷಿನಲ್ಲಿ ಯೋಚನೆ ಮಾಡಿ ಬೇಕೆನಿಸಿದರೆ ಅದನ್ನೂ ಕನ್ನಡಕ್ಕೆ ಯೋಚನಾಂತರಿಸಬೇಕಾಗುತ್ತದೆ. ಇಂಗ್ಲೀಷ್ ಬರದ ಕನ್ನಡದವನಾದರೆ ಅವನ ಯೋಚನೆ ಹೇಗೆ ವಿಶಾಲವಾದಿತೆಂದು ಯೋಚಿಸಬೇಡಿ. ಇಂಗ್ಲೀಷ್ ಬರದ ಕನ್ನಡಿಗನಿಗೆ ಹಿಂದಿ, ಉರ್ದು, ಮರಾಠಿ, ಕೊಂಕಣಿ, ತುಳು, ಕೊಡಗು, ತೆಲುಗು, ತಮಿಳು ಯಾವುದಾದ್ರು ಬೇರೆ ಭಾಷೆ ಬಂದೇ ಬರುತ್ತದೆ. ತನ್ನ ಯೋಚನೆಯನ್ನು ವಿಶಾಲವಾಗಿ ಹರಿಹಾಯ್ದು ಬಿಡಲು. 'ನಾನು ಕನ್ನಡದಲ್ಲಿ ಯೋಚನೆ ಮಾಡ್ದೆ' ಎಂದು ಯೋಚನೆ ಬಂದರೆ ಎಷ್ಟು ಸಂಕೋಚ ಆಗುತ್ತದೆ ಅಲ್ಲವೆ?

ಸರ್ವಸಾಮಾನ್ಯವಾದ ಇನ್ನೊಂದು ಹೊಗಳಿಕೆಯೆಂದರೆ, ಕನ್ನಡಿಗ ಬಹಳ adaptable ಅನ್ನೋದು. ಹಾಗಂದರೆ ಕನ್ನಡಿಗ ಯಾವ ಸನ್ನಿವೇಶಕ್ಕೂ, ಜನಕ್ಕೂ, ಭಾಷೆಗೂ ಹೊಂದಿಕೊಳ್ಳ ಬಲ್ಲ ಎಂದರ್ಥ. ಸನ್ನಿವೇಶಕ್ಕೂ ಜನಕ್ಕೂ ಹೊಂದಿಕೊಳ್ಳುವುದೇನೋ ಸರಿ, ಆದರೆ ಭಾಷೆಗೆ ಹೊಂದಿ

ಕೊಳ್ಳುವುದೆಂದರೇನು? Adaptation ಅಂದರೆ ಅನುವಾದ ಎಂತಲೂ ಅರ್ಥ. ಹಾಗೆ ಕನ್ನಡಿಗ ತನ್ನ ಭಾಷೆಯನ್ನು ಬಲು ಬೇಗ ಅನುವಾದ ಮಾಡಿಕೊಂಡು ಬೇರೆ ಯಾವ ಭಾಷೆಗಾದರೂ ಒಗ್ಗಿಸಿಕೊಂಡುಬಿಡುತ್ತಾನೆ. ಮೂಲೆ ಮನೆ ನಾಗಜ್ಜಿಯಿಂದ ಹಿಡಿದು ಬಂಗಲೆ ನಾರಾಯಣರಾಯರವರೆಗೂ, ಗುಮಾಸ್ತೆ ಗುಂಡಪ್ಪನಿಂದ ಜಿಲ್ಲಾಧಿಕಾರಿ ಗೋವಿಂದರಾಯರವರೆಗೂ ಎಲ್ಲಾ ಕಡೆಯೂ ಇತರ ಭಾಷೆಗೆ ಹೊಂದಿಕೊಂಡಿರುವವನನ್ನೆ ನೋಡಬಹುದು. ಸುಸ್ತಾಗಿ ರೈಲಿನಿಂದಿಳಿದು, ವಯಸ್ಸಿನಿಂದ ನೆಲದವರೆಗೂ ಬಗ್ಗಿ ಕೈಯಲ್ಲಿ ಕೋಲೂರಿ, ಕುಂಕುಳಲ್ಲಿ ಕಾಶೀಪೆಟ್ಟಿಗೆ ಇರುಕಿಕೊಂಡು, ಮಡಿ ಮಡೀಂತ ಎಗರಾಡುವ ನಾಗಜ್ಜಿ ಜಟಕಾದವನೊಡನೆ ಚೌಕಾಶಿ ಮಾಡುವುದು ಕನ್ನಡದಲ್ಲಲ್ಲ, ಉರ್ದುವಿನಲ್ಲಿ! 'ಚಾರ ಆಣಾ ಜಾತಾ' ಎಂದು ತಪ್ಪು ತಪ್ಪಾಗಿ ಮಡಿ ನಾಗಜ್ಜಿ ಬಾಯ್ಬಿಡುವುದು ಕನ್ನಡತನಕ್ಕೆ ಪೈಲಿಗೆ. ಬಹಳ ಮಿಕ್ಸ್ ಮಾಡ್ತೀವಿ. ಇನ್ನು ಹೊಸಬರ ಅಕ್ವೆಂಟನ್ಸ್ ಆದರೆ ಅವರ ಜೊತೆ ಪೂರ್ತಿ ಇಂಗ್ಲೀಷೇ. ಬೇಡದ ನೆಂಟರು ಮನೆಗೆ ಬಂದು ಝೇಂಡಾ ಹೊಡೆದರೆ ಯಾವ ರೀತಿ ಬೇಜಾರು ಪಟ್ಟುಕೋತಾರೊ, ನೀವು ಕನ್ನಡದಲ್ಲಿ ಮಾತಾಡಿದರೆ ಆ ರೀತಿ ಮುಜುಗರ ಪಟ್ಟುಕೋತಾರೆ ನಮ್ಮ ಕನ್ನಡಿಗರು! ಅಲ್ಲದೆ ಕನ್ನಡದಲ್ಲಿ ಪೂರ್ತಿ ಮಾತಾಡುವುದೆಂದರೆ ಆರ್ಟಿಫಿಶಿಯಲ್ ಆಗುಲ್ಲವೇ !! ಕನ್ನಡದಲ್ಲಿ ಮಾತನಾಡುವವನೇ ದಡ್ಡ, ಇಂಗ್ಲೀಷಿನಲ್ಲಿ ಭಾಷಣ ಬಿಗಿಯುವದೇ ಒಂದು ಫ್ಯಾಷನ್ ಅನ್ನುವ ಕಾಲವಿದು. ಹಾಗಾದರೇನು ನಗರದಲ್ಲಿರುವ ಕನ್ನಡಿಗ ಇಷ್ಟೊಂದು adaptable-ಯಾವ ಭಾಷೆಗೆ ಹೇಗೆ ಬೇಕಾದರೂ ಹೊಂದಿಕೊಳ್ಳುತ್ತಾನೆಂದರೆ—ಹಳ್ಳಿಗಳಲ್ಲೂ ಕನ್ನಡ ಭಾಷೆ ಕೇಳಲು ಸಾಧ್ಯವೇ ಇಲ್ಲವೆನ್ನುತ್ತೀರೇನು? ಅಗ್ಲಿ, ನಡೀರಿ, ಹಳ್ಳಿಯ ನಿಂಗನ್ನೇ ಕೇಳಿದರೆ "ಅಮ್ಮಾವ್ರು ವಾಕ್ ಓಗಾವ್ರೆ ಬುದ್ದಿ, ಅಂಗಿದೆ ಅಂಗೆ

ನಮ್ಮದು ವಿಶಾಲ ಮನೋಭಾವ ?

ಹೀಗೆಯೇ ಪಕ್ಕದ ಮನೆಯ ಪಾತಮ್ಮ ಹಿತ್ತಲು ಗುಡಿಸುವ ಹೆಂಗಸಿಗೆ 'ಈ ದಿನ ಅನ್ನಂ ಲೇದು, ನಾಳೆ ಇಸ್ತಾನು' ಅಂದಾಗ ಕನ್ನಡಕ್ಕೆ ಹೇಸಿಗೆ. ಕಂಟ್ರಾಕ್ಟರು ಸೀನಪ್ಪ ಗುಡಗುತ್ತಾ 'ಡೇ, ಈ ಎಲ್ಲಾ ಇಟ್ಟಿಗೆ ಅಂಗೆ ಪೋಡು' ಅಂದಾಗ ಕನ್ನಡ ಒಡಕಲು. ಅಂಗಡಿಯ ಕಲ್ಲಣ್ಣನವರು ಗಿರಾಕಿಯನ್ನು ನೋಡಿ 'ಕಾಯ ಪಾಹಿಜೆ' ಅಂದಾಗ ಕನ್ನಡಕ್ಕೆ ಇನ್ನೇನು ಬೇಕು, ಇವರ ತಲೆ ಕಾಯಿ? ನಾರಾಯಣರಾಯರು ತಮ್ಮ ಬಂಗಲೆಯ ಡ್ರಾಯಿಂಗ್ ರೂಮ್, ಬೆಡ್ ರೂಮ್, ಅಟ್ಯಾಚ್ಡ್ ಬಾತ್ ರೂಮ್‌ಗಳ ನಯ ನಾಜೂಕನ್ನು ವಿವರಿಸುತ್ತಾ ಇದ್ದರೆ ಬಂಗಲೆಗೋಸ್ಕರ ನಾರಾಯಣರಾಯರು ಅವರ ಇಂಗ್ಲೀಷಿನ ಮೋಜಿಗೋಸ್ಕರ ಕೆಲವು ಕನ್ನಡ ಪದಗಳು ಅನಿಸದೇ ಇರುವುದಿಲ್ಲ. ಹೀಗಾದರೆ ಕನ್ನಡದಲ್ಲಿ ಮಾತಾಡುವುದಾದರೂ ಹೇಗೆಂದು ಆಶ್ಚರ್ಯ ಪಡಬೇಡಿ. ತುಂಬಾ ಹತ್ತಿರದವರೊಡನೆ ಮಾತಾಡಬೇಕಾದರೂ ಇಂಗ್ಲೀಷ್ ವರ್ಡ್ಸ್‌ನ್ನು ಮಾರ್ಕೆಟ್ಟಿಗೂ ಹೋಗೆ ಬರ್ತ್ಯೋದು ಬುದ್ಧಿ" ಅಂತಾನೆ. ಪೂರ್ವಾಚಾರದ ಪದ್ಧತಿಗಳನ್ನೆಲ್ಲಾ ತೇಯ್ದು ಹಣೆಯ ಮೇಲಿನ ಗಂಧವಾಗಿಟ್ಟುಕೊಂಡು ಹೊಸ ವಿಚಾರ ವ್ಯವಹಾರಗಳೆಲ್ಲಾ ಪರಂ ತಲೆಯಲ್ಲಿ ಚಿಗುರಿಬಿಟ್ಟಾವೆಂದು ತಲೆಯನ್ನು ನುಣ್ಣಗಾಗಿಸಿಕೊಂಡು, ನಮ್ಮ ಪುರಾತನ ಸಂಸ್ಕೃತಿ, ಪರಂಪರೆಯನ್ನು ಪುಳಿ ಜುಟ್ಟಿನ ಗಂಟಿನಲ್ಲಿ ಭದ್ರವಾಗಿರಿಸಿಕೊಂಡಿರುವ ಶಾಸ್ತ್ರಿಗಳನ್ನು ಮಾತಾಡಿಸಿದರೆ ಅವರ ಶಾಸ್ತ್ರೀಯವಾದ ತಿಳಿಗನ್ನಡ ಈ ರೀತಿ—"ಓ ಯಾವಾಗ ಬಂದದ್ದು? ಜರ್ನೀ ಸೇಫ್? ...!" ಇವರಿಗೆಲ್ಲಾ ಬೇಡವೆಂದು ಮರಳಿ ಮಣ್ಣಿಗೆ ಎಂದುಕೊಂಡು ಹಳ್ಳಿಯ ರೈತನೊಡನೆ ಮಾತಾಡಿದರೆ "ಈ ಸರ್ತಿ ಟೇಮಿಗೆ ಮಳೆಯಿಲ್ಲ. ರೇಟು ಏರ್ತದೆ ಬುದ್ದಿ" ಎಂದು ಹೊತ್ತಿಗೆ ಸರಿಯಾಗಿ ಟೇಮು ಅಂದು ತನ್ನ ರೇಟು—ಬೆಲೆ ಹೆಚ್ಚಿಸಿಕೊಳ್ಳಲು ಪ್ರಯತ್ನಪಡುತ್ತಾನೆ. ಇಷ್ಟೆಲ್ಲಾ ಪಟ್ಟು ತಿಂದ ಮೇಲೆ ಎರಡೇ ಎರಡು ತೊದಲು

ನುಡಿಯಾದರೂ ಸಿಹಿಯಾದ ಮುದ್ದಾದ, ಕನ್ನಡ ಮಾತಿನಿಂದ ಎಲ್ಲವನ್ನೂ ಮರೆಯೋಣವೆಂದು ಮೂರು ವರ್ಷದ ಮಗುವಿನ ಹತ್ತಿರ ಹೋದರೆ "ಟಾಟಾ, ಬೋಯಿ, ಬೋಯಿ" ಅಂತ ಅದೂ ಕೈಯಾಡಿಸಿ ಬೀಳ್ಕೊಡುತ್ತದೆ!! ತೊದಲುತ್ತಾ ಮಾತು ಕಲಿಯುವ ಮಗುವಿಗೆ ನಾವು ಮೊದಲು ಹೇಳಿಕೊಡುವುದು 'ಟಾ ಟಾ ಬೈ ಬೈ.' ಹೀಗೆ ನಾವು ಪರಭಾಷೆಗೆ ಸುಗ್ಗಿಕೊಳ್ಳುವವು. adaptable ಆಗಿರುವುದು ಬರೀ ನಗರಗಳಲ್ಲಲ್ಲ, ಬರೀ ದೊಡ್ಡವರಾದ ಮೇಲಲ್ಲ–ಹಳ್ಳಿ ಹಳ್ಳಿಗಳಲ್ಲಿ, ಚಿಗುರೊಡೆಯುವ ಎಳೆತನದಿಂದಲೂ ಕನ್ನಡ ನುಡಿಗೆ ಟಾಟಾ ಬೈ ಬೈ!

ನಿಮ್ಮನ್ನು ನೋಡಿ ಯಾರಾದರೂ, ಅಬ್ಬಾ ಎಷ್ಟು open minded ಅಥವಾ ತೆರೆದ ಹೃದಯದವರು ಎಂದು ಹೊಗಳಿದರೆ ನಿಮಗೆ ಸಂತೋಷವಾಗುವುದಿಲ್ಲವೆ ? ಆದರೆ ಕನ್ನಡಿಗನ ಈ open mindedತನವನ್ನು ರೇ ಅನೇಕರು. ಕನ್ನಡದಲ್ಲಿ ಕಾಗದ ಬರೆಯುವುದು ಯಾರಿಗೆ? ಅಪ್ಪನಿಗೆ, ಅಣ್ಣ ತಮ್ಮಂದಿರಿಗೆ ಸ್ನೇಹಿತರಿಗೆ ಎಲ್ಲರಿಗೂ ಇಂಗ್ಲೀಷ್ ಗೊತ್ತು. ಇನ್ನು ಇಂಗ್ಲೀಷ್ ಕಾಗದ ಓದಿದರೆ ಅಮ್ಮನೂ ಅರ್ಥಮಾಡಿಕೊಂಡು ಬಿಡ್ತಾರೆ. ಹಾಗಾದರೆ ಕನ್ನಡದಲ್ಲಿ ಇನ್ನಾರಿಗೆ ಬರೆಯಬೇಕು? ಏನು? ಪ್ರೇಮಪತ್ರವೆ? ಹುಚ್ಚು ಹುಚ್ಚು! Love making is possible only in English. ಎಲ್ಲಾ ಪ್ರೇಮಪತ್ರಗಳೂ ಇಂಗ್ಲೀಷಿನಲ್ಲಿ ಸ್ವಾರಸ್ಯ–ಇದು ನಮ್ಮ ಕನ್ನಡಿಗನ ತೆರೆದ ಹೃದಯ! ಗಾಂಧೀಜಿಯೋ ಯಾರೋ ಒಬ್ಬರು ಎಲ್ಲೊ ಒಂದು ಕಡೆ ಹೇಳಿದ್ದ ನೆನಪು: ಎಲ್ಲಾ ಕಡೆಯಿಂದಲೂ ವಿಚಾರಧಾರೆ ತೇಲಿಬರುವಂತೆ ನಿಮ್ಮ ಕಿಟಕಿ ಬಾಗಿಲುಗಳನ್ನು ತೆರೆದಿಡಿ; ಆದರೆ ಹೊಸ ವಿಚಾರದ ಬಿರುಗಾಳಿಯಲ್ಲಿ ನಿಮ್ಮ ಸ್ವಂತದ್ದು ಹಾರಿಹೋಗದಿರಲಿ. ಕನ್ನಡಿಗನಿಗೆ ಅದು ಅರ್ಥವಾಗುವುದಾದರೂ ಎಂದೋ ಗೊತ್ತಿಲ್ಲ.

ತೆರೆದ ಹೃದಯದವರು ನಾವು ?

ಅಂದರೆ ಇನ್ನೊಬ್ಬರ ವಿಚಾರಗಳನ್ನು ಸ್ವೀಕರಿಸಲು ಕಣ್ಣು, ಕಿವಿ ತೆರೆದುಕೊಂಡಿರುವುದನ್ನು ಯಾವ ರೀತಿ ವ್ಯಕ್ತಪಡಿಸುತ್ತಾನೆಂದು ಕೇಳಿದರೆ ನಿಮಗೆ ಸೋಜಿಗಂತ ಆಶ್ಚರ್ಯವಾಗಬಹುದು. ಹೊಸ ವಿಚಾರಗಳು ಬರುವುದಾದರೂ ಹೇಗೆ –ಭಿನ್ನ ಅಭಿರುಚಿಯನ್ನು ತಳೆದು ಬೇರೆ ನಾಡಿನವರೊಡನೆ ಬೆರೆತು, ಬೇರೆ ಭಾಷೆಯ ಅದರಲ್ಲೂ ಇಂಗ್ಲೀಷಿನ ಕಥೆ, ಕಾದಂಬರಿ, ವಿಚಾರ, ಸಾಹಿತ್ಯ, ಪತ್ರಿಕೆಗಳನ್ನು ಓದುವದರಿಂದ ಹೊಸ ವಿಚಾರ ಬರುತ್ತದೆ. ಈ ಕಾರಣದಿಂದಲೇ ಕನ್ನಡಿಗರಿಗೆ ಕನ್ನಡ ಸಮಾಚಾರ ಪತ್ರಿಕೆ, ವಾರಪತ್ರಿಕೆ ಡೈಜೆಸ್ಟ್, ಪುಸ್ತಕ, ನಾಟಕಗಳೆಂದರೆ ತಾತ್ಸಾರ. 'ಇವುಗಳಲ್ಲೇನಂತಹ ಹೊಸ ವಿಚಾರ ?' 'ಅಕ್ಷರಗಳೇ ಮರೆತುಹೋಗಿ ಬಿಟ್ಟಿವೆ.. ಕನ್ನಡದಲ್ಲಿ ಬರೆದು ಎಷ್ಟೋ ವರ್ಷಗಳಾದುವು, ಸ್ಕೂಲು ಬಿಟ್ಟು ಎಷ್ಟೊಂದು ವರ್ಷಗಳಾದವು ನೋಡಿ' ಎಂದು ತಮಗೆ ತಾವೇ ಸಮಾಧಾನ ಮಾಡಿಕೊಳ್ಳುವವ

ಈಗಿನ ಕಾಲದ ಔಷಧಿ ಮಾತ್ರೆಗಳನ್ನು ನೋಡಿದ್ದೀರಲ್ಲಾ–ಒಳಗಿನ ವಿಷವನ್ನು ಮುಚ್ಚಲು ಗುಳಿಗೆಗೆ ಸಿಹಿ ಸಕ್ಕರೆಯ ಹೊದಿಕೆ ಇರುವುದು. ಇನ್ನೊಂದು ರೀತಿ ಹೇಳಬೇಕೆಂದ್ರೆ ಇದಕ್ಕೆ ಮುಸುಕಿನಲ್ಲಿ ಗುದ್ದು ಅನ್ನಬಹುದು. ಹೀಗೆ ಮುಸುಕಿನಲ್ಲಿ ಗುದ್ದಿನಂತಹ ಹೊಗಳಿಕೆಯ ಮುಸುಕು ತೆಗೆದರೆ ಒಳಗಿನ ಗುದ್ದು ಇಷ್ಟೆ–ಕನ್ನಡಿಗರು ಹೌದಪ್ಪಾ ಜನ, ಹೇಡಿಗಳು. ಅರರೇ ಸಿಟ್ಟಾಗಬೇಡಿ. ನನಗೂ ಗೊತ್ತು. ಕೆಳದಿ ಶಿವಪ್ಪ ನಾಯಕ, ಹೈದರ, ಟಿಪ್ಪು, ಕಿತ್ತೂರ ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ...ಇನ್ನೂ ಅನೇಕ ವೀರರು, ಹಿಂದೆ ಇದ್ದವರು, ಕನ್ನಡನಾಡಿನವರೆ. ನಾನು ಅವರ ಬಗ್ಗೆ ಹೇಳ್ತಾ ಇರಲಿಲ್ಲ. ಇಂದಿನ ಸಾಮಾನ್ಯ ಕನ್ನಡಿಗನ ಸಾಮಾನ್ಯ ಗುಣದ ಬಗ್ಗೆ ಮಾತಾಡ್ತಾ ಇದ್ದೀನಿ. ವಾದ ಶುರುವಾದರೆ ಗಲಾಟೆಯೆಂದು ತಿಳಿದ ಕನ್ನಡಿಗ ವಾದವೇ ಬೇಡವೆಂದು ಇನ್ನೊಬ್ಬರ ಅಭಿಪ್ರಾಯಕ್ಕೆಲ್ಲಾ ಹೌದಪ್ಪಾ ಹೌದು

ಅಂದು ತನಗೆ ತಾನೇ 'ಹೌದಪ್ಪಾ ಜನ' ಅಂತ ಹೆಸರು ಮಾಡಿಕೊಂಡಿದ್ದಾನೆ. ಎಲ್ಲಿ ಗಲಾಟೆ, ದೊಂಬಿ ನಡೆಯಲಿ ಅಲ್ಲಿಂದ ನೂರು ಗಜ ದೂರಾನೆ ಇರೋಣ. ನಮಗ್ಯಾಕಪ್ಪ ಆ ಸಮಾಚಾರ ಅನ್ನುವವರೇ ಹೆಚ್ಚು. ಮುಂದಿನ ಬಾಗಿಲು ತಟ್ಟಿದ ಶಬ್ದವಾದರೆ ಹೆಂಡತೀನ ಕರೆದು 'ಲೇ ನೋಡೇ ಯಾರೋ ಬಾಗಿಲು ತಟ್ತಾರೆ.' ಅಂದು ಹಿತ್ತಲ ಕಡೆ ಚೆಂಬು ಹಿಡಿದು ಹೋಗುವ ಧೈರ್ಯ ನಮ್ಮಲ್ಲಿ ಹೆಚ್ಚು ಮುಂಧಿಯದು. ತುಂಬಾ ಕಹಿ ಬೇಡ ಅಂತ ಸಿಹಿ ಹೊದಿಕೆ ಹೊದಿಸಿ ಹೇಳಬೇಕೆಂದರೆ 'ಕನ್ನಡಿಗ ಇನ್ನೊಬ್ಬರ ವ್ಯವಹಾರದಲ್ಲಿ ತಲೆ ಹಾಕುವುದಿಲ್ಲ' ಛೆ! ಛೆ! ತನ್ನ ವ್ಯವಹಾರದಲ್ಲೇ ತಲೆ ಹಾಕುಲ್ಲ ಇನ್ನು ಬೇರೆಯವರ ವ್ಯವಹಾರದ ಮಾತೇಕೆ! ಕೆಲವು ಸಣ್ಣ ಉದಾಹರಣೆಗಳು: ಬೆಳಗಾವಿಯ ವಿಮಾನ ನಿಲ್ದಾಣದಲ್ಲಿ 'ಮಹಾರಾಷ್ಟ್ರಕ್ಕೆ ಸ್ವಾಗತ' ನೀಡಿದಾಗ ಅಲ್ಲಿಯ ಸಣ್ಣ ಗುಂಪೊಂದು ಹೋರಾಡಬೇಕಾಯಿತು. ಯುವಾಗಿ ಅಲ್ಲಿನ ಭಾಷೆಯನ್ನು ಕಲಿಯಬೇಕು. ಇದಕ್ಕೆ ಇನ್ನೂ ಉದಾಹರಣೆಗಳು ಬೇಕೆ ? ಬೇಕಾದಷ್ಟು ಕೊಡಬಹುದು, ಆದರೆ ಜನರನ್ನು ವಿನಾ ಕಾರಣ ಉದ್ರೇಕಗೊಳಿಸಿದ ಎಂದು ನನ್ನನ್ನು ಯಾರಾದರೂ ಹಿಡಿದುಕೊಂಡು ಹೋದಾರು. ಎಷ್ಟಾದರೂ ಕನ್ನಡಿಗನಾದ ಮೇಲೆ ನಾನು ಒಬ್ಬ 'ಶಾಂತಿಪ್ರಿಯ'ನಲ್ಲವೆ, ನನಗೇಕೆ ಬೇರೆಯ ಗಲಾಟೆ?

ನಮ್ಮ ನೆರೆಮನೆಯವರು ಉತ್ತರ ದೇಶದವರು. ಯಾವುದೋ ಮಾತಿಗೆ ಕನ್ನಡಿಗರನ್ನು ಹೊಗಳುತ್ತಾ 'ಎಂಥಾ ಸ್ನೇಹಪರರು, ಸಹೃದಯಿಗಳು, ಉದಾರಿಗಳು' ಎಂದೆಲ್ಲಾ ಹೊಗಳಿದರು. ಯಥಾಪ್ರಕಾರ ಮುಖಸ್ತುತಿಯಾದ ಮೇಲೆ ಏನು ಹೇಳಬೇಕೋ ಅರ್ಥವಾಗಲಿಲ್ಲ. ಆದರೆ ಅವರು ಹೇಳಿದ ಮಾತೇನೋ ಸ್ವಲ್ಪ ನಿಜ. ಹೊರ ದೇಶದವರಿಗೆ ನಾವು ಕೆಟ್ಟವರಾಗಿರುವುದಿಲ್ಲ. ಅವರಿಗೆ ನಾವೆಂದೂ ಸ್ನೇಹಿತರೇ. ಆದರೆ ಈ ಕಡೆ ನೆರೆಮನೆಯಲ್ಲಿ ನಮ್ಮ ಕನ್ನಡಿಗರೇ ಇದ್ದಾರಲ್ಲ ಅವರೊಡನೆ

ನಾವು ಎಲ್ಲೂ ಹೊಂದಿಕೊಳ್ಳಬಲ್ಲೆವು ?

ಬೆಳಗಾವಿ, ಕಾಸರಗೋಡು...ಮತ್ತಿತರ ಗಡಿಗಳಲ್ಲಿ ನಡೆಯುವ ಹೋರಾಟ ಅಲ್ಲಿನ ಸಣ್ಣ ಸಣ್ಣ ಗುಂಪಿಗೇ ಸೀಮಿತ. ಗಡಿಯ ಸಮಸ್ಯೆಯ ಬಗ್ಗೆ ಕರ್ನಾಟಕದ ವಿರುದ್ಧವಾಗಿ ಇಂಗ್ಲೀಷಿನ ಪತ್ರಿಕೆಗಳಲ್ಲಿ ದೆಹಲಿಯವರೆಗೆ ಅಪಪ್ರಚಾರ ನಡೆದರೂ ನಮ್ಮ ಹುಬ್ಬಳ್ಳಿ, ಬೆಂಗಳೂರಿನಲ್ಲಿ ಸುದ್ದಿಯೇ ಇರುವುದಿಲ್ಲ. ಬೇಸಿಗೆ ಕಾಲದಲ್ಲಿ ಕೊಚ್ಚೆ ನೀರಿನಲ್ಲಿ ಮಲಗಿ ನಿದ್ದೆ ಮಾಡುತ್ತಿರುವ ಎಮ್ಮೆಗೆ ನಾಲ್ಕು ಚಡೀ ಏಟು ಬಿದ್ದರೂ ಅದು ಆ ಏಟು ತನಗೆಂದು ತಿಳಿಯದೆ ಪಾಪ, ಯಾರೋ ಯಾವುದೋ ಎಮ್ಮೆಗೆ ಹೊಡೀತಿದಾರೆ ಅಂದುಕೊಳ್ಳುತ್ತಂತೆ; ಹಾಗೆ ನಮ್ಮ ಜನ. ನಮ್ಮ ರೇಡಿಯೋಗಳಲ್ಲಿ ತಮಿಳು, ತೆಲಗು, ಮರಾಠಿ ಕಾರ್ಯಕ್ರಮಗಳಿಗೆ ಅವಕಾಶ ಇರಬೇಕು. ಗಡಿಪ್ರದೇಶದ ಶಾಲೆಗಳಲ್ಲಿ ಕನ್ನಡ ಕಡ್ಡಾಯವಾಗಿರಬಾರದು; ಮರಾಠಿ, ಮಲಯಾಳಂ ಕಲಿಸಬೇಕು. [illegible] ಪ್ರದೇಶದ ಹೊರಗಿರುವ ನಮ್ಮ ಕನ್ನಡದ ಮಕ್ಕಳು [illegible]

ನಮ್ಮ ಸ್ನೇಹ ಅಷ್ಟಕ್ಕಷ್ಟೇ ಅನಿಸಿತು. ಹೌದು ನಮ್ಮವರೊಡನೆ ಯಾಕೆ ಜಗಳ, ಕದನ, ಗೊತ್ತೇನು? ಅವರು ಕನ್ನಡದವರೆಂದ ಮೇಲೆ ಅವರು ಹಳೇ ಮೈಸೂರಿನವರೆ, ಮಂಗಳೂರಿನವರೆ, ಹುಬ್ಬಳ್ಳಿ-ಧಾರವಾಡದವರೆ, ಹೈದರಾಬಾದ ಕರ್ನಾಟಕದವರೇ ಅನ್ನುವುದು ಮೊದಲ ಪ್ರಶ್ನೆ. ನಮ್ಮ ಕಡೆಯವರೇ ಆಗಿದ್ದರೆಂದರೆ ಅವರು ಮನೆಯಲ್ಲಿ ಮಾತಾಡುವುದು ಕನ್ನಡವೋ, ಕೊಂಕಣಿಯೋ, ತುಳುವೋ, ಕೊಡಗೋ, ಮರಾಠಿಯೋ, ಉರ್ದುವೋ, ತಮಿಳೋ, ತೆಲಗೋ ಎನ್ನುವುದು ಎರಡನೇ ಪ್ರಶ್ನೆ. ನಮ್ಮ ಭಾಷೆಯೇ ಅನಿಸಿದರೂ ನಾಮದವರೋ, ಮುದ್ರೆಯವರೋ, ಭಸ್ಮದವರೋ ಏನು ಎಂದು ಜಾತಿಯ ಪ್ರಶ್ನೆ. ಇಷ್ಟೆಲ್ಲವೂ ಸರಿಯಾಗಿ ತಾಳೆಯಾಗಿ ಎಲ್ಲದರಲ್ಲೂ ನಮ್ಮ ನಮ್ಮ ಜೊತೆಯವರೇ ಅನಿಸಿದರೆ, 'ಅರೆ ಇವನ, ಇವನೆಲ್ಲಿ ನಮಗಿಂತ ಹೆಚ್ಚು ಸ್ನೇಹಪರನೋ, ಸಹೃದಯಿಯೋ ಆಗಿಬಿಡುತ್ತಾನೋ?' ಎಂದು

ಹೆದರಿ ಅವನ ಮುಖಕ್ಕೆ ಕೆಸರು ಬಳಿಯುವುದು ನಮ್ಮ ವಾಡಿಕೆ. ಇಲ್ಲವೇ ಒಂದು ವೇಳೆ ತಾಳಿ [illegible] ನಮ್ಮನಮ್ಮಲ್ಲಿ [illegible] ಸಾಮಾನ್ಯ. ಕನ್ನಡಿಗ ಅಂದ ಮಾತ್ರದಿಂದಲೇ ಬಾಂಧವ್ಯ ಬೆಳೆಯುವುದು ಮಹಾ ಕಷ್ಟಸಾಧ್ಯ. [illegible] ಕನ್ನಡ [illegible] ದರೂ, ರೀತಿ ಕ್ರಮ ಬಿಟ್ಟಾದರೂ ಅವರಿಗೆ ಸಹಾಯ ಮಾಡಲು ಸಿದ್ಧ. ಅದೇ ಇನ್ನೊಬ್ಬ ಕನ್ನಡಿಗ ಸಹಾ[illegible] ಕೇಳಿದರೆ '[illegible] ಏನೂ ಮಾಡುಕ್ಕಾಗುಲ್ಲ ನೋಡಿ, ಅಲ್ಲದೆ ನಿಮಗೇನಾದ್ರೂ ಮಾಡಿದರೆ ನಾನು ಪಾರ್ಶಿಯಾಲಿಟಿ ತೋರಿಸಿದ ಹಾಗಾಗುತ್ತೆ!' ಅನ್ನುತ್ತಾರೆ. ಒಟ್ಟಿನಲ್ಲಿ ಕನ್ನಡಿಗ ಧೈರ್ಯವಿಲ್ಲದವ. ದೂರದೇಶದಲ್ಲಿನ ಕರ್ನಾಟಕ ಸಂಘದಲ್ಲಿ ನನ್ನ ಪರಿಚಯವಾದ ಮೊದಲಲ್ಲೇ ದೊಡ್ಡ ಅಧಿಕಾರಿಯೊಬ್ಬರು [illegible]- ನಾನೆಲ್ಲಿ ಅವರ ಕಂಪನಿಯಲ್ಲಿ ಕೆಲಸ ಕೇಳ್ತೀನೋ ಎಂದು ಹೆದರಿ. ನಾನು ಬಾಯಿ ಬಿಡುವ ಮೊದಲೇ

ಕಷ್ಟ, ಅಸಹ್ಯ, ಹೀನಾಯ ಅನ್ನುವ ಹಾಗೆ ಆಡುತ್ತಾರೆ. ಉತ್ತರ ದೇಶಗಳಲ್ಲಿ ಕೆಲವು ವರ್ಷದಿಂದ ನೆಲೆಸಿರುವ ಕನ್ನಡಿಗರ ಮ[illegible] ಕಲಿಯುವ ಸಾಧ್ಯತೆ [illegible] ಇಲ್ಲ. ಮನೆಯಲ್ಲಿ 'ತಾಯ್ನುಡಿ' ಏಂದಾದರೂ ಮಾತಾಡಬಾರದೆ? ನಾನು ಹೊರನಾಡಿನಲ್ಲಿ [illegible] ನೂರಾರು ಕುಟುಂಬಗಳಲ್ಲಿ ಮಕ್ಕಳಿಗೆ [illegible] ಆ ನಾಡಿನ ಭಾಷೆಯಲ್ಲೇ ಮಾತಾಡುವುದು. ಅಷ್ಟ[illegible] ಅನೇಕ ಜನ [illegible] ಮನೆಯಲ್ಲಿ ಕನ್ನಡದಲ್ಲಿ ಮಾತಾಡರು! ಮಕ್ಕಳನ್ನು ಕನ್ನಡದಲ್ಲಿ ಮಾತಾಡಿಸಿದಾಗ ಸಿಟ್ಟಿನಿಂದ ತಿರಸ್ಕಾರದಿಂದ ನನ್ನನ್ನು ನೋಡಿದವರಿದ್ದಾರೆ!! ತುಳು, ಕೊಂಕಣಿ, ಕೊಡಗಿನವರೇನಾದರೂ ಹೊರದೇಶಕ್ಕೆ ಹೊರಟರೆ ಅವರಿಗೆ ಹೊರಗೂ ಕನ್ನಡವಿಲ್ಲ, ಮನೆಯಲ್ಲೂ ಇಲ್ಲ ಎಂದು ಅವರನ್ನು ತೆಗಳುವುದರಲ್ಲಿ ಏನೂ ಅರ್ಥವಿಲ್ಲ. ಬೊಂಬಾಯಿ ಕರ್ನಾಟಕದಲ್ಲಿ ಎಷ್ಟೋ ಮಂದಿಗೆ, ಮರಾಠಿ

ಯಾರೊಂದಿಗೂ ಬೆರೆಯಬಲ್ಲೆವು?

ಅವರೇ ಶುರುಮಾಡಿ 'ನಮ್ಮ ಕಂಪನಿ ಏನೂ ಚೆನ್ನಾಗಿಲ್ಲ ನೀವು ಸೇರಬೇಡಿ' ಅಂದರು. ಹೀಗೆ ಕನ್ನಡಿಗ ಸಾಮಾನ್ಯವಾಗಿ ಮನೆಗೆ ಮಾರಿ, ಪರರಿಗುಪಕಾರಿ.

ಸಹಿಷ್ಣುತೆ, ತಾಳ್ಮೆ ಅಂದರೆ ಬೇಗ ಅರ್ಥ ಆಗದಿರಬಹುದು. ಟಾಲರೆನ್ಸ್ ಅಂದರೆ ಗೊತ್ತಲ್ಲ. ಅನ್ಯಮತ ಸಹಿಷ್ಣುತೆಯಿಲ್ಲದೆ ಪ್ರಪಂಚದಲ್ಲಿ ಎಷ್ಟೋ ಯುದ್ಧಗಳಾಗಿಬಿಟ್ಟಿವೆ. ಆದರೆ ನಮ್ಮ ಕನ್ನಡಿಗನ ತಾಳ್ಮೆ(tolerance)ಯನ್ನು [illegible] ಕನ್ನಡಿಗನ ಅನ್ಯಭಾಷಾ ತಾಳ್ಮೆ ಹೆಚ್ಚಾಗಿದೆ ಅನ್ನುವುದಕ್ಕಿಂತಲೂ ಪರಭಾಷಾಪ್ರೇಮ ಹೆಚ್ಚಾಗಿದೆ. ಸ್ವಭಾಷಾಪ್ರೇಮವೇ ಇಲ್ಲ ಅಂದರೆ [illegible]. ಅದರಲ್ಲೂ ಹೊರನಾಡಿನಲ್ಲಿ ನೆಲೆಸಿರುವ ಕನ್ನಡಿಗರನ್ನು, ಅವರ ಮಕ್ಕಳನ್ನು ನೋಡಬೇಕು. ಅವರು ಮನೆಯಲ್ಲಾಡುವ ಮಾತೃಭಾಷೆಯೂ ಪೂರ್ತಿ ಹೊರನಾಡಭಾಷೆಯೇ. ಕನ್ನಡ ಮಾತಾಡುವುದೇ

ಸುಸಂಸ್ಕೃತ ಭಾಷೆ, ಕನ್ನಡ ಹಳ್ಳಿಯ ಒರಟು ಭಾಷೆ!, ಇನ್ನು ಇಬ್ಬರು ಕನ್ನಡಿಗರೇ ಸೇರಿದರೂ ಸಹ, ಅವರಿಬ್ಬರೂ ಇಂಗ್ಲೀಷಿನಲ್ಲೋ, ಹಿಂದಿಯಲ್ಲೋ ಮಾತಾಡುವ ಸಂಭವವೇ ಜಾಸ್ತಿ. ಅವರಲ್ಲಿ ಒಬ್ಬ ಕೊಂಕಣಿ, ಕೊಡಗು, ತುಳು, ಕನ್ನಡ, ಉರ್ದು ತಮಿಳು...ಇತ್ಯಾದಿ ಸೇರಿದರಂತೂ ಕನ್ನಡ ಕೇಳಲೇ ಬೇಡಿ. ಇಂತಹ ಶೋಚನೀಯ ಸ್ಥಿತಿ ಮಹಾರಾಷ್ಟ್ರ, ಕೇರಳ, ಒರಿಸ್ಸಾ, ಹಿಂದೀ ಪ್ರಾಂತಗಳಲ್ಲಿ ಎಲ್ಲೂ ಇಲ್ಲವೆಂದು ಸ್ವಂತ ಅನುಭವದಿಂದ ಬಲ್ಲೆ. ಮನೆಯಲ್ಲಿ ಏನೇ ಮಾತಾಡಲಿ ಅಲ್ಲಿಯ ವಿವಿಧ ಜಾತೀಯರು ನಾಡಭಾಷೆಯಲ್ಲೇ ಹೊರಗೆ ಮಾತಾಡುವುದು. ಎಷ್ಟೋ ಸಾರಿ ಕನ್ನಡಿಗನಿಗೆ ಕನ್ನಡದಲ್ಲಿ ಮಾತಾಡಲು ಸಂಕೋಚವೇಕೆ, ಕನ್ನಡಿಗನಿಗೆ ಸ್ವಭಾಷಾ ಪ್ರೇಮ ಕಡಿಮೆಯಾಗಲು ಕಾರಣವೇನೆಂದು, ಬಹಳ ಯೋಚಿಸಿ ಕೆಲವು ನಿರ್ಧಾರಕ್ಕೆ ಬಂದಿದ್ದೇನೆ.

(೧) ಕನ್ನಡ ಮಾತಾಡುವುದನ್ನು ಕೇಳಿ ಯಾರಾ

ದರೂ ಕನ್ನಡ ಕರ್ಕಶ ಎಂದು ಅಪಹಾಸ್ಯ ಮಾಡಿ ಯಾರು ಎಂದು ಕನ್ನಡಿಗನಿಗೆ ಹೆದರಿಕೆ. ಕನ್ನಡಿಗನಿಗೆ ಭಾಷೆಯ ಮೇಲೆ ಅಷ್ಟೊಂದು ಅತೀವ ಪ್ರೀತಿ.

(೨) ತನಗೆ ಕನ್ನಡವಲ್ಲದೆ ಬೇರೆ ಭಾಷೆ-ಇಂಗ್ಲೀಷ್, ಹಿಂದಿ, ತಮಿಳು, ಮರಾಠಿ ಇತ್ಯಾದಿ-ಬರುತ್ತದೆಂದು ಹೆಮ್ಮೆ, ತೋರಿಕೆಯ ಆತುರ.

(೩) ನಾವು ಕನ್ನಡಿಗರು ಸಂಕುಚಿತ ಮನೋಭಾವದ ಭಾಷಾಂಧರಲ್ಲ, narrow minded ಅಲ್ಲ ಎಂದು ತೋರಿಸಿಕೊಳ್ಳುವ ಹೆಬ್ಬಯಕೆ.

(೪) ಕನ್ನಡಿಗರು ಪ್ರಾಂತೀಯ ಮನೋಭಾವ ದವರಲ್ಲ, communal ಅಲ್ಲ ಎಂದು ತೋರಿ ಸುವ ಆಸೆ.

(೫) ಇನ್ನೊಬ್ಬರ ಮುಂದೆ ಕನ್ನಡಿಗರಾಗಿ ನಮ್ಮವರೊಡನೆ ಹೆಚ್ಚು ಮಾತಾಡಿ, ಸಂಪರ್ಕ ಬೆಳೆಸಿ, ಸಹಾಯ ಮಾಡಿದರೆ ಎಲ್ಲಿ ನಮ್ಮನ್ನು partial ಅಂದುಬಿಡುತ್ತಾರೋ ಎಂದು ಹೆದರಿಕೆ.

ಮುಂದಿನ ಕಟ್ಟೆಯ ಮೇಲೆ ಕುಳಿತು ಇಬ್ಬರು ನಿವೃತ್ತ ಮುದುಕರು ಕನ್ನಡದಲ್ಲಿ ವಾದ ಮಾಡು ತ್ತಿದ್ದರು. ಬೇರೆ ಯಾರೂ ಇರಲಿಲ್ಲ. ಇಂಟರ್ ವ್ಯೂಗೆ ಸೂಟು ಹಾಕಿ ಹೊರಟವನು, ದೇವರಿಗೆ ನಮಸ್ಕಾರ ಹಾಕಲು ಒಳಗೆ ಹೊಗಿದ್ದೆ, ನನ್ನನ್ನು ನೋಡಿಯೋ, ನನ್ನ ಸೂಟು ನೋಡಿಯೋ ತಕ್ಷಣ ಸ್ವಿಚ್ ಹಾಕಿದ ಹಾಗೆ ಇಬ್ಬರು ಮುದುಕರೂ ಇಂಗ್ಲೀಷಿನಲ್ಲಿ ವಾದ ಶುರುಮಾಡಿದರು. ಈ ಮುದುಕರ ಇಂಗ್ಲೀಷ್ ಪ್ರೇಮ ನಗು ತಡೆಯಲಾ ರದೇ ಅವರ ಹತ್ತಿರ ಹೋಗಿ "ನೀವು ಕನ್ನಡದಲ್ಲೇ ವಾದ ಮಾಡಿದ್ದರೂ ನನಗೆ ಚೆನ್ನಾಗಿ ಅರ್ಥವಾಗು ತ್ತಿತ್ತು. ಪಾಪ, ನೀವು ನನಗೋಸ್ಕರ ಇಂಗ್ಲೀಷಿ ನಲ್ಲಿ ವಾದ ಶುರುಮಾಡಿದಿರಿ..." ಅಂದಾಗ ನಡೆದ ಗಲಾಟೆ ಕೇಳಬೇಡಿ. ಅಂದಿನ ಇಂಟರ್‌ವ್ಯೂ ಪ್ರಯೋಜನವಾಗಲಿಲ್ಲ. ಹೀಗಾಗಿ ಕನ್ನಡಿಗನಿಗೆ ಒಂದಲ್ಲ ಒಂದು ಕಾರಣದಿಂದ ಸ್ವಭಾಷಾಪ್ರೇಮ ಕ್ಕಿಂತಲೂ ಪರಭಾಷಾಪ್ರೇಮವೇ ಜಾಸ್ತಿ.

ಭಾಷೆ ಯಾವುದಾದರೇನು ?

(೬) ನಾವು ಎಲ್ಲರೊಡನೆಯೂ ಚೆನ್ನಾಗಿ ಬೆರೆಯುತ್ತೇವೆ ಎಂದು ತೋರಿಸುವ ಹಂಬಲ.

(೭) ಇಂಗ್ಲೀಷ್ ಕಲಿತ ನಾವು ಬೇರೆಯವರಿಗಿಂತ ಉತ್ತಮ ಎಂಬ ದುರಭಿಮಾನ.

(೮) ಇನ್ನೊಬ್ಬರ ಭಾಷೆಯಲ್ಲಿ ಮಾತಾಡಿದರೆ ನಮ್ಮ ವ್ಯವಹಾರಕ್ಕೆ ಒಳ್ಳೆಯದು ಎಂಬ ಬೇರೆ ಇನ್ನಾರಿಗೂ ಇಲ್ಲದ ವ್ಯವಹಾರಜ್ಞಾನ!

ಈ ಕೊನೆಯ ಕಾರಣಗಳಿಗೆ ಕೆಲವು ಉದಾಹ ರಣೆಗಳು. 'ಕಾಯ ಪಾಹಿಜೇ' ಎಂದು ಮರಾಠಿ ಯಲ್ಲಿ ಕೇಳಿದರೆ ಬೆಳಗಾವಿ ವರ್ತಕನಿಗೆ ವ್ಯಾಪಾರ ವಂತೆ; 'ಇಂಗೆ ವಾಂಗೋ ಸಾರ್' ಅಂದರೇನೇ ಬೆಂಗಳೂರಿನ ಕನ್ನಡ ಕೂಲಿಗೆ ಎರಡಾಣೆ ಜಾಸ್ತಿ ಸಿಗುತ್ತದೆಯಂತೆ; 'ಕಹಾ ಜಾನಾ' ಅಂದರೆ ರಿಕ್ಷಾವಾಲಾ -ಸಿದ್ದೂಗೆ ಗಿರಾಕಿ ಬರುವುದಂತೆ; 'ವಾಟ್‌ಯೂ ವಾಂಟ್ ಸರ್' ಅಂದಾಗಲೇ ಉಡುಪಿ ಹೊಟೆಲ್ ಮಾಣಿಗೆ 'ಟಿಪ್ಸ್' ಸಿಗುತ್ತ ದಂತೆ. ಒಂದು ಬೆಳಿಗ್ಗೆ ದೇವಸ್ಥಾನದ

ಇದರಿಂದ ವರ್ಷಾನುಗಟ್ಟಲೆ ಕನ್ನಡ ನಾಡಿನಲ್ಲಿ ದ್ದರೂ ಕನ್ನಡ ಕಲಿಯುವ ಅವಕಾಶವೇ ಸಿಗಲಿಲ್ಲ ಎಂದು ಹೇಳುವವರು ಎಷ್ಟೋ ಮಂದಿ. ಉತ್ತರ ದಿಂದ ಕರ್ನಾಟಕಕ್ಕೆ ಬಂದು ನೆಲಸಬೇಕೆಂದಿದ್ದ ಒಬ್ಬರು ಕನ್ನಡ ಕಲಿಯಲು ಒದ್ದಾಡುತ್ತಿದ್ದರು. 'ಬೆಂಗಳೂರಿನಲ್ಲಿ ಕನ್ನಡ ಒಂದು ಬಿಟ್ಟು ಇನ್ನಾವ ಭಾಷೆ ಮಾತಾಡಿದರೂ ಅರ್ಥವಾಗುತ್ತೆ. ಆದರೆ ಅಪ್ಪಿತಪ್ಪಿಯಾದರೂ ಕನ್ನಡ ಮಾತಾಡಬೇಡಿ' ಎಂದು ಅವರಿಗೆ ಧೈರ್ಯ ಹೇಳಿ ಕಳಿಸಿದೆ. ನನ್ನ ಮಾತು ಕೇಳಿ ಇವನೊಬ್ಬ ಭಾಷಾಂಧ ಅನ್ನಿಸ ಬಹುದು. ನಾನು ಭಾಷಾಂಧನಲ್ಲ-ಸ್ವಭಾಷಾ ಪ್ರೇಮಿ. ನಿಮ್ಮ ಪರಭಾಷಾಪ್ರೇಮ ತೋರು ವುದಕ್ಕೆ ಮೊದಲು ನೀವು ಕನ್ನಡಪ್ರೇಮಿಗಳಾಗಿ ಅಂತ ಹೇಳ್ತಾ ಇದ್ದೀನಿ ಅಷ್ಟೆ.

ಕೊನೆಯದಾಗಿ ನನಗೆ ಕೇಳಿಬರುವ ಇನ್ನೊಂದು ಹೊಗಳಿಕೆಯೆಂದರೆ "ಕನ್ನಡಿಗರು ತುಂಬಾ ಒಳ್ಳೆಯವರು. ನಾವೆಲ್ಲಾ ಕರ್ನಾಟಕದಲ್ಲಿ ವಾಸಿ

ಸಲು ಇಷ್ಟಪಡುತ್ತೇವೆ" ಅನ್ನುವುದು. ಹೌದು ಕನ್ನಡಿಗ ಒಳ್ಳೆಯವನಲ್ಲವೆ? ಕರ್ನಾಟಕ ದೇಶ ಹೊರಗಿನವರಿಗೆ ಆಕರ್ಷಣೆಯುಳ್ಳವೆ? ಮೊದಲೇ ಹೇಳಿದಂತೆ ಕನ್ನಡಿಗ ಪರಭಾಷಾಪ್ರೇಮಿ; ಇಲ್ಲಿ ಬಂದು ಯಾರೂ ಕನ್ನಡ ಕಲಿಯಬೇಕಿಲ್ಲ; ಕನ್ನಡಿಗ ಹೇಡಿ. ಹೌದಪ್ಪಾ ಜನ, ತೊಂದರೆಯಿಂದ ದೂರ ಇರುವವ, ಕನ್ನಡಿಗ ಉದಾರಿ, ಸ್ನೇಹಪರ, ಸಹೃದಯಿ... ಇನ್ನೂ ಮೇಲೆ ಹೇಳಿದ ಏನೇನೋ... ಇಂತಹ ವಾತಾವರಣ, ಜನ ಇರಬೇಕಾದರೆ ಯಾರು ತಾನೇ ಇಲ್ಲಿ ಬಂದು ವಾಸಿಸಲು ಇಷ್ಟಪಡುವುದಿಲ್ಲ, ಮರುಳುಗಾಡಿನ ಒಂಟೆ ಅರಬನ ಗುಡಾರದಲ್ಲಿ ಕತ್ತು ಹಾಕಿ ಕೊನೆಗೆ ಅರಬನನ್ನೇ ಹೊರ ಹಾಕಿದಂತೆ. ಆದರೂ ಕನ್ನಡಿಗನಿಗೆ ತನಗೆ ಕಾದಿರುವ ಕುತ್ತು ತಿಳಿದು ಬರುವುದಿಲ್ಲ.

ಪರರಿಗೆ ಉಪಕಾರಿ ?

ಇಷ್ಟೆಲ್ಲಾ ಹೊಗಳಿಕೆಯ ಮಧ್ಯೆ ಕನ್ನಡಿಗನ ಬಗ್ಗೆ ಬರುವ ಒಂದು ಒಡಕು ಮಾತೆಂದರೆ ಕನ್ನಡಿಗ ಒಬ್ಬ split personality ಅನ್ನುವುದು. ಏನಪ್ಪ ಹೀಗಂದ್ರೆ ಎಂದು ಸ್ನೇಹಿತರನ್ನು ಕೇಳಿದರೆ ಅವರು ಕೊಟ್ಟ ವಿವರಣೆ ಹೀಗಿತ್ತು: "ಕನ್ನಡ ಕನ್ನಡ ಅಂತ ಒದ್ದಾಡ್ತಾರಲ್ಲ. ಅವರ ಮಕ್ಕಳನ್ನು ಕನ್ನಡ ಶಾಲೆಗೆ ಕಳುಹಿಸಲು ಹೇಳಿ ಯಾರೂ ಕಳಿಸುಲ್ಲ. ಇವರದೆಲ್ಲಾ ಬರೀ ಮಾತು. ಹೇಳುವದು ಆಚಾರ ತಿನ್ನೋದು ಬದನೆಕಾಯಿ ಅನ್ನುವ ಹಾಗೆ ಕನ್ನಡಿಗಂದು split personality. ಸರಕಾರಿ ವ್ಯವಹಾರದಲ್ಲಿ, ಕೋರ್ಟು–ಕಛೇರಿಗಳಲ್ಲಿ ಆಸ್ಪತ್ರೆಗಳಲ್ಲಿ, ಉದ್ಯಮಗಳಲ್ಲಿ, ಶಾಲೆ–ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಎಲ್ಲೆಲ್ಲೂ ಇಂಗ್ಲೀಷೇ ಆಗಿರುವಾಗ ಕನ್ನಡಿಗ ತನ್ನ ಮಗನನ್ನು ಕಾನ್ವೆಂಟ್ ಶಾಲೆಗೆ ಸೇರಿಸಿದರೆ ಏನು ತಪ್ಪು ಅನ್ನುವುದು ಒಂದು ವಾದ. ಕಾನ್ವೆಂಟ್ ಅಥವಾ ಬೇರೆ ಖಾಸಗೀ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಮಾಡಿ, ಕನ್ನಡ ಮೊದಲ ಭಾಷೆಯಾಗಿರಲಿ ಆಗ ಯಾರು ಯಾವ ಮಕ್ಕಳನ್ನು ಯಾವ ಶಾಲೆಗೆ ಕಳಿಸಿದರೂ ಪರವಾಗಿಲ್ಲ ಅನ್ನುವುದು ಮತ್ತೊಂದು ವಾದ. ಯಾವ ವಾದವೂ ಬೇಡ, ಕನ್ನಡವೂ ಬೇಡ. ನಮ್ಮಷ್ಟಕ್ಕೆ ನಮ್ಮನ್ನು ಬಿಡಿ ಅನ್ನುತ್ತಾರೆ ಕರ್ನಾಟಕದ ಹೆಮ್ಮೆಯ 'ಹೌದಪ್ಪಾ ಜನ.'

ಹೀಗೆ ಕರ್ನಾಟಕದ ರಾಜ್ಯೋದಯ ನಂತರದ ವರ್ಷಗಳಲ್ಲಿ ಕನ್ನಡಿಗನಿಗೆ ಸಿಕ್ಕಿರುವ ಹೊಗಳಿಕೆಯ ಮಾಲೆಗಳು ಒಂದೇ ಎರಡೇ–broad minded, adaptable, open minded, peace loving. ಸ್ನೇಹಪರರು, ಉದಾರಿಗಳು, ಸಹೃದಯಿಗಳು, tolerant, ಒಟ್ಟಿನಲ್ಲಿ ತುಂಬಾ ಒಳ್ಳೆಯವರು–ಅಬ್ಬಾ ಹೊಗಳಿಕೆಯಿಂದ ತಲೆ ಗಿರ್ರೆನ್ನದೆ ಇನ್ನೇನು!! ಹೊಗಳಿಕೆಯ ಅನೇಕ ಮಾಲೆಗಳನ್ನು ಒಂದೊಂದಾಗಿ ತೆಗೆದು ಅದರ ಹಿಂದಿರುವ ಅಷ್ಟವಾಸನೆಯನ್ನು ತೋರಿಸಿದ್ದೇನೆ. ಆದ್ದರಿಂದ ಹೊಗಳಿಕೆಗೆ ಮರುಳಾಗುವುದು ಬೇಡ. ಮೊದಲೇ ಹೇಳಿದಂತೆ ಹೊಗಳಿಕೆಯಿಂದ ಮತ್ತಾಗಿ ಮೈಮರೆತು ಕನ್ನಡಿಗ ತನ್ನತನವನ್ನು ಮರೆಯುವುದು ಬೇಡ. ಇಂದಾದರೂ, ಇನ್ನಾದರೂ ಕನ್ನಡಿಗ ಎಚ್ಚೆತ್ತುಕೊಳ್ಳಲಿ, ಕನ್ನಡಿಗ ತನ್ನ ಅಂತಃಸತ್ವವನ್ನು ಬೆಳೆಸಿಕೊಳ್ಳಲಿ, ಕನ್ನಡಿಗನಾಗಿರಲಿ.

ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ ಎನ್ನುವುದು ನಿಜವಾಗಲಿ. ಕನ್ನಡಿಗನ ನಡೆಯಲ್ಲಿ ಕನ್ನಡತೆಯಿರಲಿ, ನುಡಿಯಲ್ಲಿ ಇಂಪಿರಲಿ. ಕನ್ನಡಿಗನ ಉಸಿರಿನಲ್ಲಿ ಬಾಳಿನಲ್ಲಿ ಕನ್ನಡದ ಕಸ್ತೂರಿಯ ಕಂಪಿರಲಿ. ✡

ದ್ಯಾಮವ್ವ ದುರಗವ್ವ ನಾ ನಿಮ್ಮ ಮಗಳವ್ವ
ಹಾಲ ಕಂಡೀನಿ ಕಂಡಿರೆವ್ವ–ತಾಯಿಗೋಳ್ರಾ
ನಮ್ಮೂರ ಕನುವು ಇಡರೆವ್ವಾ

–ಜಾನಪದ ತ್ರಿಪದಿ

ಡಿ. ಆರ್. ಕುಲಕರ್ಣಿ

ಬೇಟೆಯ ಪ್ರಥಮ ಅನುಭವ

ಸುಮಾರು ಐವತ್ತು ಅರವತ್ತು ವರ್ಷಗಳ ಹಿಂದಿನ ಮಾತು. ಆಗ ನಾನಿನ್ನೂ ಧಾರವಾಡದ ಅರಣ್ಯ (ಫಾರೆಸ್ಟ್) ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದೆ. ಅಲ್ಲಿ ನಮಗೆ ಅರಣ್ಯದಲ್ಲಿ ಮಾಡಬೇಕಾಗುವ ನಾನಾ ವಿಧದ ಕೆಲಸಗಳ ತರಪೇತಿ ಕೊಡಲಾಗುತ್ತಿತ್ತು. ಆ ಕಾಲಕ್ಕೆ ನಮ್ಮ ಶಿಕ್ಷಕರಲ್ಲಿ ಹೆಚ್ಚಾಗಿ ವಿದೇಶಿಯರೇ ಇರುತ್ತಿದ್ದರು. ಅವರಲ್ಲೂ ಜಿ. ಎಚ್. ಟಿ. ಸ್ಟಾರ್ಟ್ ಎಂಬ ಒಬ್ಬರು ಶಿಕ್ಷಕರಾಗಿಯೇ ಜನ್ಮವೆತ್ತಿದಂತೆ ಇದ್ದರು. ಹಿಂದುಸ್ಥಾನದಲ್ಲಿಯ ಅರಣ್ಯಗಳ ಗಾಢಜ್ಞಾನವಿದ್ದ ಅವರಿಗೆ ಪಠ್ಯ ವಿಷಯಗಳ ಜೊತೆಗೆಯೇ ಬೇಟೆಯಾಡುವುದರಲ್ಲೂ ಬಹಳ ಆಸಕ್ತಿ. ಹೀಗಾಗಿ ಬೇಟೆಯ ನಾನಾ ತಂತ್ರಗಳನ್ನು ಅವರೇ ಕರಿ ಹಲಗೆಯ ಮೇಲೆ ವಿವರವಾದ ಚಿತ್ರ ತೆಗೆದು ತಿಳಿಸಿಕೊಡುತ್ತಿದ್ದರು. ನನ್ನೊಬ್ಬ ಸಹಪಾಠಿಯೂ ನಾನೂ ಬೇಟೆಯಲ್ಲಿ ವಿಶೇಷ ಆಸಕ್ತಿ ತೋರಿಸಿದ್ದನ್ನು ಗಮನಿಸಿ ಅವರು ನಮಗೆ ಬೇಟೆಯಾಡುವದನ್ನು ಪ್ರಾಯೋಗಿಕವಾಗಿಯೂ ತೋರಿಸುತ್ತೇನೆಂದು ಹೇಳಿದ್ದರು. ನಾವು ಆ ಅವಕಾಶವನ್ನು ಆತುರದಿಂದ ನಿರೀಕ್ಷಿಸುತ್ತಿದ್ದೆವು. ದೇವೀಕೊಪ್ಪ ಎಂಬುದು ಧಾರವಾಡ-ಕಾರವಾರ ಜಿಲ್ಲೆಗಳ ಸೀಮೆಯ ಮೇಲಿರುವ ಹಳ್ಳಿ. ಅದರ ಸುತ್ತಲಿನ ಅರಣ್ಯಕ್ಕೆ ದೇವೀಕೊಪ್ಪದ ಜಂಗಲ್ ಎಂದು ಹೆಸರು. ಆ ಜಂಗಲಿನಲ್ಲಿ ಕಾಡು ಪ್ರಾಣಿಗಳ ಕಾಟ ಆ ಕಾಲಕ್ಕೆ ಬಹಳ. ಹೀಗಾಗಿ ಅಲ್ಲಿಯ ಹಳ್ಳಿಯವರಿಂದ ಅವುಗಳ ಉಪದ್ರವವನ್ನು ತಡೆಗಟ್ಟಲು ನಮ್ಮ ಶಿಕಾರಿ ಬಲ್ಲ ಶಿಕ್ಷಕರಿಗೆ ಆಗಾಗ ಕರೆ ಬರುತ್ತಿತ್ತು. ದೇವೀಕೊಪ್ಪದ ಹತ್ತಿರದ ಹಳ್ಳಿಗರಿಗೆ ಕೆಲ ದಿವಸಗಳಿಂದ ಹುಲಿಯೊಂದು ಬಹಳ ಕಾಟ ಕೊಡುತ್ತಿತ್ತು. ಈ ವಿಷಯವನ್ನು ಸ್ಟಾರ್ಟ್ ಸಾಹೇಬರಿಗೆ ಆ ಹಳ್ಳಿಯ ಪಟೇಲ ಬಂದು ತಿಳಿಸಿ ಅದನ್ನು ಹೊಡೆಯಬೇಕೆಂದು ವಿನಂತಿ ಮಾಡಿಕೊಂಡ. ಅವರು ಅದರ ಶಿಕಾರಿಗೆ ಹೊರಡಲು ಅಣಿಯಾದರು. ನಾನು ಹಾಗೂ ನನ್ನ ಮಿತ್ರ ಇಬ್ಬರಿಗೂ ಜೊತೆಗೆ ಬರಲು ತಿಳಿಸಿದಾಗ ನಾವಿಬ್ಬರೂ ಹರ್ಷದಿಂದ ಉಬ್ಬಿಹೋದೆವು. ಹುಲಿಯಂಥ ಹಿಂಸ್ರ ಪಶುವನ್ನು ನೋಡುವ

(ಶ್ರೀ ಕುಲಕರ್ಣಿಯವರು ನಿವೇದಿಸಿದ ಅನುಭವಕ್ಕೆ ಇಂಗ್ಲೀಷಿನಲ್ಲಿ ಲೇಖನ ರೂಪವಿತ್ತವರು ಶ್ರೀ ಕೆ. ಜಿ. ಸತ್ತೂರರವರು, ಹಾಗೂ ಕನ್ನಡಕ್ಕೆ ಅನುವಾದಿಸಿದವರು ಶ್ರೀ ರಾಜೇಂದ್ರ ಗುಂಜಾಳವರು.)

ಸರದಿ ನಮಗೆ ಹೀಗೆ ಒದಗಿತು. ಸಾಗವಾನಿ ಮೊದಲಾದ ಯಾವುದೇ ಜಾತಿಯ ಗಿಡಗಳ ವೈಶಿಷ್ಟ್ಯವೆಂದರೆ ಬಹಳ ಎತ್ತರದವರೆಗೆ ಸರಳ ವಾಗಿ ಬೆಳೆಯುವುದು. ಬೊಡ್ಡೆಗಳು ದೊಡ್ಡ ವಾಗುವದು, ಕೊಂಬೆಗಳು ಹೆಚ್ಚಾಗಿ ಇರುವದು ಅಥವಾ ಇಲ್ಲದೆ ಇರುವದು ಅಲ್ಲಲ್ಲಿಯ ಭೂಗುಣ ಮತ್ತು ಹವಾಮಾನ ಇವುಗಳನ್ನು ಹೆಚ್ಚಾಗಿ ಅವ ಲಂಬಿಸಿರುತ್ತದೆ. ಅದರಂತೆಯೇ ಕೆಲ ಭಾಗದಲ್ಲಿಯ ಅರಣ್ಯಗಳಲ್ಲಿ ಮಾತ್ರ ಬಿದಿರು ಬೆತ್ತ ಬೆಳೆಯು ತ್ತವೆ. ದಟ್ಟವಾದ ಅರಣ್ಯಗಳಲ್ಲಿ ಕೆಳಗಡೆ ಸೂರ್ಯ ಪ್ರಕಾಶ ಮುಟ್ಟುವದಿಲ್ಲ. ಆದ್ದರಿಂದ ಅಲ್ಲಿಯ ಗಿಡ ಗಳು ಸೂರ್ಯ ಪ್ರಕಾಶವನ್ನರಸಿ ಹೆಚ್ಚು ಎತ್ತರಕ್ಕೆ ಬೆಳೆಯುತ್ತವೆ. ದೇವೀಕೊಪ್ಪದ ಕಾಡಿನಲ್ಲಿ ಎತ್ತರ ವಾದ ಮರಗಳೇನೂ ಇರಲಿಲ್ಲ. ಅತಿ ದೊಡ್ಡವೆಂದರೆ ಸುಮಾರು ೩೫-೪೦ ಅಡಿ ಎತ್ತರವಾದವು. ಹೀಗಾಗಿ





ಹುಲಿಯು ಕೊಂದಿದ್ದ ಪ್ರಾಣಿಯ ಬಳಿಯ ಗಿಡದ ಮೇಲೆ ಸರಿಯಾಗಿ ಎತ್ತರಕ್ಕೆ ಮಂಚಿಕೆ ಕಟ್ಟುವದು ಸಾಧ್ಯವಿರಲಿಲ್ಲ. ಆದ್ದರಿಂದ ಬೇರೆ ಹಂಚಿಕೆಯನ್ನು ಹುಡುಕಬೇಕಾಯಿತು.

ಬೇಟೆಗಾರರೆಲ್ಲರಿಗೂ ಚಿರಪರಿಚಿತ ವಿಧಾನವೆಂ- ದರೆ 'ಬೀಟ್' ಎಬ್ಬಿಸುವುದು. ಇದನ್ನೇ 'ಜಂಗಲ್' ಎಬ್ಬಿಸುವುದು ಎನ್ನುತ್ತಾರೆ; 'ಹಾಕಾ' ಎಬ್ಬಿಸುವ್ರು ಎಂದೂ ಎನ್ನುತ್ತಾರೆ. ಸುಮಾರು ೭೦-೮೦ ಜನರಾ ದರೂ ಈ ಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ. ಇವರಿ ಗೆಲ್ಲ ಕಾಡಿನಲ್ಲಿ ಪ್ರಾಣಿಗಳು ಸಾಮಾನ್ಯವಾಗಿ ಓಡಿ ಹೋಗುವ ದಾರಿಯ ಸೂಕ್ಷ್ಮ ಪರಿಚಯ ಅವಶ್ಯ. ಇವರೆಲ್ಲ ಹಲಿಗೆ, ಡಬ್ಬಿ ಮುಂತಾದುವನ್ನು ಬಾರಿ ಸುತ್ತ ಕಾಡು ಪ್ರಾಣಿಗಳು ಎದ್ದು ಓಡುವಂತೆ ಮಾಡುತ್ತಾರೆ. ಅವರು ಗದ್ದಲ ಪ್ರಾರಂಭಿಸಿದೊಡ ನೆಯೇ ಮೊದಲು ಓಡತೊಡಗುವ ಪ್ರಾಣಿ ಜಿಗಿ ಇಲ್ಲವೆ ಸಾರಂಗ. ಅನಂತರ ಕಡವೆ ಹಾಗೂ ಕಾಡು ಹಂದಿಗಳು. ಚಿರತೆ ಮಾತ್ರ ಮೊದಲು 'ಹಾಕಾ' ಬರುವ ವಿರುದ್ಧ ದಿಕ್ಕಿನೆಡೆಗೆ ಸಾವಕಾಶವಾಗಿ ನಡೆ ಯತೊಡಗುತ್ತದೆ; ಆದರೆ 'ಹಾಕಾ' ತೀರ ಸಮೀಪ ಬಂದಾಗ ಮಾತ್ರ ಓಡಲಾರಂಭಿಸುತ್ತದೆ.

ಇಂತಹ ದಾರಿಯಲ್ಲಿ ಹುಲಿಯನ್ನು ಹೊಡೆಯುವುದಕ್ಕೆ ಅನುಕೂಲವಾದ ಗಿಡವೊಂದರ ಮೇಲೆ ೧೫ ಅಡಿ ಎತ್ತರಕ್ಕೆ ಮಂಚಿಕೆ ಕಟ್ಟಿಸಿಕೊಂಡು ಸ್ಮಾರ್ಟ್ ಸಾಹೇಬರು ಬಂದೂಕುಧಾರಿಯಾಗಿ ಕುಳಿತರು. ನಾನು ಮತ್ತು ನನ್ನ ಸಹಪಾಠಿ ಇಬ್ಬರನ್ನೂ ತುಸು ಅಂತರದಲ್ಲಿ ಎಡಗಡೆ ಮತ್ತು ಬಲಗಡೆಯಲ್ಲಿದ್ದ ಗಿಡಗಳನ್ನೇರಿ ಕುಳಿತೆವು.

'ಬೀಟ್' ಎಬ್ಬಿಸುವುದಕ್ಕಾಗೆಂದು ಸ್ಥಳಿಕ ಶಿಕಾರಿಯೊಬ್ಬನ ನೇತೃತ್ವದಲ್ಲಿ ತಂಡ ತಯಾರಾಗಿತ್ತು. ಅವನು ತೀರ ಗಂಭೀರ ನಡಿಗೆಯಿಂದ ಎಡ ಬಲದಲ್ಲಿ ಸೂಕ್ಷ್ಮವಾಗಿ ನಿರೀಕ್ಷಿಸುತ್ತಾ ಗುಂಪಿಗೆ ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹಲಿಗೆ. ಡಬ್ಬಿ ಮುಂತಾದವುಗಳಿಂದ ಶಬ್ದ ಮಾಡುತ್ತಾ ಹುಲಿಯನ್ನು ಅಟ್ಟಿಸಿಕೊಂಡು ಬರಬೇಕೆಂಬುದನ್ನು ಹೇಳುತ್ತಿದ್ದ.

ಸಾಹೇಬರ ಎಡ ಬಲಗಳಲ್ಲಿ ಗಿಡವೇರಿ ಕುಳಿತಿದ್ದ ನಮ್ಮಿಬ್ಬರಿಗೂ Stop ಎಂದು ಹೆಸರು. ನಮ್ಮ ಕೆಲಸವೆಂದರೆ ನಿರೀಕ್ಷಿತ ದಾರಿಯಲ್ಲಿಯೇ ಅದು ಬರುವಂತೆ ಮಾಡುವುದು, ಒಮ್ಮೊಮ್ಮೆ ಅದು ನಾನು ನಿರೀಕ್ಷಿಸಿದ ಮಾರ್ಗ ಬಿಟ್ಟು ಎಡಬಲಕ್ಕೆ ಹೋಗುವಂತೆ ಕಂಡರೆ ಆ ದಿಕ್ಕಿಗೆ ಗಿಡದ ಮೇಲೆ ಕುಳಿತವನು ಚಪ್ಪಾಳೆ ಶಬ್ದ ಮಾಡಿದರೆ ಅದು ವಿರುದ್ಧ ದಿಕ್ಕಿಗೆ ಬರುವುದು. ಆ ಕಡೆ ಕುಳಿತವನು ಶಬ್ದ ಮಾಡಿದರೆ ಮಧ್ಯದಲ್ಲಿಯೇ ಬೇಟೆಯಾಡುವವರ ಅಳವಿನಲ್ಲಿ ಬರುತ್ತದೆ.

ಅಲ್ಲಿ ಅನುಕೂಲವಾದ ಗಿಡಗಳು ಇರಲಿಲ್ಲವೆಂದು ಮೇಲೆಯೇ ಹೇಳಿದ್ದೇನೆ. ಇದ್ದದ್ದರಲ್ಲಿಯೇ ಒಂದು ಹತ್ತು ಹನ್ನೆರಡು ಫೂಟು ಎತ್ತರವಾದ ಗಿಡದ ಮೇಲೆ ನಾನು ಕುಳಿತೆ. ನನ್ನ ಸಹಪಾಠಿಗೂ ಅಂಥದೇ ಒಂದು ಗಿಡ. ನನಗೂ ಬೇಕಾದರೆ ಇರಲೆಂದು ಒಂದು ಬಂದೂಕು ಕೊಟ್ಟಿದ್ದರು. ನಾನು ಗಿಡದ ಮೇಲೇರಿ ಕುಳಿತ ಸ್ವಲ್ಪ ಹೊತ್ತಿಗೆ 'ಹಾಕಾ' ಆರಂಭವಾಯಿತೆಂದು ಜನರ ಗದ್ದಲದಿಂದ ತಿಳಿದು ಬಂದಿತು. ಹುಲಿಯು. ಹುಲಿ ಬೇಟೆಯ ಪ್ರತ್ಯೇಕ ಅನುಭವ ನನಗೆ ಇದುವರೆಗೆ ಇರಲಿಲ್ಲ. ಮೈಯೆಲ್ಲ ಕಣ್ಣಾಗಿ. ಕಿವಿಯಾಗಿ ಉಸಿರು ಬಿಗಿಹಿಡಿದು ಕುಳಿತೆ. ಆದರೆ ನನ್ನ ದುರಾದೃಷ್ಟ. ನಾನು ಕೂತ ಗಿಡದ ಮೇಲೆ ಕೆಂಪು ಕಟ್ಟಿರುವೆಗಳ ಗೂಡು ಇತ್ತು. ಆ ಗೂಡು ಗಾಳಿಗೆ ಅಲುಗಾಡಿದಾಗ ಇರುವೆಗಳು ಗಿಡದ ಮೇಲೆ ಏರುತ್ತಿದ್ದವು. ನಾನು ಆ ಗಿಡ ಏರಿದ್ದೇ ತಡ, ಇರುವೆಗಳು ಒಂದೊಂದಾಗಿ ನನ್ನ ಮೈಮೇಲೆ ಏರತೊಡಗಿದವು. ಅವು ಕಚ್ಚಿ ಮೈಮೇಲೆ ತಲೆಯ ಮೇಲೆ ಅಂಗಿಯ ಮೇಲೆ ಹೊರಗೆ ಒಳಗೆ ಹರಿದಾಡಿ ಕಚ್ಚಿ ನನ್ನ ರಕ್ತದ ಸವಿಯನ್ನು ನೋಡಿದಾಗ ನನ್ನ ಮೈಯೆಲ್ಲ ಬೆಂಕಿ ಬಿದ್ದಷ್ಟು ಉರಿಯುತ್ತಿತ್ತು. ಆದರೆ ಹುಲಿಗೆ ನನ್ನ ಸುಳಿವು ಗೊತ್ತಾಗಬಾರದೆಂದು ಮೊದಮೊದಲು ಇದನ್ನು ಹೇಗೋ ತಡೆದುಕೊಂಡಿದೆ. ಬರುಬರುತ್ತಾ ಉರಿ ತಾಳಲಸಾಧ್ಯವಾಯಿತು. ಕೆಡವಿದರೆ ಹೋಗುವ ಇರುವೆಗಳಲ್ಲ ಇವು. ಬಟ್ಟೆಗಳನ್ನೆಲ್ಲಾ ಕಳಚಿ ಬಿಡುವುದೊಂದೆ ಮಾರ್ಗ. ಗಿಡದ ಮೇಲೆ ಕುಳಿತು ಬಟ್ಟೆ ತೆಗೆದು ಬಿಸುಟುವುದು ಸಾಧ್ಯವಿದ್ದಿಲ್ಲ. ಕೆಳಗೆ ಇಳಿದರೆ ಮಾತ್ರ ಹೀಗೆ ಮಾಡಬಹುದು. ಕೆಳಗೆ ಇಳಿದು ನಿಂತಾಗ ಹುಲಿ ಬಂದರೆ ನನ್ನನ್ನು ಬಿಟ್ಟೀತೆ ? ಅದರ ಶಿಕಾರಿಯ ಬದಲು ನನ್ನದೆ ಶಿಕಾರಿ! ಆದರೆ ಈ ಹೊತ್ತಿಗೆ ಇರುವೆ ಕಡಿತ ನನ್ನನ್ನೆಷ್ಟು ಹಣ್ಣುಮಾಡಿತ್ತೆಂದರೆ ಪ್ರತ್ಯಕ್ಷ ಹುಲಿಯ ಭಯಕ್ಕಿಂತ ಇರುವೆಗೇ ನಾನು ಹೆದರಬೇಕಾಯಿತು. ಕೊನೆಗೆ ಹುಲಿಯ ಹೆದರಿಕೆಯನ್ನು ಮೀರಿ ಆದದ್ದಾಗಲಿ ಎಂದು ಕೆಳಗೆ ಇಳಿದೆ. ಇಳಿದವನೆ ತಕಥತ್ಯೆ ಎಂದು ಕುಣಿಕುಣಿದು ಸಾಧ್ಯವಿದಷ್ಟು ಬಟ್ಟೆಯ ಮೇಲಿನ ಇರುವೆಗಳನ್ನು ನಿವಾರಿಸಿದೆ. ಆದರೆ ನಂತರ ಮೈಮೇಲಿನ ಬಟ್ಟೆಗಳನ್ನೆಲ್ಲ ಒಂದೊಂದಾಗಿ ತೆಗೆದು ನಿರ್ವಸ್ತ್ರ ಸ್ಥಿತಿಯಲ್ಲಿ ಎಲ್ಲ ನಾಚಿಕೆಯನ್ನೂ ಬಿಟ್ಟು ನಿಂತೆ. ನನ್ನ ಬಟ್ಟೆಗಳಿಂದಲೇ ಮೈ ಮೇಲಿನ ಎಲ್ಲ ಇರುವೆಗಳನ್ನು ಜಾಡಿಸಿ ಮತ್ತೆ ಅವೇ ಅರಿವೆಗಳನ್ನು ಹಾಕಿಕೊಂಡೆ.

ಇಷ್ಟೊತ್ತಿಗೆ ಅರ್ಧ ಗಂಟೆಯಾದಂತೆ ನಮ್ಮ ಜನರ ಗದ್ದಲ ಹತ್ತಿರಕ್ಕೆ ಬರುತ್ತಿತ್ತು. ಸಣ್ಣ ಪುಟ್ಟ ಪ್ರಾಣಿಗಳು ಓಡಿಹೋಗಲಾರಂಭಿಸಿದವು. ಹುಲಿಯು ಬರಲು ಇನ್ನೇನು ಬಹಳ ಸಮಯವಿಲ್ಲವೆಂದು ಎಣಿಸಿ ಗಡಿಬಿಡಿಯಿಂದ ಮತ್ತೊಮ್ಮೆ ಗಿಡವನ್ನೇರಿದೆ. ಇದು ಬಹಳ ಚಿಕ್ಕದಿದ್ದು ಸುಮಾರು ಹತ್ತು ಅಡಿ ಎತ್ತರದ ಟೊಂಗೆಯ ಮೇಲೆ ಕುದುರೆ ಮೇಲಿನ ಹಾಗೆ ಕುಳಿತೆ. ಅಷ್ಟು ಕಡಿಮೆ ಎತ್ತರದಲ್ಲಿದ್ದ ನನನ್ನು ಹುಲಿಯು ನೆಲದ ಮೇಲೆ ಹಿಂಗಾಲೂರಿ ಸಹಜ

ವಾಗಿ ಹಿಡಿಯಬಹುದೆಂದು ನನಗೆ ಹೊಳೆಯಲೇ ಇಲ್ಲ. ಬಂದೂಕು ನೆಲದ ಮೇಲೆ ಉಳಿದಿತ್ತು. ಆ ಯೋಜನೆ ನನ್ನ ತಲೆಯಲ್ಲಿ ಬಾದಾಗ ಹುಲಿ ನನ್ನೆಡೆಗೆ ರಾಜಠೀವಿಯಲ್ಲಿ ಅತ್ತಿತ್ತ ನೋಡುತ್ತ ಸಾವಧಾನವಾಗಿ ನಡೆದು ಬರುತ್ತಿತ್ತು. ನಾನು ಜೀವಂತ ಹುಲಿಯನ್ನು ನೋಡಿದ್ದು ನನ್ನ ಜನ್ಮದಲ್ಲಿ ಅದೇ ಮೊದಲು. ಆಗ ಅದೇನೂ ನನ್ನಡೆಗೆ ನೋಡುತ್ತಿರಲಿಲ್ಲ. ಆದರೆ ಯೋಚನೆ ಇಲ್ಲದೆ ನಿರ್ಭೀತನಾಗಿ ನಡೆದುಬರುತ್ತಿತ್ತು. ಬಹು ದೊಡ್ಡ ಹುಲಿ. ಅದರ ದೊಡ್ಡ ತಲೆ, ಅದರ ಅಸಾಧ್ಯ ದೇಹ ಕಂಡು ಕೆಲವು ನಿಮಿಷ ಭಯವಾಯಿತು. ಆದರೂ ಕರ್ತವ್ಯ ಪ್ರಜ್ಞೆಯಿಂದ ಯಾವುದೇ ಸಪ್ಪಳ ಮಾಡದೇ ಕುಳಿತುಕೊಳ್ಳಬೇಕೆಂದು ನನ್ನ ಗುರುಗಳ ಆಜ್ಞೆಯನ್ನು ಮನಸ್ಸು ಗಟ್ಟಿ ಮಾಡಿ ಪಾಲಿಸಿದೆ.

ಸ್ವಲ್ಪ ಹೊತ್ತಿನಲ್ಲಿ ಹುಲಿ ನನ್ನ ಸಮಿಪದಲ್ಲಿಯೇ ಬಂದಿತ್ತು. ನಾನು ಸಾವಕಾಶವಾಗಿ ಕಾಲುಗಳನ್ನು ಮೇಲೆತ್ತಿಕೊಂಡೆ. ಗುರುಗಳ ಮಾತು ನೆನೆಸಿಕೊಂಡು ನನ್ನ ಕಡೆಗೆ ಅದು ಬರಬಾರದೆಂದು ಒಮ್ಮೆ ಜೋರಾಗಿ ಚಪ್ಪಾಳೆ ತಟ್ಟಿದೆ. ಜೊತೆಗೆ ಆತ್ಮರಕ್ಷಣೆಗಾಗಿ ದೇವರಿಗೆ ಹುಲಿ ನನ್ನ ಮೇಲೆ ಜಿಗಿಯದಿರಲಿ ಎಂದು ಪ್ರಾರ್ಥಿಸಿದೆ. ದೊಡ್ಡ ಹುಲಿಗೆ ನಾನು ಕುಳಿತ ಸ್ಥಳವೇನೂ ಎತ್ತರವಾಗುತ್ತಿರಲಿಲ್ಲ. ಬಂಗಾಲದ ಹುಲಿಗಳು ಇಪ್ಪತ್ತು ಅಡಿ ಎತ್ತರದವರೆಗೂ ನೆಗೆಯಬಲ್ಲವಂತೆ. ಆದರೆ ಈ ಭಾಗಗಳಲ್ಲಿ ಹುಲಿಗಳು-ನನ್ನ ಅನುಭವದ ಮಟ್ಟಿಗೆ ಹದಿನೈದು ಹದಿನಾರು ಅಡಿಯವರೆಗೂ ಜಿಗಿಯುತ್ತವೆ. ಅಲ್ಲಿಯವರೆಗೆ ತಲೆ ಕೆಳಗೆ ಮಾಡಿಕೊಂಡು ಎಡ ಬಲಕ್ಕೆ ಸೂಕ್ಷ್ಮವಾಗಿ ನಿರೀಕ್ಷಿಸುತ್ತ ಸುತ್ತು ಬರುತ್ತಿದ್ದ ಹುಲಿಯು ಚಪ್ಪಾಳೆಯ ಶಬ್ದ ಕೇಳಿದ ಮೇಲೆ ತಲೆ ಎತ್ತಿ ನನ್ನಡೆಗೆ ನೋಡಿತು ಮಾತ್ರ. ಅದರ ದೃಷ್ಟಿಗೆ ನನ್ನ ಮೈಯೆಲ್ಲ ಬೆವರಿಹೋಯಿತು. ಸ್ವಲ್ಪ ಹೊತ್ತು ದುರುಗುಟ್ಟಿ ನೋಡಿ ಮತ್ತೆ ನಿಧಾನವಾಗಿ ನನ್ನಡೆಗೆ ಬಾರದೆ ಎದುರಿನ ದಿಕ್ಕಿಗೆ ಹೊರಳಿ ಕೆಳಗಡೆಗಿದ್ದ ನನ್ನ ಸಹಪಾಠಿಯ ಗಿಡದೆಡೆಗೆ ಸಾಗಿತು.

ಹುಲಿ ಸಿಂಹಗಳು ಉದಾತ್ತ, ಧೀರ, ಮತ್ತು ಗಂಭೀರ ಪ್ರವೃತ್ತಿಯವೆಂದು ಕೇಳಿದ್ದೆ. ಇದು ನೂರಕ್ಕೆ ನೂರರಷ್ಟು ಸತ್ಯವೆಂದು ಅನುಭ-

ವಾಯಿತು. ಹುಲಿ ನನ್ನ ಗೆಳೆಯನೆಡೆಗೆ ಹೋಗುವದನ್ನು ನೋಡಿದೆ. ಆತನೂ ನನಗಿಂತ ಹೆಚ್ಚು ಹೆದರಿದನೇನೋ. ಹುಲಿಯನ್ನು ನೋಡಿದವನೇ ಚಪ್ಪಾಳೆ ತಟ್ಟಲಾರಂಭಿಸಿದ. ಆದರೆ ಭಯಭೀತನಾಗಿ ಒಮ್ಮೆ ಮಾತ್ರ ತಟ್ಟಿ ನಿಲ್ಲಿಸದೆ ಮತ್ತೆ ಮತ್ತೆ ತಟ್ಟಿದ. ಹುಲಿಗೆ ಏನನಿಸಿತೋ ಏನೋ, ಅದು ಹಿಂಗಾಲೂರಿ ಅವನನ್ನು ನೋಡುತ್ತಾ ಕುಳಿತುಕೊಂಡಿತು. ಇದಕ್ಕೂ ಮೊದಲು ಅದಕ್ಕೆ ಮನುಷ್ಯನ ರುಚಿ ಹತ್ತಿತ್ತೋ ಏನೋ. ಹೀಗೆ ಅದು ಕೆಲಹೊತ್ತನ್ನು ನೋಡಿ ಆಮೇಲೆ ಬೆದರಿದವನೇ ಗುಡ್ಡದ ಮೇಲೆ ಇನ್ನೂ ಎತ್ತರಕ್ಕೆ ಏರಿತು. ಸುಮಾರು ಎಂಟು ಅಡಿ ಹತ್ತಿ ಅದು ಮತ್ತೆ ಏರಿ ಚಪ್ಪಾಳೆ ತಟ್ಟುವದನ್ನು ಮುಂದುವರಿಸಿದ. ಅದು ಕೂಡಲೆ ಮತ್ತೆ ಅವನ ದಿಕ್ಕನ್ನು ಬಿಟ್ಟು ನಮ್ಮ ಸ್ಟಾರ್ಟ್ ಸಾಹೇಬರು ಕೂತ ಮಂಚಿಕೆಯ ಕಡೆಗೆ ಓಡುವದಕ್ಕೆ ಮೊದಲು ಮಾಡಿತು. ಸಿದ್ಧರಾಗಿಯೇ ಕುಳಿತಿದ್ದ ಅವರು ತಟ್ಟನೆ ಹುಲಿಯೆಡೆಗೆ ಗುಂಡು ಹಾರಿಸಿದರು. ಆದರೆ ಅವರು ಹುಲಿಯ ವೇಗವನ್ನು ಸರಿಯಾಗಿ ಲಕ್ಷಿಸದೆ ಇದ್ದದ್ದರಿಂದಲೋ ದೃಷ್ಟಿದೋಷದಿಂದಲೋ ಗುಂಡು ಅದರ ಎಡ ಪಕ್ಕಕ್ಕೆ ಬಡೆಯಿತು. ಹುಲಿಗೆ ಪೆಟ್ಟು ಜೋರಾಗಿ ಬಿದ್ದಿದ್ದರೂ ಅದು ಅನಂತರವೂ ಅದೇ ವೇಗದಿಂದ ಸುಮಾರು ನಲವತ್ತು ಐವತ್ತು ಅಡಿ ಹೋಗಿ ನಂತರ ನಡೆಯತೊಡಗಿತು. ಸಾಹೇಬರು, "ಹುಲಿಗೆ ಗುಂಡು ತಾಗಿದೆ. ಈಗಲೆ ಯಾರೂ ಇಳಿಯಬೇಡಿ" ಎಂದು ಕೂಗಿ ಹೇಳಿದರು. ಆದರೆ ಕೆಲವೆ ನಿಮಿಷಗಳಲ್ಲಿ ಆ ನಾವು ಬೇಟೆ ಎಬ್ಬಿಸುವುದಕ್ಕೆಂದು ನೇಮಿಸಿಕೊಂಡಿದ್ದ ಸ್ಥಳೀಯ ಶಿಕಾರಿ ಧಾವಿಸಿ ಬಂದವನೆ ರಕ್ತ ಬಿದ್ದ ಗುರುತು ಹುಡುಕತೊಡಗಿದ. ಅಲ್ಲದೆ ಜನರು 'ಹಾಕಾ' ಮಾಡುವದನ್ನು ನಿಲ್ಲಿಸಬೇಕೆಂದು ಕೂಗಿ ಹೇಳಿದ. ನಾವು ಇಳಿದವರೇ ಆತನನ್ನು ಹಾಗೇಕೆ ಜೀವದ ಪರಿವೆ ಇಲ್ಲದೆ ಬರುವೆ ಎಂದು ಕೇಳಿದೆವು. ಆತ ನಸು ನಕ್ಕು ಹೇಳಿದ: "ನಾವು ಹುಲಿ-ಚಿರತೆಗಳನ್ನು ನೋಡುತ್ತೇವೆ. ನಿಮಗೆ ಸಾಕು ನಾಯಿಗಳ ಪರಿಚಯ ಹೇಗೋ ಹಾಗೆ ಇವುಗಳ ಪರಿಚಯ ನಮಗಿದೆ." ಆತನ ಧೈರ್ಯ ಕಂಡು ನಾನು ಈರ್ಷೆ, ಅಭಿಮಾನದಿಂದ ಅವನಂತೆ ಧೈರ್ಯವಂತನಾಗಬೇಕೆಂದು ಮನಸ್ಸು ಮಾಡಿದೆ. ಗಾಯಗೊಂಡ ಹುಲಿಯನ್ನು ಬೆನ್ನಟ್ಟುವದು ಬಹಳ ಅಪಾಯಕಾರಿ. ಆದರೆ ಇಂಥ ಹುಲಿಗಳೇ ಮಾನವ ಘಾತಕ ಹುಲಿಗಳೆಂದು ನಮ್ಮ ಅಧ್ಯಾಪಕರು ಹೇಳಿದ್ದರಿಂದ ನಾವು ಅದನ್ನು ಅರಸುತ್ತಾ ಹೋಗಲೇಬೇಕಾಯಿತು. ಮುಂದೆ ಮುಂದೆ ಅಲ್ಲಿಯ ಶಿಕಾರಿ, ಅವನ ಹಿಂದೆ ನಾವು, ನಮ್ಮ ಹಿಂದೆ ಸ್ಟಾರ್ಟ್ ಸಾಹೇಬರು ಸಾಲು ಹಿಡಿದು ನಡೆಯುತ್ತಿದ್ದೆವು. ಹೀಗೆ ಮಾಡುವದಕ್ಕೆ ಇನ್ನೊಂದು ಕಾರಣವೆಂದರೆ ಸಾಹೇಬರ ದೃಷ್ಟಿ ದೂರ

ದೂರ ವರೆಗೆ ಮುಟ್ಟದಿದ್ದುದು. ಅವರು ಸ್ವಲ್ಪ ದೂರ ಹೋದ ಮೇಲೆ ಕೈ ಮಾಡಿ ಒಂದು ವಸ್ತು ಹುಲಿಯೆಂದು ತಿಳಿದು ನನಗೆ ತೋರಿಸಿದರು. ಆದರೆ ಅದು ಹಳದಿ ಬಣ್ಣದ ಹುಲಿಯಾಕಾರದ ಕಲ್ಲು ಬಂಡೆ ಮಾತ್ರವಾಗಿತ್ತು. ಅದರ ಮೇಲೆ ಬಿದ್ದ ಎಲೆಗಳ ಅಲುಗಾಟದಿಂದ ಮೋಸ ಹೋಗಿದ್ದೆವು. ಆ ಸ್ಥಳೀಯ ಶಿಕಾರಿ ಬಹಳ ಎಚ್ಚರಿಕೆಯಿಂದ ಮುಂದೆ ಹೋಗುತ್ತಿದ್ದನು. ನಾವು ಕೂಡ ಮೈಯೆಲ್ಲ ಕಣ್ಣಾಗಿ ಕಿವಿಗಳನ್ನು ಚುರುಕು ಮಾಡಿಕೊಂಡು ಸಾವಧಾನವಾಗಿ ಮುನ್ನಡೆದೆವು. ಹೀಗೆ ಸುಮಾರು ಒಂದು ಫರ್ಲಾಂಗು ಹೋಗಿರಬಹುದು. ಆಗ ಅತ ಒಂದು ಕಡೆ ತಡೆದು ನಿಂತು ಬಿದಿರು ಮೆಳೆಯೊಂದರ ಕಡೆ ಕೈಸನ್ನೆ ಮಾಡಿದ. ಈ ಬಾರಿ ಅವನು ಹುಲಿಯನ್ನು ನಿಜವಾಗಿ ಗುರುತಿಸಿದ್ದ. ಅದು ಸತ್ತಂತೆ ನೆಲದ ಮೇಲೆ ಬಿದ್ದಿತ್ತು. ನಾನು ನನ್ನ ಅಧ್ಯಾಪಕರಿಗೆ ಅದನ್ನು ತೋರಿಸಿದೆ. ಅವರಿಗೂ ಈಗ ಖಾತ್ರಿಯಾಗಿರಬೇಕು. ನನ್ನ ಕಿವಿಯಲ್ಲಿ ಅವರು ನಾನು ಎಚ್ಚರದಿಂದ ಮಾಡಬೇಕಾದ ಕೆಲಸ ವಿವರಿಸಿದರು. ಗಾಯಗೊಂಡ ಹುಲಿಯ ಹತ್ತಿರ ಹೋಗುವದು ಗಂಡಾಂತರವೆಂಬುದನ್ನು ಲಕ್ಷ್ಯದಲ್ಲಿಟ್ಟು ಶಿಕಾರಿಗೂ ನನ್ನ ಸಹಪಾಠಿಗೂ ಅಲ್ಲೇ ನಿಲ್ಲುವಂತೆ ಹೇಳಿ ಬಂದೂಕಿದ್ದದರಿಂದ ನಾವಿಬ್ಬರೇ ಸಾವಕಾಶವಾಗಿ ಎಚ್ಚರಿಕೆಯಿಂದ ಮುಂದುವರಿದೆವು. ಒಣಗಿದ ಎಲೆಗಳ ಮೇಲೆ ನಡೆಯುವಾಗ ಶಬ್ದ ಮಾಡದಿರಲು ಬಹಳ ಪ್ರಯಾಸಪಡಬೇಕಾಗಿ ಬಂತು. ಹೀಗೆ ಹುಷಾರಿಯಿಂದ ನಡೆಯುತ್ತ ಹುಲಿ ಸುಮಾರು ಐವತ್ತು ಅಡಿ ದೂರ ಇದ್ದಾಗ ನಾವಿಬ್ಬರೂ ನಿಂತೆವು. ಹುಲಿ ಅಡ್ಡಲಾಗಿ ಬಿದ್ದಿತ್ತು. ಅದು ತಲೆ ಮೇಲೆತ್ತದೇ ಅದನ್ನು ಸಾಯಹೊಡೆಯುವದು ಸಾಧ್ಯವಿರಲಿಲ್ಲ. ಅದರ ತಲೆಯನ್ನು ಮೇಲೆತ್ತುವದಕ್ಕಾಗಿ ನಾನು ಬಂದೂಕನ್ನು ಸಾವಕಾಶವಾಗಿ ಆಕಾಶಕ್ಕೆ ಹಾರಿಸಿದೆ.

ಗುಂಡಿನ ಸಪ್ಪಳ ಕೇಳಿ ಹುಲಿ ತಲೆ ಮೇಲೆತ್ತಿ ಗರ್ಜಿಸಲು ಬಾಯ್ತೆರೆಯಿತು. ಕ್ಷಣಾರ್ಧದಲ್ಲೇ ಸ್ಟ್ಯಾರ್ಟ್ ಸಾಹೇಬರು ಹಾರಿಸಿದ ಗುಂಡು ನೇರವಾಗಿ ಅದರ ಬಾಯನ್ನೇ ಸೇರಿತು. ಒಡನೆಯೇ ಅದರ ಹೃದಯಕ್ಕೆ ಗುರಿಯಿಟ್ಟು ಅವರು ಇನ್ನೊಂದು ಗುಂಡು ಹಾರಿಸಿದಾಗ, ಆಗಲೇ ನಿರ್ಜೀವವಾಗಿದ್ದ ಹುಲಿ ಕೊನೆಯುಸಿರೆಳೆಯಿತು. ಅದು ಸುಮಾರು ಹತ್ತಡಿ ಉದ್ದದ ವ್ಯಾಘ್ರ.

ನನ್ನ ಮೊದಲ ಬೇಟೆಯ ಅನುಭವ ಇಂತು ಮುಗಿದಾಗ ಅದರಲ್ಲಿ ನನ್ನ ಪಾತ್ರ ಕಿಂಚಿತ್ತಾದರೂ ಇದೆಯಲ್ಲ ಅನಿಸಿ ತುಸು ಹೆಮ್ಮೆಯೇನೋ ಮೂಡಿತು. ಆದರೆ ನಾನು ಕಲಿಯಬೇಕಾದದ್ದು ಎಷ್ಟು ಗುರುತರವಾಗಿದ್ದಿತೆಂಬುದರ ಕಲ್ಪನೆಯೂ ನನಗೆ ಆ ಕ್ಷಣಕ್ಕೇ ಬಂತು. ✡

ಸಿನ್ಹಾ ಸಾಹೇಬರಿಗೆ ಶಿಕಾರಿಯೆಂದರೆ ಎಲ್ಲಿಲ್ಲದ ಹುಚ್ಚು. ಅರಣ್ಯದ ಎಲ್ಲಾ ಪ್ರಾಣಿಗಳನ್ನೂ ಒಮ್ಮೊಮ್ಮೆ ಬೇಟೆಯಾಡಿಬಿಡಬೇಕೆಂದು ಆಶೆ ಹುಟ್ಟಿದಾಗ, ಸಿನ್ಹಾ ಸಾಹೇಬರು ಹೊರಟೇಬಿಟ್ಟರು, ಸಿದ್ಧರಾಗಿ. ಅರಣ್ಯ ಇಲಾಖೆಯ ರೆಸ್ಟ್ ಹೌಸಿಗೆ ಬಂದಾಗ ರಾತ್ರಿ ೯ ಗಂಟೆಯ ಸಮಯ. ತುಂಬಾ ದಣಿದಿದ್ದ ಸಾಹೇಬರು ಬಟ್ಟೆ ಬಿಚ್ಚಿ ನೈಟ್ ಡ್ರೆಸ್‌ಗಾಗಿ ಸೂಟ್‌ಕೇಸ್ ತೆರೆದಾಗ ಹೆಂಡತಿಯ ಅಕ್ಷರವಿದ್ದ ಒಂದು ಲಕೋಟೆ ಸಿಕ್ಕಿತು. ತೆಗೆದು ನೋಡಿದರು, ಜಿಂಕೆಯ ಚಿತ್ರ ಇತ್ತು. ಕೆಳಗೆ ಶ್ರೀಮತಿಯವರ ಕೈಬರಹದಲ್ಲಿ 'ಇದಕ್ಕೆ ಜಿಂಕೆ ಎನ್ನುತ್ತಾರೆ. ಇಂಥದನ್ನೇ ಹೊಡೆಯಿರಿ' ಎಂದಿತ್ತು.

ಕೈಗಾರಿಕಾ ರಂಗದ ಹೊಸ ಆವಿಷ್ಕಾರ


ತೇಲುವ ಕಾರಖಾನೆ

ಈ ವರ್ಷದ ಮೇ ತಿಂಗಳಿನಲ್ಲಿ ಹಿಂದೂ ಮಹಾಸಾಗರ ಮತ್ತು ಅಟ್ಲಾಂಟಿಕ್ ಮಹಾಸಾಗರಗಳ ಮೂಲಕ ಸುಮಾರು ೧೫ ಸಾವಿರ ಮೈಲು ಅಂತರವನ್ನು ಕಾರಖಾನೆಯೊಂದು ತೇಲುತ್ತ ಕ್ರಮಿಸಿತು. ಈ ಪ್ರಯಾಣದ ಅವಧಿ ಒಟ್ಟು ೯೩ ದಿನಗಳು. ಹುಟ್ಟೂರು ಕುರೆ(ಜಪಾನ್)ಯಿಂದ ಹೊರಟ ಈ ಕಾರಖಾನೆ ಬ್ರಾಜಿಲ್ ದೇಶದ ಅಮೇಜಾನ್ ನದಿಯಲ್ಲಿ ಹಾಯ್ದು ಜಾರಿ* ನದಿಯಲ್ಲಿ ತನಗಾಗಿ ನಿರ್ಮಿಸಲ್ಪಟ್ಟಿದ್ದ ನೆಲೆಗೆ ಬಂದು ನಿಂತಿತು. ಅದರ ಜತೆಗೆ ಕಾರಖಾನೆಗೆ ವಿದ್ಯುಚ್ಛಕ್ತಿ ಪೂರೈಕೆ ಮಾಡುವ ಒಂದು ತೇಲು ವಿದ್ಯುದಾಗಾರವೂ ಇದೆ. ದಿನವೊಂದಕ್ಕೆ ಕಾರಖಾನೆಗೆ ಬೇಕಾಗುವ ೫೫ ಸಾವಿರ ಕಿಲೋವ್ಯಾಟ್ ವಿದ್ಯುಚ್ಛಕ್ತಿಯನ್ನು ಈ ವಿದ್ಯುದಾಗಾರ ಉತ್ಪಾದಿಸುತ್ತದೆ.

ಡ್ಯಾನಿಯಲ್ ಕೆ. ಲುಡ್ವಿಗ್ ಎಂಬೊಬ್ಬ ಶ್ರೀಮಂತ ಉದ್ಯೋಗಪತಿಯ ಕನಸಿದು. ಆದರೆ ಅದು ಹಗಲುಗನಸಲ್ಲ, ಒಂದು ಔದ್ಯಮಿಕ ಸಮಸ್ಯೆಗೆ ಅವರು ಕಂಡುಕೊಂಡ ಪರಿಹಾರ. ಬ್ರಾಜಿಲಿನ ಅಮೇಜಾನ್ ಕೊಳ್ಳದಲ್ಲಿ ಭಾರಿ ಅರಣ್ಯದ ಒಡೆತನವಿರುವ ಅವರು ಅದನ್ನು ಔದ್ಯಮಿಕವಾಗಿ ಬಳಸಲೆಣಿಸಿ ಕಾಗದದ ಪಲ್ಪ್ ತಯಾರಿಸುವ ದೊಡ್ಡ ಕಾರಖಾನೆಯೊಂದನ್ನು ನದಿಯಲ್ಲೇ ನಿಲ್ಲಿಸಲು ಸಾಧ್ಯವಾದರೆ ಉತ್ಪಾದನೆ ಮಿತವ್ಯಯದ್ದಾಗುವುದು ಎಂದು ಲೆಕ್ಕ ಹಾಕಿ ಈ ಕನಸನ್ನು ಕೃತಿಗಿಳಿಸಿದರು. ಇದಕ್ಕೆ ಅವರಿಗೆ ಬೇಕಾದ ಅವಧಿ ೧೦ ವರ್ಷಗಳು.


ಎರಡು ಫುಟ್‌ಬಾಲ್ ಮೈದಾನಗಳಷ್ಟು ವಿಸ್ತಾರ (ಒಂದು ಮೈದಾನದ ವಿಸ್ತಾರ ೩೦೦ ಅಡಿ ಉದ್ದ ಮತ್ತು ೨೧೦ ಅಡಿ ಅಗಲ) ಮತ್ತು ೧೭ ಅಂತಸ್ತಿನ ಕಟ್ಟಡವೊಂದರಷ್ಟು ಎತ್ತರ ಇದೆ ಈ ಕಾರಖಾನೆ.

ಜಪಾನಿನ ಇಶಿಕಾವಾಜಿಮಾ-ಹರಿಮಾ ಹೆವಿ ಇಂಡಸ್ಟ್ರೀಸ್‌ನಲ್ಲಿ ಕಟ್ಟಲ್ಪಟ್ಟ ಈ ತೇಲುವ ಕಾರ-ಖಾನೆಯ ನಿರ್ಮಾಣ ವೆಚ್ಚ ೧೭೫ ಕೋಟಿ



ಡ್ಯಾನಿಯಲ್ ಲುಡ್ವಿಗ್

* ಅಮೇಜಾನಿನ ಉಪನದಿ. ೨೫೦ ಮೈಲುದ್ದ ಒಳನಾಡಿನಲ್ಲಿದು ಹರಿದಿದೆ.



ಜಾರಿ ನದಿಯಲ್ಲಿ ತೇಲುವ ಕಾರಖಾನೆ. ಅದರ ಒಂದೆಯೇ ತೇಲುವ ವಿದ್ಯುದಾಗಾರ.

ರೂ.ಗಳು. ೧೯೮೧ರ ವೇಳೆಗೆ ದಿನವೊಂದಕ್ಕೆ ೭೫೦ ಮೆಟ್ರಿಕ್ ಟನ್‌ಗಳಷ್ಟು ಬ್ಲೀಚ್ ಮಾಡಿದ ಕ್ರಾಫ್ಟ್ ಪಲ್ಪನ್ನು ಉತ್ಪಾದಿಸುತ್ತದೆ ಎಂಬುದು ಲುಡ್ವಿಗ್ ಅವರ ಅಭಿಪ್ರಾಯ. ಈ ಪಲ್ಪಿನಿಂದ ಜಗತ್ತನ್ನು ೭೫ ಸಲ ಸುತ್ತಬಹುದಾದಷ್ಟು ಉದ್ದದ ಕಾಗದದ ರೀಲುಗಳನ್ನು ತಯಾರಿಸಲಾಗುತ್ತದಂತೆ. ಅಲ್ಲದೇ ಇತರ ಉತ್ಪಾದನೆಗಳಿಗೂ ಈ ಪಲ್ಪ್ ಉಪಯೋಗಿಸಲ್ಪಡುತ್ತದಂತೆ.

ಬ್ರಾಜಿಲ್ಲಿನ ಮುಂಗುಬಾ ಜಿಲ್ಲೆಯಲ್ಲಿರುವ ಈ ಹೊಸ ಕೈಗಾರಿಕಾಗಾರ ಈಗ ಅಲ್ಲಿನ ಮತ್ತು ಹೊರಗಿನ ಜನಕ್ಕೊಂದು ಆಕರ್ಷಣೆಯಾಗಿರುವಂತೆಯೇ, ಪರಿಸರತಜ್ಞರ ಚಿಂತೆಗೂ ಕಾರಣವಾಗಿದೆ. ಲುಡ್ವಿಗ್ ಅವರ ಅರಣ್ಯ ನಾಶದಿಂದಾಗಿ ಪರಿಸರತಜ್ಞರೆಲ್ಲ ಕಳವಳಕ್ಕೀಡಾಗಿದ್ದಾರೆ. ಆದರೆ ಕೇವಲ ನಾಶವಷ್ಟೇ ತಮ್ಮ ಉದ್ದೇಶವಲ್ಲ ಎಂದು ಸ್ಪಷ್ಟಪಡಿಸುವರು ಲುಡ್ವಿಗ್. ಈಗಾಗಲೇ ತಮ್ಮ ಒಡೆತನದಲ್ಲಿರುವ ಕಾಡಿನ ಅರ್ಧದಷ್ಟನ್ನು ಕಡಿದು ಕಾಗದದ ಉತ್ಪಾದನೆಗೆ ಮರಗಳನ್ನು ಒದಗಿಸುವುದರ ಜೊತೆಗೇ, ಆ ಪ್ರದೇಶದಲ್ಲಿ ಮೂರೂವರೆ ಕೋಟಿಗಳಷ್ಟು ಶೀಘ್ರವೇ ಬೆಳೆಯುವ ಗಿಡಗಳನ್ನು ನೆಟ್ಟಿದ್ದಾರೆ. ಈಗ ಕಡಿದ ಮರಗಳನ್ನು ೧೫೦ ಮೈಲುದ್ದದ ತಮ್ಮ ಒಡೆತನದ ರೈಲುದಾರಿಯ ಮೂಲಕ ಕಾರಖಾನೆಗೆ ಸಾಗಿಸುತ್ತಾರೆ.

ಈ ಕಾರಖಾನೆಯನ್ನು ಬ್ರಾಜಿಲ್ಲಿನಲ್ಲಿಯೇ ನಿರ್ಮಿಸಿದ್ದರಾಗುತ್ತಿರಲಿಲ್ಲವೆ ? ಅರ್ಧ ಭೂಮಿಯನ್ನು ಯನ್ನು ಸುತ್ತು ಹಾಕಿ ಇಲ್ಲಿಗೆ ಕಾರಖಾನೆಯೊಂದನ್ನು ತೇಲಿಸಿಕೊಂಡು ಬರುವಂಥ ಅವಶ್ಯಕತೆಯೇನಿತ್ತು?

ಇದಕ್ಕೆ ಕಾರಖಾನೆಯ ನಿರ್ಮಾಣ ಸಂಸ್ಥೆಯ ವಕ್ತಾರ ಹೇಳುತ್ತಾರೆ: "ಬ್ರಾಜಿಲ್ಲಿನಲ್ಲೇ ಇಂಥ ಕಾರಖಾನೆ ನಿರ್ಮಿಸಲು ಸಾಕಷ್ಟು ಸಮಯ ಬೇಕಾಗುತ್ತಿತ್ತು. ಅಷ್ಟೆ ಅಲ್ಲ ಇಷ್ಟು ಬಂಧುರವೂ ಆಗುತ್ತಿರಲಿಲ್ಲ. ಮತ್ತು ಈ ಕಾಡಿನಲ್ಲಿ ಒಂದೆಡೆ ಕಾರಖಾನೆ ಕಟ್ಟಿಬಿಟ್ಟರೆ ಕಚ್ಚಾವಸ್ತು ಪೂರೈಕೆಗೆ, ಸಾಗಾಟಕ್ಕೆ ಸರಿಯಾದ ವ್ಯವಸ್ಥೆ ಎಲ್ಲಿದೆ?"

ಲುಡ್ವಿಗ್ ಅವರ ಸಹಕಾರಿಯೊಬ್ಬ ಹೇಳುತ್ತಾನೆ: "ಎಂಬತ್ತರ ಈ ಮುದುಕನಿಗೆ ಸಮಾಜಾರ್ಥಿಕ ಮಹತ್ವದ ಅದ್ಭುತವೊಂದನ್ನು ಸಾಧಿಸುವ ಮನಸ್ಸು. ವರ ಇದೆಯೇ ಹೊರತು ಶೀಘ್ರ ಲಾಭದ ಆಶೆಯಿಲ್ಲ."

೧೯೮೫ರ ಹೊತ್ತಿಗೆ ಜಗತ್ತು ಎದುರಿಸಬೇಕಾಗುವ ತೀವ್ರ ಕಾಗದದ ಕೊರತೆಯ ವಿರುದ್ಧ ಲುಡ್ವಿಗ್ ಅವರ ಈ ತೇಲುವ ಕಾರಖಾನೆ ಹೋರಾಡುತ್ತದೆಂಬುದು ಅನೇಕರ ಆಶಯ. ✡

ಯಾಕೆ?

ಗೀತಾ ಕುಲಕರ್ಣಿ

ಅಂತೂ ಕೊನೆಗೊಮ್ಮೆ ಸಿಕ್ತು. ಸರಾಗವಾಗಿ ಉಸಿರಾಡಿಸಿದೆ. ಟೈ ಬಿಗಿದುದಕ್ಕೋ ಏನೋ ನಡುವೆ ಉಸಿರು ಸಿಕ್ಕಿಕೊಂಡ ಹಾಗಾಗಿ ಸಡಿಲಿಸಿಕೊಂಡೆ. ಸಿಕ್ತು ಅಂದ್ರೇನು? ಉಪಾಯವಿಲ್ಲದೇ ಒಪ್ಪಿದ್ದು. ಎರಡು ತಿಂಗಳಿಂದ ಕಾಲಿಗೆ ಚಕ್ರ ಕಟ್ಟಿ ತಿರುಗಿದ್ದೇ ತಿರುಗಿದ್ದು. ಒಂದಿದ್ರೆ ಒಂದಿಲ್ಲ. ಮುಂದಿನ ಬಾಗಿಲು. ಬೆಡ್‌ರೂಮು ಚೆನ್ನಾಗಿದೆ ಎಂದ್ರೆ ಹಿತ್ತಲಿಗೆ ಹೋಗುವ ಬಾಗಿಲೇ ಇಲ್ಲ: ಇನ್ನೊಂದು ಮನೆ ಆದೀತು ಎನ್ನೋವಾಗ ಮುಂದಿನ ಹಾಲಿಗೆ ತಾಗಿಯೇ ಲ್ಯಾಟ್ರೀನ್; ಇನ್ನೊಂದರಲ್ಲಿ ಕಿಚನ್‌ನಲ್ಲೇ ಬಾತ್‌ರೂಮು; ಒಂದು ಮನೆ ಒಪ್ಪಿಗೆ ಎನ್ನುವಾಗ ಬಾಡಿಗೆ ಕೈಮೀರಿರಬೇಕು!

ಪ್ರತಿ ಕಾಗದದಲ್ಲೂ ಹೇಮಾ ಕೇಳ್ತಾಳೆ. "ಯಾವಾಗ ಬರ್ಲಿ?" ಇದು ಅವಳ ಪಲ್ಲವಿ! ಆಫೀಸಿನ ಕೆಲ್ಸ ಮುಗಿದ ಕ್ಷಣ ನನ್ನದು ಬಾಡಿಗೆ ಮನೆಗಾಗಿ ಬೇಟೆ.

ಈಗ ಸಿಕ್ಕದ್ದು ದೊಡ್ಡ ಬಂಗ್ಲೆಯಲ್ಲಿಯ ಒಂದು ವಿಂಗ್; ನಾನು ಬ್ರಹ್ಮಚಾರಿ ಆಗಿದ್ರೆ ಆ ಮನೆಯೂ ದಕ್ಕುತ್ತಿರಲಿಲ್ಲ. ಹೇಮಾನ ಹೆಸ್ರು ನನ್ನ ಜೊತೆ-ಗಿತ್ತು ರಕ್ಷಾಕವಚದಂತೆ!

ಮನೆಯ ಯಜಮಾನ ರಿಟಾಯರ್ಡ್ ಸುಬ್ಬ-ರಾಯ. ನನ್ನನ್ನು ಮೇಲಿನಿಂದ ಕೆಳಗಿನವರೆಗೆ 'ಕ್ಷ' ಕಿರಣ ಬಿಟ್ಟು ನೋಡಿದ ಹಾಗೆ ಮಾಡಿ "ಏನು, ಕುಡಿಯೋ ಅಭ್ಯಾಸ?" ಮುಂದಿನ ಮಾತು ಅವನ



ಬಾಯಿಯಿಂದ ಉದುರೋ ಮೊದಲೇ ನೇರವಾಗಿ ಹೇಳಿಬಿಟ್ಟೆ. "ನೋಡಿ ಸಾರ್...ಯಾವ ಅಭ್ಯಾಸಾನೂ ಈಗಿಲ್ಲ...ಅಭ್ಯಾಸ ಮುಗಿಸೇ ಕೆಲ್ಸ ಸೇರಿದ್ದು. ಹೊಸ್ತಾಗಿ ಮದ್ವೆ ಮಾಡಿಕೊಂಡಿದ್ದೇನೆ...ನಾನೂ ಮನೆತನಸ್ತ... ಆಗಾಗ ಟೂರಿರುತ್ತೆ... ಅವಳು ತುಂಬಿದ ಮನೆಯಿಂದ ಬಂದೋಳು...ಬಾಡಿಗೆ ಬಗ್ಗೆ ಯೋಚನೆ ಬೇಡ. ಮನೆ ನನಗಿಷ್ಟವಾಗಿದೆ. ನೀವು ಕೊಡೋದಾದ್ರೆ ಅವಳನ್ನ ಕರ್ಕೊಂಡು ಬರ್ತೆನೆ."

"ನಮ್ಗೆ ಬಾಡಿಗೆಯಿಂದ್ಲೇ ಬದುಕಬೇಕೆಂದಿಲ್ಲ... ಅಲ್ದೆ ಇದು ಹುಡುಗಿಯರಿರೋ ಮನೆ! ಅದು ನೆಸ ಪಿರ್ಕ್ನಿ...ಮೂರು ತಿಂಗಳ ಎಡ್ವಾನ್ಸ್ ಬೇಕು; ಮನೆ ಕೊಡ್ತೇನೆ."

ಮುದುಕನ ಕೆನ್ನೆಗೆ ಎರಡು ಬಾರಿಸಿಬಿಡುವಷ್ಟು ಸಿಟ್ಟು ಬಂದಿತ್ತು. ಹುಡುಗಿಯರು ಇರೋ ಮನೆಯಂತೆ. ಮನೇಲಿ ಹುಡುಗಿಯರಿರದೆ ಏನು ಕತ್ತೆಗಳನ್ನು ಸಾಕ್ತಾರೆಯೇ? ನಾನು ಹುಡುಗಿಯರನ್ನೇ ಕಂಡಿಲ್ಲ, ಈಗ ಕಾಡಿನಿಂದ ಬಂದಿದ್ದೇನೆ ಅದ್ಕೊಂ- ಡಿದ್ದಾನೆ....ಈ ಜಾಂಬವಂತ! ಇರೋದಕ್ಕೆ ಒಂದು ಮನೆ ಇದೆಯಂತೆ, ಏನು ಧಿಮಾಕು! ಕಣ್ಣು ನೆತ್ತಿಗೇರಿದೆ. "ಬಾಡಿಗೆಗೆ ಕೊಡಬೇಕೆಂದಿಲ್ಲ" ಅಂತಾನೆ... ಉಟ್ಟ ಧೋತ್ರ ನಾಲ್ಕು ಕಡೆ ಸೀಳಿದೆ!

"ಏನು ಒಪ್ಪಿಗೆಯಾ? " ಎಂದ ಸುಬ್ಬರಾಯ!

ಒಪ್ಪದೆ ಬೇರೆ ದಾರಿ ಇಲ್ಲ; ಹೂಂ ಎಂದೆ. ಕೈ ಮುಂದೆ ಚಾಚಿದ. ಚೆಕ್ ಬರೆದು ಅವನ ಕೈಗಿಟ್ಟೆ.

ಹೇಮಾಗೆ ಮನೆ ಇಷ್ಟವಾಗಿತ್ತು. ರಾತ್ರಿಯಲ್ಲಿ ಮಲಗಲು ಬಿಡಲಿಲ್ಲ. ಮದುವೆಯಾಗಿ ನಾವಿಬ್ಬರೇ ಇದ್ದದ್ದು ಇದೇ ಮೊಧಲ ರಾತ್ರಿ! ಮೂರು ತಿಂಗಳು ಮನೆಯಿಲ್ಲವೆಂದು ತೌರಿನಲ್ಲಿ ಕಳೆದಿದ್ದಳು. ಅವಳಿಗೆ ನನ್ನಲ್ಲಿ ಹೇಳಬೇಕಾದದ್ದು ಗುಡ್ಡದಷ್ಟು! ಇದೇ ರಾತ್ರಿ ಅಷ್ಟನ್ನೂ ಹೇಳಿ ಬಿಡಬೇಕೆನ್ನುವ ಆತುರ! ನನಗೆ ಒಂದೇ ರಾತ್ರಿಯಲ್ಲಿ ಎಲ್ಲವನ್ನೂ ಕೇಳುವ ತಾಳ್ಮೆಯೂ ಇಲ್ಲ, ಅವಸರವೂ ಇಲ್ಲ. ಮನೆ, ಮನೆ-ಯೆಂದು ಸುತ್ತಾಡಿಸಿ, ಸುಖವಾಗಿ ಕಳೆಯೋ ರಾತ್ರಿಯನ್ನು ಹೀಗೆ ಹಾಳು ಮಾಡ್ತಾಳಲ್ಲಾ ಎಂದುಕೊಂಡು, "ಹೇಮಾ, ರಾತ್ರಿ ತುಂಬಾ ಆಗಿದೆ. ಇನ್ನು ಮಲಗುವಾ, ಇನ್ನು ಇದು ನಮ್ದೇ ...ಮನೆ ನಮ್ದೇ ರಾತ್ರಿ, ಯಾಕೆ ಗಡಿಬಿಡಿ ಮಾಡ್ತೀ-ಯಾ?" "ಹಾಗಲ್ಲ...ನಾನೊಂದು ಟಾಯಮ್ ಟೇಬಲ್ ಮಾಡಿಕೊಂಡಿದ್ದೇನೆ. ಅದರಂತೆ ನಾವು ಇರ್ಬೇಕು. ನಮ್ದು "sweet home.' ನಾಳಿಂದ್ಲೇ ಅದರ ಪ್ರಯೋಗ! ನೀವು ಚಾಚೂ ತಪ್ಪಬಾರ್ದು... promise ಮಾಡ್ತೀರಾ?" "ತಕೋ promise. ಏನಂಥ ದೊಡ್ಡ ವಿಷಯ? ಏಳು ಮಾಳಿಗೆಯ ಅರಮನೆ ಬೆಳಗಾ-ಗೋದರಲ್ಲಿ ಸಿದ್ಧವಾಗಬೇಕೋ ಅನ್ನಲಿಲ್ಲ...ಚಿನ್ನದಿಂದ ಮೈಯೆಲ್ಲ ಮುಚ್ಚಬೇಕೋ ಎಂದೂ ನೀನು ಕೇಳಿಲ್ಲ...ಸೀರೆ ಅಂಗಡಿನೇ ಕೈಯಲ್ಲಿ ತಂದು ಕೊಡಿ ಎಂದೂ ಅಂದಿಲ್ಲ...ನನ್ನ sweety. ನೀನು ಕೇಳಿದ್ದು, 'ಆಫೀಸಿನಿಂದ ಬೇಗ ಬನ್ನಿ...... ಹೋಗುವಾಗ ಟಾಟಾ...ಪಿಕ್ಚರ್...' ಹೇಮಾ ತೆಪ್ಪಗೆ ತುಪ್ಪಳದ ಬೆಕ್ಕಿನ ಹಾಗೆ ನನ್ನ ಅವಚಿಕೊಂಡಳು.

ಬೆಳಿಗ್ಗೆ ಕೆನ್ನೆಗೆ ಬಿಸಿ ಮುತ್ತು! ಕಣ್ತೆರೆದೆ... ಹೇಮಾ ಎದುರಿಗೆ ನಗುತ್ತ ನಿಂತಿದ್ಲು. ನಾನು ಏಳೋದರೊಳಗೆ ಬಿಸಿ ನೀರು, ಕಾಫಿ, ಶೇವಿಂಗ್ ಸೆಟ್ ಎಲ್ಲ ಸಿದ್ಧವಾಗಿತ್ತು. ನನಗೆ ಮನೆಯ ಮಾಲಿಕ ಸುಬ್ಬರಾಯ ಕಂಡಂತಾಗಿ ಮನಸ್ಸಿನಲ್ಲೇ ಕೈಮುಗಿದೆ. ಪುಣ್ಯಾತ್ಮ ಮನೆ ಕೊಟ್ಟ. ಇಲ್ಲದಿದ್ದರೆ. ಹೋಟೆಲಿನ ಕಾಟಿನಲ್ಲಿ ಹಾಗೇ ಬಿದ್ದಿರುತ್ತಿದ್ದೆ. ಹೇಮಾ ..."ಈ ಸೌಭಾಗ್ಯ?" ದೇವರೇ ಎಂದೆ.

"ಅಂತೂ ದೇವರು ನೆನಪಾದನಲ್ಲ ?"

ನನಗೆ ನಗು ಬಂತು. ನಾನು ನೆನೆಸಿದ್ದು ಎಲ್ಲರ ದೇವರನ್ನಲ್ಲ...ನನ್ನ ದೇವರೇ ಬೇರೆ...ಅದನ್ನ-ವಳಿಗೆ ಹೇಳಲಿಲ್ಲ.

ಕೋಟು ಹಾಕಿಕೊಳ್ಳುವಾಗ್ಲೆ ಟೈ ತಂದು ನನ್ನ ಕುತ್ತಿಗೆಗೆ ತಾನೇ ಕಟ್ಟಿದಳು, ಲೆವೆಂಡರ್ ಹಾಕಿ, ಇದು ನನಗೆ ಹಾಕಿದ್ದು ಎಂದು ಮತ್ತೊಮ್ಮೆ ಮೂಸಿ, "ಟೈಪಿಸ್ಟ್ ಅವರು, ಇವರು ಅಂತ ಹತ್ರ ಹೋಗಿ ನಿಲ್ಲಬಾರ್ದು...." ಅಂದ್ಲು.

ಅವಳ ತಲೆಗೊಂದು ತಟ್ಟಿದೆ..."ಮನೇಗೆ ಬಂದ್ಮೇಲೆ ಲೆವೆಂಡರ್, ಈ ಡ್ರೆಸ್ಸು ಕೊಡಬಹುದಿತ್ತಲ್ಲ? ಒಂದು ಪರಕು ಪಾಯಿಜಾಮ , ಬಣ್ಣ ಹೋದ ಆ ಶರ್ಟು, ಕರಚೀಪಿಗಿಷ್ಟು ಚಿಮಣಿ ಎಣ್ಣೆ ಸುರಿದಿದ್ರೆ..."

ಕೆಂಪಗಿನ ಮುಖದಲ್ಲಿ ಹೇಮಾ ಇನ್ನಷ್ಟು ಚೆಲು-ವಾಗಿ ಕಂಡ್ಲು. ನಗು ಉಕ್ಕುವಾಗ್ಲೇ ಮುಖಕ್ಕೆ ಒತ್ತಿಕೊಂಡೆ.

ಅವಳು ಬಾಗಿಲಿಗೆ ಬಂದು ನಿಂತ್ಲು. ರಾತ್ರಿಯ promise ನ ಮೊದಲ ಸಂಜ್ಞೆ, ಪ್ರಾರಂಭವಾಗಬೇಕು. ನಾನು ಗೇಟು ತೆರೆದು flying kiss ಎಂದು ಕೊಳಲೂದುವ ಭಂಗಿಯಲ್ಲಿ ಬೆರಳು ಮಡಿಚಿದಾಗ ಕಣ್ಣು ಆಚೆಯ ದೊಡ್ಡ ಬಾಗಿಲು ಕಿಟಕಿಯತ್ತ ತಿರುಗಿ ತಟ್ಟನೆ ಕೈ ಬೆರಳು ಸರಕ್ಕನೆ ಎಳೆದು ಕೋಟಿನ ಕಿಸೆಯಲ್ಲಿ ಸೇರಿಕೊಂಡಿತು. ಮತ್ತೆ ನಾನು ತಿರುಗಿ ನೋಡುವ ಸಾಹಸ ಮಾಡಲಿಲ್ಲ.

ಹಿಂದಿನಿಂದ ಕಾರಿನ ಹಾರ್ನ್ ಬಾರಿಸಿದಾಗ ನಾನು ವಾಸ್ತವ ಪ್ರಪಂಚಕ್ಕೆ ಇಳಿದಿದ್ದೆ. ರಾತ್ರಿಯೆಲ್ಲ ಹೇಮಾ ಹೇಳಿದ್ದೇ ಹೇಳಿದ್ದು. ಮೊದಲ ತುತ್ತಿಗೇ ಕಲ್ಲು ಎಂದಾಯ್ತು. ಏನೆಂದುಕೊಳ್ತಾಳೋ... ನಾನು ಮತ್ತೆ ತಿರುಗಿಯೂ ನೋಡಿಲ್ಲ. ಏನು ಮಾಡಿದ್ನೋ...ಪುನಃ ತಿರುಗಿ ಹೋಗಿಬಿಡಲೇ... ಆಫೀಸು ? ರಾಶಿಗಟ್ಲೆ ಫೈಲು, ಹಿಂದಿನ ದಿನ ಉಳಿದಿದ್ದ ಕೆಲ್ಸ, ಪ್ರೊಡಕ್ಷನ್ ಮ್ಯಾನೇಜರ್ ಬೇರೆ ಬರ್ತಾರೆ, ಎಂದಿದ್ದ ಪಿಳ್ಳೆ. ಸ್ಕೂಟರ್ ಒಂದು ರಿಪೇರಿಗೆ ಹೋಗಿದೆ. ಇಲ್ಲದಿದ್ರೆ ಒಂದು ಕ್ಷಣಕ್ಕಾದ್ರೂ ಹೋಗಿ ಹೇಮಾನ್ನ ನೋಡಿ ಬರುತ್ತಿದ್ದೆ. ಈ ಸ್ಕೂಟರ್ ಕೊಳ್ಳುವಾಗ್ಲೇ ಹೇಳಿದ್ದ ಪ್ರಭಾಕರ,

...ನಾನೇ ಗಡಿಬಿಡಿ ಮಾಡಿದ್ದೆ...ಈಗ ಅನುಭವಿಸು ಎಂದಾಗಿದೆ.

ದಿನವೆಲ್ಲ ಮನಸ್ಸಿನಲ್ಲಿ ಕಿರಿಕಿರಿ. ಯಾವಾಗ ಆಫೀಸು ಮುಗಿಯುತ್ತದೋ...ವಾಚಿನಲ್ಲಿ ಕಣ್ಣು! ಹಿಂದೆ ರೂಮಿಗೆ ಹೋಗೋದೇ ಬೇಜಾರು ಎಂದ್ಕೊಂಡು ಕಂಪಲ್ಲಿ ಅಲೆಯುತ್ತಿದ್ದ ಅಲೆಮಾರಿ ಎಂದು ಗೇಲಿ ಮಾಡಿಕೊಂಡ ನನ್ನನ್ನು ಹೇಮಾ ಹೇಗೆ ಎಳೆಯುತ್ತಿದ್ದಾಳಲ್ಲ?...ಹೆಣ್ಣು–ಗಂಡಿನ ಕೈಯಲ್ಲಿ ಆಡೋ ಬುಗರಿ ಎಂದು ಕಾಲೇಜು ಡಿಬೇಟಿನಲ್ಲಿ ತಾನೇ ಮಾತಾಡಿದ್ದು ಅವನಿಗೆ ನೆನಪಾಗುತ್ತದೆ. ಕೈ ಕೆನ್ನೆ ಸುತ್ತು ಆಡುತ್ತವೆ. ಬೆಳಿಗ್ಗೆ ಕೆರೆದ ಗಡ್ಡ ಆಗಲೇ ಬೆರಳಿಗೆ ಚುಚ್ಚಿ "ಮಹಾ ಗಂಡಸು" ಎಂದು ಎಚ್ಚರಿಸುತ್ತದೆ. ಆದ್ರೆ ಈ ಎಲ್ಲ ಪುರುಷ ಲಕ್ಷಣವನ್ನು ಆಚೆ ದೂಡಿ, ಹೇಮಾ ಕೋಪಿಸಿಕೊಂಡರೆ ಹೇಗೆ ನಡೆದುಕೊಳ್ಳಬೇಕೋ ತಿಳಿಯದೆ ನಾನು ತಲೆಯ ಒಂದೆರಡು ಕೂದಲು ಕಿತ್ತುಕೊಂಡೇ ಆಫೀಸು ಬಿಟ್ಟೆ. ಫಕ್ಕನೆ ನೆನಪಾಯ್ತು ಕವಿಗಳು ಬರೆದ ಕವಿತೆಗಳ ಸಾಲು! ಅಂಗಡಿ ಎದುರಿಗೆ ಬಂದೆ, ಸೇಬು, ಮಂಗಳೂರು ಮಲ್ಲಿಗೆ ಮಾಲೆ ತಕ್ಕೊಂಡೆ. ...ಪರಿಮಳ ಮೂಗು ತುಂಬಿತು. ಕರ್ಣನಿಗೆ ಯುದ್ಧದಲ್ಲಿ ಸೋಲಾಯಿತಂತೆ! ಈಗ ನನ್ನ ಮುಂದಿರುವ ಯುದ್ಧದಲ್ಲಿ ನನಗೆ ಈ ಮಲ್ಲಿಗೆಯಮಾಲೆ ನೆನಪಾಗಿ ಸೋಲಾಗಲಿಕ್ಕಿಲ್ಲವೆಂದು ಕವಿತೆ ಬರೆದ ಆ ಕವಿಯನ್ನು ಮನಸ್ಸಿನಲ್ಲಿ ಸ್ಮರಿಸಿಕೊಂಡೆ. ಜಯ ಪತಾಕೆ ಖಂಡಿತ ನನಗೆ ಅನ್ನೋ ಫೋರ್ಸ್‌ನಲ್ಲೇ ಹೆಜ್ಜೆ ಮುಂದಿಟ್ಟೆ. ಮೊದಲ ದೃಷ್ಟಿಯಲ್ಲೇ ಜಯದ ಚಿಹ್ನ!

ದೊಡ್ಡ ಬಾಗಿಲು, ಕಿಟಕಿಯಲ್ಲಿ ಕಣ್ಣುಗಳಿಲ್ಲ! "ಜೈ ಬಜರಂಗಬಲಿ" ಎಂದೇ ಗೇಟು ತೆರೆದು, ಕಾಲರ್ ಸರಿಪಡಿಸಿ ಕಾಲ್‌ಬೆಲ್ ಒತ್ತಿದೆ. ಎದೆಯಲ್ಲಿ ಈಗ ಪೆಟ್ರೊಮ್ಯಾಕ್ಸ್‌ಗೆ ಕಡ್ಡಿ ಕೊರೆದು ಪಂಪ್ಮಾಡುವಾಗ ಫಕ್ ಫಕ್ ಅನ್ನುತ್ತೆ ಎದೆಯಲ್ಲಾ ಆಗುತ್ತಿದೆಯಲ್ಲ!

ಬಾಗಿಲು ತೆರೆದು ಹೇಮಾ ನಿಂತಾಗ ಅವಳ ರೇಶ್ಮೆ ಕೂದಲು ಬೆವರಿಗಂಟಿ ಹಣೆಯಲ್ಲಿ ಹರಡಿಕೊಂಡಿತ್ತು. ಓ...ಇದೆಲ್ಲ ನನ್ನ ಟಿಫಿನ್ನಿನ ತಯಾರಿ...ಬೆಳಿಗ್ಗಿನ ಕೋಪ? ಅವಳು "ಈಗ ಬಂದೆ" ಎಂದು ಒಳಕ್ಕೋಡಿದಳು. ನನ್ನ ಚಾಚಿದ ಕೈಗೆ ಅವಳು ಸಿಗಲೇ ಇಲ್ಲ!

ಒಳಗಿನಿಂದ ಕಾಗೆ, ಗುಬ್ಬಿ, ಕೋಳಿ ಒಟ್ಟು ಕೂಗಿದಂತೆ ಕೇಳಿದಾಗ ಕೈಯಲ್ಲಿದ್ದ ಸೇಬು, ಮಲ್ಲಿಗೆಯ ಮಾಲೆ ಕೈಯಲ್ಲಿ ಬಿಗಿಯಾಗಿ ಹಿಡಿದು ರೂಮಿನೊಳಕ್ಕೆ ಸೇರಿ ಬಾಗಿಲು ಭದ್ರಪಡಿಸಿಕೊಂಡೆ. ಸುಬ್ಬರಾಯನ ಸಂಸಾರ ಹೇಮಾನ್ನ ಹಿಡಿದಿದೆ! ಬೆವರು ತುಂಬಿದ ಮುಖ ಒರಸಿಕೊಂಡೆ. ಮುಖವೆಲ್ಲ ಅಂಟು ಅಂಟು. ಬಾತ್‌ರೂಮಿನಲ್ಲಿ ಹೋಗಿ ಸೋಪಿನ ನೊರೆಯಲ್ಲಿ ತೊಳೆದಿದ್ದರೆ... ಆ ಎಲ್ಲ ಕಣ್ಣುಗಳನ್ನು ದಾಟಿಯೇ ಹೋಗ್ಬೇಕು. ಅಲ್ಲೇನು ಕಾದಿದೆಯೋ? ಡ್ರೆಸ್ಸು ಬದಲಿಸಿ ಲುಂಗಿ ಸುತ್ತಿದೆ. ಹೇಮಾ ಬರಲಿಲ್ಲ. ಅರ್ಧ ಗಂಟೆ ತಡೆದು ಬಂದಳು.

"ಹ್ಯಾಗಿತ್ತು ನಿನ್ನ ಕಾನ್‌ಫರೆನ್ಸ್" ಎನ್ನಬೇಕೆಂದಿದ್ದೆ. ಆದ್ರೆ ಅವಳನ್ನ ನೋಡಿದ್ರೆ ಯುದ್ಧ ಮುಗಿಸಿಕೊಂಡು ಬಂದ ದಣಿವು.

ಹೇಮಾ ಸೆರಗಿನಲ್ಲಿ ಮುಖ ಒರಸಿ, ನನ್ನ ಪಕ್ಕದಲ್ಲಿ ಬಂದು ಕೂತು ಏದುಸಿರಿನಲ್ಲೇ ಅಲ್ಲಿ ಮಾತಾಡಿದ ಸ್ಪೀಡಿನಲ್ಲೇ ಇರ್ಬೇಕು–ಹೇಳಿಬಿಟ್ಟಳು: "ಅಬ್ಬಾ ಪುಟ್ಟ ಯುದ್ಧದಲ್ಲಿ ದಣಿವಾಯ್ತು ನಂಗೆ. ಎಲ್ಲ ಒಮ್ಮೆಲೇ ಬಂದುಬಿಟ್ರು...ನಾನೊಬ್ಳೆ...ಮನೇಲಿ ಅಷ್ಟು ಸಾಮಾನಾದ್ರೂ ಎಲ್ಲಿದೆ? ಅಲ್ದೆ ಅವರು ಒಬ್ರೇ ದೊಡ್ಡವರು ಎಂದ್ರೆ...ಉಳಿದ ಮೂವರೂ ನಂಗಿಂತ ದೊಡ್ಡವರು. ಅವರ ಧನಿ...ಅವರು ತಿನ್ನೋದು...ಊರಿಂದ ತಂದ ತಿಂಡಿ..."

"ಎಲ್ಲ ಖಲಾಸ್ ಅಲ್ವೆ?"

"ಹೂಂ."

ಹೇಮಾನ್ನ ಹತ್ತಿರಕ್ಕೆಳೆದು ಕೇಳಿದೆ: "ಒಂದೇ ದಿನದಲ್ಲಿ ಹೀಗಾದ್ರೆ ಮುಂದೆ ನಮ್ಮ ಗತಿ? ಅಲ್ಲಾ ನಾನು ಬಂದಿದ್ದೇನೆ ಎಂದಾಗ್ಲೂ..." ಬೆವತುಕೊಂಡ ಮುಖ ನೆನಪಾಯಿತು. ಮುಖ ತೊಳೆಯುವಾಗ ಬದುಕಿಕೊಂಡೆ ಎಂದೆ ಮನಸ್ಸಿನಲ್ಲಿ. ನಾಲ್ಕಾರು ಗಂಟೆ ಸುಬ್ಬರಾಯನ ಸಂಸಾರದೊಂದಿಗೆ ಮಾತಿನ ಯುದ್ಧ, ಅಲ್ಲಿ ಒಣ ಹರಟೆಯಲ್ಲಿ ನನ್ನೊಡನೆ ಆಗಬೇಕಾಗಿದ್ದ ಯುದ್ಧ ಮರೆತುಹೋಗಿತ್ತು, ಹೇಮಾಗೆ. ಸೇಬು ಕೈಯಲ್ಲಿ ಕೊಟ್ಟೆ. ಹೂವಿನ ಮಾಲೆ ಹಿಡಿದಾಗ ಅವಳೇ ಬಂದು ನನ್ನೆದುರು ನಿಂತಳು. ನಾನು

ಅವಳ ಕೈಯಲ್ಲಿ ಕೊಡಲು ಹೋದಾಗ "ಇಷ್ಟೂ ತಿಳಿಯೋದಿಲ್ವೆ? ಮತ್ಯಾಕೆ ತಂದದ್ದು ಈ ಮಾಲೆ?" ನನ್ನ ಮಂಕು ಬುದ್ಧಿಗೆ ನಾನೇ ಥೂ ಎಂದೆ. ಹೂ ಅವಳ ತಲೆಗೂದಲಲ್ಲಿ ಸಿಕ್ಕಿಸುವಾಗ ನಾಲ್ಕಾರು ಉದ್ದದ ಕೂದಲು ಕೈಯಲ್ಲೇ ಬಂತು. ಅವಳು, "ಅಯ್ಯೋ," ಎಂದಾಗ, "ನನಗೆ ಇದೆಲ್ಲ ಹೊಸ್ತು..." ಎಂದವಳ ಗಲ್ಲ ಚಿವುಟಿ "ಹೊಟ್ಟೆಯಲ್ಲಿ ಡೊಂಬರಾಟ...ನಂಗೆ ಒಂದಿಷ್ಟು ಉಳಿಸಿದಿಯಾ?" ಎಂದೆ. ಹೂವಮಾಲೆ ಇರಿಸಿದ ನನ್ನ ಕೈಯನ್ನೇ ಹೊಸಕಿ ಮುತ್ತಿಟ್ಟೆ. ಬರಿ ಇಂಗ್ಲಿಷ್ ಪುಸ್ತಕ ಓದಿದ, ಇಂಗ್ಲಿಷ್ ಪಿಕ್ಚರ್ ನೋಡಿದ ನನಗೆ ಹೂ ಮುಡಿಸೋ ಕ್ರಮ ಗೊತ್ತೇ ಇಲ್ಲ!

ಹೇಮಾ ಸುಬ್ಬರಾಯನ ಸಂಸಾರಕ್ಕೆ ಬರಿಯ ಊರಿಂದ ತಂದ ತಿಂಡಿಯನ್ನಷ್ಟೇ ಕೊಟ್ಟಿರಲಿಲ್ಲ. ಭರ್ಜರಿ ಉಪಚರಿಸಿದ್ದಾಳೆಂದು ಅವಳ ದಣಿದ ಮುಖದಲ್ಲೇ ಗುರುತಿಸಿದ್ದೆ. ಈಗ ನನ್ನೆದುರು ಬಂದ ತಟ್ಟೆಯೂ ಅದನ್ನೇ ಹೇಳಿತು.

ನಡುರಾತ್ರಿ ತಟ್ಟನೆ ಎಚ್ಚರಾಯ್ತು. ಹೇಮಾ ಎದ್ದು ಕೂತಿದ್ಲು. ಕಣ್ಣುಜ್ಜಿ ಅವಳ ಮುಖ ನೋಡಿದೆ ಕುಂಬಳಕಾಯಿಯಾಗಿದೆ ! "ಯಾಕೆ ಹೇಮಾ, ಹೆದರಿಕೊಂಡಿಯಾ ? ಕನಸಿನಲ್ಲಿ ಭೂತಗೀತ... ?" "ಭೂತಾನೂ ಇಲ್ಲ, ಗೀತಾನೂ ಇಲ್ಲ ...ನೀವು ನಂಗೆ ಪ್ರಾಮಿಸ್ ಮಾಡ್ಲಿಲ್ವಾ ? ಬೆಳಿಗ್ಗೆ ಹೊರಡುವಾಗ ಏನೆಲ್ಲ ಮಾಡ್ಬೇಕೆಂದು...ಬಾಗಿಲಲ್ಲಿ ನಿಮ್ಮನ್ನೆ ವಿಶ್ ಮಾಡಲು ನಿಂತ್ರೆ...ನೀವು ತಿರುಗಿಯೂ ನೋಡ್ದೆ ಹಾಗೇ ಹೊರಟುಹೋಗೋದೆ ?" ಇಷ್ಟು ಬೇಗ ನನ್ನ ಮುಖಾನೇ ನೋಡೋದಕ್ಕೂ ನಿಮ್ಗೆ ...

ಬೆಳಗಿನಿಂದ ಸಂಜೆಯ ವರೆಗೆ ಯಾವುದನ್ನು ಎದುರಿಸಬೇಕಾಗುತ್ತದೆಂದು ತಲೆ ಕರೆದುಕೊಂಡಿದ್ದೆನೋ ಸುಬ್ಬರಾಯನ ಸಂಸಾರದ ಗಲಾಟೇಲಿ ಮರೆತ ಮಾತು ಇವಳಿಗೆ ಮಧ್ಯರಾತ್ರಿಯಲ್ಲಿ ನೆನಪಾಗಿ...ಈಗ!

"ಹೇಮಾ ನೋಡಿಲ್ಲಿ, ಈಗ ಮಲಗಿಕೋ. ಬೆಳಿಗ್ಗೆ ಹೇಳ್ತೇನೆ. ನಾಳೆ ನಿನ್ನ ಪ್ರಾಮಿಸ್‌ನಂತೆ ತಪ್ಪದೆ ಮಾಡುತ್ತೇನೆ" "ಅದು ಸರಿ, ನೀವು ಮುಖ ತಿರುಗಿಸಿ ಹೋದದ್ದು ಯಾಕೆ? ನಾನು ಮಧ್ಯಾಹ್ನ ಊಟ ಕೂಡ ಮಾಡ್ಲಿಲ್ಲ. ಕಣ್ಣು ಕೆಂಪು ಯಾಕೆ? ತೌರು ಮನೆ ನೆನಪಾ? ಒಬ್ಬಬ್ರು ಒಂದೊಂದು ಪ್ರಶ್ನೆ ಕೇಳಿದ್ರು..." ಆ ಬೆಳಿಗ್ಗೆ ಆದುದನ್ನೆಲ್ಲ ಚುಟುಕಿನಲ್ಲಿ ಹೇಳಿ, ನಾನು ಅನುಭವಿಸಿದ ಬೇಸರವನ್ನು ಅದರಲ್ಲಿ ಸೇರಿಸಿ ಹೇಮಾನ್ನೇ ಕೇಳಿದೆ: "ಅಲ್ಲ ನೀನೂ ಹೇಳಿರಲಿಲ್ವೆ? ಸಂಜೆ ಬರೋವಾಗ ಬಾಗಿಲಲ್ಲೇ ನಿಂತು ತೋಳಿನ ಮಾಲೆ ನನ್ನ ಕೊರಳಿಗೆ ಹಾಕ್ತೇನೆ, ಹಾಗೆ ಮಾಡ್ತೇನೆ... ಹೀಗೆ ಮಾಡ್ತೇನೆ ಅಂತ ?"

"ಅವತೆಲ್ಲ ಒಳಗಿದ್ರು..." "ಅದೇ ನನಗೂ ಆದದ್ದು...ಇಬ್ಬರ್ದೂ ಸಮಾ ಆಯ್ತು... ನಾಳೆ ಇಬ್ರೂ ಪ್ರಾಮಿಸ್ ಕೀಪ್ ಅಪ್ ಮಾಡೋಣ..."

*

ಎರಡು ತಿಂಗಳಾಗಿದೆ, ಈ ಸುಬ್ಬರಾಯನ ಬಂಗ್ಲೆಯ ಒಂದು ವಿಂಗಿನಲ್ಲಿದ್ದು. ನಮ್ಮಿಬ್ಬರ ಬೆಳಗ್ಗಿನ ಹಾಗೂ ಸಂಜೆಯ ಪ್ರಾಮಿಸ್ ಕೀಪ್‌ಅಪ್ ಮಾಡಿಕೊಳ್ಳಲಾಗಲೇ ಇಲ್ಲ. ಯಾವಾಗಲೂ ಕಿಟಕಿ ಬಾಗಿಲು ಕಣ್ಣುಗಳಿಂದ ಭರ್ತಿ. ಸಂಜೆ ಯಾರಾದ್ರೂ ಒಬ್ರು ಇವಳೊಟ್ಟಿಗೆ ?!

ರಾತ್ರಿಯಲ್ಲೂ ತುಂಬ ಎಚ್ಚರಿಕೆಯಲ್ಲೇ ಇರ್ಬೇಕು. ಪ್ರತಿ ಮಾತು ಆ ಮನೆಗೆ ಕೇಳ್ತದೆ. ಬಾಗಿಲುಗಳಿಗೆ ರಂಧ್ರಗಳು! ನಾನು ಆಫೀಸಿನಿಂದ ಬರುವಾಗ ಹೇಮಾ ಸ್ಟೂಲು ಹತ್ತಿ ಬಾಗಿಲಿಗೆ ಏನೋ ಮಾಡುತಿದ್ಲು. "ಏನು ಮಾಡ್ತಿಯಾ?" ಎಂದೆ. "ಇನ್ನೇನು ಮಾಡ್ಲಿ? ಈ ತೂತಿನಿಂದ ನಮ್ಮ ರೂಮಿನಲ್ಲಿ ನಡೆಯೋದೆಲ್ಲ ಕಾಣ್ತದಂತೆ: ನಮಗೆ ಒಳ್ಳೆ ರೊಮ್ಯಾಂಟಿಕ್ ಪಿಕ್ಚರ್ ನೋಡಿದ ಹಾಗಾಗುತ್ತದೆ...ನಿಮ್ಮಿಬ್ರದ್ದೂ ಒಳ್ಳೆ ಪೇರ್' ... ಪ್ರತಿಭಾ ಹೇಳಿದ್ಲು."

"ಅಯ್ಯೋ ಗ್ರಹಚಾರವೇ!" ಎಂದು ಹಣೆ ಹಣೆ ಬಡಿದುಕೊಂಡೆ. "ಈಗೇನು ಮಾಡ್ತಿ ?" "ಮೇಣ ತುಂಬಿಸ್ತಾ ಇದ್ದೇನೆ" ಎಂದ್ಲು ಹೇಮಾ. "ಹುಚ್ಚಿ ಮೇಣ ಕಡ್ಡಿಯಿಂದ ಚುಚ್ಚಿದ್ರೆ ಮತ್ತೆ ಫ್ರಿ ಶೋ. ಕೇಳಕ್ಕಿಳಿ. ಕಟ್ಟಿಗೆ ಚೂರೇ ಅದಕ್ಕೆ ಗತಿ." ನನ್ನ ರಿಪೇರಿ ಕೆಲ್ಸ ಮುಗಿಸಿದೆ. ತಲೆಯಲ್ಲಿ ಸುಬ್ಬರಾಯನ ಸಂಸಾರ ಸುತ್ತುತ್ತಿತ್ತು.

ನಾನು ಕಾಣುವ ಆರು ಜೊತೆ ಕಣ್ಣುಗಳು ಸುಬ್ಬರಾಯನ ಮೊದಲ ಹೆಂಡ್ತಿಯ ಅಮೂಲ್ಯ ಸಂಪತ್ತು. ಎರಡನೆಯ ಹೆಂಡ್ತಿಯಲ್ಲಿ ಸಂತಾ-

ನ ಭಾಗ್ಯವಿಲ್ಲ. ನನ್ನ ಆಫೀಸಿನ ಪಕ್ಕದಲ್ಲಿದ್ದ ಎಲ್. ಐ. ಸಿ. ಯಲ್ಲಿ ದೊಡ್ಡವಳು ಪ್ರತಿಭಾ ಕೆಲ್ಸ ಮಾಡು ತ್ತಿರೋದು, ನಾನಿಲ್ಲಿ ಬಂದು ನಾಲ್ಕು ದಿನಕ್ಕೆ ಗೊತ್ತಾಗಿತ್ತು.

ಎರಡನೆಯವಳು ಪ್ರಭಾ. ಹೆಸರು ಸ್ವಭಾವ... ಹೇಮಾ ಹೇಳಿದ್ದು. ಅವರ ರೂಪ, ನನ್ನ ಕಣ್ಣು ಕಂಡದ್ದು, ಹಲ್ಲು ಸ್ವಲ್ಪ ಮುಂದು ಚಾಚಿದ್ದಕ್ಕೆ ಇರ್ಬೇಕು ಕಂಕಣಬಲ ಇನ್ನೂ ಕೂಡಿ ಬಂದಿರಲಿಕ್ಕಿಲ್ಲ. ಅವಳು ಕಾನ್ವೆಂಟ್ ಒಂದರಲ್ಲಿ ಪಾರ್ಟ್ ಟಾಯಿಂ ಟೀಚರ್!

ಇನ್ನೊಂದು ಪುರುಷದ್ವೇಷಿಯಂತೆ. ನನ್ನ ಕಂಡಾ ಗೆಲ್ಲ ಕಣ್ಣು ಕೆಕ್ಕರಿಸಿ ನೋಡುವಾಗ ಭಯ ಸಿಟ್ಟು ಒಟ್ಟಾಗಿ ಬಂದು ಇವಳದೇನು ಗಂಟು ತಿಂದದ್ದು ನಾನು ಎಂತ ಕೇಳಿಯೇಬಿಡಲೇ ಎಂದುಕೊಂಡಿ-ದ್ದೇನೆ ಎಷ್ಟೋ ಸಲ.

ಅಪ್ಪ ಎಂದುಕೊಂಡ ಸುಬ್ಬರಾಯ ಮಕ್ಕಳು ತಂದುಕೊಡುವ ಹಣ, ಪೆನ್‌ಶನ್ ಇಷ್ಟರಿಂದಲ್ಲೇ ಹಾಯಾಗಿದ್ದು, ಮಕ್ಕಳಷ್ಟೇ ಪ್ರಾಯದ ಹೆಂಡ್ತಿ ಜೊತೆಗೆ ಎರಡು ಹೊತ್ತು ವಾಕಿಂಗ್ ಮುಗಿಸಿ, ನಾನು ಆಫೀಸಿನಿಂದ ದಣಿದು ಬರುವಾಗ ಹೊರಗಿನ ವರಾಂಡದಲ್ಲಿ ಕೇನ್ ಚೇರಿನಲ್ಲಿ ಕೂತು ಪಟ್ಟಾಂಗ ಹೊಡೆಯುವಾಗ ಬೆಳೆದು ನಿಂತ ಹೆಣ್ಣುಗಳನ್ನು ಮನೇಲಿಟ್ಟು ಇವನೊಬ್ಬ ಯಯಾತಿಯಾಗಿ ದ್ದಾನೆ! ಸಂಜೆಯಲ್ಲಿ ಕಾಲಿಟ್ಟು ಅವನೊಂದಿಗೆ ಲಲ್ಲೆ ಹೊಡೆಯೋ ಹೆಂಡ್ತಿಯನ್ನು ಕಂಡಾಗ ಕನಿಕರವೆನಿಸಿ, ಮತ್ತೊಂದು ಕ್ಷಣ ಇದೆಲ್ಲ ನನಗ್ಯಾಕೆ ತಲೆನೋವು ಎಂದು ಹೇಮಾನ್ನ ಕಾಣಲು ಹೋದರೆ ಅಲ್ಲಿ ಮೂವರು ಕನ್ಯಾಮಣಿಗಳಲ್ಲಿ ಒಬ್ಬರು ಇರಲೇ ಬೇಕು.

ಒಂದು ದಿನ ಹೇಮಾಗೆ ಹೇಳಿದ್ದೆ. "ನಾನು ಬರೋ-ವಾಗ ನೀನೊಬ್ಬಳೇ ಇರ್ಬೇಕೆಂದು ಗೊತ್ತಾಗೋದಿಲ್ವೆ? ಒಂದಲ್ಲ ಒಂದು ಕಪಿ ಇಲ್ಲಿ ಇರುತ್ತೆ...ಮನೆ ಅಂತ ನಾನ್ಯಾಕೆ ಓಡಿ ಬರಬೇಕು?" ಅಂತ.

ಈ ದಿನ ನಾನು ಬರುತ್ತಲೂ ಹೇಮಾ ಎರಡೂ ತೋಳು ನನ್ನ ಕೊರಳ ಸುತ್ತು ಹಾಕಿ. "ಇವತ್ತು ನನ್ನ ಪ್ರಾಮಿಸ್ ನಡೆಸ್ತೀನಿ" ಎಂದಾಗ ನನಗೆ ಸ್ವರ್ಗ ಆ ಕ್ಷಣ ಕೈಗೆ ಬಂದಷ್ಟೇ ಖುಷಿಯಾಗಿತ್ತು. ಅಷ್ಟೇ ರಭಸದಲ್ಲಿ ಅವಳನ್ನ ಎದೆಗವಚಿ ಕೆನ್ನೆ ತುಂಬ ಮುತ್ತಿನ ಮಳೆಗರೆದೆ. ತಟ್ಟನೆ ಎಚ್ಚರವಾಗಿ, "ಎಲ್ಲಿ ನಿನ್ನ ಲವರ್ಸ್?" ಎಂದೆ. ಅವಳು ಕೆನ್ನೆ ಒರಸಿ "ಹೂಂ...ಇವತ್ತು ಯಾರೂ ಬರೋಹಾಗಿಲ್ಲ. ಬನ್ನಿ ಹೇಳುತ್ತೇನೆ", ಎಂದು ಬಾಗಿಲು ಭದ್ರಪಡಿಸಿ, "ಅರ್ಧ ಗಂಟೆಯ ಹಿಂದೆ ದೊಡ್ಡ ರಾಮಾಯಣ, ಎರಡನೆಯ ಪ್ರಭಾ ಇಲ್ವಾ...ಅವಳ ಜೊತೆಯಲ್ಲಿ ಕಲಿಸೋ ಟೀಚರ್ ಜೋಸೆಫ್ ಅಂತ. ಅವನ್ನ ಮದುವೆ ಮಾಡ್ಕೋತೇನೆ ಎಂದು ಪಟ್ಟು ಹಿಡದು-ದಕ್ಕೆ ಮುದುಕ ಎಷ್ಟು ಹೊಡೆದುಬಿಟ್ಟ ಗೊತ್ತಾ? ನಂಗೆ ಕಣ್ಣಿಂದ ನೋಡೋದಕ್ಕೆ ಆಗ್ಲಿಲ್ಲ. ಮಲ ತಾಯಿ ಅಲ್ಲೇ ಇದ್ರೂ, ':ಹಾಗೆ ಹೊಡೆಯಬೇಡಿ ಸಮಾಧಾನದಿಂದ ತಿಳಿಸಿಹೇಳಿ' ಎನ್ನಬಾರದೇ? ಮದುವೆ ಮಾಡೋಹಾಗಿಲ್ಲ...ಎಷ್ಟು ವರ್ಷಾಂತ ಹೆಣ್ಣು ಮನೇಲಿರಬೇಕು? ನಾನು ಅವರ ಲೆಕ್ಕಕ್ಕೆ ಎಷ್ಟು ಚಿಕ್ಕೋಳು! ದಿನಾಲೂ ಅವರೆಲ್ಲ ಬಂದು ಮಾತಾಡೋದು ಏನು ಗೊತ್ತಾ ? ಬರೀ ನಮ್ಮಿಬ್ರ ಅನುಭವ ಹೇಳಿ ಹೇಳಿ ಅಂತಾರೆ...ನಾನು ಹ್ಯಾಗೆ ಹೇಳ್ಲಿ?"

ನನಗೆ ತೀರ ಕಸಿವಿಸಿಯಾಗಿತ್ತು. ಇವೊತ್ತು ಅವರಾರೂ ಇಲ್ಲಿಲ್ಲ. ತಮಗಿಲ್ಲದ ಯಾವುದೋ ವಿಷಯದಲ್ಲಿ ಮಾತ್ನಾಡಿ ಅಷ್ಟರಲ್ಲೇ ತೃಪ್ತಿ.

ಎರಡು ದಿನದ ಹಿಂದೆ ಹೋಟೇಲ್ ಮಹಲಿಗೆ ಹೋಗಿದ್ದೆ. ಅಲ್ಲಿ ಪ್ರತಿಭಾ ತನ್ನ ಸಹೋದ್ಯೋಗಿ ಇರ್ಬೇಕು...ನಗುತ್ತ ತಿಂಡಿ ತಿನ್ನುತಿದ್ರು. ನನ್ನ ಕಂಡ ಕೂಡ್ಲೇ ಪ್ರತಿಭಾ ಒಂದು ಕ್ಷಣ ಬೆಚ್ಚಿಬಿದ್ದಂತಾಗಿ ಕಂಡಳು. ಎರಡು ನಿಮಿಷ ಬಿಟ್ಟು ನೇರಾಗಿ ನನ್ನ ಟೇಬಲ್ಲಿಗೆ ಬಂದು "ನೋಡಿ ವಸಂತ...ನನ್ನ ಕ್ಷಮಿಸಬೇಕು...ನಿಮ್ಮ ಹತ್ರ ಹೇಳಿಕೋತೇನೆ. ನಮ್ಮ ಮನೆಯ ವಿಷಯ ನಿಮ್ಗೆ ಅಷ್ಟು ಸರಿಯಾಗಿ ಗೊ-ತ್ತಿಲ್ಲ. ನನ್ನ ಫಾದರ್‌ಗೆ ಇದನ್ನು ಹೇಳ್ಬೇಡಿ... ನೀವು ನನ್ನ ಬ್ರದರ್ ಇದ್ದಹಾಗೆ...ಇವರನ್ನು ನಾನ ಲವ್ ಮಾಡ್ತೇನೆ. ಸಧ್ಯದಲ್ಲೇ ನಾವು ಮದುವೆ ಮಾಡ್ಕೋತೇವೆ. ನನ್ನ ತಪ್ಪು ತಿಳಿದುಕೋಬಾರ್ದು ನೀವು..." ಎಂದು ಅಂಗಲಾಚಿದಳು. ನಾನು "ಇಲ್ಲ". ಎಂದೆ. ಹುಡುಗಿ ಹೋಗಿ ಮತ್ತೆ ಅಲ್ಲೇ ಕೂತಳು. ಇವೊತ್ತು ನಾವಿಬ್ಬರೆ! ಇಷ್ಟು ಸಮಯದ ಮೇಲೆ ನಾನು ಕೈಗೆ ಸಿಕ್ಕದ್ದಕ್ಕೆ ಹೇಮಾಗೆ ಖುಷಿಯೋ ಖುಷಿ! ಸ್ಕೂಟರಿನಲ್ಲಿ ಕೂತು

ಗಾಳಿಗಿಂತಲೂ ಜೋರಾಗಿ ಹರಟುತಿದ್ಲು.

ಬೆಳಿಗ್ಗೆ ನಾನು ಶೇವ್ ಮಾಡಿಕೊಳ್ತಿದ್ದೆ. ಹೇಮಾ ಸ್ನಾನಕ್ಕೆ ಹೋಗಿದ್ಲು. ಪೋಸ್ಟ್ ಬಂತು. ಒಂದೊಂದಾಗಿ ನೋಡಿದೆ. ಒಂದು ಹೇಮಾಗೆ ಅವಳ ತಂಗಿ ಪ್ರೇಮಾದ್ದು...ಇನ್ನೊಂದು, ಅಪರಿಚಿತ ಕಾಗದ ನನ್ನ ಹೆಸರಿಗೆ! ಒಡೆದೆ. ಮೊದಲ ಸಾಲೇ ಕ್ಷಮಾಯಾಚನೆ. 'ನನ್ನ ಪರಿಚಯವಿದೆ...ಆದರೆ ಅಕ್ಷರಗಳಿದಲ್ಲ. ನಾನು ಧೈರ್ಯಮಾಡಿ ಈ ಕಾಗದ ಬರೆಯುತ್ತಿದ್ದೇನೆ. ನಮ್ಮ ತಂದೆಗೆ ನಮ್ಮ ಮದುವೆ ಮಾಡುವ ಚಿಂತೆಯೂ ಇಲ್ಲ...ಯೋಚನೆಯೂ ಇಲ್ಲ, ವರದಕ್ಷಿಣೆ ಕೊಡುವ ಮನಸ್ಸಿಲ್ಲ. ಖರ್ಚು ಮಾಡಿ ಮದುವೆ ಮಾಡಿ ಎನ್ನುವ ಅಮ್ಮನೂ ಇಲ್ಲ. ಚಿಕ್ಕಮ್ಮನ ಕಿರುಕುಳದಲ್ಲಿ ಮನಸ್ಸು ಬೇಜಾರುಗೊಂಡಿದೆ. ಅಕ್ಕಂದಿರಿಬ್ಬರು ನೌಕರಿಯ ಬೆನ್ನು ಹಿಡಿದಿದ್ದಾರೆ. ನನಗೆ ಇವರೆಲ್ಲರಿಗೂ ಅಡಿಗೆ ಮಾಡಿ ಬದುಕೇ ಬೇಡವಾಗಿದೆ. ನಾನು ಪುರುಷದ್ವೇಷಿ ಎಂದು ಆಗಾಗ ಎಲ್ರೂ ಗೇಲಿ ಮಾಡ್ತಾರೆ. ಹೌದು. ಸಿಹಿ ದ್ರಾಕ್ಷಿ ಸಿಕ್ಕೋದಿಲ್ಲ...ಹುಳಿ ಎನ್ನದೆ ಏನು ಮಾಡಲಿ? ಆದರೆ ಈಗ ನೀವು ಹೇಮಾ ಜೊತೆಯಲ್ಲಿ ಕಳೆಯುವ ದಿನಗಳು...ನಿಮ್ಮ ನಗು ಪ್ರೀತಿ, ನನಗೆ ಬದುಕಿನಲ್ಲಿ ಆಸೆ ಹುಟ್ಟಿಸಿದೆ. ನಿಮ್ಮ ಒಡಹುಟ್ಟಿದ ತಂಗಿ ಎಂದು ತಿಳಿದು, ನಿಮ್ಮ ಸ್ನೇಹಿತರಲ್ಲಿ... ನಿಮ್ಮ ಗುರುತಿನಲ್ಲಿ ನನಗೊಂದು ಗಂಡು ಹುಡುಕಿ ...ಈ ನರಕದಿಂದ ಪಾರು ಮಾಡುತ್ತೀರಾ?-• ಪ್ರೇಮಾ,

ಪ್ರೇಮಾ–ಸುಬ್ಬರಾಯನ ಚಿಕ್ಕ ಮಗಳು. ದಿನಾಲೂ ಹೇಮಾಗೆ ಮಾರ್ಕೆಟು... ಅಡಿಗೆಯಲ್ಲಿ ಹೊಸ ಹೊಸ ವಿಧಾನ ಕಲಿಸುವ ನಿಪುಣೆ. ಹಾಗಾದ್ರೆ ಅವಳು ಪುರುಷದ್ವೇಷಿಯಲ್ಲ!. ಮದುವೆ...ಗಂಡ ಎಂದು ಮೂರು ಹೆಣ್ಣುಗಳ ನಿಟ್ಟುಸಿರು ಈ ಬಂಗ್ಲೆಯ ಗೋಡೆ. ಕಿಟಕಿಯಲ್ಲಿ ಕೂಗಿಕೊಳ್ಳುತ್ತಿದೆ. ಎಲ್ಲೋ ಓಡುತ್ತಿರೋ ಮನಸ್ಸು...ರೇಜರ್ ಎಳೆದೆ. ಹೇಮಾ, "ಇದೇನು ನೆತ್ತರು!" ಗಾಬರಿಯಲ್ಲಿ ಕೇಳಿದಳು. ಹೇಮಾನ್ನ ನೋಡಿದೆ. ಅವಳ ಸುತ್ತೂ ಮೂರು ಹೆಣ್ಣುಗಳು ಅವಳಿಗೆ ಸಿಕ್ಕುವ ಸುಖಕ್ಕಾಗಿ ಪತಂಗದಂತೆ ಹಾರಾಡುತ್ತಿರುವುದು ಕಾಣುತ್ತದೆ. "ಯಾಕೆ ಏನಾಗಿದೆ?" ಹೇಮಾ ತೀರ ಹತ್ತಿರಕ್ಕೆ ಬಂದು ನೆತ್ತರು ಒರಸುತ್ತಿದ್ದಾಗ ಉರಿಯೋದು ಗೊತ್ತಾಗಿ, "ಏನಿಲ್ಲ ಸ್ವಲ್ಪ ಬ್ಲೇಡ್ ತಾಗಿರಬೇಕು. ಯಾಕಷ್ಟು ಗಾಬರಿಯಾಗ್ತಿ ?" "ಸ್ವಲ್ಪ ಅಂತೆ...ನಾಳೆ ಸೆಪ್ಟಿಕ್ ಆದ್ರೆ?" ಅಷ್ಟರಲ್ಲಿ ಅದೇ ಬಂದ ಪೋಸ್ಟ್‌ನ ನೆನಪಾಯ್ತು...ಕಾಗದ ಅವಳ ಕೈಗಿತ್ತೆ.

ಆಫೀಸಿನ ಫೈಲುಗಳನ್ನು ಬಿಡಿಸಿದಾಗಲೂ ನನ್ನ ಕಣ್ಣು ಹೋಟೆಲಿನಲ್ಲಿ ಪ್ರತಿಭಾನೊಂದಿಗೆ ಇದ್ದ ತರುಣ. ಪ್ರಧಾನ ಬಾಯ್ ಫ್ರೆಂಡ್ ಜೋಸೆಫ್, ಪ್ರೇಮಾನಿಗಾಗಿ ಹುಡುಗ ಎಲ್ಲಿ ಎಂದು ಹುಡುಕುತಿತ್ತು. ಏನೋ ಮುಜುಗರ... "ಯಾಕಯ್ಯ ಏನೋ ಭ್ರಮೆಯಲ್ಲಿ ಇದ್ದಹಾಗಿದೆಯಲ್ಲ! ಗಲ್ಲಕ್ಕೆ ರೇಜರ್ ತಾಗಿಸಿಕೊಂಡು ಗಾಯ ಮಾಡಿಕೊಂಡಿದ್ದ...ಇಲ್ಲಿ ಫೈಲುಗಳು ತೆಪ್ಪಗೆ ಕೂತುಬಿಟ್ಟಿವೆ ...ಮೇಮ್ ಸಾಹೇಬ್ರು?"

"ಅವಳೆಲ್ಲಿದ್ದಾಳೆ? ಆಗಲೇ ಅವಳ ಅಪ್ಪಯ್ಯನ ತಂಗಿಗೆ ಸಿಕ್ಸಾಯಿತು ಎಂದು ಕರೆದುಕೊಂಡು ಹೋಗಿ ಆಯ್ತು ಇನ್ನೂ ಒಂದು ವಾರವೆಲ್ಲ ಇಲ್ಲಿಯ ಮಾವನ ಮನೆಯೆ ಗತಿ."

"ಓಹೋ ಆದಕ್ಕೆ ಈ ಸಂನ್ಯಾಸವೇ" ದಿನೇಶ ನಕ್ಕು ಹಾಗೆ ಮುಂದಕ್ಕೆ ಹೋದ.

ಮನಸ್ಸು ಈ ಅಸಹಾಯಕ ಹೆಣ್ಣುಗಳ ನೆನಪಿನಲ್ಲಿ ತುಂಬಿಕೊಂಡಿತ್ತು. ಮಧ್ಯಾಹ್ನ ಊಟಕ್ಕೂ ಮನಸ್ಸಾಗಲಿಲ್ಲ. ಹೇಮಾ ಇಲ್ಲದ ಮನೆಗೆ ಹೋಗಲೂ ಒಪ್ಪದ ಕಾಲುಗಳನ್ನು ಎಳೆದುಕೊಂಡೇ ಮನೆಯ ಮೆಟ್ಟಿಲೇರಿದೆ. ಇಡೀ ಮನೆ ಕತ್ತಲು! ಮನಸ್ಸೇ ಕತ್ತಲು ಕವಿದಿತ್ತು. ಹೆಣ್ಣಿನ ಕೈಯಲ್ಲಿ ಇಷ್ಟೊಂದು ಅಸಹಾಯಕವಾಗಬೇಕೇ ಎಂದಿತು ನನ್ನೆದೆ. ಹೋಗಿ ಖುರ್ಚಿಯಲ್ಲಿ ಕುಕ್ಕರಿಸಿದೆ.

ಥೂ ಏಳಬೇಕು. ತೀರ ಬಲಹೀನ ...ಕೈಕಾಲು ...ಇಡೀ ದೇಹವೇ ಸ್ಟ್ರೈಕ್ ಮಾಡಿದ ಹಾಗೆ ನಿರ್ಜೀವ! ಹೇಮಾ ಎದುರಿನಲ್ಲಿ ಕೂತು ನಗುತ್ತಿದ್ದಾಳೆ.

ಬಾಗಿಲು ತಟ್ಟಿತು. ಹೊರಗಿನ ಸ್ವಿಚ್ ಒತ್ತಿದೆ. ಬೆಳಕಾಯಿತು. ಬಾಗಿಲು ತೆರೆದೆ ...ಸುಬ್ಬರಾಯನ ಹೆಂಡ್ತಿ! ತಟ್ಟೆಯಲ್ಲಿ ಏನೋ ಇತ್ತು. ನನಗೆ ಸಂಕೋಚ...ಇಷ್ಟು ಸಮಯವಾಗಿದ್ರೂ ನಾನಾಗಿಯೆ ಮಾತಾಡಿಸಿರಲಿಲ್ಲ. "ಬನ್ನಿ" ಎಂದೆ. ಅವರು ಒಳಕ್ಕೆ ಬಂದರು. "ಹೇಮಾ ಊರಿಗೆ ಹೋದ್ಮೇಲೆ

ನೀವು ಎರಡು ದಿನಾನೂ ಮನೆಗೆ ಬಂದ ಹಾಗೇ ಕಾಣಲಿಲ್ಲ…ಈಗ ಬೆಳಕು ನೋಡಿದೆ…ಅದಕ್ಕೆ ಬಿಸಿ ಅಡಿಗೆ ಇತ್ತು…ತಂದೆ… ಊಟ ಮಾಡಿ…"

ಉಪಚಾರಕ್ಕೆ ಮಾತು ಆಡಲೇಬೇಕು. "ಇದೆಲ್ಲ ಯಾಕೆ ತಂದದ್ದು? ಸುಮ್ನೆ ತೊಂದರೆ ತಕ್ಕೊಂ-ಡದ್ದು…" ಊಟದ ತಟ್ಟೆ ತಕ್ಕೊಂಡೆ. ಮಲಮಕ ಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲವೆಂದು ಹೇಮಾ ಹೇಳಿದ್ದು ನೆನಪಿಗೆ ಬಂತು. ಇನ್ನು ಇಲ್ಲೆ ನಿಂತರೆ ಏನು ಮಾಡಲಿ? ಎಂದು ಯೋಚಿಸುವಾಗ್ಲೇ "ನಾನು ಬರ್ತೀನೆ," ಎಂದು ಹೋಗಿಬಿಟ್ಟರು.

ನಾನು ಉಸಿರು ಬಿಟ್ಟೆ. ಬಟ್ಟೆ ಬದಲಾಯಿಸಿ, ಮುಖ ತೊಳೆದು ತಟ್ಟೆ ಎದುರಿಟ್ಟು ಊಟಕ್ಕೆ ಕೈ ಇಟ್ಟೆ. ಹೊರಗೆ ಮತ್ತೆ ಬಾಗಿಲು ತಟ್ಟಿತು. ಬಾಗಿಲು ತೆರೆದೆ. ಹಾಲಿನ ಲೋಟಾ ಕೈಯಲ್ಲಿ ಹಿಡಿದು ಅವರೇ ಒಳಕ್ಕೆ ಬಂದರು. . "ಛೇ ಇದೇನು… ಇಷ್ಟೇ ಹೆಚ್ಚಾಯಿತು!" ನನಗೆ ತೀರ ದಾಕ್ಷಿಣ್ಯವಾ ಯಿತು. ನನ್ನ ಮಾತೆ ಕಿವಿಗೆ ಹಾಕಿಕೊಳ್ಳದೆ ಅವರು ನನ್ನ ತಟ್ಟೆಯ ಸಮೀಪದಲ್ಲಿಟ್ಟು "ಈಗ ಊಟ ಮಾಡಿ" ಎಂದು ಹೇಳಿದಾಗ ಅವರ ಅಂತಃಕರಣಕ್ಕೆ ನನಗೆ ಮಾತೇ ಬಾರದಾಯಿತು.

ತಟ್ಟನೆ ನನ್ನ ಮೇಲೆ ಏನೋ ಭಾರವಾದ ವಸ್ತು ಬಿದ್ದಂತಾಗಿ, ನಾನು ಏನು ? ಎಂದು ಯೋಚಿಸೋ ಮೊದಲೇ ಸುಬ್ಬರಾಯನ ಹೆಂಡ್ತಿ ನನ್ನ ಬಲವಾಗಿ ಹಿಡಿದು ಮುತ್ತಿಟ್ಟು ಬಿಟ್ಟಾಗ ನಾನು ಎಂಜಲುಗೈಯನ್ನು ಮರೆತು ಜೋರಿನಲ್ಲಿ ಆಚೆ ತಳ್ಳಿಬಿಟ್ಟೆ. ಬಾಗಿಲಿಗೆ ಆಕೆಯ ತಲೆ ತಾಗಿತೋ ಏನೋ, ನಾನು ಹಾಗೇ ಮನೆಯ ಹೊರಕ್ಕೋಡಿದೆ. ಇದೆಲ್ಲ ಒಂದು ಕ್ಷಣದಲ್ಲಿ ಆದದ್ದು. ಮೈಯಲ್ಲ ಥರ ಥರ ನಡುಕ! ಬೆಂಕಿ…ಬೆಂಕಿ ! ಎದೆ, ಮೈ ಧಗಧಗ ಉರಿಸಿದಂತೆ…ನನಗೆ ನಿಂತ ನೆಲವೇ ಗಿರಿಗಿರಿ ತಿರುಗಿದಹಾಗೆ…ಇದೇನಾಯಿತು? ಎಂದು ಆ ಕ್ಷಣ ತಿಳಿಯಲೇ ಇಲ್ಲ. ಎಲ್ಲೆಲ್ಲೋ ಸುತ್ತಿದೆ. ನಡುರಾ-ತ್ರಿಯಲ್ಲಿ ಮನೆ ಮುಟ್ಟಿದೆ…ಬಾಗಿಲು ಹಾಗೇ ಓರೆ ಮಾಡಿತ್ತು. ದೂಡಿ ಒಳಕ್ಕೆ ಹೆಜ್ಜೆ ಇಡಲೂ ಹೆದರಿಕೆ. ಲೈಟು ಹಾಕಿ ಇಡೀ ಮನೆಯಲ್ಲಾ ನೋಡಿದೆ. ನಿದ್ದೆಯಲ್ಲೂ ಎರಡು ಮೂರು ಬಾರಿ ಬೆಚ್ಚಿಬಿದ್ದಿದ್ದೆ.

ಬೆಳಿಗ್ಗೆ ಜೋರಾಗಿ ಬಾಗಿಲು ತಟ್ಟಿದಾಗ ನಾನು ಏಳುವ ಮನಸ್ಸಿಲ್ಲದೇ ಎದ್ದೆ. ದಿನೇಶ ಬರ್ತೀನೆಂದು ಹೇಳಿದ್ದ. ರಾತ್ರಿಯ ನೆನಪಿನಿಂದಾಗಿ ಮನಸ್ಸಿನ ಕಹಿಯೆಲ್ಲ ನಾಲಿಗೆಯನ್ನು ಕಹಿಯಾಗಿಸಿತ್ತು.

ಬಾಗಿಲು ತೆರೆದೆ…ಕಂಡದ್ದು ದೊಣ್ಣೆ ಹಿಡಿದು ನಿಂತ ಸುಬ್ಬರಾಯ! "ಏನು ಮಿಸ್ಟರ್? ಮನೆ ಕೊಡುವಾಗ್ಲೆ ಎಚ್ಚರಿಕೆ ಕೊಟ್ಟಿದ್ದೆ. ಯಾವ ಧೈರ್ಯ-ದಲ್ಲಿ ನಮ್ಮ ಮಿಸೆಸ್ ಅವರ ಮೈ ಮುಟ್ಟಿದ್ದು? ಅವರು ಬಿಡ್ಲಿಲ್ಲ ಅಂತ ಹಣೆ ಒಡೆದುಹೋಗೋ ಹಾಗೆ ದೂಡಿ ಹಾಕಿದ್ದು…ಯು ರಾಸ್ಕಲ್…ನಾನು ಪೋಲೀಸ್ ಕಂಪ್ಲೇಂಟ್ ಕೊಡ್ತೇನೆ. ನಾಚಿಕೆ ಬರೋ ದಿಲ್ವೆ? ಈಗಿಂದೀಗ ನನ್ನ ಮನೆ ಖಾಲಿಮಾಡಿ…"

ನಾನು ಹೆಚ್ಚು ಮಾತಾಡಲಿಲ್ಲ. "ಯು ಶಟ್ ಅಪ್. ಹೆಚ್ಚು ಮಾತಾಡಬೇಡಿ" ಎಂದೆ…ಸುಬ್ಬ ರಾಯ ಹೊರಟುಹೋದ.

ನಾಲ್ಕು ದಿನಕ್ಕೆ ಹೇಮಾ ಬಂದಳು. ಸ್ಟೇಶನ್ನಿನಿಂದ ಕರ್‍ಕೊಂಡು ಬಂದು ನೇರವಾಗಿ ಹೋಟೆಲ್ ವೈಶಾಲಿ ಯಲ್ಲಿ ಇಳಿಸಿದೆ. ಹೇಮಾ ಪಿಕಿಪಿಕಿ ನೋಡಿ, "ಇಲ್ಲಿ ಯಾಕೆ? ಅಮ್ಮ ಡಬ್ಬಿ ತುಂಬ ತಿಂಡಿ ಕಳ್ಸಿದ್ದಾಳೆ… ಮನೆಗೇ ಹೋಗೋಣ…ಒಂದೇ ಕ್ಷಣದಲ್ಲಿಯೇ ಟೀ ರೆಡಿ ಮಾಡ್ತೇನೆ. ಸುಮ್ನೆ ಖರ್ಚು…" ಎಂದಾಗ,

ನನ್ನ ಸಿಟ್ಟು ಇನ್ನೂ ಆರಿರಲಿಲ್ಲ. "ನಿಂಗೆ ಮನೆ ಬೇಕೋ…ನಾನೋ ?" ಎಂದೆ, ಅವಳು ಇದೇನು ಒಗಟು ? ಎಂದುಕೊಂಡು "ನೀವು" ಎಂದಳು. "ಹಾಗಾದ್ರೆ ಸಧ್ಯ ಈಗ ಇದೇ ಮನೆ!" ಎಂದೆ. ಅಷ್ಟರಲ್ಲಿ ಹೋಟೆಲ್ ಹುಡುಗ ಬಂದು "ಏನು ತರಲಿ?" ಎಂದ. ✡

(ಇದು ನಮ್ಮ ದೀಪಾವಳಿ ಸಂಚಿಕೆಗೆ ಅನುಮೋದಿತ ಕಥೆ)

ಉಗ್ರಾಣ

* ಸಿದ್ಧಯ್ಯ ಪುರಾಣಿಕ

ನಿನ್ನಂತೆ ಪುಣ್ಯಗೈದವರುಂಟೆ ಈ ದೇಶದಲ್ಲಿ
ಓ ಉಗ್ರಾಣವೆ—?
ಸರಕಾರ ಕೊಂಡ ಕಾಳು,
ವಿಶ್ವವಿದ್ಯಾಲಯುಗಳ ಮಾರದ ಪುಸ್ತಕಗಳು,
ಕಾಳಸಂತೆಯ ಸರಕು,
ಕಳ್ಳಸಾಗಾಣಿಕೆಯ ಎಲ್.ಎಸ್.ಡಿ., ಹಷಿಷು,
ಎಲ್ಲವುಗಳ ಆಶ್ರಯಸ್ಥಾನವೆ ?!
ಯಾರಿಗಿಲ್ಲದಿದ್ದರೂ ನಿನಗಿವೆ ಎಲ್ಲವೂ—
ಕಾಳೂ, ಬೇಳೆಯೂ, ಬೆಲ್ಲವೂ !
ಹಸಿದವರ ಹೊಟ್ಟೆ ಬರಿದಾಗಿದ್ದರೇನಂತೆ—
ನಿನ್ನ ಹೊಟ್ಟೆ ಪುಟ್ಟಪೂರ ಭರ್ತಿ !
ಹಸಿದವರ ವರೆಗೆ ಹರಿದು ಹೋದರೆ ಕಾಳು
ನಿನಗೆಲ್ಲಿ ಸದಾ ಭರ್ತಿಯಿರುವ ಕೀರ್ತಿ ?
ಇರುವೆ ತಿನ್ನಲಿ, ಇಲಿ ತಿನ್ನಲಿ, ಹೆಗ್ಗಣ ತಿನ್ನಲಿ—
ಎರಡು ಗೇಣಿನ
    ಹರಿದಾಡುವ ಹೆಗ್ಗಣ ತಿನ್ನಲಿ,
ಎಂಟು ಗೇಣಿನ
    ನಡೆದಾಡುವ ಹೆಗ್ಗಣ ತಿನ್ನಲಿ,
ಹಸಿದವ ಮಾತ್ರ ತಿನ್ನದಿರಲಿ—
ಅವನಿಗೆ ಮರಣ ಬಂದರೂ ಬರಲಿ !
ಗೋದಾಮು ತುಂಬಿ ಹೊರಸೂಸುತ್ತಿದ್ದರೆ ಸಾಲದೆ ?
ಅದರ ಕಾಳು ಹಸಿದವರಿಗೆ ಮುಟ್ಟಲೇಬೇಕೆಂದು
                ಎಲ್ಲಿದೆ ಕಾಯಿದೆ ?
ಕೂಡಿಟ್ಟ ಕಾಳನ್ನು ಕೋಟಿ ಕೋಟಿ ಹಸಿದವರು
ತಿಂದು ಭಸ್ಮ ಮಾಡಿದರೆ ಯಾರಿಗೆ ಫಾಯಿದೆ ?
ಕೃಷಿಗೀಯಲೇಬೇಕೇನು ಚುನಾವಣೆಯ ಫಾಯಿದೆ ?
...   .
ಅಂತೂ, ನಿನ್ನಂಥ ಪುಣ್ಯವಂತರಿಲ್ಲ
            ಈ ದೇಶದಲ್ಲಿ
                ಓ ಉಗ್ರಾಣವೆ—
ಎಲ್ಲರ ಹೊಟ್ಟೆಗಳಿಗೆ, ತಲೆಗಳಿಗೆ ಬೇಕಾಗುವ
ಎಲ್ಲವುಗಳ ಆಶ್ರಯಸ್ಥಾನವೆ !

(ನಮ್ಮ ದೀಪಾವಳಿ ಸಂಚಿಕೆಯ ಆಮಂತ್ರಿತ ಕವನ)

168-7



ವಿದ್ಯಾ ಬುದ್ಧಿದಾಯಿನಿ ಸರಸ್ವತಿ ಭಾರತದ ಅತಿ ಪ್ರಾಚೀನ ಹಾಗೂ ಅತ್ಯಂತ ಜನಪ್ರಿಯ ದೇವತೆ. ಹಿಂದೂಗಳಲ್ಲಿ ಮಾತ್ರವಲ್ಲದೆ ಜೈನ, ಬೌದ್ಧ, ಶಾಕ್ತರಲ್ಲೂ ಸರಸ್ವತಿಯ ಆರಾಧನೆ ಸಾಮಾನ್ಯ ಎಂಬ ವಿಚಾರ ಈ ದೇವತೆಯ ಸರ್ವಜನಪ್ರಿಯತೆಗೆ ನಿದರ್ಶನ.

ಪ್ರಥಮವಾಗಿ ಸರಸ್ವತಿಯ ಕುರಿತು ಉಲ್ಲೇಖ ದೊರಕುವುದು ಋಗ್ವೇದದಲ್ಲಿ. ಇಲ್ಲಿ ಸರಸ್ವತಿಯನ್ನು ಒಂದು ನದಿ ಎಂಬುದಾಗಿ ವರ್ಣಿಸಲಾಗಿದೆ. ವೈದಿಕ ಸಾಹಿತ್ಯದಲ್ಲಿ ಉಲ್ಲೇಖಿತವಾದ ಸರಸ್ವತಿ ನದಿಯ ಕುರಿತು ವಿದ್ವಾಂಸರಲ್ಲಿ ಒಮ್ಮತವಿಲ್ಲ. ಋಗ್ವೇದದಲ್ಲಿ ಸರಸ್ವತಿ ನದಿಯನ್ನು "ನದೀತಮಾ" "ಉತ್ತರಾಸಖಿಭಯುಃ" ಎಂದು ವಿವರಿಸಲಾಗಿದೆ. ಖ್ಯಾತ ವಿದ್ವಾಂಸರಾದ ಜಿಮ್ಮರ್, ರೋತ್, ಕೆ.ಸಿ. ಚಟ್ಟೋಪಾಧ್ಯಾಯ ಮುಂತಾದವರು ಋಗ್ವೇದದಲ್ಲಿ ಹೇಳಲಾದ ನದಿ ಸಿಂಧೂ ನದಿಯೇ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಮ್ಯಾಕ್ಸ್‌ಮುಲ್ಲರ್‌ರವರು ಋಗ್ವೇದ ಕಾಲದಲ್ಲಿ ಸರಸ್ವತಿ ಎಂಬ ಒಂದು ಬೃಹತ್ ನದಿ ಅಸ್ತಿತ್ವದಲ್ಲಿತ್ತು, ಕಾಲಕ್ರಮದಲ್ಲಿ ಕೆಲ ಭೌಗೋಳಿಕ ಕಾರಣಗಳಿಂದಾಗಿ ಈ ನದಿ ಕಣ್ಮರೆಯಾಯಿತು, ಎಂದು ವಾದಿಸಿದ್ದಾರೆ. ಅದೇನೇ ಇರಲಿ, ವೈದಿಕ ವಾಙ್ಮಯದಲ್ಲಿ ಸರಸ್ವತಿಯನ್ನು ಕೇವಲ ನದಿ ಎಂಬುದಾಗಿ ಮಾತ್ರ ಉಲ್ಲೇಖಿಸಲಾಗಿಲ್ಲ, ಸರಸ್ವತಿಯು ನದೀದೇವತೆ ಎಂಬ ಕುರಿತೂ ಅಲ್ಲಿ ಸಾಕಷ್ಟು ವಿವರಣೆಗಳಿವೆ. ಸರಸ್ವತಿಯು ನದೀ ದೇವತೆ ಎಂಬ ವಿಚಾರವನ್ನು ಯಾಸ್ಕರೂ ಪುಷ್ಟೀಕರಿಸಿದ್ದಾರೆ (ತತ್ರ ಸರಸ್ವತ್ಯೇಕಸ್ಯ ನದೀವತ್ ದೇವತಾವತ್ ಚ ನಿಗಮಾ ಭವಂತಿ–ನಿರುಕ್ತ ೨,೩೨). ವೈದಿಕ ವಾಙ್ಮಯದಲ್ಲಿ ಸರಸ್ವತಿಯು ನದಿಯೂ ಹೌದು, ದೇವತೆಯೂ ಹೌದು(ಅಂಬಿತಮೇ ನದೀತಮೇ ದೇವಿತಮೇ ಸರಸ್ವತಿ–ಋಗ್ವೇದ ೧,೪,೪೧). ಈ ಉಲ್ಲೇಖಗಳಿಂದ ಸರಸ್ವತಿಯ ನೆಲೆ ಬಹುಮಟ್ಟಿಗೆ ವೈದಿಕ ಸಂಪ್ರದಾಯದ ಮಡಿಲಲ್ಲೇ ಇತ್ತೆಂಬುದು ಸ್ಪಷ್ಟವಾಗುತ್ತದೆ. ಮುಂದೆ ಕಾಲಕ್ರಮದಲ್ಲಿ ಸರಸ್ವತಿಯು ಬ್ರಹ್ಮನೊಂದಿಗೆ ಅವನ ಜೊತೆಯಾಗಿಯೂ ಮಗಳಾಗಿಯೂ ಸೇರಿಸಲ್ಪಟ್ಟು ಒಬ್ಬ ಪ್ರತ್ಯೇಕ ದೇವತೆಯ ಅಸ್ತಿತ್ವವನ್ನು ಪಡೆದಳು.

ಸರಸ್ವತಿಯ ಹುಟ್ಟಿನ ಕುರಿತು ಪೌರಾಣಿಕ ಸಾಹಿತ್ಯದಲ್ಲಿ ವಿವಿಧ ರೀತಿಯ ವಿವರಣೆಯಿದೆ.

ಭಾರತೀಯ ಶಿಲ್ಪದಲ್ಲಿ ಸರಸ್ವತಿ

ಪುಂಡಿಕ್ಕೈ ಗಣಪಯ್ಯ ಭಟ್ಟ

ಬ್ರಹ್ಮವೈವರ್ತ ಪುರಾಣದ ಬ್ರಹ್ಮಕಾಂಡದ ಮೂರನೆಯ ಅಧ್ಯಾಯದಲ್ಲಿ ಸರಸ್ವತಿಯು ಪರಮಾತ್ಮನ ಬಾಯಲ್ಲಿ ಜನ್ಮ ಪಡೆದವಳು ಎಂದು ವರ್ಣಿಸಲಾಗಿದೆ. ಮತ್ಸ್ಯ, ಪದ್ಮ, ವಾಯು, ಹಾಗೂ ಬ್ರಹ್ಮಾಂಡ ಪುರಾಣಗಳಲ್ಲಿ ಸರಸ್ವತಿಯ ಹುಟ್ಟಿನ ಬಗ್ಗೆ ವೈವಿಧ್ಯಮಯ ವಿವರಣೆಗಳಿವೆ. ಬ್ರಹ್ಮನ ಮಾನಸ ಕನ್ಯೆಯೆಂದೂ, ಶಕ್ತಿಯೆಂದೂ, ಕೃಷ್ಣನ-ಬಾಯಿಯಿಂದ ಹುಟ್ಟಿದವಳೆಂದೂ. ದುರ್ಗೆಯ ಮುಖದಿಂದೂ ಪುರಾಣಗಳಲ್ಲಿ ವರ್ಣಿಸಲಾಗಿದೆ.

ಸರಸ್ವತಿಯು ಬ್ರಹ್ಮನ ಶಕ್ತಿಯೆಂದು ನಂಬಿಕೆಯಿದ್ದರೂ ವ್ಯವಹಾರದಲ್ಲಿ ಸ್ವತಂತ್ರ ದೇವತೆಯೇ. ಬೌದ್ಧರೂ, ಜೈನರೂ, ಶಾಕ್ತರೂ ಸರಸ್ವತಿಯನ್ನು ಸ್ವೀಕರಿಸಿದರು. ಮಹಾಯಾನ ಬೌದ್ಧರ ಪ್ರಜ್ಞಾಪಾರಮಿತಾ, ಮಂಜುಶ್ರೀ, ವಜ್ರಶಾರದೆ, ಮಹಾವೀಣಾ ಸರಸ್ವತಿ, ಜೈನರ ಶ್ರುತದೇವತೆ, ವಾಗೀಶ್ವರೀ, ವಾಗ್ವಾದಿನೀ, ಭಾರತೀ, ಜೈನ ಶಕ್ತಿಯರೂ ಸರಸ್ವತಿಯ ರೂಪಾಂತರಗಳೇ. 'ಸೂತ್ರಧಾರ ಮಂಡನ'ದ ದೇವತಾ ಮೂರ್ತಿ ಪ್ರಕರಣದಲ್ಲಿ ಸರಸ್ವತಿಯ ಹನ್ನೆರಡು ರೂಪಗಳ ಬಗ್ಗೆ ಪ್ರಸ್ತಾಪವಿದೆ. ಮಹಾವಿದ್ಯಾ, ಮಹಾವಾಣಿ, ಭಾರತಿ, ಸರಸ್ವತಿ, ಆರ್ಯಾ, ಬ್ರಾಹ್ಮೀ, ಮಹಾಧೇನು, ವೇದಗರ್ಭಾ, ಈಶ್ವರಿ, ಮಹಾಲಕ್ಷ್ಮಿ, ಮಹಾಕಾಳಿ, ಮಹಾಸರಸ್ವತಿ.

ಭಾರತೀಯ ಶಿಲ್ಪದಲ್ಲಿ ಸರಸ್ವತಿಯು ತನ್ನ ಅನೇಕ ರೂಪಗಳಲ್ಲಿ, ವಿವಿಧ ರೀತಿಯ ಸಂಕೇತಗಳು ಹಾಗೂ ವಾಹನಗಳೊಂದಿಗೆ ಚಿತ್ರಿಸಲ್ಪಟ್ಟಿದ್ದಾಳೆ. ಸರಸ್ವತೀ ಶಿಲ್ಪಗಳ ಉದಾಹರಣೆಗಳನ್ನು ಪ್ರಸ್ತಾಪಿಸುವ ಮೊದಲು ಶಿಲ್ಪಶಾಸ್ತ್ರಗಳಲ್ಲಿ ಹಾಗೂ ಇತರ ಪ್ರಾಚೀನ ಕೃತಿಗಳಲ್ಲಿ ವಿವರಿಸಲಾದ ಸರಸ್ವತಿಯ ಶಿಲ್ಪಲಕ್ಷಣಗಳ ಕುರಿತು ವಿವರಿಸುವುದು ಇಲ್ಲಿ ಅಪ್ರಸ್ತುತವೆನಿಸದು.

ಶಿಲ್ಪದಲ್ಲಿ ರೂಪಿತವಾಗುವ ಸರಸ್ವತಿ ಎಷ್ಟು ಬಾಹುಗಳನ್ನು ಹೊಂದಿರಬೇಕು ಎಂಬುದರ ಬಗ್ಗೆ ಶಿಲ್ಪಗ್ರಂಥಗಳಲ್ಲಿ ಏಕಾಭಿಪ್ರಾಯವಿಲ್ಲ. ಕೆಲ ಶಿಲ್ಪ ಸಂಹಿತೆಗಳು ಸರಸ್ವತಿಯನ್ನು ದ್ವಿಬಾಹು ಎಂದು ವಿವರಿಸಿದರೆ ಉಳಿದವು ಆಕೆಯನ್ನು ಚತುರ್ಭುಜೆ ಎಂದು ವರ್ಣಿಸುತ್ತವೆ. ಜೈನ ಶಿಲ್ಪ ಸಂಹಿತೆಗಳಲ್ಲೂ ಸರಸ್ವತಿಯನ್ನು ಚತುರ್ಭುಜೆ ಎನ್ನಲಾಗಿದೆ. 'ಅಂಶುಮದ್ಭೇದಾಗಮ'ವು ಶ್ವೇತ ವರ್ಣದ, ಕಮಲಾಸೀನೆಯಾದ ಸರಸ್ವ-

ಯೂ ತನ್ನ ನಾಲ್ಕು ಕೈಗಳಲ್ಲಿ ಕ್ರಮವಾಗಿ ಅಕ್ಷಮಾಲೆ, ಪುಸ್ತಕ, ಶ್ವೇತ ಕಮಲ ಹಾಗೂ ವ್ಯಾಖ್ಯಾನ ಮುದ್ರೆಗಳನ್ನು ಹೊಂದಿರಬೇಕೆಂದು ಸೂಚಿಸುತ್ತದೆ. ವಿಷ್ಣುಧರ್ಮೋತ್ತರ'ದಲ್ಲಿ ಸರಸ್ವತಿಯನ್ನು ಶಿಲ್ಪದಲ್ಲಿ ಬಿಳಿ ಕಮಲದಲ್ಲಿ ಸಮ ಭಂಗದಲ್ಲಿ ನಿಂತುಕೊಂಡಿರುವಂತೆ ಹಾಗೂ ತನ್ನ ಚತುರ್ಬಾಹುಗಳಲ್ಲಿ ಅಕ್ಷಮಾಲೆ, ಪುಸ್ತಕ, ಕಮಂಡಲು ಹಾಗೂ ತ್ರಿಶೂಲಗಳನ್ನು ಧರಿಸಿರುವಂತೆ ರೂಪಿಸಬೇಕೆಂದು ವಿವರಿಸಲಾಗಿದೆ. 'ರೂಪಮಂಡನ'ದ ಪ್ರಕಾರ ಸರಸ್ವತಿಯು ಎರಡು ಕೈಗಳಲ್ಲಿ ಯಥಾ ಪ್ರಕಾರ ಅಕ್ಷಮಾಲೆ, ಹಾಗೂ ಪುಸ್ತಕಗಳನ್ನು ಹೊಂದಿರುವುದಲ್ಲದೆ ಉಳಿದೆರಡು ಹಸ್ತಗಳಲ್ಲಿ ವೀಣೆಯನ್ನು ಅಥವಾ ಕಮಲ ಹಾಗೂ ವರದ ಮುದ್ರೆಯನ್ನು ಹೊಂದಿರಬೇಕು. 'ಅಗ್ನಿಪುರಾಣ' ಹಾಗೂ 'ಮಾರ್ಕಾಂಡೆಯ ಪುರಾಣ'ದ 'ದೇವೀ ಮಹಾತ್ಮ್ಯೆ'ಗಳು ಕೂಡಾ ಸರಸ್ವತಿಯನ್ನು ವೀಣಾ ಪಾಣಿ ಎಂದು ವರ್ಣಿಸುತ್ತವೆ. ಸರಸ್ವತಿಯು ಅಕ್ಷಮಾಲೆ, ಪುಸ್ತಕ, ದಂಡ, ಕಮಂಡಲಗಳನ್ನು ಧರಿಸಿರಬೇಕೇದು 'ಪೂರ್ವ ಕಾರಣಾಗಮ'ದಲ್ಲಿ ವಿವರಣೆಯಿದೆ.

ಸರಸ್ವತಿಯ ವಾಹನವಾಗಿ ಹಂಸವನ್ನು ಚಿತ್ರಿಸುವುದು ಭಾರತೀಯ ಶಿಲ್ಪದಲ್ಲಿ ಸಾಮಾನ್ಯ. ದಕ್ಷಿಣ ಭಾರತದ ಸರಸ್ವತಿ ಶಿಲ್ಪಗಳಲ್ಲಿ ಸಾಮಾನ್ಯವಾಗಿ ನವಿಲನು ಸರಸ್ವತಿಯ ವಾಹನವಾಗಿ ರೂಪಿಸಿರುವುದು ಕಂಡು ಬರುತ್ತದೆ. ಸಿಂಹವನ್ನು ಸರಸ್ವತಿಯ ವಾಹನವನ್ನಾಗಿ ಚಿತ್ರಿಸಿರುವುದೂ ಅಪರೂಪವಲ್ಲ. ಕಮಲದ ಮೇಲೆ ನಿಂತಿರುವಂತೆಯೂ ಆಸೀನಳಾಗಿರುವಂತೆ ಚಿತ್ರಿತವಾದ ಸರಸ್ವತಿಯ ರೂಪ ಅತಿ ಜನಪ್ರಿಯ. 'ಶಾರದಾ ತಿಲಕ ತಂತ್ರ' ಮತ್ತು 'ಪ್ರಪಂಚ ಸಾರ ತಂತ್ರ'ಗಳು ಸರಸ್ವತಿಯನ್ನು ಹಂಸವಾಹಿನಿ ಎಂದು ಬಣ್ಣಿಸಿದರೆ ಜೈನ ಕವಿ ನೇಮಿದತ್ತ ತನ್ನ 'ಆರಾಧನಾ ಕಥಾಕೋಶ'ದಲ್ಲಿ ನವಿಲು ಸರಸ್ವತಿಯ ವಾಹನ ಎಂದು ಉಲ್ಲೇಖಿಸಿದ್ದಾನೆ.



ಗದುಗಿನ ಶ್ರೀ ಕೋಟೀಶ್ವರ ದೇವಾಲಯದ ಆವಾರದಲ್ಲಿನ ಸರಸ್ವತಿಯ ಭಗ್ನ ಶಿಲ್ಪ


ಸರಸ್ವತಿಯ ವರ್ಣದ ಕುರಿತೂ ಪ್ರಾಚೀನ ಕೃತಿಗಳಲ್ಲಿ ವೈವಿಧ್ಯಮಯವಾದ ಕುತೂಹಲಕರ ವರ್ಣನೆ ಇರುವುದು ಕಂಡುಬಂದಿದೆ. ಋಗ್ವೇದದಲ್ಲಿ ಸರಸ್ವತಿಯನ್ನು 'ಶುಭ್ರ' ಎಂದು ವಿವರಿಸಲಾಗಿದೆ. ಪುರಾಣಗಳ

ಪ್ರಕಾರ ಸರಸ್ವತಿಯು ಶ್ವೇತವರ್ಣೆ. ಪುರಾಣ ಗಳಲ್ಲಿ ಸರಸ್ವತಿಯ ಕುರಿತು ಬರುವ ಪರಮ ಜ್ಯೋತಿ ರೂಪ, ಜ್ಯೋತಿ ಸ್ವರೂಪ, ಹಿಮಚಂದನ ಕುಂದೇ ಕುಮುದಾಂಭೋಜ ಸನ್ನಿಭಾ, ಶುಕ್ಲವರ್ಣಾ, ಶ್ವೇತಭಾ ಎಂಬ ವರ್ಣನೆಗಳು ಸರಸ್ವತಿಯು ಶ್ವೇತವರ್ಣೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ತಂತ್ರ ಸಾಹಿತ್ಯಗಳಲ್ಲಿ ಸರಸ್ವತಿಯು ನೀಲ ವರ್ಣೆ ಎನ್ನಲಾಗಿದೆ. 'ಶ್ರೀ ವಿದ್ಯಾರ್ಣವ ತಂತ್ರ'ದಲ್ಲಿ ನೀಲ ಸರಸ್ವತಿಯನ್ನು ಕುರಿತ ವರ್ಣನೆ ಇದೆ. ಬೌದ್ಧ ಧರ್ಮಾನುಯಾಯಿ ಗಳು ಆರಾಧಿಸುವ ಸರಸ್ವತಿಯ ಒಂದು ರೂಪವಾದ ವಜ್ರ ಸರಸ್ವತಿಯು ಮುಖದ ಬಲ ಪಾರ್ಶ್ವದ ಬಣ್ಣ ಬಿಳಿ ಹಾಗೂ ಎಡ ಪಾರ್ಶ್ವದ ವರ್ಣ ನೀಲಿ ಎಂಬುದಾಗಿ ಪ್ರಾಚೀನ ಬೌದ್ಧ ಗ್ರಂಥಗಳಲ್ಲಿ ವಿವರಿಸಲಾಗಿದೆ. ಬೌದ್ಧ ದೇವತೆಯಾಗಿ ಸರಸ್ವ ತಿಯ ಆರಾಧನೆ ಭಾರತದಲ್ಲಿ ಮಾತ್ರವಲ್ಲದೆ ಚೀನ, ಟಿಬೇಟ್, ಜಪಾನುಗಳಲ್ಲೂ ಜನಪ್ರಿಯ.

ಬೌದ್ಧ ಶಿಲ್ಪ ಗ್ರಂಥಗಳು ಸರಸ್ವತಿಯ ಪಂಚರೂಪ ಪ್ರಭೇದ ಗಳ ಬಗ್ಗೆ ಮಾಹಿತಿಯನ್ನೀಯು ತ್ತವೆ– (೧) ಮಹಾಸರಸ್ವತಿ (೨) ವಜ್ರವೀಣಾ ಸರಸ್ವತಿ (೩) ವಜ್ರಶಾರದಾ (೪) ಆರ್ಯ ಸರಸ್ವತಿ. ಹಾಗೂ (೫) ವಜ್ರ ಸರಸ್ವತಿ. ಭಾರತ ಹಾಗೂ ಟಿಬೇಟ್‌ನಲ್ಲಿರುವ ಬೌದ್ಧ ಶಿಲ್ಪ ಗಳಲ್ಲಿ ಸರಸ್ವತಿಯನ್ನು ವೀಣಾ ಪಾಣಿಯಾಗಿ ಕಮಲದ ಮೇಲೆ ನಿಂತಿರುವಂತೆ ಚಿತ್ರಿಸಿರುವುದು ಸಾಮಾನ್ಯ. ಬೌದ್ಧ ಸರಸ್ವತಿ ಸಾಮಾನ್ಯವಾಗಿ ಏಕ ಶಿರ, ತ್ರಿನಯನೆ, ಹಾಗೂ ಷಡ್ಭುಜೆ

ಸರಸ್ವತಿಯ ಶಿಲ್ಪಗಳೂ ಅಪರೂಪವಲ್ಲ.

ಜೈನ ಧರ್ಮದಲ್ಲಿ ವಿವರಿಸಲಾದ ಶ್ರುತದೇವಿ ಹಾಗೂ ಸರಸ್ವತಿಯ ಮಧ್ಯೆ ಹೆಚ್ಚಿನ ಹೋಲಿಕೆ ಯಿದೆ. ಪುಸ್ತಕ, ಅಕ್ಷಮಾಲೆ, ಕಮಲ, ಹಾಗೂ ವರದ ಮುದ್ರೆಗಳನ್ನು ಹೊಂದಿರುವ ಶ್ರುತ ದೇವಿಯ ಶಿಲ್ಪ ಲಕ್ಷಣಗಳು ಮತ್ತು ಸರಸ್ವತಿಯ



ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದಲ್ಲಿನ ಸರಸ್ವತಿ



ಬಿಕಾನೇರಿನಲ್ಲಿರುವ ಸುಂದರ ಸರಸ್ವತೀ ಶಿಲ್ಪ

ಶಿಲ್ಪ ಲಕ್ಷಣಗಳಲ್ಲಿ ಗರುಡನು ಪ್ರತ್ಯೇಕ ಕಂಡುಬರುವುದಿಲ್ಲ. ಶ್ವೇತಾಂಬರರ ಪ್ರಕಾರ ಹಂಸ ಈ ದೇವತೆಯ ವಾಹನವಾದರೆ ದಿಗಂಬರರ ಪ್ರಕಾರ ಈಕೆಯ ವಾಹನ ನವಿಲು.

ಶಿಲ್ಪಶಾಸ್ತ್ರಗಳ ವಿವರಣೆಯಂತೆ ಸರಸ್ವತಿ ಶ್ವೇತಾಂಬರಿ. ಶ್ವೇತಾಂಬರ ಪವಿತ್ರತೆಯ ಸಂಕೇತ. ಸರಸ್ವತಿಯ ಕೈಯಲ್ಲಿರುವ ಪುಸ್ತಕ ಆಕೆ ವಿದ್ಯಾಧಿದೇವತೆ ಎಂಬುದರ ಸೂಚನೆ. ಸಂಗೀತ ಮತ್ತು ಲಲಿತಕಲೆಗಳ ಸಂಕೇತ ಸರಸ್ವತಿಯ ಕೈಯಲ್ಲಿರುವ ವೀಣೆ. ಅಕ್ಷಮಾಲ ಹಾಗೂ ಕಮಂಡಲು ಸರಸ್ವತಿ-ಬ್ರಹ್ಮರ ನಿಕಟ ಸಂಬಂಧವನ್ನು ಸೂಚಿಸುತ್ತವೆ. ಸಿಂಹವಾಹಿನಿಯಾದ ಸರಸ್ವತಿ ಶಿವಶಕ್ತಿರೂಪಿಣಿ. ಸರಸ್ವತಿಯನ್ನು ಕೆಲ ಸಂಹಿತೆಗಳು ಶಿವನ ಶಕ್ತಿ ಸ್ವರೂಪ ಎಂದು ವರ್ಣಿಸಿರುವುದನ್ನು ಇಲ್ಲಿ ನೆನೆಯಬಹುದು. 'ಸ್ಕಂದ ಪುರಾಣ'ದ ಸೂತ ಸಂಹಿತೆಯಲ್ಲಿ ಸರಸ್ವತಿಯನ್ನು ಜಟಾಮುಕುಟ ಹಾಗೂ ಶಿರದ ಮೇಲೆ ಚಂದ್ರನನ್ನು ಧರಿಸಿರುವ [illegible] ಎಂದು ಬಣ್ಣಿಸಲಾಗಿದೆ.

ಮಧ್ಯಪ್ರದೇಶದ ಬಾರೂತ್ ಎಂಬಲ್ಲಿ ದೊರೆತ ಶಿಲ್ಪವನ್ನು ಭಾರತದ ಸರಸ್ವತಿ ಶಿಲ್ಪಗಳ ಪೈಕಿ ಅತಿ ಪ್ರಾಚೀನ ಎಂದು ನಂಬಲಾಗಿದೆ. ಕೈಯಲ್ಲಿ ಪುಸ್ತಕಧಾರಿಯಾಗಿರುವ ಪ್ರಾಚೀನ-ತಮ ಸರಸ್ವತಿ ಶಿಲ್ಪ ಮಥುರಾದ ಕಂಕಾಲಿತಿಲ ಎಂಬಲ್ಲಿ ದೊರೆತಿದೆ. ಇದಲ್ಲದೆ ಮಥುರಾ, ಬಿಹಾರ, ಕಲ್ಕತ್ತ, ಪಾಟ್ನ, ಸಾರನಾಥ, ಅಸ್ಸಾಂ ಮೊದಲಾದೆಡೆ ಬೌದ್ಧ ಭಾಗಗಳಲ್ಲಿರುವ ಅನೇಕ ಸರಸ್ವತಿ ಶಿಲ್ಪಗಳು ಕಂಡುಬಂದಿವೆ. ಉತ್ತರ ಭಾರತದಲ್ಲಿ ಸಾಮಾನ್ಯವಾಗಿ ಸರಸ್ವತಿಯನ್ನು ದ್ವಿಭುಜೆ, ಚತುರ್ಭುಜೆಯಾಗಿರುವ, ಅಷ್ಟಭುಜೆಯಾಗಿರುವಂತೆಯೂ ರೂಪಿಸಿರುವುದು ಕಂಡುಬರುತ್ತದೆ.

ದಕ್ಷಿಣ ಭಾರತದಲ್ಲಿ ದೊರೆಯುವ ಸರಸ್ವತಿ ವಿಗ್ರಹಗಳಲ್ಲಿ ಅನೇಕ ಬೇರೆ

ಘಂಟಸಾಲ ಎಂಬಲ್ಲಿ ಸಿಕ್ಕಿರುವ ಕ್ರಿ.ಪೂ. ಎರಡನೆಯ ಶತಮಾನಕ್ಕನ್ವಯಿಸಬಹುದಾದ ಶಿಲ್ಪವು ಅತ್ಯಂತ ಪ್ರಾಚೀನವಾದುದು ಎನ್ನಲಾಗಿದೆ. ಆಂಧ್ರ ತಮಿಳುನಾಡು, ಕರ್ನಾಟಕದ ವಿವಿಧೆಡೆಗಳಲ್ಲಿ ಪ್ರಸಿದ್ಧವಾದುವು ಸರಸ್ವತಿ ವಿಗ್ರಹಗಳು ಕಂಡು ಬರುವವೆ.

ಉತ್ತರ ಕರ್ನಾಟಕದ ಗದುಗಿನಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ಸರಸ್ವತೀ ದೇವಾಲಯದಲ್ಲಿರುವ ಸರಸ್ವತಿ ವಿಗ್ರಹ ಒಂದು ಅತಿ ಸುಂದರ ಶಿಲ್ಪ ಕೃತಿ. ವೀರಾಸನ ಭಂಗಿಯಲ್ಲಿರುವ ಈ ಚತುರ್ಭುಜೆ ಸರಸ್ವತಿ ಹಂಸ ವಾಹಿನಿ.

ಬಾಗಲಿ ಎಂಬಲ್ಲಿರುವ ಚಾಲುಕ್ಯರ ಕಾಲಕ್ಕನ್ವಯಿಸಬಹುದಾದ ಸರಸ್ವತಿ ಶಿಲ್ಪ ಮತ್ತು ಹಾಸನ ಜಿಲ್ಲೆಯ ಅಡಗೂರು ಲಕ್ಷ್ಮೀನಾರಾಯಣ ದೇವಾಲಯದಲ್ಲಿರುವ ಹೊಯ್ಸಳರ ಕಾಲದ ಸರಸ್ವತಿ ವಿಗ್ರಹ—ಇವು ಮಾರ್ಕಾಂಡೇಯ ಪುರಾಣದ ದೇವಿ ಮಹಾತ್ಮ್ಯದಲ್ಲಿ ವಿವರಿಸಲಾದ ಸರಸ್ವತಿಯ ಶಿಲ್ಪ ಲಕ್ಷಣಗಳನ್ನು ಹೊಂದಿವೆ. ಅಕ್ಷಮಾಲೆ, ಅಂಕುಶ, ಪಾಶ ಮತ್ತು ಪುಸ್ತಕಗಳನ್ನು ಧರಿಸಿರುವ ಈ ಎರಡು ಶಿಲ್ಪಗಳು ಶಿವಶಕ್ತಿ ರೂಪಿಣಿ ಸರಸ್ವತಿಯ ಬಿಂಬಗಳು. ಕ್ರಿ.ಶ.೧೨ನೆಯ ಶತಮಾನದ ಉತ್ತರಾರ್ಧದಲ್ಲಿ ಕರ್ನಾಟಕದಲ್ಲಿ ಸರಸ್ವತಿಯ ಆರಾಧನೆ ಅತ್ಯಂತ ಜನಪ್ರಿಯವಾಯಿತು. ಕ್ರಿ.ಶ. ೧೨–೧೩ನೆಯ ಶತಮಾನದ ಹೊಯ್ಸಳ ದೇವಾಲಯಗಳ ವಿವಿಧ ಭಾಗಗಳಲ್ಲಿ ಕಂಡುಬರುವ ಅಸಂಖ್ಯಾತ ಸರಸ್ವತಿ ಶಿಲ್ಪಗಳು ಮೇಲಿನ ಲಕ್ಷಣವನ್ನು ಹೊಂದಿರುತ್ತವೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಭಿತ್ತಿಯಲ್ಲಿರುವ ಕಮಲ, ಅಕ್ಷಮಾಲೆ, ಅಂಕುಶ, ಪುಸ್ತಕ ಹಾಗೂ ವೀಣಾಪಾಣಿಯಾದ ನಾಟ್ಯ ಸರಸ್ವತಿಯ ಶಿಲ್ಪ ಕೃತಿ ಕರ್ನಾಟಕದ ಸರಸ್ವತೀ ಶಿಲ್ಪಗಳ ಪೈಕಿ ಅತಿ ಸುಂದರವಾದುದು. [illegible] ದೇವಾಲಯದಲ್ಲಿನ [illegible] ವೀಣಾಪಾಣಿ ಸರಸ್ವತಿಯ ವಿಗ್ರಹವೂ ನೋಟಕರ ಮನಸೆಳೆಯುವಂತಹುದು.

ಭಾರತದ ಸರಸ್ವತೀ ಮೂರ್ತಿಗಳ ಪೈಕಿ ಶೃಂಗೇರಿ ಅತಿ ಪ್ರಸಿದ್ಧವಾದುದು. ಶೃಂಗೇರಿಯ ಶಾರದೆ ಶಾಕ್ತಶಾರದೆ. ಈ ವಿಗ್ರಹದ ಮೂರ್ತಿ ಲಕ್ಷಣ–


ಚಂದ್ರಪ್ರಭಾಂ ನೀಲಗಲ ಪ್ರಯಾನಾಂ
ತ್ರಿನೇತ್ರರಮ್ಯಾಂ ಸ್ವಗುಣಾಂ ಪುತುಪ್ಪಾಂ।
ಪದ್ಮಾಸನಾಂ ತ್ವಾಂ ಪ್ರಯುಜೇಕ್ಷಮಾಲಾ
ಸತ್ಪುಸ್ತಕಾಢ್ಯಾಂ ಚ ಮಯೂರ ಚಾರೇ....

ಎಂದು ಸರಸ್ವತೀ ಮಂತ್ರ ಪೂಜೆಯಲ್ಲಿ ನಿರ್ದೇಶಿಸಲ್ಪಟ್ಟ ಕ್ರಮದಲ್ಲಿದೆ. ಈ ಸರಸ್ವತಿ ನೀಲಕಂಠೆ, ಚಂದ್ರಶೇಖರಿ, ತ್ರಿನೇತ್ರೆ, ಪದ್ಮಾಸನಸ್ಥೆ, ಅಕ್ಷಮಾಲಾ ಪುಸ್ತಕ ಧಾರಿಣಿ.

ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಸರಸ್ವತಿಯ ಶಿಲ್ಪ ಲಕ್ಷಣಗಳಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬರದು. ಉತ್ತರ ಭಾರತದಲ್ಲಿ ಶಿವಶಕ್ತಿ ರೂಪಿಣಿಯಾಗಿ ಚಿತ್ರಿತವಾದ ಸರಸ್ವತಿ ಶಿಲ್ಪಗಳು ಬಹಳ ಅಪರೂಪ. ಅಲ್ಲದೆ ಷಡ್ಭುಜೆ ಸರಸ್ವತಿ ಬಿಂಬಗಳೂ ಉತ್ತರ ಭಾರತದಲ್ಲಿ ವಿರಳ. ಉತ್ತರ ಭಾರತದಲ್ಲಿ ಹಂಸ ವಾಹಿನಿಯಾದ ಸರಸ್ವತಿ ಸಾಮಾನ್ಯವಾಗಿ ಕಂಡು ಬಂದರೆ ದಕ್ಷಿಣ ಭಾರತದ ಹೆಚ್ಚಿನ ಕಡೆಗಳಲ್ಲಿ ಸರಸ್ವತಿಯ ವಾಹನ ನವಿಲು.

"ಶರನ್ನವರಾತ್ರಿಯಲ್ಲಿ ಕ್ರಮವಾಗಿ ಮೂಲಾ ನಕ್ಷತ್ರವಿದ್ದಾಗ ಸರಸ್ವತೀಪೂಜೆ, ಅಷ್ಟಮಿಯಂದು ದುರ್ಗಾಪೂಜೆ, ನವಮಿಯಂದು ಚಂಡೀಪೂಜೆ ನಡೆಯುತ್ತಿರುವುದು ಶಕ್ತಿಗೂ ಸರಸ್ವತಿಗೂ ಇರುವ ತಾಂತ್ರಿಕ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ. ದುರ್ಗಾದೇವಿಯ ಸಾಮಾನ್ಯ ಕಲ್ಪನೆಯಲ್ಲಿ ಸರಸ್ವತಿಯು ಬೆರೆತು ಹೋದಳೆಂದು ತೋರುತ್ತದೆ. ನಮ್ಮ ದೇವಾಲಯಗಳ ಇತಿಹಾಸದಲ್ಲಿ ಸರಸ್ವತಿಗೇ ಸ್ವತಂತ್ರ ಆಲಯಗಳಿದ್ದುದು ವಿರಳ. ಹಾಗಿದ್ದರೂ ಸರಸ್ವತಿಯ ಆರಾಧನೆ ಪ್ರಾಚೀನ ಕಾಲದಿಂದಲೇ ಭಾರತದಲ್ಲಿ ಅತ್ಯಂತ ಜನಪ್ರಿಯವಾಗಿತ್ತು ಎಂಬುದನ್ನು ದೇಶದ ಅನೇಕ ಕಡೆಗಳಲ್ಲಿ ಕಂಡುಬರುವ ಅಸಂಖ್ಯಾತ ಸರಸ್ವತೀ ಶಿಲ್ಪಗಳು ನಿರೂಪಿಸುತ್ತವೆ.

ಡಿಸೆಂಬರ್- 1978



ಕಣ್ಣಾಲೆ ಕಸಿ ಮಾಡುವುದ ಕಂಡೆ

ಬಾಲಕೃಷ್ಣ

ನಾವು ಕೇಳಿದ್ದೇವೆ: ರಕ್ತಕ್ಕೆ ರಕ್ತ, ಕೈಗೆ ಕೈ, ಕಣ್ಣಿಗೆ ಕಣ್ಣು ಮತ್ತು ಮುಯ್ಯಿಗೆ ಮುಯ್ಯಿ. ಜೀವಕ್ಕೆ ಜೀವ ಪಡೆನುಡಿಯಾಗಿದೆ. ದ್ವೇಷ ಸಾಧನೆಯ ಸ್ವರೂಪಗಳು. ಇಂದು ಈ ಹಳೆಯ ಕಥೆಗಳಿಲ್ಲ, ಅಪರಾಧಕ್ಕೆ ಶಿಕ್ಷೆಯಾಗಿ ಕೂಡ ಇಲ್ಲ. ಒಂದು ಅಂಗಕ್ಕೆ ಬದಲಾಗಿ ಇನ್ನೊಂದು, ಆಧುನಿಕ ವೈದ್ಯಕೀಯ ತೀರ ಮಾನವೀಯ ಉಪಯೋಗಕ್ಕಾಗಿ ಬಳಸುತ್ತಿದೆ. ಇತ್ತೀಚೆಗೆ ಇಂಥ ಒಂದು ಅಪೂರ್ವ ಸಂದರ್ಭವನ್ನು ನೋಡುವ ಪ್ರಸಂಗವೊದಗಿತು. ಸಂದರ್ಭ–ಸ್ಥಳ–ಸನ್ನಿವೇಶ ಈ ಮುಂದಿನಂತಿದೆ:

ದೃಶ್ಯ : ೧.

ಸಮಯ ಬೆಳಿಗ್ಗೆ ೧೦–೩೦.

ಸ್ಥಳ ಮುಂಬಯಿಯ ಪ್ರಸಿದ್ಧ ನೇತ್ರತಜ್ಞರೊಬ್ಬರ ತಪಾಸಣಾ ಕೊಠಡಿ. ಸಂದರ್ಭ: ಸಮೀಪದ ಸಂಬಂಧಿಯೊಬ್ಬರ ಕಣ್ಣಿನ ಪರೀಕ್ಷೆಯಾಗಬೇಕಿತ್ತು.

[illegible] ಪೇಳೆಯಾದರೂ ಡಾಕ್ಟರು ಮಾತ್ರ ಒಂದೇ ಸಮನೆ ಫೋನಿನ ಸಂಭಾ[illegible] ನಿರತರು.

"ಹಲೋ........."

"...................."

"ನಾನು ಡಾ. ಎಂ. ಎಂ. ಜೋಶಿ ಮಾತನಾಡುವದು. ನಮ್ಮ ವಿಜಾಪುರ ಟ್ರಂಕಾಲ್ ಕೂಡಲೇ ದೊರಕಿಸಿಕೊಡಿ......ಅರ್ಜಂಟಾಗಿ ಬೇಕಾಗಿದೆ."

"............"

"...ಹಾಗಾದರೆ ನಾನು ನಿಮ್ಮ ಸುಪರಿಂಟೆಂಡೆಂಟರೊಡನೆ ಮಾತಾಡುತ್ತೇನೆ."

"............"

"ನೋಡಿ ಇದೊಂದು ಅರ್ಜಂಟ್ ಕೇಸು. ನಿಮ್ಮ ಫೋನು ಲೈನುಗಳೆಲ್ಲ ಏನೇ ಆಗಿರಲಿ. ಮಾನವೀಯ ದೃಷ್ಟಿಯಿಂದ ನನಗೆ ಈ ವಿಜಾಪುರದ ವ್ಯಕ್ತಿಯ ಸಂಪರ್ಕ ಕೂಡಲೇ ಬೆಳೆಸಬೇಕಾಗಿದೆ."

ಪರಿಸ್ಥಿತಿ ಏನಾಗಿತ್ತು ಎಂದರೆ,

ಜೀವಂತ ವ್ಯಕ್ತಿ ತನ್ನ ಕಣ್ಣುಗಳನ್ನು ದಾನ ಮಾಡಿ ತೀರಿಕೊಂಡಿದ್ದಾನೆ. ಅವನು ಸತ್ತ ೨೪ ಗಂಟೆಗಳಲ್ಲಿ ಆ ಕಣ್ಣುಗುಡ್ಡೆಗಳನ್ನು ಉಪಯೋಗಿಸಲೇಬೇಕು. ಇಲ್ಲವಾದರೆ ಅದು ಕೇವಲ ನಿಷ್ಪ್ರಯೋಜಕವಾಗುವುದು. ಹಾಗಾಗದಂತೆ ತಡೆಯುವ ತರಾತುರಿಯಲ್ಲಿ ಡಾಕ್ಟರರ ಒದ್ದಾಟ. ವೇಳೆಯ ವಿರುದ್ಧ ಅವರ ಓಟ. ಪೂರ್ವಭಾವಿಯಾಗಿ ಇಂಥ ಆಪರೇಶನ್ ನಿರ್ದಿಷ್ಟ ಪಡಿಸುವಂತೆ ಕೂಡ ಇಲ್ಲ. ಯಾಕಂದರೆ ನೇತ್ರದಾನಿ ಸಾಯಬೇಕು ! ಅದನ್ನೇ ಇದಿರು ನೋಡುತ್ತ(?) ನೇತ್ರ ಪಡೆಯುವಾತ ಕಾಯಬೇಕು! ಎಂಥ ವಿಪರೀತ! ಆದರೆ ಸೂಕ್ಷ್ಮ ಪರಿಸ್ಥಿತಿ! ಮರಣ

ದೊಡನೆ ಯಾರೂ ಅಪಾಯಿಂಟಮೆಂಟ್ ಪಡೆಯುವದು ಸಾಧ್ಯವಿಲ್ಲ ತಾನೇ? ಹಾಗಾಗಿ ನೇತ್ರ ಪಡೆಯುವಾತ ಅಂಥತ್ವದ ಅಂಧಕಾರದಲ್ಲಿ ನೇತ್ರದಾನಿಯ ಅಂತ್ಯದ ಕ್ಷಣಗಳನ್ನು ತವಕದಿಂದ ನೋಡುವಷ್ಟು ಕಾತರ ನೇತ್ರದಾನಿಗೆ ಸಾವನ್ನು ಬರಮಾಡಿಕೊಳ್ಳುವಲ್ಲಿ ಇರುವುದಿಲ್ಲ.


ಆಕಸ್ಮಿಕ ಮರಣ ಇಂಥ ಸನ್ನಿವೇಶವನ್ನೊದಗಿಸಿದಾಗ ಕಣ್ಣಿನ ಹೊಂದಾಣಿಕೆ ಮಾಡುವುದಕ್ಕಿಂತಲೂ ದುಸ್ತರವೇನೋ ಈ ಜನಸಂಪರ್ಕ ಮಾಡುವುದು ಎನಿಸಿತು. ಈ ಕೇಸಿಗೆ ಡಾಕ್ಟರರು ತುಂಬ ಮಹತ್ವ ಕೊಟ್ಟು ತಮ್ಮೆಲ್ಲ ಗಮನವನ್ನು ಅಲ್ಲಿಯೆ ಕೇಂದ್ರೀಕರಿಸಿದ್ದು ಯಾರಿಗೂ ಮೆಚ್ಚಿಗೆಯಾಗುವಂಥದೇ ಸರಿ.

ಅಂತೂ ಆ ದಿನವೇ ಅವರು ತಮ್ಮ ಆಪರೇಶನ್ನನ್ನು ಯಶಸ್ವಿಯಾಗಿ ಮುಗಿಸಿದ ವಿಷಯ ಮರುದಿನ ತಿಳಿಯಿತು.

ಸತ್ತವನ ಜೀವಂತ ಕಣ್ಣು ಜೀವಂತ ವ್ಯಕ್ತಿಯ ಸತ್ತ ಕಣ್ಣಿನ ಸ್ಥಾನ ತುಂಬುವದನ್ನು ನನ್ನ ಕಣ್ಣುಗಳಿಂದ ನೋಡುವ ತವಕ ಉಂಟಾಯಿತು.

"ಡಾಕ್ಟರ್, ನಿಮ್ಮ ಈ ಆಪರೇಶನ್ ನಾನೊಮ್ಮೆ ನೋಡಬೇಕು."

"ಅಗತ್ಯವಾಗಿ. ಆದರೆ ನಮ್ಮ ಸಮಸ್ಯೆಯನ್ನು ನೋಡಿದಿರಲ್ಲ......?"



ಡಾ. ಎಂ. ಎಂ. ಜೋಶಿ

ದೃಶ್ಯ : ೨.

ಇನ್ನೊಂದು ಆಕಸ್ಮಿಕ ಪ್ರಸಂಗ. ಧಾರವಾಡದ ನೇತ್ರತಜ್ಞ ಡಾ. ಕೊಪ್ಪೀಕರರು ಅಕಸ್ಮಾತ್ ಹೃದಯಾಘಾತದಿಂದ ತೀರಿಕೊಂಡರು. ಡಾ. ಜೋಶಿಯವರು ಕಣ್ಣಿನ ಕಸಿ ಮಾಡುವ ತಮ್ಮ ಯೋಜನೆಯನ್ನು ಬಹಿರಂಗಪಡಿಸಿದೊಡನೆಯೇ ಕಾಣಿಕೆಯಾಗಿ ತಮ್ಮ ನೇತ್ರದಾನ ಮಾಡುವುದಾಗಿ ಸಾರಿದ ಮೊದಲ ಮಹಾನುಭಾವ ಅವರು. ಅಂತೂ ಅವರ ಮೊದಲ ಇಚ್ಛೆ ಕೊನೆಗೆ ನೆರವೇರುವ ಸಂದರ್ಭ. ಅಕಸ್ಮಾತ್ ಡಾ. ಜೋಶಿಯವರ ದವಾಖಾನೆಯಲ್ಲಿ ನಾನು. ಪುನಃ ಅದೇ ಟೆಲಿಫೋನ್ ಸಂಭಾಷಣೆ. ಹೊರಗೆ ಸಾಲುಗಟ್ಟಿ ನಿಂತ ಜನರ ಪರಿವೆಯೂ ಇಲ್ಲದೇ ಡಾ. ಜೋಶಿಯವರ ಅವಿರತ ಪ್ರಯತ್ನ, ನೇತ್ರ ಪಡೆಯುವ ಪುಣ್ಯಶಾಲಿಗಳ ಸಂಪರ್ಕಕ್ಕೆ. ಇವರಿಲ್ಲವಾದರೆ–ಅವರು, ಅವರಿಲ್ಲವಾದರೆ–ಇವರು. ಏನೇ ಆದರೂ ಆ ಅಮೂಲ್ಯ ಕಣ್ಣುಗುಡ್ಡೆಗಳು ನಿಷ್ಪ್ರಯೋಜಕವಾಗಬಾರದು. ಹಣದ ಪ್ರಶ್ನೆಗಿಂತ ಹೆಚ್ಚಾಗಿ ಇದೊಂದು ಅತ್ಯಮೂಲ್ಯ ಮಾನವೀಯ ಸೇವೆ ! ಗುಜರಾಥಿಯನ್ನು ಗುಜರಾಥಿಗಳಂತೆ, ಮುಸ್ಲಿಮನನ್ನು ಮುಸ್ಲಿಮರಂತೆ ಹಾಗೂ ಮರಾಠಿಯನ್ನು ಮಹಾರಾಷ್ಟ್ರೀಯರಂತೆ ನಿರರ್ಗಳವಾಗಿ ಮಾತನಾಡುವ ವಿಜಾಪುರದ ಅಚ್ಚ ಕನ್ನಡಿಗ ಡಾ. ಮಹಿಪತಿ ಮಾಧವಾಚಾರ್ಯ ಜೋಶಿ ಹುಬ್ಬಳ್ಳಿಯಲ್ಲಿ ತಮ್ಮದೇ ಆದ ಸುಸಜ್ಜಿತ ದವಾಖಾನೆಯನ್ನು ಹೊಂದಿದ್ದಾರೆ. ಕೆಲವು ಕನ್ನಡ [illegible] [illegible].

ತೆಳ್ಳನೆಯ, ಎತ್ತರ ನಿಲುವಿನ, ಚಟುವಟಿಕೆ ತುಂಬಿದ ಈ ವ್ಯಕ್ತಿಯನ್ನು ನೋಡುವುದೇ ಒಂದು


ಆನಂದ. ತಲೆಯ ಮೇಲಿನ ಕೂದಲು ಉದುರಿ ಹಿಂದೆ ಹೋಗಿದ್ದರೂ ತಾರುಣ್ಯದ ತುಂಟತನ ಮುಖದಿಂದ ಮಾಸಿಲ್ಲ. ನಿದ್ದೆಗೆಟ್ಟು-ತಾಳ್ಮೆಗೆಡದೆ ಅವಿರತ ತನ್ನ ರೋಗಿಗಳ ಬಗ್ಗೆಯೇ ಶ್ರಮಿಸುವ ಇವರು ತಮ್ಮ ಕಣ್ಣು ರೆಪ್ಪೆ ಮುಚ್ಚುವ ಅವಕಾಶವನ್ನೂ ಹೊಂದಿಲ್ಲವೇನೋ ಅನಿಸುತ್ತದೆ. ತಿಳಿ ಹಾಸ್ಯ ತುಂಬಿದ ವಾಕ್ ಶೈಲಿಯಲ್ಲಿ ಮಾತನಾಡುತ್ತ ಘಂಟೆಗೊಮ್ಮೆ ವ್ಹಿಸ್ಕಿ ಗ್ಲಾಸಿನಲ್ಲಿ ಶುದ್ಧ ಚಹಾ ಸೇವಿಸುವುದೇ ಅವರ ವಿಶ್ರಾಂತಿ. ಇವರ ಕೈಚಳಕವನ್ನು ಆಪರೇಶನ್ ಥೀಯೆಟರಿನಲ್ಲಿಯೇ ನೋಡಬೇಕು.

ದೃಶ್ಯ : ೩.

ಆಪರೇಶನ್ ಥಿಯೇಟರ್.

ತಾ. ೩. ಜುಲೈ ೧೯೭೮ರ ರಾತ್ರಿ ೧೦ ಗಂಟೆ.

ಎಲ್ಲ ಆಪರೇಶನ್ ಥಿಯೇಟರ್‌ಗಳ ಅದೇ ಸ್ವಚ್ಛ ನೀರವತೆ. ಹನ್ನೆರಡು ಜನ ಆಗಾಗಲೇ ಸೇರಿದ್ದರು. ಆಪರೇಶನ್ ಮಾಡಲ್ಪಡುವ ವ್ಯಕ್ತಿಗೆ [illegible] ಮಲಗಿಸಲಾಗಿತ್ತು. ಡಾಕ್ಟರು ನನ್ನನ್ನು ಹತ್ತಿರ ಬರುವಂತೆ ಕರೆದರು. ರೋಗಿಯ ಮುಖವೆಲ್ಲ ಬಟ್ಟೆಯಿಂದ ಮುಚ್ಚಿ ಕಣ್ಣು ಮಾತ್ರ ಹೊರಗಿತ್ತು. ಕಣ್ಣು ರೆಪ್ಪೆಗಳನ್ನು ಬಿಡಿಸಿ, [illegible] ತೆರೆದಿರುವಂತೆ ತೆಗೆದು ಅದು ಹಾಗೇ ಉಳಿಯುವಂತೆ ಹೊದಿಸಿದ್ದ ಬಟ್ಟೆಗೆ ಪಿನ್ನು ಹಾಕಿ ತೆರೆದು ಇಡಲಾಯಿತು. ಕಪ್ಪಾಗಿರಬೇಕಿದ್ದ ಕಣ್ಣಾಲಿ. (ಕಣ್ಣಿನ ಕರಿಗುಡ್ಡೆ), ರೋಗಗ್ರಸ್ತವಾದ್ದರಿಂದ ಕಪ್ಪು ಬಿಳುಪಾಗಿತ್ತು. ಅತಿ ಸೂಕ್ಷ್ಮ ಉಪಕರಣಗಳನ್ನು ಬೆರಳ ತುದಿಯಲ್ಲಿ ಹಿಡಿದು ಆ ಕಣ್ಣಾಲೆಯ ಅಳತೆ ತೆಗೆದುಕೊಳ್ಳಲಾಯಿತು. ಅದೇ ಅಳತೆಗೆ ದಾತೃವಿನ ಕಣ್ಣುಗುಡ್ಡೆಯ ಕಣ್ಣಾಲೆಯ (ಪರೆ?)ಯನ್ನು ಕತ್ತರಿಸಿಕೊಂಡು, ಕಸಿ ಮಾಡಲ್ಪಡುವ ನಿರುಪಯುಕ್ತ ಕಣ್ಣಾಲೆಯನ್ನು ತೆಗೆದು ಅದೇ ಸ್ಥಾನದಲ್ಲಿ ಕಸಿಮಾಡಬೇಕಾದ ಕಣ್ಣಾಲೆಯನ್ನು ಇಟ್ಟು ಹೊಲಿಗೆ ಹಾಕಲಾಯಿತು. ಇದು ತುಂಬ ಸ್ಥೂಲ ವಿವರ ಅಷ್ಟೇ. ಯಾಕೆಂದರೆ. ಪ್ರತಿ ಕ್ರಿಯೆಯೂ ಅಷ್ಟೊಂದು ಸೂಕ್ಷ್ಮ ಹಾಗೂ ಸಂವೇದನಾಶೀಲವಾಗಿತ್ತು. ಕಣ್ಣಲ್ಲಿ ಅಕಸ್ಮಾತ್ ಧೂಳಿನ ಕಣವೊಂದು ಬಿದ್ದರೆ ನಾವೆಷ್ಟು ತಾಪ ಪಡುತ್ತೇವೆ. ನಮಗೆಲ್ಲ ಗೊತ್ತು.



ಹೂ ಬಿದ್ದ ಕಣ್ಣಾಲಿ

...ವಾಗಿರುವಾಗ ಕಣ್ಣಾಲೆಯನ್ನು ಕತ್ತರಿಸಿ ತೆಗೆದು, ಅದೇ ಸ್ಥಾನದಲ್ಲಿ ಮತ್ತೊಂದನ್ನು ಜೋಡಿಸಿ ಸೂಕ್ಷ್ಮಾತಿಸೂಕ್ಷ್ಮ ಕೂದಲೆಳೆಯಂತಿರುವ ತಂತಿಯಿಂದ ಹೊಲಿಗೆ ಹಾಕುವ ಕೆಲಸ ನಿಜಕ್ಕೂ ತುಂಬ ತಾಳ್ಮೆ–ಪರಿಶ್ರಮ–ಎಚ್ಚರಿಕೆಯದೇ ಆಗಿದೆ. ಆ ಕ್ಷಣಕ್ಕೆ ರೋಗಿ ವಿಸ್ಮೃತಿಯಲ್ಲಿದ್ದರೂ ಸಹ ಸ್ಮೃತಿ ಬಂದ ನಂತರವಾದರೂ ಆ ನೋವು ಅಸಹನೀಯವಾಗ ಬಾರದಲ್ಲ? ಏನೇ ಇದ್ದರೂ ಕಸಿ ಪರಿಪೂರ್ಣವಾಗ ಬೇಕು ತಾನೇ? ಇಂದು ಬಹಳ ಜನ ಇದನ್ನು ಸಾಧಿಸಿದ್ದಾರೆ. ಹುಬ್ಬಳ್ಳಿಯ ನೇತ್ರತಜ್ಞ ಡಾ. ಜೋಶಿ ಅಂಥವರಲ್ಲಿ ಕೇವಲ ಒಬ್ಬರಲ್ಲ–ಕೆಲವರಲ್ಲಿ ಒಬ್ಬರು.

ಚಿತ್ರ ೧, ೨ ಹಾಗೂ ೩ ರಲ್ಲಿ ಅನುಕ್ರಮವಾಗಿ ಆದ ಬದಲಾವಣೆ. ತುಂಬ ಪರಿಣಾಮಕಾರಿಯಾದದ್ದು. ಗಾಢಾಂಧಕಾರದಲ್ಲಿದ್ದ. ಜೀವನವನ್ನು ಕಣ್ಣಾಲೆಯಲ್ಲಿಯೇ ಕಳೆಯುತ್ತಿದ್ದ. ದುರ್ದೈವಿ ಅಂಧರಿಗೆ ಇದೊಂದು ಅಪೂರ್ವ ಅವಕಾಶದ ದಾರಿಯಾಗಿದೆ. ವೈದ್ಯಕೀಯ ವಿಜ್ಞಾನ ಇಷ್ಟೆಲ್ಲ ಮುನ್ನಡೆದಿದೆ. ಆದರೆ ಅದನ್ನು ಪರಿಣಾಮಕಾರಿಯಾಗಿ ಅಳವಡಿಸುವವರು ಅಷ್ಟು ಮಾಡಿಲ್ಲ. ಡಾ. ಜೋಶಿಯವರು ಹೇಳುವಂತೆ, ತನ್ನ ಹತ್ತಿರ ಅಂಥ ಒಂದು ಸಾಧನೆ ಇದೆ. ಜನ ಅದರ ಪ್ರಯೋಜನವನ್ನು ಹೆಚ್ಚು–ಹೆಚ್ಚಾಗಿ ಪಡೆದುಕೊಳ್ಳಬೇಕು ಎಂದು ಕೇವಲ ಹಣಕ್ಕಾಗಿ ಮಾಡುವ ಉದ್ದೇಶ ಅವರದು ಸರ್ವಥಾ ಅಲ್ಲ. ಮಾನವೀಯ ಅನುಕಂಪದ ದೃಷ್ಟಿಯಿಂದ, ಇದೊಂದು ತಾನು ನೀಡಬಹುದಾದ ಜನಸೇವೆ ಎನ್ನುತ್ತಾರೆ ಅವರು. ಮಹಿಪತರಾವ್ ಟ್ರಸ್ಟ್ ಎಂಬ ಜನಹಿತಕಾರೀ ಸಂಸ್ಥೆಯನ್ನು ಸ್ಥಾಪಿಸಿ, ತನ್ನ ಆಸ್ಪತ್ರೆಯಲ್ಲಿಯೇ ಒಂದು ನಿಗದಿ ಪಡಿಸಿದಷ್ಟು ಸಂಖ್ಯೆಯ ಕಣ್ಣುರೋಗಿಗಳಿಗೆ ಸಂಪೂರ್ಣ ಔಷಧೋಪಚಾರ ಶುಶ್ರೂಷೆಯನ್ನು ಪ್ರತ್ಯಕ್ಷವಾಗಿ ಸಲ್ಲಿಸುವ ಯೋಜನೆಯನ್ನು ಇಟ್ಟುಕೊಂಡ ಅವರಿಗೆ "ದುಡಿಮೆ ಹಣಕ್ಕಾಗಿ" ಎಂಬುದು ಗೌಣ. ನೇತ್ರರೋಗ ನಿದಾನ, ಶುಶ್ರೂಷೆ, ಹಾಗೂ ಚಿಕಿತ್ಸೆಯಲ್ಲಿ ಪ್ರಗತಿಪರ, ವೈಜ್ಞಾನಿಕ ಹಾಗೂ ಆಧುನಿಕ ಸಲಕರಣೆಗಳ ಸವಲತ್ತನ್ನು ನಮ್ಮವರು ಕೂಡ ಪಡೆಯಲೆಂಬ ಉತ್ಕಟ ಅಪೇಕ್ಷೆ ಅವರದು.

ನೂರಕ್ಕೆ ನೂರರಷ್ಟು ಯಶಸ್ಸು ಸಾಧಿಸುವ ಕಣ್ಣಾಲಿಯ ಕಸಿ ವಿಧಾನ ನಿಜಕ್ಕೂ ಒಂದು ಸಾಧನೆ.



ಕಣ್ಣಾಲಿ ಕಸಿ ಮಾಡಿದ ನಂತರ ಸಾಧಾರಣ ಪರಿಣಾಮ [illegible] ಕಣ್ಣು



ಕಣ್ಣಾಲೆ ಕಸಿಯ ನಂತರ ಪೂರ್ತಿ ಯಶಸ್ವಿ ಪರಿಣಾಮ ದೊರೆತ ಕಣ್ಣು

ಮಾನವ ದೇಹ ತನಗಂಟಿಸಿಕೊಂಡ ಹೊಸ ಅಂಗದೊಡನೆ ಹೊಂದಾಣಿಕೆ ಪಡೆದು ನೈಸರ್ಗಿಕವಾಗಿ ತನ್ನ ಕಾರ್ಯ ನಡೆಸಿಕೊಳ್ಳುವುದು ಪ್ರಕೃತಿಯ ಪವಾಡವೇ ಸರಿ. ಆಪರೇಶನ್ ಆದ ಒಂದು ತಿಂಗಳ ತರುವಾಯ ಹೊಲಿಗೆಯನ್ನು ಬಿಚ್ಚಬೇಕಾಗುವದು. ಆದರೆ ಆ ವೇಳೆಗಾಗಲೇ, ಹೊಂದಾಣಿಕೆಯಾದ ಭಾಗದಲ್ಲಿ ಹಾಕಿದ ಸೂಕ್ಷ್ಮ ತಂತಿಯ ಚೂರುಗಳು ಕಳಚಿ ಬೀಳುತ್ತವಂತೆ ! ಒಟ್ಟು ಶುಶ್ರೂಷೆಯ ಅವಧಿ ಮೂರು ತಿಂಗಳು. ಆ ತರುವಾಯ ಅಂಧನೊಬ್ಬ ಬೇರೊಬ್ಬನ ಕಣ್ಣಾಲೆಯ ಮೂಲಕ ಜಗತ್ತಿನ ಬೆಳಕನ್ನು – ಬಣ್ಣವನ್ನು – ರೂಪವನ್ನು – ಕುರೂಪವನ್ನು ನೋಡಬಲ್ಲವನಾಗುತ್ತಾನೆ. ಕಸಿ ಮಾಡಲು ವಿದೇಶೀಯರ ನೀಲಿ ಕಣ್ಣಾಲೆಗಳಿಗಿಂತ ಭಾರತೀಯರ ಕಂದು ಬಣ್ಣದ ಕಣ್ಣಾಲೆಗಳೇ ಹೆಚ್ಚು ಸುಲಭವಂತೆ. ಇದರಲ್ಲಿ ಇನ್ನೂ ಹಲವಾರು ವೈಶಿಷ್ಟ್ಯಗಳಿವೆ. ಕಣ್ಣಾಲೆಯ ದಾತೃ ಮತ್ತು ಪಡೆಯುವ ವ್ಯಕ್ತಿಗಳ ವಯಸ್ಸು–ಲಿಂಗಭೇದವಿಲ್ಲ. ಜಾತಿಭೇದವಂತೂ ಮೊದಲೇ ಇಲ್ಲ. ಅತಿ ಸಾಮಾನ್ಯ ಭಾಷೆಯಲ್ಲಿ ಅರಿತುಕೊಳ್ಳುವುದಾದರೆ: ಕಣ್ಣಾಲೆ ಕಣ್ಣುಗುಡಿಯಿಂದ ಬೇರ್ಪಡಿಸಿದ ತರುವಾಯ ಜೀವಾಣುಗಳನ್ನು ಹೊಂದಿದ "ಕಾಂಟಾಕ್ಟ್ ಲೆನ್ಸ್" (Contact lense) ಇದ್ದಂತೆಯೇ ಸರಿ. ರೋಗನಿದಾನ ಸರಿಯಾಗಿ ಮಾಡಿ, ದಾನಿಯ ಕಣ್ಣುಗುಡ್ಡೆಯನ್ನು ಕಾಪಾಡಿಕೊಂಡು, ರೋಗಗ್ರಸ್ತ ಭಾಗವನ್ನು ಉಳಿದ ಸೂಕ್ಷ್ಮಾತಿಸೂಕ್ಷ್ಮ ನಂತಂತುಗಳಿಗೆ ಧಕ್ಕೆಯಾಗದಂತೆ ತೆಗೆದು ಪುನಃ ಅದೇ ಅಳತೆಗೆ ಕೊರೆದು ಅಳವಡಿಸಿ ಕೂಡಿಸುವ ಈ ವೈದ್ಯಕೀಯ ವಿಸ್ಮಯವನ್ನು ನೋಡಿದಾಗಲೇ ವಿಶ್ವಾಸ ಮೂಡುವದು– ಆದರೂ ನುರಿತ ಕೈಬೆರಳುಗಳಿಗೆ ಇದೇನೊಂದು ಹೊಸ ವಿಸ್ಮಯವಲ್ಲ. ಈ ಚಿಕಿತ್ಸೆಗೆ ಕಣ್ಣುಗುಡ್ಡೆಯ ಉಳಿದ ಭಾಗ ಸರಿಯಾಗಿರಬೇಕಾಗುತ್ತದೆ. ಇಡಿಯ ಕಣ್ಣುಗುಡ್ಡೆಯನ್ನು ಕಿತ್ತು ಹೊಸದಾಗಿ ಹಾಕುವುದು ಇನ್ನೂ ಸಾಧ್ಯವೆನಿಸಿಲ್ಲ. ಆ ಕಾಲವೂ ಬರಬಹುದಾಗಿದೆ. ಅಥವಾ ನೇತ್ರದಾನ ಮಾಡಿದ ವ್ಯಕ್ತಿಯ ಸಾವಿನ ಬರವನ್ನೇ ನೋಡುತ್ತ ಕಣ್ಣಲ್ಲಿ ಕಾದಿರಬೇಕಾದ ದಾರುಣ ಪ್ರಸಂಗಕ್ಕಿಂತ ಕೃತ್ರಿಮ ಕಣ್ಣಾಲೆಗಳೇ ಸಿದ್ಧವಾಗಲೂಬಹುದು. ಅಂಥ ಸಾಧನೆಯ ಬೆಳಗನ್ನು ಪಡೆದ ನಮ್ಮ ವಿಜ್ಞಾನಿಗಳೂ ವೈದ್ಯರುಗಳೂ ಧನ್ಯ ಎನಿಸಿತು. ✡

ನಿಮ್ಮ ಶಬ್ದಭಂಡಾರ ಬೆಳೆಯಲಿ

ಶಬ್ದಭಂಡಾರವು ಹಣದ ಭಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ಮಸಕ

(ಅ) ಸೊಳ್ಳೆ (ಆ) ರಭಸ (ಇ) ಹರಿತ (ಈ) ಬೆಣ್ಣೆ

೨. ಮಶಕ

(ಅ) ಸೊಳ್ಳೆ (ಆ) ತಿಕ್ಕಾಟ (ಇ) ದೀವಟಿಗೆ (ಈ) ಮುಷ್ಟು

೩. ಹೊದಕುಳಿ

(ಅ) ಸೆರಗು (ಆ) ಸೇರಿಕೆ (ಇ) ಉರು-ಳುವಿಕೆ (ಈ) ದುಃಖ

೪. ಹುದುಗು

(ಅ) ಕೆಸರು (ಆ) ಅನ್ಯೋನ್ಯ ಪ್ರೀತಿ (ಇ) ಅಡಗಿಕೊಳ್ಳು (ಈ) ಉತ್ಸಾಹ

೫. ಗ್ರಾಹ್ಯ

(ಅ) ಮೊಸಳೆ (ಆ) ಗಿರಾಕಿ (ಇ) ನಿಂದಿಸ-ತಕ್ಕ (ಈ) ಸ್ವೀಕರಿಸಬಹುದಾದ

೬. ಗ್ರಾಮ್ಯ

(ಅ) ಅಸಂಸ್ಕೃತ (ಆ) ಒಪ್ಪಿಕೊಳ್ಳ-ಬೇಕಾದ (ಇ) ಗುಟ್ಟಾದ (ಈ) ಬಿಸಿ ಬಿಸಿಯಾದ

೭. ಎಣೆ.

(ಅ) ಸಂಶಯ (ಆ) ಸರಿಜೋಡಿ (ಇ) ಆಲೋಚನೆ (ಈ) ಸಣ್ಣತನ

೮. ಏಣ

(ಅ) ಹೊರೆ (ಆ) ಜಿಂಕೆ (ಇ) ಅಂಚು (ಈ) ಪಾಪ

೯. [illegible]

(ಅ) [illegible] (ಆ) ಪೂರ್ಣವಾಗದ (ಇ) ಗದ್ಯ (ಈ) ಪುರಾತನ

೧೦. ಆರ್ಜವ

(ಅ) ಸಂಪಾದನೆ (ಆ) ಮೋಸಗಾರ (ಇ) [illegible] (ಈ) ಸರಳತನ

೧೧. ದೌಹಿತ್ರ

(ಅ) ದೂರದ (ಆ) ಗೌಳಿಗ (ಇ) ಮೊಮ್ಮಗ (ಈ) ಕೇಡಿಗ

೧೨. ಧೌತ

(ಅ) ವಂಚಕ (ಆ) ಶುಭ್ರ (ಇ) ಪ್ರತಿನಿಧಿ (ಈ) ಅಹಂಕಾರಿ

೧. ಮಸಕ (ಅ) ರಭಸ, ಆವೇಗ; ಹೆಚ್ಚಳ; ತಳಮಳ; ಸಿಟ್ಟು; ಕಪಟ. ಉದಾ :— ಅವನ ಮಸಕವನ್ನು ಎದುರಿಸುವುದು ಕಷ್ಟ; ಕಣ್ಮಸಕ = ನೋಟದ ಭ್ರಾಂತಿ. [ಕನ್ನಡ, ಮಸಗು = ವ್ಯಾಪಿಸು.]

೨. ಮಶಕ (ಅ) ಸೊಳ್ಳೆ, ನುಸಿ. ಉದಾ:- ಮಶಕದಂಶ = ಸೊಳ್ಳೆ ಕಡಿತ. [ಸಂ.]

೩. ಹೊದಕುಳಿ (ಈ) ದುಃಖ, ವ್ಯಥೆ, ನೋವು; ಉದಾ:- ಹೊದಕುಳಿಗೊಳ್ಳು, ಹೊದಕುಳಿಗುಟ್ಟು = ತಾಳಲಾರದ ವ್ಯಥೆಯಿಂದ ಬಳಲು. [?]

೪. ಹುದುಗು (ಇ) ಅಡಗಿಕೊಳ್ಳು, ಮರೆಸೇರು, ಸಂಕೋಚಪಡು. ಉದಾ :— ಹುದುಗಿದ ಅರ್ಥ, ಉದುಗಿಕೊಳ್ಳುವ ಸ್ವಭಾವ. [ಕನ್ನಡ, ಪುದಿ = ಪ್ರವೇಶಿಸು— ಇಂದ]

೫. ಗ್ರಾಹ್ಯ (ಇ) ಸ್ವೀಕರಿಸಬಹುದಾದ, ಒಪ್ಪಿಕೊಳ್ಳಬಹುದಾದ; ಹಿಡಿಯಬಹುದಾದ. ಉದಾ :— ಈ ಸೂಚನೆ ಗ್ರಾಹ್ಯವಾಗಿದೆ. [ಸಂ.]

೬. ಗ್ರಾಮ್ಯ (ಅ) ಅಸಂಸ್ಕೃತ, ಅವಿದ್ಯಾವಂತ; ಅಸಾಧು, ಹಳ್ಳಿಗಾಡಿನ. ಉದಾ:- ಗ್ರಾಮ್ಯ ಪ್ರಯೋಗ = ಅಶುದ್ಧ ಪ್ರಯೋಗ. [ಸಂ. ಗ್ರಾಮ = ಹಳ್ಳಿ-ಯಿಂದ]

೭. ಎಣೆ (ಅ) ಸರಿಜೋಡಿ; ಸಮಾನ; ಜೊತೆ; ನೆತ್ತಿ. ಉದಾ :-ಎಣೆಗೂಡು = ಜೋಡಿಯಾಗು; ಎಣೆಯಿಲ್ಲದ = ಸಮಾನರಿಲ್ಲದ. [ಕನ್ನಡ]

೮. ಎಣು (ಇ) ಅಂಚು, ತುದಿ; ಮೊನೆ. ಉದಾ :— ಕಂದ ಕದ ಎಣನವರೆಗೂ ಬಂದನು. [ಕನ್ನಡ]

೯. ಆರ್ದ್ರ (ಅ) ಒದ್ದೆ, ತೇವವಾದ; ಹಸಿ; ಮೃದು; ಹಸಿ ಶುಂಠಿ. ಉದಾ :— ನೆಲ ಆರ್ದ್ರವಾಗಿದೆ; ಆರ್ದ್ರವಾದ ಮನಸ್ಸು. [ಸಂ.]

೧೦. ಆರ್ಜವ (ಈ) ಸರಳತನ, ನೇರ್ಪು; ಪ್ರಾಮಾಣಿಕತನ; ನಮ್ರತೆ; ಉದ್ವೇಗವಿಲ್ಲದಿರುವಿಕೆ. ಉದಾ :— ಅವನ ಆರ್ಜವಕ್ಕೆ ಮೆಚ್ಚಿದ್ದೇನೆ. [ಸಂ. ಋಜು = ನೆಟ್ಟಗೆ— ಇಂದ]

೧೧. ದೌಹಿತ್ರ (ಇ) ಮೊಮ್ಮಗ, ಮಗಳ ಮಗ. [ಸಂ. ದುಹಿತೃ = ಮಗಳು— ಇಂದ]

೧೨. ಧೌತ (ಅ) ಶುಭ್ರ, ಸ್ವಚ್ಛವಾದ; ಒಗೆದ, ತೊಳೆದ; ಬೆಳ್ಳಿ. ಉದಾ :— ಧೌತವಸ್ತ್ರ = ಒಗೆದ ಬಟ್ಟೆ. [ಸಂ. ಧಾವ್ = ಒಗೆ – ಇಂದ]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂಬು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯—೧೦ ”	...	ಉತ್ತಮ
೧೧—೧೨ ”	...	ಅತ್ಯುತ್ತಮ

ಕವಿ ಮತ್ತು ಕೋಗಿಲೆ

ಪಾ.ವೆಂ.ಆಚಾರ್ಯ

ಕುಡಿದು ಗಡದ್ದಾಗಿ
ಮಲಗಿದ್ದ
ಕವಿ
ಎದ್ದ
ಊರ ಹೊರಗಿನ ಗಟಾರದಿಂದ
ಜನ್ಮದಲ್ಲೇ ಮೊದಲ ಸಲ
ಬೆಳಗಿನ ಜಾವದಲ್ಲಿ,
ಬೆಳಗ್ಗೆ ತನಕ

ಎದ್ದ --
ಆದರೆ ಆದ ಸ್ತಬ್ಧ
ಮೇಲೆ ಎಲ್ಲಿಂದಲೋ ಕುಹೂಕುಹೂ ಕುಹೂಕುಹೂ
ಎಂಬ ರವ ಕೇಳಿದ್ದ.
ಜನ್ಮದಲ್ಲೇ ಮೊದಲು
ಅದು ಶುದ್ಧ.

ಇಷ್ಟು ಇದ್ದರೂ
ಅಮಲಿನ ಮಂದ
ಇದು ಕೋಗಿಲೆ ಅಲ್ಲವೇ
ಎಂದುಕೊಂಡ.

ಬೇಂದ್ರೆ, ಏನೇ ಇದರ ಮೇಲೆ
ಪದ ಮಾಡಿಲ್ಲವೇ?
ಕುವೆಂಪು ಕೇಳಲಾಗಿಲ್ಲ
ಇದು ಕೂಡಿಲ್ಲವೇ?
ಎಂದು ನಕ್ಕ.
ನಗು ಅವನಿಗೇ ಅನಿಸಿತು
ಸ್ವಲ್ಪ ಶುಷ್ಕ.

ಕವಿಯ ಕಿವಿ ಕೇಳುತ್ತಿತ್ತು
ಮೈಲಿ ನವಿರೇಳುತ್ತಿತ್ತು.
ನಾನೂ ರೊಮ್ಯಾಂಟಿಕ್ ಆದೆನೇ
ಅಂತ ಶಂಕೆ ಬಂದು.
ಅಲ್ಲ ವ್ಹಿಸ್ಕಿಯ ಪ್ರಭಾವ
ಎಂದುಕೊಂಡು
ಹೊರಟ ಅಲ್ಲಿಂದ ಕಾಲು ಕಿತ್ತು

(ಧಾರವಾಡದ ಪುಸ್ತಕ ಪ್ರಕಾಶನದವರು ಪ್ರಕಟಿಸಿದ 'ಕೆಲವು ಪದ್ಯಗಳು' ಸಂಕಲನದಿಂದ)



ಐಟೆಕ್ಸ್
ಸೌಂದರ್ಯ ಸಾಧನಗಳು
EYETEX
BINDI®
DELUXE
MATT FINISH
EYETEX
BINDI
DELUXE
EYETEX
BINDI
EYETEX
BINDI
EYETEX
KAJAL
ARAVIND LABORATORIES MADRAS-600 033
AL-KAN 11

ಕಾವ್ಯ-ನಾಟಕ

* ಸತ್ಯಕಾಮ

ಪ್ರೇಯದ ಹೆಣ್ಣು!
ಅದೂ ಈಜು ವೇಷದಲ್ಲಿ.

ಸಾಲದ್ದಕ್ಕೆ ಈಜಿ ಬಂದ ರಭಸದಿಂದ ಉಸಿರಾಟ ಜೋರೆ. ಭಾರವೆನ್ನಿಸುವಷ್ಟು ಗಂಡಿನ ಕಣ್ಣುಗಳ ಹೊರೆ. ಅದರಲ್ಲಿ ಹೆಣ್ಣೊ ಒಂದೆ ಜಿದ್ದಿರಲಿಕ್ಕಿಲ್ಲ. ನನ್ನ ಓರಗೆಯವರ ಕೂಗಾಟ ಕಿವಿಗೆ ಹಿತವಾಗಿತ್ತು. ಗೆಲುವಿಗಾಗಿ ನನ್ನ ಸುತ್ತಲು ನೆರೆದ ಬಾಯಿಗಳ ಸ್ತುತಿಪಾಠ. ನನ್ನ ಜಯಘೋಷ ಹರಿಯುವ ನದಿಯ ಮೇಲೆ ಹೆಪ್ಪುಗಟ್ಟಿ ಗೋಪುರಗೊಂಡಿ-ತ್ತು. ನೆನೆದ ನನಗೆ ಆ ಹೊಗಳಿಕೆಯ ಕಾವು ಹಿತವೆ-ನ್ನಿಸುತ್ತಿತ್ತು.

ನಾನು ಪಕ್ಕಕ್ಕೆ ಕಣ್ಣು ಹೊರಳಿಸಿದೆ. ಮೈ ತಂಬಿದ ಗಂಡು. ನನ್ನ ವೇಷದಲ್ಲಿಯ ವಜ್ರದ ಮೈಯ ಆತ ನನ್ನು ನಾನು ನೆನೆದ ರೆಪ್ಪೆಗಳನ್ನು ಬಡಿಯದೆ ನೋಡಿದೆ.

"ನಿಮ್ಮ ಗೆಲುವಿಗೆ ಅಭಿನಂದನೆ."

ಆ ಕಂಠದಲ್ಲಿ ಒಂದು ಬಗೆಯ ಕಂಪು.

ಆ ಮಾತು ಕೇಳಿಯೆ ನನ್ನ ಮೈಯಲ್ಲಿ ಒಂದು ಬಗೆಯ ಮಿಂಚು ಹರಿದಾಡಿತು. ನನ್ನ ಮೈಗೂ ದಲು ನೆಟ್ಟಗಾದವು. ನನ್ನ ಮುತ್ತಿದ ಗೆಳತಿಯ ರಿಗೆ ಇದು ಚಳಿನೆನಕೆ ಇರಬೇಕು, ಎಂದಿರಬಹುದು. ವಿಜಯಕ್ಕಾಗಿ ಅಭಿನಂದಿಸಲು ನನ್ನ ಮುತ್ತಿದ ಅವರ ಕಡೆಗೆ ಕಣ್ಣೆತ್ತದ ನನ್ನ ಕೃತಿಯ ಬಗ್ಗೆ ನನಗೇ ಅಲ್ಲ ಎನ್ನಿಸಿತು. ಆದರೆ ಕಣ್ಣು ಕಿತ್ತುಕೊಳ್ಳುವುದು ನನ್ನ ಕೈಯಲ್ಲಿ ಇರಲಿಲ್ಲ. ಯಾವಳೊ ಅಂದಳು.

"ನದೀ ಈಸಿದರೂ ಹುದಿಲು ಕೀಳದೆ ಇದ್ದಾಳೆ."

ಆಗ ನಾನು ಕಣ್ಣು ಕಿತ್ತೆ. ನೋಡುತ್ತೇನೆ; ಅದು ವೃಂದಾನ ತುಟಿ ಬರದ ಮಾತೆಂದು ನನಗೆ ತಿಳಿ ಯಿತು. ಎಂದಿಗೂ ಅವಳ ಮಾತಿಗೆ ಅಷ್ಟು ಮೊನಚು ಇರುವುದನ್ನು ನಾನು ಬಲ್ಲೆ. ವೃಂದಾ ನನ್ನ ಹೃದಯಕ್ಕೆ ತುಂಬ ಹತ್ತಿರದ ಗೆಳತಿ. ನನ್ನ ಕಣ್ಣು ವೃಂದಾನ ಮುಖದಲ್ಲಿ ನಿಲ್ಲಲೇ ಒಲ್ಲದು. ಪಕ್ಕದಲ್ಲಿರುವ ಹೊಸ ಹರೆಯ ನನ್ನನ್ನು ಸೆಳೆಯು ತ್ತಲೇ ಇತ್ತು. ಈಜುವಾಗ ಸರಯೂ ನೀರು ನನ್ನನ್ನು ಇಷ್ಟು ಪಳಿಸುತ್ತಿದ್ದಿಲ್ಲವೆಂಬ ಅನುಭವ.

ಹರವಾದ ಎದೆ, ನೀಳವಾದ ತೋಳುಗಳು, ಅದೇ ಇನ್ನೂ ನೀರಿನಲ್ಲಿ ಅದ್ದಿದ ಬಿಗಿ ಮೈ ಒಂದು ದೃಷ್ಟಿ ಯಿಂದ ಮಾದಕವಾಗಿತ್ತು. ಸರಯೂನಲ್ಲಿ ಮೀ ಯುವ ಹರೆಯದ ಹುರಿಮೈಯನ್ನು ಅದೆಷ್ಟೋ ಸಲ ಅರೆಗಣ್ಣಿನಿಂದ, ಅರಳಿದ ಕಣ್ಣಿನಿಂದ ನೋಡಿದ್ದೆ. ಆ ನೋಟಗಳಲ್ಲೆಲ್ಲ ಒಂದು ಬಗೆಯ ಕಳ್ಳತನ ವಿತ್ತು. ನಾನು ಅಪರಾಧಿ ಎಂಬ ನಡುಕ ಇತ್ತು. ಇಂದು ನನಗೆ ಹಾಗೆ ಅನ್ನಿಸಿಲ್ಲ.

ಸಾಕೇತದ ಸಾವಿರ ಗಂಡುಗಳನ್ನೂ ಕಂಡಿದ್ದೇನೆ. ಅವರ ಕೈ ಮೈ ಬಣ್ಣ ಎಲ್ಲ ನೋಡಿದ್ದೇನೆ.

ಆದರೆ ನನ್ನ ಮನಸ್ಸನ್ನು ಇವನಷ್ಟು ಅಲ್ಲಾಡಿ

ಸಿದವನು ಇವನೆ! ಆತ ನನ್ನನ್ನು ನೋಡಿದ. ನಾನು ಅರಳುಗಣ್ಣಿನಲ್ಲಿ ನೋಡಿದೆ. ಅವನ ಕಣ್ಣಲ್ಲಿ ನನ್ನ ನಗುವ ಗೊಂಬೆ ಕಾಣುತ್ತಿತ್ತು. ಅವನ ಕೊರಳಲ್ಲಿ ಹೂಮಾಲೆಗಳ ಸಂತೆ. ನನ್ನ ಕೊರಳ ತುಂಬ ಅವೇ ಇದ್ದವು.

ಅವನು ನೀರಿನಿಂದ ಮೇಲೆ ಎದ್ದ.

ಗೆಳತಿಯರು ನನ್ನನ್ನು ಕೈ ಹಿಡಿದು ನಿಲ್ಲಿಸಿದರು. ಸೋಪಾನ ಮಾರ್ಗವನ್ನು ಕ್ರಮಿಸಿ ಸರಯೂ ಬಿಟ್ಟು ಮೇಲೆ ಬಂದೆವು. ಹಿಂದೆ ಹರಿದು ಹೋ



ಗುವ ಸರಯೂ. ಕಣ್ಮುಂದೆ ಅಪಾರ ಜನಸಮುದ್ರ. ಆತ ಮತ್ತಗಜದಂತೆ ಗಂಭೀರನಾಗಿ ನಡೆದಿದ್ದ. ನಾನೂ ಬಹಳ ಗಂಭೀರಳಾಗಿದ್ದೆ ಎಂದು ಗೆಳತಿ ಹೇಳುತ್ತಾಳೆ. ಆದರೆ ನಾನು ತುಂಬ ಚಂಚಲೆಯಾಗಿದ್ದೆ. ಮನಸ್ಸಿನಲ್ಲಿ ಏನೋ ಒಂದು ವಿಧ. ಆಗಾಗ ಫಕ್ಕನೆ ಅಲ್ಲಿ ಬೆಳಕು ಕತ್ತಲೆಗಳ ಕಣ್ಣು ಮುಚ್ಚಾಲೆ. ನನ್ನ ಮನಸ್ಸಿನ ತುಮುಲ ಕಂಡು ಆತನಲ್ಲಿಯೂ ಹೀಗೆಯೆ ಇರಬಹುದೆ? ಇಲ್ಲ; ಹಾಗಿರಲಿಕ್ಕಿಲ್ಲ. ಅವನ ಕಣ್ಣಾಲಿ ಬಹು ಗಂಭೀರವಾಗಿ ಚಲಿಸುತ್ತಿದೆ. ಹುಬ್ಬಿಗೆ ಗಂಟು, ಮಣಿತ ಏನೂ ಇಲ್ಲ; ಚಿತ್ರದಲ್ಲಿ ಬರೆದ ಹಾಗಿದೆ.

ತುಟಿಯಲ್ಲಿ ಮಾತ್ರ ಆಗೀಗ ಬೆಳದಿಂಗಳು ಮಿಂಚಿ ಮಾಯವಾಗುತ್ತಿದೆ. ಸಾಕೇತದ ಮುಖ್ಯ ಬೀದಿಗಳಲ್ಲಿ ನಮ್ಮ ಮೆರವಣಿಗೆ. ನಾವಿನ್ನೂ ಅದೇ ಈಜುವಸ್ತ್ರದಲ್ಲೆ ಇದ್ದೆವು. ಮೈತುಂಬ ಹೂಮಾಲೆಗಳ ಸರ. ದಾರಿಯುದ್ದಕ್ಕೂ ನಮ್ಮ ಮೇಲೆ ಹೂ ಮಳೆ. ನಿತ್ಯವು ಗಾಳಿಗೆ ತೂರೆಯುವ ಮುಂಗುರುಳುಗಳನ್ನು ಮುಖದಿಂದ ಹಿಂದಕ್ಕೆ ಅಟ್ಟುವುದು ನನ್ನ ಕೈಗೆ ಅಭ್ಯಾಸವೇ ಆಗಿ ಹೋಗಿತ್ತು. ಆದರೆ ಇಂದು ಕೂದಲೆಲ್ಲ ನೆನೆದದ್ದರಿಂದ ಆ ಕಾಟ ಇಲ್ಲವೆಂದಿದ್ದೆ; ಆದರೆ ತಲೆಯ ಮೇಲೆ, ಕಿವಿಯವರೆಗೆ ಕಣ್ಣು ರೆಪ್ಪೆಯ ಮೇಲೆ ಬಿದ್ದ ಹೂಗಳನ್ನು ಕೈಯಿಂದ ನಿವಾರಿಸಲೇಬೇಕಿತ್ತು.

ಹಾದಿಹಾದಿಗೊಮ್ಮೆ ನಮ್ಮ ಪ್ರಶಂಸೆ, ಜಯಕಾರಗಳು. ನನಗೆ ಇದು ಅಹಂಕಾರವನ್ನು ಪ್ರಚೋದಿಸಿ ನೆಮ್ಮದಿಯನ್ನೇನೋ ತರುತ್ತಿತ್ತು. ಆದರೆ ಅದು ಒಮ್ಮೊಮ್ಮೆ ಕಡಿಮೆ ಹಿತವೆನ್ನಿಸುತ್ತಿತ್ತು. ಯಾಕೊ? ಹಲವು ಸಲ ಯೋಚಿಸಿದೆ; ನಾನೊಬ್ಬಳೆ ಈಜಾಟ ಗೆದ್ದಿದ್ದರೆ ಈ ಸಮಾರಂಭ ಇನ್ನೂ ಸಿಹಿ ಎನ್ನಿಸುತ್ತಿತ್ತೇನೋ. ಹೀಗೆನ್ನಿಸಿದಾಗ ಅವನ ಕಡೆಗೆ ನೋಡಿದೆ. ಅಡಿಯಿಂದ ಮುಡಿಯವರೆಗೆ ಮುಚ್ಚಿದ ಅವನ ಮೈ ಕಾಣಲಿಲ್ಲ. ನದಿಯ ದಂಡೆಯಲ್ಲಿ ಕಂಡ ಅವನ ಮೈ ನೆನಸಿಕೊಂಡೆ. ಮುಖ ನೋಡುತ್ತಲೆ ನವಿರುಗೊಂಡೆ. ಆದರೆ ನನ್ನ ಅನುಭಾವ ಮಾಲೆಯಲ್ಲಿ ಮೈ ಮುಚ್ಚಿರುವಾಗ ಇನ್ನಾರಿಗೆ ಕಾಣಬೇಕು?

ಖಂಡಿತವಾಗಿ ಆಗ ನನ್ನ ಮುಖ ಕೆಂಪೇರಿರಲು ಸಾಕು. ಸಾಕೇತದ ಆ ಸಮಾರಂಭದಲ್ಲಿ ನನ್ನ ಮುಖದ

ಕೆಂಪನ್ನು ಗಮನಿಸಬೇಕಾರು? ಪಕ್ಕದಲ್ಲಿರುವ ನನ್ನ ಗೆಳತಿಯರೇ ಅದನ್ನು ಅರಿತಿರಲಿಕ್ಕಿಲ್ಲ. ಮೆರವಣಿಗೆ ಆಮೆ ನಡಿಗೆಯಲ್ಲಿ ನಡೆದಿತ್ತು. ಅದು ನನ್ನ ಪಕ್ಕದಲ್ಲಿರುವವನ ಮನೆಯೇ ಇರಬೇಕು. ಒಳಗಿನಿಂದ ಯಾರೋ ಬಂದರು. ಪಾಪ ಹಿಂದೂ ಸಂಪ್ರದಾಯದ ಮುತ್ತೈದೆ. ಹಣೆ ತುಂಬ ಕುಂಕುಮ. ಗಲ್ಲದಲ್ಲಿ ಬಳಿದ ಅರಿಷಿಣ! ಕೈತುಂಬ ಬಳೆ, ಮುಖದ ಮೇಲೆ ದೊಡ್ಡ ಮನಸ್ಸನ್ನು ತುಳುಕುವ ಕಳೆ! ನಾನು ಕತ್ತು ಹೊರಳಿಸಿ ಅವಳನ್ನು ನೋಡಿದೆ.

ಕೈಯಲ್ಲಿ ಬೆಳ್ಳಿಯ ತಟ್ಟೆಯಲ್ಲಿ ಚಿನ್ನದ ನೀರಾಜನ. ನನ್ನ ಬಲಕ್ಕೆ ಇರುವವನ ಹಣೆಗೆ ಕುಂಕುಮ ಇಟ್ಟಳು. ಆರತಿ ಬೆಳಗಿದಳು. ತಲೆಯ ಮೇಲೆ ಹೂ ಹಾರಿಸಿದಳು. ಆ ಮಹಿಳೆ ಇನ್ನೇನು ಹೊರಡುವವಳು. ಪಕ್ಕದಲ್ಲಿ ನಾನು ಕಂಡೆ. ಒಂದು ಹೆಜ್ಜೆ ಅಡ್ಡ ಬಂದು ನನ್ನ ಹಣೆಗೂ ಕುಂಕುಮವಿಟ್ಟಳು. ಆರತಿ ಬೆಳಗಿದಳು. ತಲೆಯ ಮೇಲೆ ಹೂ ಹಾರಿಸಿದಳು. ನಾನು ಬಾಗಿ ಅವಳ ಪಾದ ಮುಟ್ಟಿ ನಮಸ್ಕರಿಸಿದೆ.

ನಾನು ಅವಳು ಹೋಗುವ ಮುಂದೆ ಅವಳ ಮುಖದಲ್ಲಿ ಹುಡುಕಾಡಿದೆ. ನನ್ನ ಕಂಡು ಅವಳಿಗೆ ಕಹಿ ಎನ್ನಿಸಿತೆ? ಅವಳು ಹಿಗ್ಗಿ ಅಗಲವಾದಳೆ? ನನಗೆ ಏನೂ ತಿಳಿಯಲೇ ಇಲ್ಲ. ನಾನು ಮತ್ತೂ ಹುಡುಕುತ್ತಲಿರುವಾಗಲೆ ಮೆರವಣಿಗೆ ಮುಂದೆ ಸಾಗಿತು.

ಮತ್ತೆ ತುಂಬಿದ ದಾರಿಯುದ್ದಕ್ಕೂ ನನ್ನ ಕಣ್ಣುಗಳು. ನಾನು ಪಕ್ಕದಲ್ಲಿಯೆ ನಡೆಯುತ್ತಿದ್ದ ಅವನ ಕಡೆಗೆ ಕಣ್ಣು ಹರಿಸಿದೆ. ನೀರಿನಲ್ಲಿ ನೆನೆದ ಚಳಿ, ಮೇಲೆ ಹೂಮಾಲೆಯ ತಂಪು. ಜನರ ನೆನಕೆ ಬೇರೆ. ಎಲ್ಲ ತಂಪು ಇದ್ದರೂ ನಾನು ಬೆವೆತೆ. ಯಾಕೋ? ನಾವಿಬ್ಬರೂ ಮಾಲೆ ಧರಿಸಿ ಜೋಡಿಯಾಗಿ ಮೆರವಣಿಗೆ ಹೊರಟ ದೃಶ್ಯ ನೋಡಿದೆ. ನಾವು ಹೇಗೆ ಕಾಣುತ್ತೇವೆ. ನನಗೇ ಗೊತ್ತಾಗಿಲ್ಲ. ಈಗ ಅದು ತಿಳಿದಾಗ ಕತ್ತು ಕೆಳಗಾಯಿತು. ಮುಖವೆಲ್ಲ ಕೆಂಪಾಯಿತು.

ಈಗ ಮೆರವಣಿಗೆ ಸಭಾಮಂಟಪಕ್ಕೆ ಬಂತು. ನನ್ನ ಗೆಳತಿಯರು ನನ್ನನ್ನು ಎಳೆದುಕೊಂಡು ಹೋದರು. ಅಲ್ಲಿ ನನಗೆ ಬೇರೆ [illegible] ದುಕೂಲ ಉಡಲು ಕೊಟ್ಟರು. ಶುಭ್ರವರ್ಣದ ದುಕೂಲ ಉಟ್ಟು ಅಂಥದೇ ರವಿಕೆ ತೊಟ್ಟೆ. ಪ್ರಂಪಾ ಕೊರಳಿಗೊಂದು ಮುತ್ತಿನ ಸರ ತೊಡಕಿಸಿ ಕೆನ್ನೆಗೊಂದು ಬಿಡಿ ಮುತ್ತೂ ಕೊಟ್ಟಳು. ಅಲ್ಲಿ ನಾವಷ್ಟೇ ಹುಡುಗಿಯರಿದ್ದರೂ ನನಗೇಕೊ ಒಂದು ತರಹ...

ಸಭೆಗೆ ಬಂದೆವು. ನನ್ನ ಪಕ್ಕಕ್ಕೆ ಆತ ಕುಳಿತಿದ್ದ. ಅವನ ವೇಷದಿಂದ ಆತ ಗುರುಕುಲದ ತರುಣ ಆಚಾರ್ಯನಿರಬೇಕೆಂದು ಭಾವಿಸಿದೆ. ಸಭೆಯಲ್ಲಿ ಸಾಕೇತದ ಸೇನಾಪತಿ ಬಾಯ್ತುಂಬ ನಮ್ಮನ್ನು ಪ್ರಶಂಸಿಸಿ ಈಜು ಪಂದ್ಯದಲ್ಲಿ ಗೆದ್ದುದಕ್ಕೆ ಇರುವ ರಾಜಮರ್ಯಾದೆಗಳನ್ನು ಓದಿಸಿದ. ಆಗಲೆ ನನ್ನ ಜತೆಗಿರುವ ವಿಜಯಿ ತರುಣನ ಹೆಸರು ಅಶ್ವಘೋಷ ಎಂದು ತಿಳಿಯಿತು.

ಸಭೆ ಮುಗಿಸಿಕೊಂಡು ಹೊರಕ್ಕೆ ಬರುವಷ್ಟರಲ್ಲಿ ನನ್ನನ್ನು ಗೆಳತಿಯರು ಎಳೆದರು. ಆತನನ್ನು ಗೆಳೆಯರು ಕೊಚ್ಚಿಕೊಂಡು ಹೋದರು.

ನಾನು ಹತ್ತು ಹಲವು ಸಲ ಅಶ್ವಘೋಷನನ್ನು ಕುರಿತು ಯೋಚಿಸಿದ್ದೆ. ಒಂದೆರಡು ವಾರ ಕಳೆದಿರಬೇಕು. ನಮ್ಮ ನಾಟಕ ಮಂಡಲಿಯವರು ನಮ್ಮದೊಂದು ಜಾನಪದ ನಾಟಕ ಪ್ರದರ್ಶನಕ್ಕೆ ಅವನಿಗೆ ಆಮಂತ್ರಣ ಕೊಡುವವರಿದ್ದರು. ಆಮಂತ್ರಣ ಕೊಡಲು ನಾನು ಮತ್ತು ಕಾಲಾವರ ಇಬ್ಬರೇ ಹೋದೆವು. ಅಶ್ವಘೋಷ ಸಾಕೇತದ ಗುರುಕುಲದ ಒಂದು ಕೋಣೆಯಲ್ಲಿ ಆಚಾರ್ಯರ ಜೊತೆಗೆ ಏನೋ ಚರ್ಚಿಸುತ್ತ ಕುಳಿತಿದ್ದ. ನಾನು ಅವನನ್ನು ನೋಡುತ್ತಲೆ—

"ಓಹೋ ನೀವು! ಇಷ್ಟು ದಿನ ನೋಡಲೆ ಇಲ್ಲವಲ್ಲ. ನೋಡಬೇಕೆನಿಸಿತ್ತು. ಆದರೆ ಹೇಗೆ ಎಂಬುದು ತಿಳಿಯದೆ ಸುಮ್ಮನಿದ್ದೆ!"

"ಮಹಾಪಾತ್ರ, ಇವರು ಈ ಸಲದ ಈಜು ಪಂದ್ಯದ ವಿಜಯಿ." ಮಹಾಪಾತ್ರ ಸಾಕೇತದ ಗುರುಕುಲದ ಮಹಾಪಾತ್ರರು.

"ತುಂಬ ಸಂತೋಷ." ಎಂದಿಷ್ಟೆ ನಗೆ ಅರಳಿಸಿ ಅಂದರು.

"ನಾಟ್ಯದಲ್ಲಿ ನಿಮಗೆ ಅಭಿರುಚಿಯೆ?"

ನನ್ನ ಪಕ್ಕಕ್ಕೆ ಇದ್ದ ಕಾಲಾವರ—

"ಇವಳು ಅಭಿನಯದಲ್ಲಿ ತುಂಬಾ ಚತುರೆ. ನನ್ನ ಹೆಗ್ಗಳಿಕೆ—ಹೊಗಳಿಕೆ ಏಕೆ. ಇಂದು ನೀವೇ ಸಮಾರಂಭದಲ್ಲಿ ಕಾಣುತ್ತೀರಿ. ನಾವು ಇಂದು ಒಂದು

ಯವನ ಜಾನಪದ ನಾಟಕ ಪ್ರದರ್ಶನಕ್ಕೆ ತಮ್ಮನ್ನು ಆಮಂತ್ರಿಸಲು ಬಂದಿದ್ದೇವೆ. ಸಾಕೇತದಲ್ಲಿ ಒಂದು ಯವನ ಕಲಾ ಸಂಘವಿದೆ ಎಂಬುದು ತಮಗೆ ಗೊತ್ತಿರಲೂ ಸಾಕು."

ಮಹಾಪಾತ್ರರು ಹೇಳಿದರು: "ಕಳೆದ ಸಲ ಚೈತ್ರ ಪೂರ್ಣಿಮೆಗೆ ಒಂದು ನಾಟಕವಿತ್ತು. ಅದನ್ನು ಕಂಡು ನಮ್ಮ ಗುರುಕುಲದಲ್ಲಿ ಹೊಗಳಿದ್ದೇ."

"ಅದರಲ್ಲಿ 'ರಮಾ' ಪಾತ್ರ ಇವಳದೇ ಇತ್ತು," ನನ್ನನ್ನು ಕುರಿತು ಹೇಳಿದಳು.

ನಾನು ಅಶ್ವಘೋಷನಿಗೆ ಹೇಳಿದೆ: "ನೀವೂ ಪ್ರದರ್ಶನ ಬರಬೇಕು."

"ಅನುರೂಪ ಆಮಂತ್ರಣ. ನೀವು ನಾಟಕ ಪ್ರದರ್ಶನದಲ್ಲಿ ನಿಪುಣರು. ಅಶ್ವಘೋಷ ಹೆಸರಾದ ನಾಟಕಕಾರ! ಸರಿಯಾದ ಜೋಡಿ."

ನನ್ನ ಬಯಕೆಗೆ ಇನ್ನೂ ಕೋಡು ಮೂಡಿತು. ಕನಸಗಳು ಗೋಪುರದ ಮೇಲೆ ಕಟ್ಟಿಕೊಂಡವು. ಹೊರಡುವ ಮುಂದೆ ನಾನು ಕೇಳಿದೆ.

"ಬರುವಿರಾ?"

"ಖಂಡಿತ ಬರುತ್ತೇನೆ."

ನನ್ನ ಆಮಂತ್ರಣದ ಶಕ್ತಿ ಅವರನ್ನು ಒಪ್ಪಿಸಿತ್ತೆಂದು ಅರಿತು ಸಮಾಧಾನ ಪಟ್ಟೆ.

ಅದೆಷ್ಟೋ ದಿನ ಕಳೆದಾಗ ಹಲವು ಘಟನೆಗಳು ಜರುಗಿದವು. ಕಾಲ ಹಣ್ಣಾಗುತ್ತ ನಡೆದಿತ್ತು. ನನ್ನ ಜೀವನದಲ್ಲಿ ಹೊಸ ರಸ ಹೊನಲಾಗಿ ಹರಿಯುತ್ತಿತ್ತು. ನಾನು ಅವನ್ನೆಲ್ಲ ಮಾಲೆಯ ಮಣಿಯಾಗಿ ಒಂದೊಂದನ್ನು ಎಣಿಸುತ್ತೇನೆ.

ನಮ್ಮ ಯವನ ಜಾನಪದ ನಾಟಕ ನೋಡಿದ ಅಶ್ವಘೋಷ ನಾಟಕಾಂತದಲ್ಲಿ ಮಾಡಿದ ಭಾಷಣ ನನ್ನ ಬದುಕಿನ ದೋಣಿಯನ್ನು ಬದಲಿಸಿತು. ನಿತ್ಯ ಸರಯೂ ತೀರದಲ್ಲಿ ತಿಂಗಳು ಬೆಳಕಿರಲಿ ಬಿಡಲಿ ಚಿಕ್ಕೆಗಳು ಕಣ್ ಬಿಟ್ಟು ನೋಡುತ್ತಿರುವಂತೆ ಅದೆಷ್ಟೋ ಹೊತ್ತು ನಾವಿಬ್ಬರೇ ಕೂರುತ್ತೇವೆ. ಗುರುಕುಲ, ಚತ್ವರ, ಲಪಣಗಳಲ್ಲಿ ನನ್ನ ಅಶ್ವಘೋಷರನ್ನು ಪ್ರೇಮಿಯುಗಲವೆಂದು ಮಾತ ನಾಡುತ್ತಾರೆ. ಮೊನ್ನೆ ಪ್ರದರ್ಶಿಸಿದ 'ಊರ್ವಶಿ ವಿಯೋಗ" ಸಂಸ್ಕೃತ ನಾಟಕದಲ್ಲಿ ನಾನು ಊರ್ವಶಿ, ಅಶ್ವಘೋಷ ಪುರೂರವ. ಆ ದಿನ ಇಡಿ ಸಾಕೇತವನ್ನೇ ನಾಟ್ಯಮಂದಿರ ತನ್ನ ಒಡಲೊಳಗೆ ಇಟ್ಟು ಕೊಂಡಿತ್ತು. ಅದೇ ನಾವಿಬ್ಬರೂ ಮೊದಲ ಅಪ್ಪುಗೆಯಲ್ಲಿ. ಅದೂ ರಂಗ ಮಂದಿರದ ಸಹಸ್ರಾರು ಜನರ ಲಕ್ಷ್ಯದಲ್ಲಿ. ನಾನು ನಿಜವಾಗಿಯೂ ಆಯುಷ್ಯ ಮುದ್ದಕ್ಕೂ ಊರ್ವಶಿಯಾಗಿ ಆ ಪುರೂರವನ ಬಾಹು ಬಂಧನದಲ್ಲಿರಬೇಕೆಂದು ಬಯಸಿದ್ದೆ. ಅಂದು ನಾಟಕದಲ್ಲಿಯ ಅನುಭವ ಜೀವನದುದ್ದಕ್ಕೂ ಇರಲೆಂದು ನಾನು ಹಂಬಲಿಸುತ್ತಿದ್ದೆ. ಅಶ್ವಘೋಷ ಗಂಭೀರವಾಗಿ ಅದನ್ನು ಅನುಮೋದಿಸಿಯೂ ಇದ್ದ.

ನನ್ನ ಗೆಳತಿಯರು ಹಲವು ಸಲ—

"ನೀನೋ ಯವನಯಾಮಿನಿ. ಆತನೊ......

ಇಬ್ಬರಿಗೂ ದೊಡ್ಡ ನಿರಾಶೆ ಕಾದಿದೆ ... ..."

ಗೂಬೆ ನುಡಿ ನುಡಿಯುತ್ತಿದ್ದರೂ ನಾನು ಕೇಳಲಿಲ್ಲ. ಕಿವಿಯ ಮೇಲೆ ಕೈಯಿಟ್ಟು ನಿವಾರಿಸುತ್ತಿದ್ದೆ. ಆದರೆ ಎದೆಯೊಳಗೆ ಹೊಕ್ಕ ಶಂಕೆಯ ಹುಳ ನೆಮ್ಮದಿಯನ್ನು ಕೊರೆಯುತ್ತಿತ್ತು. ನಾನು ಸರಯೂ ತೀರದಲ್ಲಿ ನದಿಯ ಸಾಕ್ಷಿಯಾಗಿ ಅವನಿಗೆ ಕೇಳಿದ್ದೆ.

ಅಶ್ವಘೋಷ, "ಎಷ್ಟಾದರೂ ನೀನು ಹೆಂಗಸೇ ಸರಿ. ನಿನ್ನನ್ನು ವಜ್ರದ ಮುಳ್ಳೂ ನೋಯಿಸಲಾರದು. ಅಶ್ವಘೋಷನನ್ನು ಯಾರೂ ಅಲುಗಿಸಲಾರರು. ಪ್ರಿಯೆ ಶಂಕೆಬೇಡ, ನಿರಾತಂಕವಾಗಿರು. ಅತಿ ಪ್ರೇಮಿಗಳಿಗೆ ಶಂಕೆ ತುಂಬ ಕಟ್ಟಿದ್ದು," ಎಂದು ನನ್ನನ್ನು ಇನ್ನೂ ಹತ್ತಿರ ಎಳೆದುಕೊಂಡು ತನ್ನ ಎದೆಯಲ್ಲಿ ಅಡಗಿಸಿಕೊಂಡು ಹೇಳಿದ.

ನಾವು ಸಾಕೇತದ ಊರ್ವಶಿ– ಪುರೂರವರಾಗಿದ್ದೆವು. ಆಗಾಗ ನನ್ನನ್ನು ಅಶ್ವಘೋಷ ಮೂದಲಿಸುತ್ತಿದ್ದ. "ನಾನು ಪುರೂರವನಾಗಲು ಅವಕಾಶ ಕೊಡಬೇಡ . ಕೊನೆಗೆ ಪುರೂರವ ಊರ್ವಶಿಯನ್ನು ಕಳೆದುಕೊಂಡ ವಿರಹ!"

ನಾನು ಅವನ ಬಾಯಿ ಮುಚ್ಚಿದ್ದೆ. "ಈ ಯುಗ ಚಿರಂತನ" ಎಂದು ಆತನನು ಸಮಾಧಾನಪಡಿಸಿದ್ದೆ. ಕವಿ ಅಶ್ವಘೋಷನ ಕೀರ್ತಿ ಸಾಕೇತ ದಾಟಿ ಭಾರತದುದ್ದಕ್ಕೂ ತನ್ನ ಬೆಳಕು ಚಾಚಿತ್ತು.

ನಾನಿನ್ನೂ ನಿದ್ದೆಗಣ್ಣಲ್ಲಿದ್ದೆ. ಕಣ್ತೆರೆದು ನೋಡುತ್ತೇನೆ; ನನ್ನ ತರುಣಭಾಸ್ಕ ಕಣ್ಣ ಮುಂದೆಯೆ, ಆಗ ಬೆಳಗಾಗಿತ್ತು. ನಾನು ಎದ್ದು ಕೇಳಿದೆ.

"ಇದೇನು ಅಶ್ವ, ಇಷ್ಟು ಬೆಳಗಿನಲ್ಲಿ... "

"ನಿನ್ನನ್ನು ಬೆಳಕಿನತ್ತ ಒಯ್ಯಲೆಂದು ಬಂದೆ."

"ಬದುಕಿನುದ್ದಕ್ಕೂ ನಿನಗೆ ಕಾವ್ಯವೊಂದೇ ಹಾದಿ."

"ನನ್ನ ಹಾದಿಯಲ್ಲೆ ನಿನ್ನದೂ ಹೆಜ್ಜೆಯಲ್ಲವೆ? ಏಳು ನನ್ನೊಡನೆ ನಡೆ ಈಗ."

"ಎಲ್ಲಿಗೆ?"

"ನಮ್ಮ ಮನೆಗೆ..."

ನಾನು ಮತ್ತೊಂದು ಮಾತನಾಡಲಿಲ್ಲ. ಮುಖಕ್ಕೆ ನೀರೆರಚಿಕೊಂಡೆ. ಅವನ ಹೆಗಲ ಮೇಲಿನ ಉತ್ತರೀಯದಿಂದಲೆ ಮುಖ ಒರೆಸಿಕೊಂಡೆ. ಅಶ್ವಘೋಷನ ಜತೆ ಮನೆಗೆ ಬಂದೆ. ಅದೇ ಬಹಳ ದಿನಗಳ ಹಿಂದಿನ ಆ ನೆನಪು. ಅದೇ ಮುಖ, ಅದೇ ಅರಿಶಿಣ ಕುಂಕುಮ, ಅದೇ ಕಳೆ, ಆದರೆ ಹೊಸ ನಗೆ–ಹೊಸ ಬಗೆ ಕಂಡೆ.

"ಈಕೆ ನಮ್ಮ ತಾಯಿ."

ನನಗೇನು ತಿಳಿಯಿತೊ, ಯಾರು ಮಣಿಸಿದರೊ ಗೊತ್ತಿಲ್ಲ. ನಾನು ಅವಳ ಪಾದ ಮುಟ್ಟಿ ನಮಸ್ಕರಿಸಿದೆ. ಆ ತಾಯಿ ತನ್ನ ರೇಶಿಮೆಯ ಕೈಗಳಿಂದ ನನ್ನನ್ನು ಬಾಚಿ ತಬ್ಬಿಕೊಂಡು ನನ್ನ ಬೆನ್ನ ಮೇಲೆ ಬೆರಳಾಡಿಸುತ್ತಿದ್ದಳು. ನನಗೆ ಅಪೂರ್ವ ಅನುಭವ.

"ನೀನು ಅಶ್ವನಿಗೆ ತುಂಬ ಅನುರೂಪಳು. ನಾನು ಒಪ್ಪಿದ್ದೇನೆ. ಮೆಚ್ಚಿದ್ದೇನೆ. ನನ್ನ ಮನೆ ತುಂಬು..."

ಅವರ ಕಣ್ಣಿನಿಂದ ಬಿಸಿ ಹನಿ ಉದುರಿ ನನ್ನ ಬೆನ್ನ ಮೇಲೆ ಬಿದ್ದವು. ನಾನು ಎಚ್ಚರಗೊಂಡು ಸರಿದೆ. ಆ ತಾಯಿ ಅಶ್ವನನ್ನು ಕರೆದು ಅವನ ಕೈ ನನ್ನ ಕೈಗಿರಿಸಿ ಹರಸಿದಳು.

*

ಅದೆಷ್ಟೋ ದಿನದ ನಂತರ ಒಂದು ದಿನ.

ಅಶ್ವಘೋಷ ಎರಡು ದಿನಗಳಿಂದ ಊರಲ್ಲಿರಲಿಲ್ಲ. ನನಗೊ ತುಂಬ ಬೇಜಾರು. ಬೆಳಿಗ್ಗೆ ನಾನು ಸರಯೂ ತೀರದಲ್ಲಿ ಅಲೆಯುತ್ತಿದ್ದೆ. ಹೊತ್ತಿನ ಬೆಳಕು ಬಿಸಿಯಾಗಿತ್ತು. ನಾನು ಎಲ್ಲೊ ದೂರದಲ್ಲಿ ಬಂಡೆಯೊಂದರ ಮೇಲೆ ಕುಳಿತಿದ್ದೆ. ಮೊರೆಯುವ ಸರಯೂ ದಡವನ್ನು ಕೊರೆದು ಮುಂದೆ ನುಗ್ಗುತ್ತಿದ್ದಳು. ದಂಡೆಯ ಮೇಲಿನ ಮರಕ್ಕೆ ತೆರೆಗಳ ಹೊಡೆತ. ನೆಲ ಕತ್ತರಿಸಿ ನೀರು ಪಾಲಾಗುತ್ತಿತ್ತು. ಮತ್ತೆ ತೆರೆಯ ಹೊಡೆತ, ನೆಲದ ಕೊರೆತ.

ಅಷ್ಟರಲ್ಲಿ ದೊಡ್ಡ ಗಾಳಿ ಕಣ್ಣಿನಲ್ಲಿ ಮಳಲು ಚೆಲ್ಲಿತು. ನನ್ನ ಕೈಗಳಿಂದ ಕಣ್ಣು ತಿಕ್ಕಿಕೊಳ್ಳುತ್ತಿದ್ದೆ. ಹೊರಗೆ ದೊಪ್ಪೆಂದು ಏನೋ ಸದ್ದು. ಬೆನ್ನ ಮೇಲೆ ಯಾರದೋ ಕೈ. ಕಣ್ಣು ತೆರೆಯುತ್ತೇನೆ. ಕಣ್ಣ ಮುಂದಿನ ಮರ ಕಡಿದುಕೊಂಡು ಬಿದ್ದಿದೆ.

ಹಿಂತಿರುಗಿ ನೋಡಿದೆ. ಅಶ್ವನ ತಾಯಿ!

ಕಣ್ಣು ತಿಕ್ಕುತ್ತಲೆ ಕೈ ಹಿಡಿದು ಅವಳನ್ನು ಕೂರಿಸಿದೆ. ಕಣ್ಣೆಲ್ಲ ಬಿದ್ದ ಮರದ ಮೇಲೆ. ನನಗೆ ನಾನು ಎಲ್ಲಿರುವೆನೆಂದು ತಿಳಿಯಲಿಲ್ಲ.

"ಏನು ಇಷ್ಟು ದೂರ ಬಂದಿರಿ...?"

"ನಿನ್ನ ಹುಡುಕಿಕೊಂಡು."

"ಅಶ್ವಘೋಷ ಬಂದರೆ?"

"ನಿನ್ನ ಕಾಣದೆ ಆತ ಬರಬಹುದೇ?"

ನನಗೆ ತುಂಬ ಹಿಗ್ಗಾಯಿತು. ತಾಯಿ ನನ್ನನ್ನು ಪಕ್ಕಕ್ಕೆ ಕೂರಿಸಿಕೊಂಡರು.

"ನಿನ್ನ ಹತ್ತಿರ ನಾನೊಂದು ಮಾತು ಕೇಳಲು ಬಂದಿರುವೆ."

"ನೀವು ಏನು ಹೇಳಿದರೂ ತಲೆಯಲ್ಲಿ ಹೊತ್ತು ನಡೆಸುವೆ."

"ನನಗೆ ಇಬ್ಬರು ಅಶ್ವಘೋಷರು ಗೊತ್ತೆ ?"

ನಾನು ತಬ್ಬಿಬ್ಬಾದೆ. ಏನೂ ಮಾತನಾಡಲಿಲ್ಲ.

"ಮಗಳೆ, ನಿನ್ನನ್ನು ಒಬ್ಬ ಅಶ್ವಘೋಷ ಮೆಚ್ಚಿದ್ದಾನೆ. ಇನ್ನೊಬ್ಬ ಅಶ್ವಘೋಷ ಕಣ್ಮರೆಯಾಗ ಹತ್ತಿದ್ದಾನೆ. ಮಗಳೆ ನನಗೆ ಒಬ್ಬ ಅಶ್ವಘೋಷನನ್ನು ಉಳಿಸಿಕೊಡು. ಸೆರಗೊಡ್ಡಿ ಬೇಡುವೆ."

ನಾನು ಇನ್ನೂ ದಿಙ್ಮೂಢಳಾದೆ. ಕವಿದ ಮಂಕು ಕಳೆಯಲೊಲ್ಲದು. ಆ ತಾಯಿಯ ಕಾಯ್ದ ಚಿನ್ನದ ಬೆರಳುಗಳನ್ನು ನನ್ನ ಬೆನ್ನ ಮೇಲೆ ಎಳೆಯುತ್ತಿದ್ದಳು.

"ನೋಡು, ನನ್ನ ಅಶ್ವಘೋಷ ಕವಿ, ನಿನ್ನ ಬೆನ್ನು ಹತ್ತಿ ಅವನು ಅದನ್ನು ಮರೆತಿದ್ದಾನೆ. ನಾನು ಹಲವು ಸಲ ಕೇಳಿದೆ. ಆತ ಏನು ಹೇಳಿದ ಗೊತ್ತೆ ? ಅಮ್ಮ ಅವಳೆ ನನ್ನ ಕವಿತೆ. ಬೇರೆ ಕವಿತೆ ಏಕೆ ?"

"ಆತ ಮಹಾಕವಿಯಾಗಬೇಕೆಂದು ನಿನಗೂ ಅನ್ನಿಸಲಾರದೆ ?"

"ಅನ್ನಿಸದೆ ಏನು? ಅವರ ಕವಿತೆಯ ಬೆಳದಿಂಗಳಿನ ಚಕೋರ ನಾನು?"

"ಅವನು ಕವಿಯಾಗಿ ಉಳಿಯಬೇಕಾದರೆ ನೀನು ಅವನಿಂದ ದೂರ ಇರಬೇಕು..." ಆ ತಾಯಿಯ ಮಾತಿನಲ್ಲಿ ಬಿರುಸಿತ್ತು. ಇಷ್ಟು ಹೇಳುತ್ತಲೇ ಅವಳು ನನ್ನ ಮುಂದೆ ಕುಸಿದು ಬಿದ್ದಳು... ನಾನು

ಅವಳನ್ನು ಎತ್ತಿ ಕೂರಿಸಿ ಹೇಳಿದೆ.

"ಹೌದು. ನಾನು ಹಾದಿ ಹುಡುಕುವೆ. ನಿಶ್ಚಿಂತರಾಗಿರಿ."

"ಮಗಳೆ ನಾನೂ ಹೆಂಗಸು. ಪ್ರೇಮದ ನೆಲೆ ಬೆಲೆಗಳನ್ನು ಕಂಡವಳು. ನನ್ನ ಕರುಳು ಹಿಂಡಿ ಹೇಳುತ್ತೇನೆ. ನಿನ್ನ ಬದುಕಿನ ಗತಿಯನ್ನೂ ಬಲ್ಲೆ." ಮತ್ತೆ ಅವಳು ಕಣ್ಣು ಮುಚ್ಚಿದಳು. ನನ್ನೊಳಗೆ ಹಲವು ಮಿಂಚು ಮಿಂಚಾಡಿದವು. ನಾನು ಹೇಳಿದೆ.

"ಖಂಡಿತ ನಿಮಗೊಬ್ಬ ಅಶ್ವನನ್ನು ಉಳಿಸುತ್ತೇನೆ." ಆ ತಾಯಿಯನ್ನು ಮನೆ ಮುಟ್ಟಿಸಿ ಬಂದೆ.

*

ಸರಯೂ ಶಾಂತಳಾಗಿದ್ದಾಳೆ. ಮುಗಿಲಲ್ಲಿ ಅರ್ಧ ಚಂದ್ರ ತೇಲುತ್ತಾನೆ. ರಾತ್ರಿಯೂ ಮೆಲ್ಲನೆ ಸರಿಯುತ್ತದೆ. ನೌಕೆಯಲ್ಲಿ ಚಕೋರ ಚಂದ್ರವು ಒಟ್ಟಿಗಿದ್ದಾನೆ.

"ಲೋಕದಲ್ಲಿ ಎಷ್ಟು ಜನ ಅಶ್ವಘೋಷರು?" ನನ್ನ ಪ್ರಶ್ನೆಗೆ ಅಶ್ವ ಚಕಿತನಾದರೂ ಖಂಡಿತವಾಗಿ ಹೇಳಿದ.

"ಒಬ್ಬನೇ ಒಬ್ಬ."

"ಅಲ್ಲ. ಇಬ್ಬರು."

ನನ್ನ ಧ್ವನಿಯಲ್ಲೂ ಅಷ್ಟೇ ಬಿರುಸಿತ್ತು.

"ಇಬ್ಬರು ಅಶ್ವಘೋಷರಿರಬೇಕೆ?"

"ಇಲ್ಲ, ಒಬ್ಬನೇ ಇರಬೇಕು."

"ಹಾಗಾದರೆ ಯಾವ ಅಶ್ವಘೋಷನಿರಬೇಕು?"

"ನೀನೆ ನನ್ನ ಜೀವಿತ, ಕಾವ್ಯ–ರಸ ಎಲ್ಲ. ನಿನ್ನನ್ನು ಎದೆಯೊಳಗಿರಿಸಿದ ನಾನು ಒಬ್ಬನೇ ಇರಬೇಕು."

"ನಾನು ನಿನ್ನ ಎದೆಯೊಳಗಿರಬೇಕೆ. ಹೊರಗೆ ಬದುಕಬೇಕೆ." "ನೀನು ನನ್ನ ಪ್ರಭೆ. ಪ್ರತಿಭೆ ನನ್ನೊಳಗೇ ಇರಬೇಕು!"

ಹೊರಗಿನ ನನ್ನಿಂದ ಆ ಅಶ್ವಘೋಷ ಇರಲಾರ. ಅಶ್ವ ಇದೋ ಇದು ನನ್ನ ಕೊನೆಯ ಮುತ್ತು ಎಂದು ಒಂದು ಮುತ್ತನಿತ್ತು, ಕೈಯಲ್ಲಿಯ ಹುಟ್ಟನ್ನು ಅಶ್ವನಿಗಿತ್ತು ನೀರಿನಲ್ಲಿ ಹಾರಿದೆ.

ನಾನು ಇಲ್ಲದಾಗಿ ಅಶ್ವನನ್ನು ಇರಗೊಟ್ಟೆ. ✡

(ಇದು ನಮ್ಮ ದೀಪಾವಳಿ ಸಂಚಿಕೆಗೆ ಆಮಂತ್ರಿತ ಕಥೆ)



ಸತ್ಯಾಗ್ರಹದ ಜನ್ಮ

'ಸತ್ಯಾಗ್ರಹ'ದಿಂದ ನಾವು 'ಸ್ವಾತಂತ್ರ್ಯ'ವನ್ನು ಪಡೆದಿದ್ದರೂ ಆ ಶಬ್ದ ಹೇಗೆ ಹುಟ್ಟಿಕೊಂಡಿತೆಂಬುದು ಎಷ್ಟು ಜನರಿಗೆ ಗೊತ್ತು ?

'ಸತ್ಯಾಗ್ರಹ'ವೆಂಬ ಶಬ್ದವನ್ನು ಸೃಷ್ಟಿಸುವದಕ್ಕೆ ಮುಂಚೆಯೇ ಆ ತತ್ವವು ಪ್ರಚಲಿತವಿತ್ತು. ಗುಜರಾತಿಯಲ್ಲಿ ಕೂಡ ಆ ತತ್ವವನ್ನು 'ಪ್ಯಾಸಿವ್ ರಿಸಿಸ್ಟೆನ್ಸ್' (ನಿಷ್ಕ್ರಿಯ ಪ್ರತಿರೋಧ) ಎಂಬ ಹೆಸರಿನಿಂದಲೇ ಕರೆಯುತ್ತಿದ್ದರು.

ಈ ತತ್ವವನ್ನು ವರ್ಣಿಸಲು ಅತ್ಯುತ್ತಮವಾದ ಪದವನ್ನು ಸೂಚಿಸುವ ವಾಚಕರಿಗೆ ಸಣ್ಣದೊಂದು ಬಹುಮಾನವನ್ನು ಕೊಡುವದಾಗಿ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ ಪ್ರಕಟಿಸಿದರು.

ಇದರ ಫಲವಾಗಿ ಮಗನಲಾಲ ಗಾಂಧಿಯವರು 'ಸದಾಗ್ರಹ' (ಸತ್ + ಆಗ್ರಹ) ಎಂಬ ಪದವನ್ನು ಸೂಚಿಸಿ ಬಹುಮಾನ ಗೆದ್ದರು. ಆದರೆ ಗಾಂಧೀಜಿಯವರು ಈ ಪದದ ಅರ್ಥವನ್ನು ಇನ್ನೂ ಸ್ಪಷ್ಟ ಮಾಡುವದಕ್ಕಾಗಿ ಅದನ್ನು 'ಸತ್ಯಾಗ್ರಹ'ವೆಂದು ಮಾರ್ಪಡಿಸಿದರು.

–ಸುದರ್ಶನ ಗಂಗಾವ



ಕತ್ತೆಗೊಂದು ಕಾಲ

* ಪ.ರೋ. ಬಂಕಾಪುರ

ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ಎಂದರು ನಮ್ಮ ಹಿರಿಯರು. ಆದರೆ ಕತ್ತೆಗೊಂದು ಕಾಲ ಎಂದು ಮಾತ್ರ ಯಾರೂ ಹೇಳಲಿಲ್ಲ. ಹೇಗೆ ಹೇಳಬೇಕು ಪಾಪ! ಅತ್ತೆ ಕತ್ತೆ ಹತ್ತಿದರೆ ಮಾವ ಛತ್ತರಿಗೆ ಹಿಡಿಯಬೇಕು ಎಂದವರೂ ಅವರೇ. ಅರ್ಥಾತ್ ಕತ್ತೆಗೊಂದು ಕಾಲ ಬರಬೇಕೆಂದರೆ, ಅತ್ತೆ ಕತ್ತೆ ಹತ್ತಬೇಕು. ಮಾವ ಆಕೆಯ ವಂದಿ-ಮಾಗಧನಾಗಿ (ಮಹಾ ಗಧಾ ಅಲ್ಲ ಮತ್ತೆ!) ಅಥವಾ ಬಾಲಹಿಡುಕನಾಗಿ (ಟೇಲ್ ಬೇರರ್) ಛತ್ತರಿಗೆ ಹಿಡಿಯಬೇಕು ಎಂದಾಯಿತು. ಪುರುಷಪ್ರಧಾನ-ವಾದ ನಮ್ಮ ಸಮಾಜದಲ್ಲಿ ಹೀಗಾಗುವುದು ಬಹು ಕಷ್ಟ ಸಾಧ್ಯ. ಬಹಿರಂಗವಾಗಿ ನಡೆಯುವುದಂತೂ ಸಾಧ್ಯವೇ ಇಲ್ಲ. ಮಾತ್ರ, ಅಂತರಂಗದಲ್ಲಿ, ಅದು ಗೆಮನೆಗಳಲ್ಲಿ ಹೀಗೆಯೇ ಇರುತ್ತದೆ; ಅದರದು ಒಳಗುಟ್ಟು.

ಇದನ್ನೋದಿ ಜನತಾಭಿಮಾನಿಗಳು ತುರ್ತು ಪರಿಸ್ಥಿತಿಗೆ ಮರಳಿ "ನಾ-ನೀ ಎನ್ನುವಂಥ ಗಂಡಸರೂ ಇಂದಿರಾ ಗಾಂಧಿಯವರಿಗೆ ಛತ್ತರಿಗೆ ಹಿಡಿಯಲಿ-ಲ್ಲವೆ?" ಎಂದು ವಾದಿಸಬಹುದು. ಅದಕ್ಕೆಲ್ಲ ಇ ಕಾಂಗ್ರೆಸ್ಸಿನವರು ಜಗ್ಗಬೇಕಾದ್ದಿಲ್ಲ. ಏಕೆಂದರೆ ಆಗ ಇಂದಿರಾ ಗಾಂಧಿ ಮಾಡಿದ್ದು ಹುಲಿಯ ಸವಾರಿ. ಅದನ್ನು ಸೂಚಿಸಲೆಂದೇ ಎಲ್ಲರೂ ಅವರನ್ನು ದುರ್ಗೆ-ಯ ಅವತಾರ ಎಂದರು. ಅತ್ತೆಯರು ಸಾಮಾನ್ಯ-ವಾಗಿ ಸೊಸೆಯಂದಿರನ್ನು ಹೇಮರಡ್ಡಿ ಮಲ್ಲಮ್ಮ ನಂತೆ ನಡೆಸಿ ಆಳುವುದೇ ಅತ್ತೆಗೊಂದು ಕಾಲ ಎನ್ನುವುದರ ಬುನಾದಿ. ಇಂದಿರಾ ಗಾಂಧಿ ಆ ವರ್ಗದ ಅತ್ತೆಯಲ್ಲ. ಆಗಿದ್ದರೆ ಸಂಜಯನ ಮಾರುತಿ ಮುಗುಲಿಗೆ ಜಿಗಿದು ಮುಖ ಸುಟ್ಟುಕೊಳ್ಳುತ್ತಿರ-ಲಿಲ್ಲ, ಸೂರ್ಯನನ್ನು ಕೈಯಲ್ಲಿಟ್ಟುಕೊಂಡೂ ಆತನ ಶ್ರೀಮತಿ ತಬ್ಬಿಬ್ಬಾಗುತ್ತಿರಲಿಲ್ಲ.

ಅದು ಏನೇ ಇರಲಿ ಇಂದಿರಾ ಗಾಂಧಿ ಪ್ರಧಾನಿ ಯಾಗಿದ್ದಾಗ ಕತ್ತೆಗೆ ಮಾತ್ರ ಕಾಲ ಬಂದಿರಲಿಲ್ಲ. ಆದರೆ ಅವರು ಸೋತ ಮೇಲೆ ಕೆಲವಕ್ಕಾದರೂ ಕಾಲ ಬಂದಿತ್ತೆಂದು ಹಲವರ ಅಂಬೋಣವಿದೆ. ಲೋಕೋರ್ಭಿನ್ನ ಮತಃ. ಇಂದಿರಾರವರ ಕಾಲದಲ್ಲಿ ಅಡಿಗೆಯ ಮಸಾಲೆಯಲ್ಲಿ ಕುದುರೆ ಲದ್ದಿಯ ಪುಡಿ ಕೂಡಿಸಿ ಮಾರುತ್ತಿದ್ದ ವ್ಯಾಪಾರಿಯನ್ನೋ, ಎಲ್ಲಿ-ಯೋ ಕೆಲ ಚೀದಿ ಕಾಮಣ್ಣರನ್ನೊ ಕತ್ತೆಯ ಮೇಲೆ ಕುಳ್ಳಿರಿಸಿ ಮೆರೆಸಿದ ವರದಿಗಳಾದವು. ಹಿಂದೆ ಕಿತ್ತೂರ ಮಲ್ಲಪ್ಪ ಶೆಟ್ಟಿ, ನರಗುಂದ ಕೃಷ್ಣಾಪಂತ ಜೋಶಿ ಯಂಥ ದೇಶದ್ರೋಹಿಗಳನ್ನು ಹೀಗೇ ಮೆರೆಸಿದ್ದ ರಂತೆ. ಇದರಲ್ಲಿ ಕತ್ತೆ ಹೆಮ್ಮೆ ಪಟ್ಟುಕೊಳ್ಳುವಂ-ಥದು ಏನೂ ಇಲ್ಲವಷ್ಟೆ?

ಸಹವಾಸ ನೋಡಿ ಯೋಗ್ಯತೆಯನ್ನು ಅಳೆಯು ವದು ಮಾನವನ ದೌರ್ಬಲ್ಯ. ಸಹವಾಸದ ಫಲ-ವತ್ತಾಗಿ ಕತ್ತೆ ಮಣ್ಣು ಹೊರುತ್ತದೆ. ಮೈಲಿಗೆ ಬಟ್ಟೆ ಗಳ ಭಾರ ತಾಳುತ್ತದೆ. ಹೆಡವ ಕಪಾಲಿಗಳಿಗೂ ಹೆಗಲುಗೊಡುತ್ತದೆ. ಆದರೆ ಏನೇ ಮಾಡಿ ದರೂ ಅದು ಮಾನವನ ಉಪಕಾರಕ್ಕಾಗಿ ಮಾಡುತ್ತದೆ. ಮಾಡಿದ್ದಕ್ಕೆ ಪ್ರತಿಫಲವನ್ನೂ

ತೆಗೆದುಕೊಳ್ಳುವುದಿಲ್ಲ. ವಹಿಸಿಕೊಟ್ಟ ಕೆಲಸ ಮುಗಿಸಿ ಹೊರಟಿದ್ದು ಬಿಡುತ್ತದೆ. ಮಳೆ ಬಿಸಿಲು ಒಂದನ್ನೂ ಲೆಕ್ಕಿಸದೆ ತನ್ನ ಅನ್ನವನ್ನು ತಾನೇ ಹುಡುಕಿ ತಿನ್ನುತ್ತದೆ. ತನ್ನನ್ನು ದುಡಿಸಿಕೊಳ್ಳುವವರ ನೆರಳಿನಲ್ಲಿ ಕೂಡ ನಿಲ್ಲುವುದಿಲ್ಲ. ಪುರಾಣಗಳಲ್ಲಿ ಸ್ಥಿತಪ್ರಜ್ಞ ಯೋಗಿಗಳ ಬಗ್ಗೆ ಹೇಳುವ ಲಕ್ಷಣಗಳನ್ನೆಲ್ಲ ಈ ಪ್ರಾಣಿಯಲ್ಲಿ ಕಾಣಬಹುದು. ಆದರೂ ಇದನ್ನು ಕತ್ತೆಯೆಂದು ಹೀಗಳೆಯುತ್ತಾರೆ. ಆದರ ಸಹವಾಸದ ಫಲ!

ಸುಮ್ಮನಿರುವವರನ್ನು ಕೆಣಕಿ, ಕಾಡಿ, ಆನಂದ ಪಡುವುದೇ ಸಾಮಾನ್ಯರ ಸ್ವಭಾವ. ಹಿಂದೆ ಹುಬ್ಬಳ್ಳಿಯಲ್ಲಿ ಸಿದ್ಧಾರೂಢ ಸ್ವಾಮಿಗಳ ತಲೆಯ ಮೇಲೆ ಬೆಂಕಿಯಿಟ್ಟು ಮೋಜು ನೋಡಿದ್ದರಂತೆ. ದನ ಕಾಯುವವರು, ಪೋಲಿ ಹುಡುಗರು ಈಗಲೂ ಗಾರ್ಧಭ ಪ್ರಭುವನ್ನು ಹಾಗೆಯೇ ಕಾಣುತ್ತಾರೆ. ಕಾಮನ ಹಬ್ಬದಲ್ಲಂತೂ ಕಂಡವರು ಕಂಡಲ್ಲಿ ಪುಕ್ಕಟೆಯಾಗಿ ಅದರ ಬೆನ್ನೇರಿ ಬರುವುದುಂಟು. ಅಷ್ಟಕ್ಕೂ ಬಿಡದೆ ಅದರ ಬಾಲಕ್ಕೆ ಪಟಾಕಿ ಸರ ಕಟ್ಟಿ ಹಾರಿಸುತ್ತಾರೆ. ಇಲ್ಲವೆ ಒಂದು ಒಡಕು ಡಬ್ಬಿಯನ್ನು ದಾರ ಕಟ್ಟಿ ಬಿಗಿಯುತ್ತಾರೆ. ಇದೆಲ್ಲವನ್ನೂ ಮೌನದಿಂದ ಸಹಿಸುವ ರಾಸಭರಾಯ, ಮಾನವ ಪ್ರಾಣಿ ನಕ್ಕರೆ ಸಾಕು ಎಂದು ಊರೆಲ್ಲ ಓಡಾಡುವುದುಂಟು.

ಇಂಥ ಉದಾರತನವನ್ನು ಬುದ್ಧಿಗೇಡಿತನ ಎನ್ನುವುದು ಕೃತಘ್ನನಾದ ಮನುಷ್ಯನ ಸ್ವಭಾವ. ಪಿರಮಿಡ್ಡುಗಳನ್ನು ಕಟ್ಟಿ, ಶವಗಳು ಸಾವಿರಾರು ಸಂವತ್ಸರ ಕಳೆದರೂ ಕೆಡದಂತೆ ಇಟ್ಟಂಥ ಮುಂದುವರೆದವರ ದೇಶ ಈಜಿಪ್ತ್. ಅಂಥಲ್ಲಿ ಕೂಡ ಕೋಲಿಗೊಂದು ಮೂಲಂಗಿ ಕಟ್ಟಿ ಕತ್ತೆಯ ಮೂಗಿನ ನೇರಕ್ಕೆ ಇಳಿಬಿಟ್ಟು ಅದರ ಸವಾರಿ ಮಾಡುತ್ತಾರೆ. ಮೂಲಂಗಿಯ ಆಸೆಗೆ ಕತ್ತೆ ಓಡುತ್ತದೆ ಎಂದು ಆ ಮನುಷ್ಯರ ಲೆಕ್ಕ. ಆದರೆ ಮನುಷ್ಯ ಬೇಗ ಮನೆಗೆ ಹೋಗಿ ಹೆಂಡತಿ ಮಕ್ಕಳೊಂದಿಗೆ ಮೂಲಂಗಿ ಲಿತಿನ್ನ ಎಂದು ಕತ್ತೆಯ ಮನೀಷೆ ಎನ್ನುವುದು ಎಷ್ಟು ಶತಮಾನ ಉರುಳಿದರೆ ಮನುಷ್ಯನಿಗೆ ಹೊಳೆದೀತು?

ಪ್ರಜಾಪ್ರಭುತ್ವದಲ್ಲಿ ಮತದಾರರಿಗೂ ಮಂತ್ರಿ, ಎಂ. ಪಿ., ಎಂ. ಎಲ್. ಎ. ಗಳಿಗೂ ಇರುವ ಸಂಬಂಧದ ಹಾಗೇ ಇದೂ ಎನ್ನಬಹುದು. ಜನರೇನೋ ಇವರೆಲ್ಲ ತಮ್ಮ ಪ್ರತಿನಿಧಿಗಳಾಗಿ ದೇಶವನ್ನು ಮುಂದಕ್ಕೆ ತರಲಿ, ಜನಾಂಗಕ್ಕೆಲ್ಲ ಸುಖದ ಕಾಲ ಬರಲಿ ಎಂದು ಮೇಲಿಂದ ಮೇಲೆ ಎಡಕ್ಕೈ ತೋರು ಬೆರಳಿಗೆ ಮಸಿ ಹಚ್ಚಿಕೊಂಡು ಇವರು ಹೇಳಿದ ಗುರ್ತಿಗೆ ಕತ್ತರಿ ಒತ್ತುತ್ತಾರೆ. ಇವರು ಆರಿಸಿ ಬಂದರೋ, ಮುಂದೆ ಅವರ ಆಶೋತ್ತರಗಳಿಗೂ ತುಂಬಿದವರ ಕಿಸೆಗಳಿಗೂ ಕತ್ತರಿ ಹಾಕುವುದೇ ಮಾಮೂಲಾಗಿದೆ. ಆದರೆ ಮೂಗಿನ ನೇರಕ್ಕೆ ಆಶ್ವಾಸನೆಗಳ ಮೂಲಂಗಿ ನೇತಾಡಿಸಿ ಮತ್ತೊಂದು ಸವಾರಿಗೆ ಸಿದ್ಧರಾಗುವುದು ಮಾತ್ರ ಬಿಡುವುದಿಲ್ಲ.

ಎಷ್ಟೆಂದರೂ ಮತದಾರರೂ ಮನುಷ್ಯರು. ಗಾರ್ದಭ ಸಹನೆ ಏಳೇಳು ಜನುಮಕ್ಕೂ ಅವರಿಗೆ ಬರಲಾರದು. ಇಂದಿರಮ್ಮ ಬಂದು ಎಚ್ಚರಿಸಿದೊಡನೆ ಮೂಲಂಗಿ ಹಿಡಿದ ಹಳಬರನ್ನು ಕೆಡವಿ ಓಡಿಸಿದರು, ಹೊಸಬರ ಕೈಗೆ ಅಧಿಕಾರ ಕೊಟ್ಟರು. ಈ ಹೊಸಬರು ಆಡಿದರು. ಆಡಿದಂತೆ ಮಾಡಿದರು. ನಮ್ಮ ಕನ್ನಡ ನಾಡಿನಲ್ಲಂತೂ ಅರಸು ಪ್ರಜಾಪ್ರಭುತ್ವ ಬಂದು ನುಡಿದಂತೆ ನಡೆದರು ಎಂಬ ಹೆಗ್ಗಳಿಕೆಯಾಯಿತು. ದೇಶದಲ್ಲೆಲ್ಲ-ಅನ್ನ ಬಟ್ಟೆಗಳ ಬೆಲೆ ಒಂದು ಮಟ್ಟಕ್ಕೆ ನಿಂತು ಚಿನ್ನದ ಬೆಲೆ ಗ್ರಾಮಿಗೆ ರೂ. ೫೨ಕ್ಕೆ ಇಳಿದು ಭಾರತದಲ್ಲೆ ಬಂಗಾರದ ಹೊಗೆ ಮತ್ತೆ ಹಾಯುವ ಆಸೆ ಮೂಡಿತು. ಆದರೆ ದೇವರು ವರ ಕೊಟ್ಟರೆ ಪೂಜಾರಿಗಳಿಲ್ಲಿ ಬಿಡುತ್ತಾರೆ. ಉತ್ತರದಲ್ಲಂತೂ ಪಂಡಾಗಳಂತೆ ಪುಂಡರಾಗಿ ಕಾಡಿದರು.

ಪರಿಣಾಮ ಮತ್ತೆ 'ಹೊಸ ರುಚಿ ಬಯಸಿತು ಜನತೆ. ಪಂಚಭಕ್ಷ ಪರಮಾನ್ನವೆಂದು 'ಜನತಾ'ವನ್ನು ಪಡೆಯಿತು. ದಿನ ಬಳಕೆ ವಸ್ತುಗಳ ಬೆಲೆಗಳೇನೋ ಇಳಿದವು. ಬಂಗಾರ ಮಾತ್ರ ಬಡವರಿಂದ ದೂರ ಬಹು ದೂರ ಓಡತೊಡಗಿತು. ದುಡಿದದ್ದರಲ್ಲಿ ಪೈಸೆಗೆ ಪೈಸೆ ಉಳಿಸಿ ಕೂಡಿಸಿ ಹೆಂಡತಿ ಮಕ್ಕಳಿಗೆ ಪುಟ್ಟ ಒಡವೆ ಮಾಡಿಸಿ ಹಿಗ್ಗುವ ಕಾಲ ಸಾಮಾನ್ಯರಾದ ರೈತ ಕೂಲಿಕಾರ ನೇಕಾರರಿಗೆ ಉಳಿಯಲಿಲ್ಲ. "ಬಂಗಾರ ಸಾವಿರ ರೂಪಾಯಿಗೆ ತೊಲೆಯೆ!!" ಎಂದು ಅವರೆಲ್ಲ ಮೂಗು ಬೆರಳಿನವರಾಗಿ ತಾವೆಲ್ಲ ದುಡ್ಡಿದ್ದವರಿಗಾಗಿ ದುಡಿಯುವ ಕೇವಲ ಕತ್ತೆಗಳು ಎಂದು ಬಿಸಿಯುಸಿರು ಬಿಡುತ್ತಿದ್ದಾರಷ್ಟೆ. ಕೋಟ್ಯಂತರ ಜನರು ತಮ್ಮನ್ನು ತಾವೇ ಕತ್ತೆಗಳೆಂದು ಕರೆದುಕೊಂಡರೆ ಕತ್ತೆ ಮಾತ್ರ

ತನಗಿದು ಮರ್ಯಾದೆಯ ಕಾಲ ಎಂದು ಖಂಡಿತ ಬಿಗ್ಗಿಲ್ಲ. ಏಕೆಂದರೆ ಇದು ಬಡವರ ಒಡಲುರಿಯೆಂದು ಅದಕ್ಕೆ ಚೆನ್ನಾಗಿ ಗೊತ್ತು.

ಹಾಗಾದರೆ ಕತ್ತೆಗೊಂದು ಕಾಲ ಇಲ್ಲವೇ ಇಲ್ಲ ಎಂದು ಒಮ್ಮೆಲೇ ನಿರ್ಣಯಕ್ಕೆ ಬರಬೇಕಾಗಿಲ್ಲ. ಪುರಾಣ ಕಾಲದಲ್ಲಿ ಗಣ್ಯ ದೇವತೆಗಳನ್ನು, ಇತಿಹಾಸ ಕಾಲದಲ್ಲಿ ಪುಣ್ಯ ವಿಭೂತಿಗಳನ್ನು ಹೊತ್ತು ಮೆರೆದ ಭಾಗ್ಯ ಈ ಚರಿತ್ರಾರ್ಹ ಪ್ರಾಣಿಯದಾಗಿದೆ. ನಮ್ಮ ದೇಶದ ಉತ್ತರದಲ್ಲಿ ಮೈಲಿ ಬೇನೆಯ ಅಧಿದೇವತೆಯಾದ ಶಿತಲಾದೇವಿಗೆ ಗಾರ್ದಭವೇ ವಾಹನ. ಏಸು ಕ್ರಿಸ್ತನ ಜನ್ಮವಾದಾಗ ಆ ದೇವಪುತ್ರನನ್ನು ಆತನ ತಾಯಿ ಮೇರಿಯಮ್ಮನನ್ನು ತನ್ನ ಬೆನ್ನ ಮೇಲೇರಿಸಿಕೊಂಡ ಪುಣ್ಯವೂ ಈ ಪ್ರಾಣಿಯದೇ. ಕ್ರಿಸ್ತನನ್ನು ಜೆರೊಸಲೇಮಿಗೆ ಸವಾರಿ ಮಾಡಿಸಿಕೊಂಡು ಕರೆತಂದ ಕತ್ತೆ ಮುಂದೆ ಸೈಪ್ರಸ್ ರ್‍ಹೋಡ್ಸ್ ಕ್ಯಾಂಡಿಯಾ ಮಾಲ್ಟಾ ಮತ್ತು ಸಿಸಿಲಿ ದ್ವೀಪಗಳಲ್ಲಿ ಸಂಚರಿಸಿ ಅಕ್ವಿಲೀಸ್‌ನಲ್ಲಿ ಅಜ್ಞಾತವಾಗಿದ್ದು ಕೊನೆಗೆ ವೆರೋನಾದಲ್ಲಿ ದೀರ್ಘಾಯುವಾಗಿ ಬಾಳಿ ತೀರಿತೆಂದು ಖ್ಯಾತ ಫ್ರೆಂಚ್ ಕವಿ ವ್ಹೊಲ್ಟೇರ್ ಹಾಡಿದ್ದಾನೆ.

ಕತ್ತೆ ಯಾವಾಗಲೂ ಮೂಕ ಪ್ರಾಣಿಯಾಗಿಯೇ ಇದೆಯೆಂದೂ ಇಲ್ಲ. ಬರಾಮ್ ಲೂಸಿಯನ್ ಮತ್ತು ಅಪಲ್ಲಿಯುಸ್ ಸಾಕಿದ್ದ ಕತ್ತೆಗಳು ವಾಕ್‌ಶಕ್ತಿ ಪಡೆದಿದ್ದವೆಂದು ಐತಿಹ್ಯವಿದೆ. ಭಾರತದ ಖ್ಯಾತ ಕಾದಂಬರಿಕಾರ ಕೃಷ್ಣಚಂದ್ರರೂ ಕತ್ತೆಯ ಬಾಯಿಂದ ಅದರ ಪ್ರಚಂಡ ಆತ್ಮಚರಿತ್ರೆಯನ್ನು ಹೇಳಿಸಿದ್ದಾರೆ. ಇಂಗ್ಲಂಡಿನ ಹಾಸ್ಯ ಸಾಹಿತಿ ಚೆಸ್ಟರ್‌ಟನ್ ಅವರು ಅದನ್ನೊಂದು ಅವತಾರ ಪ್ರಾಣಿಯೆಂದು ಬಣ್ಣಿಸಿದ್ದಾರೆ. ಆತನ ನುಡಿಗತ್ತೆ ತಾನು ಜನ್ಮವೆತ್ತಿದಾಗ ಮೀನುಗಳು ಮುಗಿಲಲ್ಲಿ ಹಾರಾಡುತಿದ್ದವು, ಕಾನನಗಳು ಓಡಾಡುತ್ತಿದ್ದವು, ಚಂದ್ರಾನನವು ಆರಕ್ತವಾಗಿ ಕೆಂಪಾಗಿತ್ತು ಎಂದು ಹೇಳಿಕೊಂಡಿದೆ. ಇಂಥ ಪ್ರಕಾಂಡ ಮುಹೂರ್ತದಲ್ಲಿ ಬೇರೆ ಯಾವ ಅವತಾರವೂ ಆಗಿಲ್ಲವಲ್ಲ ?

ಇಂಥ ಕತ್ತೆಯಂಥ ಕತ್ತೆಗೂ ಈಗ ಕನಿಷ್ಠಕಾಲ ಬಂದಿದೆ. ಹರಿಶ್ಚಂದ್ರ ನಳ ವಿಕ್ರಮರಂತೆ ರಾಸಭರಾಯನೂ ಅನುಭೋಗಿಸುತ್ತಿದ್ದಾನೆ. ಆದರೆ ಇದು ಶಾಶ್ವತವಿರಲಾರದು. ಏಕೆಂದರೆ ಕಾಲಚಕ್ರ ತಿರುಗುತ್ತಲೆ ಇರುತ್ತದೆ. ಅದರಲ್ಲಿ ಮೇಲೆ ಹೋದದ್ದು ಕೆಳಗೆ ಕೆಳಗೆ, ಇದ್ದದ್ದು ಮೇಲೆ ಆಗಲೇಬೇಕು. ಅದು ಸೃಷ್ಟಿಯ ನಿಯಮ. ದೇವರನ್ನು, ದೇವಪುತ್ರನನ್ನು, ಮಾನವ ಮಹಾತ್ಮರನ್ನು ಹೊತ್ತು ಮೆರೆದಿದ್ದರೂ, ಕಾಲಗತಿಯಲ್ಲಿ ದೇಶದ್ರೋಹಿಗಳನ್ನೂ ಕಾಳ ಕಂಟಕರನ್ನೂ ಬೀದಿ ಕಾಮರನ್ನೂ ಮೆರೆಸಲು ಸಾಧನವಾಗುವ ಇಂದಿನ ಹೀನ ದೆಸೆಯಿಂದ ಕತ್ತೆಯು ಕಡೆಗಾಗಲಾರದೆಂದು ಹೇಳುವ ಎಂಟೆದೆಯ ಬಂಟರಾರು?

ಕರ್ನಾಟಕದಲ್ಲಿ ಹಿಂದುಳಿದ ಜಾತಿಗಳ ಮತ್ತು ವರ್ಷಕ್ಕೆ ರೂ. ೪೮೦೦ ಕ್ಕಿಂತ ಕಡಿಮೆ ದುಡಿಮೆ ಇರುವ ಎಲ್ಲ ಜಾತಿಗಳ ಜನರ ಹಿತ ಹಕ್ಕುಗಳ ರಕ್ಷಣೆಗೆ ಎಲ್. ಜಿ. ಹಾವನೂರ ಸಮಿತಿ ಒಂದು ವರದಿಯನ್ನು ತಯಾರಿಸಿತು. ಈ ವರದಿಯು ಶ್ರೇಷ್ಠ ಅಂಶಗಳನ್ನು ಒಳಗೊಂಡಿದೆಯೆಂದು ಕರ್ನಾಟಕ ಸರಕಾರವು ಅದರಲ್ಲಿಯ ಶಿಫಾರಸುಗಳನ್ನು ಮಾನ್ಯ ಮಾಡಿತು. ಆದರಿಂದ ಶ್ರೀಸಾಮಾನ್ಯರು ಸಂತೋಷ ಪಟ್ಟದ್ದೂ, ಆದರೂ ಬಾಯಿ ಸತ್ತ ಅವರು ತಮ್ಮ ಸಂತೋಷವನ್ನು ಯಾವುದೇ ರೀತಿಯಿಂದ ವ್ಯಕ್ತಪಡಿಸದೇ ಇದ್ದದ್ದು ಸ್ವಾಭಾವಿಕ. ಇದನ್ನು ನೋಡಿ ಧಣಿಯರು ಕತ್ತೆ ವ್ಯಕ್ತಪಡಿಸಬಲ್ಲದೆ ಕಸ್ತೂರಿಯ ಪರಿಮಳವ ಎಂದು ನಗೆಯಾಡಿದ್ದರೂ ಸ್ವಾಭಾವಿಕವೇ.

ಇಷ್ಟೆಲ್ಲ ನಡೆದು ಈಗ ಸುಮಾರು ಒಂದು ವರ್ಷವಾಯಿತು. ಈಗ ಇದ್ದಕ್ಕಿದ್ದಂತೆ, ವರ್ಷದವರೆಗೆ ನಿದ್ದೆ ಮಾಡಿದ ಇಮ್ಮಡಿ ಕುಂಭಕರ್ಣರು ಮೈಮುರಿದು ಎದ್ದಂತೆ ಆ ವರದಿಯ ಸುದ್ದಿ ಗದ್ದಲ ಎದ್ದಿದೆ. ಬಾಯಿ ಸತ್ತಿದ್ದವರು ವರದಿಗೆ ಜೈ ಎನ್ನುತ್ತ ಅದನ್ನು ಆನೆಯ ಮೇಲೆ ಅಂಬಾರಿಯಿಟ್ಟು ಮೆರೆಸಬೇಕೆಂದರೆ, ಬಾಯಿ ಮುಚ್ಚಿಕೊಂಡಿದ್ದವರು ವರದಿಗೆ ಹೊಯ್ ಬೈ ಎನ್ನುತ್ತ ಅದನ್ನು ಕತ್ತೆಯ ಮೇಲೆ ಮೆರವಣಿಗೆ ಮಾಡುವ ಹುರಿವಣಿಗೆ ಪ್ರಕಟಿಸಿದ್ದೂ ಆಯಿತು. ವರದಿಯ ಗಾತ್ರ ಮತ್ತು 'ತೂಕ' ಬಲ್ಲವರು ಅದರ 'ಭಾರ' ಹೊರುವ ಶಕ್ತಿ ಹಾಗೂ ಅರ್ಹತೆ "ಆನೆ" ಮತ್ತು "ಕತ್ತೆ" ಎರಡಕ್ಕೇ ಎಂಬುದನ್ನು ಒಪ್ಪುತ್ತಾರೆ. ಈ ಮೆರವಣಿಗೆ ನಡೆದಲ್ಲಿ ಕತ್ತೆಯೂ ಹೆಮ್ಮೆಪಡಬೇಕಾದ್ದೆ.

೧೯೭೮ರ ಸಪ್ಟೆಂಬರ್ ೨೬ರಂದು ಹುಬ್ಬಳ್ಳಿಯಲ್ಲಿ ಕತ್ತೆಗೆ ಆ ಹೆಮ್ಮೆಯ ಭಾಗ್ಯ ಒದಗಿ ಬಂದಿತ್ತು. ಉತ್ತರ ಕರ್ನಾಟಕದ ಪ್ರಮುಖ ಜಗದ್ಗುರು ಕೇಂದ್ರವಾದ ಪವಿತ್ರ ಮೂರುಸಾವಿರ ಮಠದಲ್ಲಿ, ಹಾವನೂರ ವರದಿಯನ್ನು ಕತ್ತೆಯ ಮೇಲೆ ಮೆರೆಸಬೇಕೆಂದು ಒಂದು ಪಂಗಡದವರು ತೀರ್ಮಾನಿಸಿದರು. ಶ್ರೀ ಮಠದ್ದೇ ಸ್ವಂತ ಆನೆ ಇರುವಾಗಲೂ ತನಗೆ ಈ ಗೌರವ ಸಿಗುತ್ತದೆಂದರೆ ಯಾವ ಕತ್ತೆ ಹೆಮ್ಮೆಯುವ ಹಿಗ್ಗಲಿಕ್ಕಿಲ್ಲ ? ಮೆರವಣಿಗೆ ಶ್ರೀ ಮಠದಿಂದಲೇ ಹೊರಡಲಿತ್ತೋ, ಎಂಥೆಂಥ ವಾದ್ಯ ವೈಭವವಿತ್ತೋ, ಯಾವ ಯಾವ ಮಹಾನುಭಾವರು ಮೆರವಣಿಗೆಯಲ್ಲಿ ಭಾಗವಹಿಸುತ್ತಿದ್ದರೋ ಯಾವುದೂ ಪ್ರಕಟವಾಗಿರಲಿಲ್ಲ. ಅಷ್ಟರಲ್ಲೇ "ಖಿಶಿ" ಬಂದು ಎಲ್ಲಾ ನಿಂತುಹೋಯಿತು.

ಹರ ಮುನಿದರೂ ಗುರು ಕಾಯುವ ಎಂದು ಹೇಳುತ್ತಾರೆ. ಆದರೆ ಕತ್ತೆಯ ದೌರ್ಭಾಗ್ಯ ಇಲ್ಲಿ ಗುರು ಮಠದಲ್ಲೇ ಕತ್ತೆಗೊಂದು ಕಾಲ ಒದಗಿಬಂದಿತೆಂದು ಆದಾಗಲೂ ಅದು ದಕ್ಕಲಿಲ್ಲ. ಅದಕ್ಕಾಗಿ ಹುಬ್ಬಳ್ಳಿಯ ಕತ್ತೆಗಳು ಖಾಕಿ ಬಟ್ಟೆಯುವರನ್ನು ಕಂಡ ಕೂಡಲೇ ಒದರಲಿಕ್ಕೆ ಪ್ರಾರಂಭಿಸಿವೆ ಎಂದು ನಂಬಲರ್ಹ ಮೂಲಗಳು ಹೇಳಿವೆ. ಕತ್ತೆಯ ಮೇಲೆ ಮೆರವಣಿಗೆ ಮಾಡುತ್ತೇವೆಂದವರ ಮೇಲೆಯೂ ಅವು ಸಿಟ್ಟಾಗಿವೆಯೆಂದೂ ಅವೇ ಮೂಲಗಳಿಂದ ತಿಳಿದಿದೆ. ವಿಜಾಪುರದಲ್ಲಿ ಭೀಮಣ್ಣ ಖಂಡ್ರೆ ವಗೈರೆಯವರು. ಬೆಳಗಾವಿಯಲ್ಲಿ ಕೊಟ್ರಶೆಟ್ಟಿ ಮೊದಲಾದವರು ಇನ್ನೂ ಮುಂದಾಗಿ ಹುಬ್ಬಳ್ಳಿಯ ಪ್ರೇಕ್ಷೆ ಮಾಡಲಿಲ್ಲ ಎನ್ನುವದೇ ಕತ್ತೆಗಳ ಸಾತ್ವಿಕ ಸಂತಾಪಕ್ಕೆ ಕಾರಣವಂತೆ. ಕತ್ತೆಗೆ ಆಸೆ ತೋರಿಸಿ ನಿರಾಶೆ ಮಾಡಿದವರಿಗೆಲ್ಲ ಪೋಲೀಸರು ಬಂಧನ ಜೇಲು ಎಂದರೆ ಭೀತಿ …ಎನ್ನುತ್ತ ಕತ್ತೆಕುಲ ಈಗ ಓಣಿ ಓಣಿಗಳಲ್ಲಿ ಡಂಗುರ ಹೊಯ್ಯುತ್ತಿದೆ ಎಂದೂ ಸುದ್ದಿ.

ಅದೇನೇ ಇರಲಿ ಕತ್ತೆಗೊಂದು ಕಾಲ……… ಇನ್ನೂ ಬಂದಿಲ್ಲ! ✡

ಮಾಡಿದ್ದನ್ನುಣ್ಣೋ……..

ಇದೀಗ ಎಪ್ಪತ್ತೈದರ ಹೊಸ್ತಿಲಲ್ಲಿರುವ ಕನ್ನಡದ ಸಾಹಿತಿ ಡಾ. ಗೊರೂರು ರಾಮಸ್ವಾಮಿ ಐಯ್ಯಂಗಾರರ ಜೀವನದಲ್ಲಿ ಕೆಲ ದಶಕಗಳ ಹಿಂದೆ ನಡೆದ ಘಟನೆಯಿದು. ಅವರು ಆಗಿನ್ನೂ ಮೆಟ್ರಿಕ್ಯುಲೇಶನ್ ಪಾಸಾಗಿರಲಿಲ್ಲವಾದರೂ ಅವರ ಪುಸ್ತಕಗಳಾಗಲೇ ಆ ವರ್ಗಕ್ಕೆ ಪಠ್ಯಗಳಾಗಿದ್ದುವು. ಒಮ್ಮೆ ಮೆಟ್ರಿಕ್ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕಾಗಿ ಗೊರೂರರಿಗೆ ಕರೆ ಬಂತು. "ನಾನು ಮೆಟ್ರಿಕ್ ಪಾಸಾದವನಲ್ಲ. ನನಗೆ ಮೌಲ್ಯಮಾಪನದ ಅರ್ಹತೆ ಎಂತು ಬಂತು?" ಎಂದು ಪ್ರಶ್ನಿಸಿ ಕರೆಯನ್ನು ತಿರಸ್ಕರಿಸಿಬಿಟ್ಟರಂತೆ. ಆಗ ಇನ್ನೊಬ್ಬ ಸಾಹಿತಿ ಮಿತ್ರರಾದ ತಿಮ್ಮಪ್ಪಯ್ಯ ಅವರು "ಹಾಗೇಕೆ ಮಾಡಿದಿರಿ? ಕರೆಯನ್ನು ಮನ್ನಿಸಬೇಕಿತ್ತು" ಅಂದರಂತೆ. ಗೊರೂರರು ವಾಸ್ತವ ಸ್ಥಿತಿಯನ್ನು ಹೇಳಿದರು. "ಹಾಗಾದರೆ ಮೆಟ್ರಿಕ್ ಪರೀಕ್ಷೆ ಕಟ್ಟಿರಿ" ಅಂದರು. "ಹ್ಯಾಗಾದೀತು? ನನ್ನ ಪುಸ್ತಕಗಳೇ ಪಠ್ಯಗಳಾಗಿರುವಾಗ ನಾನು ಹೇಗೆ ಪರೀಕ್ಷೆ ಕಟ್ಟಯೇನು?" ಗೊರೂರರ ಪ್ರಶ್ನೆ. "ಮಾಡಿದ್ದನ್ನುಣ್ಣಬೇಕಪ್ಪಾ ಮಹರಾಯಾ, ಕಟ್ಟು, ಬಿಡಬೇಡ" ಎಂದು ದುಂಬಾಲು ಬಿದ್ದು ಪರೀಕ್ಷೆಗೆ ಕೂಡಿಸಿದರಂತೆ ತಿಮ್ಮಪ್ಪಯ್ಯನವರು. ಅಂತೂ ಗೊರೂರರು ತಮ್ಮ ಪುಸ್ತಕಗಳನ್ನೋದಿಯೇ ಮೆಟ್ರಿಕ್ ಪಾಸಾದರು.

(-ಡಾ. ಗೊರೂರರೇ ಹೇಳಿದ್ದು.)

ಘಟನೆ ಒಂದು

ಡಾಕ್ಟರ ಷಾಪು ಗಿಜಿಗಿಜಿ ಅನ್ನಿತ್ತು. ಒಬ್ಬ ಬಂದ. ಡಾಕ್ಟರು ಕತ್ತೆತ್ತಿದರು.

"ಬಾರಿ ತಲೆ ಬಾದೆ ಡಾಕುಟ್ರೆ?"

"ಯಾವಾಗ್ಲಿಂದ?"

"ಮೂರ್ದಿನ್ದಿಂದ. ಪಟಪಟಾಂತ ಸಿಡೀತದೆ." ಡಾಕ್ಟರು ತಪಾಸಣೆ ಮಾಡಿದ್ರು. ಮೂರು ಮಾತ್ರೆ ಕೊಡ್ತ ಹೇಳಿದ್ರು: "ಈಗೊಂದು, ಮಧ್ಯಾಹ್ನ ಊಟ ಆದಮೇಲೊಂದು, ರಾತ್ರಿ ಊಟ ಆದ ಮೇಲೊಂದು ತಗೊ. ನಾಳೆ ಬೆಳಿಗ್ಗೆ ಬಂದು ನೋಡು."

"ಯಾತ್ರಲಿ ತಗಳ್ಳಿ ?"

"ನೀರಲ್ಲಿ...ನೀವ್ ಬನ್ನಿ ತಾಯಿ."

"ಆಲಲ್ಲಿ ತಗಳ್ಳ?"

"ತಗೋಳಪ್ಪ"

"ಕಾಪೀಲ್ತಗೋಬೈದ?"

"ಹಾಲು, ಕಾಫಿ, ನೀರು ಯಾವುದ್ರುಲಾದ್ರೂ ತಗೊ."

"ಊಟ ಆದ್ಮೇಲೆ ತಗಾಬೇಕ?"

"ಹೂಂ."

"ನಂದಿನ್ನೂ ಊಟ ಆಗಿಲ್ಲ. ಈಗ್ಲೇ ತಗೋ ಬೈದ?" ಡಾಕ್ಟರಿಗೆ ಸಹನೆ ಕೆಡ್ತಿತ್ತು. ಆದ್ರೂ ಪಾಸಗಿ ಇಸಮ್ಮು. ತಡ್ಕಂಡ್ರು.

"ನಾನೇಳ್ದಾಗೆ ತಗೋ ಹೋಗಪ್ಪ"

"ಅಂಗಾರೆ ನೀರಲೆ ನುಂಗ್ಬುಡ್ಲ.?"

ಜನ ಕಾಯ್ತಿದ್ರು. ಇವ ಪೀಡೆ ತರಹ ಗಂಟು ಬಿದ್ದಿದ್ದ. ಬೇಸರದಿಂದ ಹೇಳಿದ್ರು ಡಾಕ್ಟ್ರು–

"ಬ್ಯಾಡ. ಪುಡಿ ಮಾಡಿ ನಶ್ಯ ಮೂಸಿದಂಗೆ ಮೂಸು."

ಮಾರನೆ ಬೆಳಿಗ್ಗೆ ಅವ ಬಂದ. ಡಾಕ್ಟ್ರು ಕೇಳಿದ್ರು "ಹೆಂಗಿದೆ ತಲೆನೋವು?"

"ವಸಿ ವಾಸಿ, ಬಾರಿ ಘಾಟು ಡಾಕುಟ್ರೆ".

"ಏನು?"

"ನೀವು ಕೊಟ್ಟ ಮಾತ್ರೆ ಬಲೆ ಘಾಟು,"

ಡಾಕ್ಟರಿಗೆ ತಲೆ ಬುಡ ಅರ್ಥ ಆಗ್ಲಿಲ್ಲ.

"ಎಲ್ಲಾನೂ ತಗಂಡೆ?"

"ಇಲ್ಲ ವಸಿ ತಗಂಡೆ."

"ಉಳ್ದೋವೆಲ್ಲಿ ?"

"ಇಲ್ಲೆ ಅವೆ."

–ಅಂತ ಹೇಳ್ತ ಚಡ್ಡಿ ಜೇಬಿಗೆ ಕೈಹಾಕಿ ಒಂದು ಪುಟಾಣಿ ಸೀಸೆ ತೆಗೆದು ಡಾಕ್ಟರ ಮುಂದಿಟ್ಟ. ನಶ್ಯದ ಉಂಡೆಯ ತರಹ ಸಣ್ಣ ಸಣ್ಣ ಮೂರು ನಾಲ್ಕು ಉಂಡೆ ನೋಡಿದ ಡಾಕ್ಟ್ರು ಕಕ್ಕಾಬಿಕ್ಕಿ ಆದ್ರು.

"ಇದೇನಿದು?"

"ನೀವೆ ಏಳಿದ್ರಲ್ಲ ಡಾಕುಟ್ರೆ, ಮಾತ್ರೆ ನಶ್ಯ ಮೂಸ್ದಂಗ್ ಮೂಸೂಂತ. ಅದ್ಕೆ ಅವ ಪುಡಿ ಮಾಡಿ ಆಸೀನ ಬೆಣ್ಣೇಲಿ ಉಂಡೆ ಮಾಡ್ದೆ. ಎಳ್ಡು ಮೂಸೋ ಒತ್ಗೆ ಸಾಕಾಗೋಯ್ತು."

ಡಾಕ್ಟರ ಪುಣ್ಯ. ಅವ ಎಲ್ಲಾನೂ ಮೂಸಿರಲಿಲ್ಲ ಮೂಸಿದ್ದಿದ್ದರೆ...!?

ಘಟನೆ ಎರಡು

ಗಂಡ ಹೆಂಡತಿ, ಇದ್ದದ್ದು ಒಂದೇ ಮಗು. ಡಾಕ್ಟರ ಹತ್ರ ಕರ್ಕೊಂಬಂದಿದ್ರು.

"ನಿಮ್ಮೊರ್ಜನ್ದಲ್ಲಿ ಯಾರನ್ನೋಡ್ಬೇಕು?"

"ಮಗೂಗೆ ಮೈ ಸರಿ ಇಲ್ಲ."

"ಏನಾಗಿದೆ?"

"ಹೊಟ್ಟೆ ಕಟ್ಕಂಬುಟ್ಟಿದೆ."

"ಏನ್ [illegible]?"

"[illegible] ಆಯ್ತು."

ಡಾಕ್ಟರು ಮಗುವಿನ ಪರೀಕ್ಷೆ ಮಾಡಿದ್ರು. ಕುಡಿಯೋದಕ್ಕೆ ಔಷಧಿ ಕೊಟ್ಟರು. ಒಂದು ಕ್ಯಾಪ್ಸೂಲ್ ಕೊಡ್ತ ಹೇಳಿದ್ರು–

"ಈ ಔಷಧೀನ ಮೂರೊತ್ತು ಕುಡ್ಸಿ. ಈ ಮಾತ್ರೇನ ಮಗೂ ಕಕ್ಕಸ್ ಮಾಡೋ ಜಾಗ್ದಲ್ಲಿ ಇಡ್ಬೇಕು."

"ಆಗ್ಲಿ ಸಾ."

"ಎಲ್ಲಿಡ್ಬೇಕೇಳಿ?"

"ಕಕ್ಕಸ್ ಮಾಡತಾವ."

"ಅಂಗಂತ ಅದು ಕಕ್ಕಸ್ ಮಾಡೋ ಜಾಗ್ದಲ್ಲಿ ಟ್ಟೀಯ?"

"ಐಯ್ ಬುಡೀಸಾ, ಅಸ್ಟೂ ಗೊತ್ತಾಗಾಕಿಲ್ವ ನಂಗೆ ?"

"ಹೂಂ. ನಾಳೆ ಬೆಳಿಗ್ಗೆ ಮತ್ತೆ ಬರ್ಬೇಕು."

"ಹೂಂಸಾ."

ಬೆಳಿಗ್ಗೆ ಡಾಕ್ಟರು ಪಾಳಿಗೆಬರೋದಕ್ಕೆ ಮುಂಚೇನೇ ಇವರು ಬಂದಿದ್ರು. ಗಂಡ ಹೆಂಡತಿ ಮುಖದಲ್ಲಿ ಗಾಬರಿ ಇತ್ತು.

"ಹೆಂಗಿದೆ ಮಗು?"

"ವಾಮನ ಮಾಡ್ಕತದೆಸಾ."

"ಯಾವಾಗ್ಲಿಂದ?"

"ನಿಮ್ಮೌಷ್ದಿ ಕುಡಿಸ್ದಾಗ್ನಿಂದ."

"ಎಸ್ಟ್ ಸಲ ಆಯ್ತು ?"

"ಆರೇಳ್‌ದಪೆ ಆಯ್ತುಸಾ."

ಯಾಕೆ ಹೀಗೆ ಆಯ್ತೂಂತ ಡಾಕ್ಟರರಿಗೆ ಹೊಳೀಲಿಲ್ಲ. ಸಿಗರೇಟು ಹಚ್ಚಿ ದಂ ಎಳೆದ್ರು. ಕಣ್ಣು ಮುಚ್ಚಿ ಕುಳಿತ್ರು. ನಿಧಾನವಾಗಿ ಕೇಳಿದ್ರು–

"ನಾನೇಳ್ದಂಗೆ ಔಷ್ದಿ ಕೊಟ್ರಾ?"

"ಹೂಂಸಾ."

"ಮಾತ್ರೆ?"

"ಅದ [illegible] ನೀವೆಳ್ದಿಂಗೆ ಕಕ್ಕಸ್‌ಮಾಡೊ ಜಾಗ್ದಲ್ಲಿ ಮಡಗ್ದೆ."

"ಇನ್ನೊಂದು ಜೂರು?"

"ಮಗೀನ, ಗಂಟ್ಲಿಗಾಕಿ ಬೆಳ್ಳಲಿ ಒಳಕ್ನೂಕ್ದೆ."

ತಾವು ಹೇಳಿದ್ದೊಂದಾದರೆ ಇವ್ರು ಮಾಡಿರೋದೆ ಒಂದು. ಹೆಚ್ಚು ಕಡಿಮೆ ಆದ್ರೆ ಡಾಕ್ಟ್ರು ಸಾಯಿಸಿದ ಅಂತ ಊರಿಗೆಲ್ಲ ಸಾರ್ಕೊಂಬರ್‍ತಾರೆ. ರೇಗೋಯ್ತು ಡಾಕ್ಟರಿಗೆ. ಕೋಪದಿಂದ ಕೇಳಿದ್ರು–

"ಹಂಗ್ಮಾಡೂಂತ ಯಾರೇಳ್ದೋರು ನಿಂಗೆ?"

"ಒಟ್ಟೆ ಕಟ್ಕಂಡು ಮಗು ಒದ್ದಾಡ್ತಿತ್ತು. ಇಂದೆ ಮುಂದೆ ಆದ್ರೆ ಜಲ್ದಿ ಗುಣಾಯ್ತದೇಂತ ಅಂಗ್ ಮಾಡ್ದಿಸಾ."

ಘಟನೆ ಮೂರು

ಸುಮಾರು ನಲವತ್ತು ನಲವತ್ತೈದು ವರ್ಷದ ರೋಗೀನ ಇಬ್ರು ಹೊತ್ತುಕೊಂಡು ಬಂದರು.

"ಏನಾಗಿದೆ?"

"ನೆನ್ನೆಯಿಂದ ಒಂದೇ ಸಮ ವಾಂತಿ ಬೇದಿ ಆಯ್ತಾ ಅದೆ."

"ಎಸ್ಟ್ ಸಲ ಆಯ್ತು?"

"ಏಳೆಂಟು ದಫಾ ಆಗಿರ್ಬೇಕು."

ಡಾಕ್ಟರು ರೋಗಿನ ಪರಿಶೀಲಿಸಿದ್ರು.

"ಇವ್ರನ್ನ ಇವತ್ತು ಇಲ್ಲೇ ಇಟ್ಕೊಬೇಕು."

"ಇಟ್ಕಳಿಸಾ"

"ಸಿಸ್ಟರ್, ಇವರ್ನ ಆರ್ನೆ ನಂಬರ್ ಬೆಡ್‌ಗೆ ಹಾಕಿ ಡ್ರಿಪ್ ಕೊಡ್ಬೇಕು, ಎಲ್ಲ ರೆಡಿ ಮಾಡಿ."

ಸ್ವಲ್ಪ ಹೊತ್ತಾಯ್ತು. ಡಾಕ್ಟರ್ ಆರನೆ ನಂಬರ್ ಬೆಡ್ ಹತ್ತಿರ ಬಂದ್ರು. ರೋಗಿ ಕೈ ಹಿಡಿದುಕೊಂಡು ಡ್ರಿಪ್ ಕೊಡಲು ನರ ಹುಡುಕ್ತಿದ್ರು. ಅವ 'ಬ್ಯಾಡಿಸಾ, ಬ್ಯಾಡಿಸಾ' ಅಂತಾನೆ ಇದ್ದ. 'ಏನೂ ಆಗೋಲ್ಲ ಸುಮ್ನಿರು' ಅಂತ ಹೇಳಿ ಡಾಕ್ಟ್ರು ತಮ್ಮ ಕೆಲಸದಲ್ಲಿ ಮಗ್ನರಾಗಿದ್ರು. ಇದ್ದಕ್ಕಿದ್ದಂತೆ ಅವ ಕೈಕೊಸರಿಸಿದ. ನರ್ಸ್ ಹಿಡಿದಿದ್ದ ಡ್ರಿಪ್ ಕೊಡೋ ಸೂಜಿನ ಫಟಾರ್ ಅಂತ ಕಿತ್ಕಂಡ. ಬಾಯಿಗೆ ಸೂಜಿ ಇಟ್ಕಂಡು ಹೀರೋಕೆ ಪ್ರಾರಂಭಿಸಿದ.

"ಏಯ್ ಇದೇನಿದು ?"

–ಡಾಕ್ಟರು ಕೋಪದಿಂದ ಕೇಳಿದ್ರು.

"ಸಾ ನರಕ್ಮಾತ್ರ ಬ್ಯಾಡಿ, ನೋತ್ತಡ್ಯಾಕಾಗಾಕಿಲ್ಲ. ಎಂಗಿದ್ರೂ ಇದು ಒಟ್ಟೇಗ್ತಾನೆ ಓಗಾದು, ಇಂಗೆ ಬಾಯಲಿ ಈರ್ಕಂಬುಡ್ತೀನಿ." ✡

(ದೀಪಾವಳಿ ವಿಶೇಷ ಸಂಚಿಕೆಗೆ ಆಮಂತ್ರಿತ ಲೇಖನ)

ನಗೆ ಮಲ್ಲಿಗೆ

ಆ ಊರಿನ ನಾಟಕ ಮಂದಿರದಲ್ಲಿ ಪ್ರದರ್ಶಿಸಲ್ಪಟ್ಟ "ಘೋರ ರಾತ್ರಿ" ಎಂಬ 'ಭಯಂಕರ' ನಾಟಕವನ್ನು ನೋಡಿದ ಮೇಲೆ ಸ್ಥಳೀಯ ಪತ್ರಿಕೆಯೊಂದರಲ್ಲಿ ಬಂದ ಅತಿ ಉತ್ತಮ ವಿಮರ್ಶೆ: "ನಿಜವಾಗಿಯೂ."

-ಸಿ. ಜಿ. ಪ್ರಾತಃಕಾಲ

*

ಆ ನಟನಿಗೆ ಮಾತುಗಳನ್ನು ಕಂಠಪಾಠ ಮಾಡುವುದೆಂದರೆ ಜೀವಕ್ಕೆ ಸುತ್ತು ಬರುತ್ತಿತ್ತು. ಹೀಗಾಗಿ ಆತ ತನಗೆ ಬೇಕಾದ-ವ್ಯಕ್ತಿಯೊಬ್ಬನನ್ನು ಪ್ರಾಂಪ್ಟರನನ್ನಾಗಿ ವಿಂಗಿನಲ್ಲಿ ನಿಲ್ಲಿಸಿಕೊಳ್ಳುತ್ತಿದ್ದ. ಸಂಭಾಷಣೆ ಹೇಳುತ್ತ ಮಾತು ಮರೆತಕೂಡಲೇ ವಿಂಗಿನತ್ತ ತಿರುಗಿ, "ಏನಂತಿ? ನೀನು ಏನಂತೀ?" ಎಂದು ಕೇಳುತ್ತಿದ್ದ. ಅದು ಆ ನಟ ಮತ್ತು ಪ್ರಾಂಪ್ಟರ್‌ನ ನಡುವೆ ಇದ್ದ ಒಂದು ಒಪ್ಪಂದ. ಆತ ಹಾಗೆ ಕೇಳಿದಾಗಲೆಲ್ಲ ವಿಂಗಿನಿಂದ ಮುಂದಿನ ಮಾತು ಎತ್ತಿಕೊಡಲ್ಪಡುತ್ತಿತ್ತು. ಆಕಸ್ಮಿಕವಾಗಿ ಒಮ್ಮೆ ಆ ಪ್ರಾಂಪ್ಟರ್ ಗೈರುಹಾಜರಾಗಬೇಕಾಯಿತು. ಹೀಗಾಗಿ ಮತ್ತೊಬ್ಬ ಹೊಸ ಪ್ರಾಂಪ್ಟರ್-ನನ್ನು ನಿಲ್ಲಿಸಲಾಗಿತ್ತು. ನಾಟಕ ಶುರುವಾಗಿ ಅರ್ಧಗಂಟೆ ಕಳೆದಿರಬೇಕು. ನಟ-ಮಹಾಶಯ ವಿಂಗಿನತ್ತ ತಿರುಗಿ, "ಏನಂತೀ? ನೀ ಏನಂತೀ?" ಎಂದು ಕೇಳಿದ. ಪ್ರಾಂಪ್ಟರ್ನಿಂದ ಏನೂ ಪ್ರತಿಕ್ರಿಯೆಯಿಲ್ಲ. ಎರಡನೇ ಸಲವೂ ಹಾಗೆ ಕೇಳಿದ ನಟ. ಈ ಸಲವೂ-ಉತ್ತರವಿಲ್ಲ. ನಾಲ್ಕಾರು ಬಾರಿ ಹೀಗೆ. ನಡೆದಾಗ ನಟಭಯಂಕರನಿಗೆ ಕೆಂಡದಂಥ ಕೋಪ. "ನೀ ಏನಂತಿಯೋ?" ಎಂದು ಕಿರುಚಿದ ವಿಂಗಿನತ್ತ.

"ನೀ ಮಾತು ಮರತೀದಿ ಅಂತೀನಿ. ನೀ ಏನಂತಿ?" ವಿಂಗಿನಿಂದ ಬಂತು ಉತ್ತರ.

*

ಇದು ಜಗತ್ತಿನಲ್ಲಿ ತೀರಾ ಕಿರಿದಾದ ನಾಟಕ. ಮೊದಲ ದೃಶ್ಯ:

ಹೆಂಡತಿ ಗಂಡನ ಹರಿದ ಅಂಗಿಯನ್ನು ಸೂಜಿಯಿಂದ ಹೊಲಿಯುತ್ತಿದ್ದಾಳೆ. ರಂಗ ಸಜ್ಜಿಕೆ ತೀರಾ ಸರಳ: ಒಂದು ಕತ್ತರಿ. ಅಂಗಿ, ಸೂಜಿ, ದಾರ.

(ಐದು ವರ್ಷಗಳ ನಂತರ)

ಕೊನೆಯ ದೃಶ್ಯ:

ಅದೇ ಹೆಂಡತಿ ಗಂಡನ ಗಟ್ಟಕೋಟನ ಕಿಸೆ ಕತ್ತರಿಸುತ್ತಿದ್ದಾಳೆ. ರಂಗಸಜ್ಜಿಕೆಯಲ್ಲಿ ಸ್ವಲ್ಪ ಬದಲಾವಣೆ. ಸೂಜಿ-ದಾರ ಇಲ್ಲ. ಕತ್ತರಿ ಇದೆ. ಕತ್ತರಿಸಿದ ಕಿಸೆಯಿಂದ ಚಿಲ್ಲರೆಗಳುದುರುತ್ತಿವೆ.

*

ಸುಪ್ರಸಿದ್ಧ ನಟಿಯನ್ನು ಮದುವೆಯಾದ ಆತ ತಾಯಿ ಮತ್ತು ಹೆಂಡತಿಯೊಡನೆ ಲಾಂಚಿನಲ್ಲಿ ಪ್ರಯಾಣ ಮಾಡುತ್ತಿದ್ದ. ಅಕಸ್ಮಾತ್ತಾಗಿ ಯಾಂತ್ರಿಕ ದೋಷಗಳಿಂದಾಗಿ ಲಾಂಚು ಜಲಸಮಾಧಿಯಾಗುವ ಸ್ಥಿತಿಯೊದಗಿತು. ಪ್ರಯಾಣಿಕರೆಲ್ಲ ಜೀವದಾಸೆಗಾಗಿ ಹೆಣಗಾಡತೊಡಗಿದರು. ಆತ ತಾಯಿಯೆಡೆಗೊಮ್ಮೆ, ಹೆಂಡತಿಯೆಡೆಗೊಮ್ಮೆ ಅಸಹಾಯಕನಾಗಿ ನೋಡಿದ. ಆಗ ನಟಿ-ಹೇಳಿದಳು, "ಯೋಚನೆ ಬೇಡ. ಮೊದಲು ನಿಮ್ಮ ತಾಯಿಯನ್ನುಳಿಸಿ. ನನ್ನನ್ನುಳಿಸಲು ಅನೇಕರು ಕಾದಿದ್ದಾರೆ."

-ವಿ. ಎಂ. ಜೋಶಿ

*

ಫೀಡಿಂಗ್ ಬಾಟಲುಗಳ ಮಾರಾಟದ ಅಂಗಡಿಯೆದುರು ತೂಗಾಡುತ್ತಿದ್ದ ಫಲಕದಲ್ಲಿದ್ದ ಬರಹ:

"ತ್ವರೆ ಮಾಡಿ. ಸ್ಟಾಕು ಮುಗಿಯುವ ಮುನ್ನವೇ ಮಗುವನ್ನು ಪಡೆಯಿರಿ."

*

ಆತ ಮಹಾನಗರವೊಂದರಲ್ಲಿ ದೊಡ್ಡ

ಬಿಜಿನೆಸ್ ನಡೆಸುತ್ತಿದ್ದ ಸುಂದರ ತರುಣ. ಮದುವೆ ನಿಶ್ಚಿತವಾಗಿತ್ತು. ಆದರೆ ಮದುವೆಯ ಹಿಂದಿನ ರಾತ್ರಿ ಲಕ್ಷಾಂತರ ರೂಪಾಯಿಗಳ ವ್ಯವಹಾರವೊಂದರ ಸಲುವಾಗಿ ನಿದ್ದೆಗೆಟ್ಟ ಆತ ತಾನು ಮದುವೆಯ ವೇಳೆಗೆ ಸ್ವಲ್ಪ ಮುಂಚೆ ತಲುಪಿದರಾಯಿತೆಂದುಕೊಂಡು ಉಳಿದವರಿಗೆಲ್ಲ ಹೋಗಲು ಹೇಳಿದ್ದ.

ಮರುದಿನ ಆತನಿಗೆ ಎಚ್ಚರವಾದದ್ದು ಮುಂಜಾನೆ ಹತ್ತು ಗಂಟೆಗೆ. ಅರೆ, ಟ್ರೇನು ಹೊರಟು ಹೋಗಿರಬೇಕು. ತನ್ನ-ಕಾರುಗಳನ್ನೆಲ್ಲ ಮದುವೆಯ ಸ್ಥಳಕ್ಕೇ ಕಳಿಸಿಬಿಟ್ಟಿದ್ದಾನೆ. ಏನು ಮಾಡುವುದೆಂದು ತಿಳಿಯದೇ ಮದುವೆಯ ಮಂಟಪದ ನಂಬರ್ ಹುಡುಕಿ ಫೋನ್ ಡಯಲ್ ಮಾಡಿದ. ಅತ್ತಲಿಂದ ವಧುವೇ ಎತ್ತಬೇಕೆ ಫೋನನ್ನು.

“ಹಲೋ ಡಿಯರ್, ನೋಡು ನಂಗೆ ಬೇಗ ಬರೋಕಾಗ್ಲಿಲ್ಲ. ಕ್ಷಮ್ಸು. ಮತ್ತೆ ನಾ ಬರೋವರ್ಗೂ ಮದುವೆ ಮಾಡ್ಕೋಬೇಡ, ತಿಳೀತೇ” ಎಂದವನೇ ಫೋನನ್ನು ಕುಕ್ಕಿ ಮುಂದಿನ ತಯಾರಿಗೆ ನಡೆದ.

*

“ನಾನು ನಿಮ್ಮುಖಾನ ಬೇರೆಲ್ಲೋ ನೋಡಿದ ಹಾಗೆ ನೆನಪು.”

“ಛೇ ಛೇ. ಅದು ಸಾಧ್ಯಾನೇ ಇಲ್ಲ. ನನ್ಮುಖಾ ಯಾವಾಗ್ಲೂ ನನ್ನ ಕಿವಿಗಳ ನಡುವೇ ಇರತ್ತೆ. ಬೇರೆಲ್ಲಿ ನೋಡ್ತೀರಿ?”

*

“ನಾನು ತುಂಬಾ ಅದೃಷ್ಟವಂತೆ ಕಣೆ. ನಂಗೆ ಬೇಕಾದವನ್ನೇ ಮದ್ವೆಯಾಗೋ ಚಾನ್ಸ್ ಬಂತು...”

“ನೀನು ನಿಜವಾಗ್ಲೂ ಅನ್‌ಲಕಿ. ಬೇರೆಯೊಬ್ಬಳಿಗೆ ಬೇಕಾದವನ್ನ ಮದುವೆಯಾಗೋವ್ರೇ ತುಂಬಾ ಅದೃಷ್ಟವಂತ್ರು.”

*

ಆತ ವಿಧುರ. ಆಕೆ ವಿಧವೆ. ಮೆಚ್ಚಿ ಮದುವೆಯಾದರು. ವಿಧವೆಯ ಗೆಳತಿ ಕೇಳಿದಳು: “ನಿನ್ನ ಗಂಡ ಯಾವಾಗಾದ್ರೂ ತನ್ನ ಮೊದಲ್ನೇ ಹೆಂಡ್ತಿ ಬಗ್ಗೆ ಮಾತು ತೆಗೀತಾನಾ?”

“ಓಹ್, ಇನ್ನ ಮೇಲೆ ಆಕೇನ ನೆನಸಲಾರದ ಹಾಗೆ ಮಾಡ್ಬಿಟ್ಟಿದಿನಿ.”

“ಏನ್ಮಾಡ್ದೆ?”

“ಮೊದಲ್ನೇ ಹೆಂಡ್ತಿ ವಿಷ್ಯ ತೆಗಿಯುತ್ಲೂ ನಾನು ಮೂರನೇ ಗಂಡನ ಬಗ್ಗೆ ಮಾತಾಡತೊಡಗಿದೆ...”

*

“ಡಾಕ್ಟರ್, ಬೇಗ ಏನಾದ್ರೂ ಮಾಡಿ... ನನ್ನ ತಮ್ಮ ಮೌತ್ ಆರ್ಗನ್ ಬಾರಿಸ್ತಾ ಇದ್ವೋನು ನುಂಗಿಬಿಟ್ಟಿದಾನೆ...” ಅಕ್ಕ ತಮ್ಮನನ್ನು ಕರೆದುಕೊಂಡು ಬಂದು ಆತಂಕದಿಂದ ಹೇಳುತ್ತಿದ್ದಂತೇ ಡಾಕ್ಟರು, “ಸದ್ಯ ನಿನ್ತಮ್ಮ ಅದೃಷ್ಟವಂತ. ಮೌತ್ ಆರ್ಗನ್ ಬದ್ಲು ಪಿಯಾನೋ ಬಾರಿಸ್ತಿರಲಿಲ್ಲವಲ್ಲ,” ಅಂದರು.

*

“ಇಲ್ನೋಡಿ.” ಎಂದು ಪ್ರಾಗ್‌ನ ರಾಷ್ಟ್ರೀಯ ಮ್ಯೂಸಿಯಮ್ಮಿನ ಗೈಡ್ ವಿವರಿಸತೊಡಗಿದ: “ಈ ಚಿತ್ರ ಪೊಪೋವ್‌ನದು. ನಮಗೆ ಉಗಿಹಡಗು, ಟೆಲಿಗ್ರಾಫ್ ರೇಡಿಯೋ ಮತ್ತು ಟೆಲಿವಿಜನ್ ನೀಡಿದ ಮಹಾಸಂಶೋಧಕ ಆತ.”

ಅಷ್ಟರಲ್ಲೇ ಪಕ್ಕದ ಚಿತ್ರದತ್ತ ಕೈ ಮಾಡಿ ಒಬ್ಬ ಕೇಳಿದ: “ಇದಾರದು ?”

“ಆತನೂ ಒಬ್ಬ ಮಹಾಸಂಶೋಧಕ. ಆತ ಪೊಪೋವ್‌ನನ್ನು ಸಂಶೋಧಿಸಿದ.”



ಚೀನೀ ಕಥೆ

ಲೂ ಶೂನ್ (೧೮೮೧-೧೯೩೬)

ಆಧುನಿಕ ಚೀನೀ ಸಾಹಿತ್ಯದ ಆದ್ಯ ಪ್ರವರ್ತಕ ಲೂ ಶೂನ್- ಅವನ ನಿಜ ಜೀವನದ ಹೆಸರು ಚಾ ಶು ಜೆಂಗ್- ಇಪ್ಪತ್ತನೆಯ ಶತಮಾನದ ಶ್ರೇಷ್ಠ ಕ್ರಾಂತಿಕಾರಿ ಸಾಹಿತಿಗಳ ಸಾಲಿಗೆ ಸೇರುತ್ತಾನೆ. ಅಂದಿನ ಚೀನೀ ಸಾಮಾಜಿಕ ಜೀವನದ ನಗ್ನ ಸ್ವರೂಪವನ್ನು ತನ್ನ ಬಾಲ್ಯದಲ್ಲಿಯೇ ಕಂಡುಕೊಂಡ ಆತ ಆಗಲೇ ದಬ್ಬಾಳಿಕೆಗಳನ್ನು ವಿರೋಧಿಸಿ ಹೋರಾಡಿದ ಸಾಹಿತಿ- ಕವಿಗಳ ಕೃತಿಗಳತ್ತ ಒಲವು ಬೆಳೆಸಿಕೊಂಡ. ವೈದ್ಯನಾಗಬೇಕೆಂದಿದ್ದ ಆತ ಮುಂದೆ ನಡೆದ ಘಟನೆಯೊಂದರಿಂದ ಚೀನೀ ಜನತೆಯ ದೈಹಿಕ ಗಾಯ ರೋಗಗಳನ್ನು ಗುಣಪಡಿಸುವುದಕ್ಕಿಂತ ಅವರ ಮನಸ್ಸು ಹೃದಯಗಳನ್ನು ಕವಿದಿದ್ದ ಜಡತ್ವದಿಂದ ಅವರನ್ನು ಮುಕ್ತಗೊಳಿಸುವುದು ಅವಶ್ಯವೆಂದು ಕಂಡುಕೊಂಡ. ಅದಕ್ಕೆ ಸಾಹಿತ್ಯಕ್ಕಿಂತ ಉತ್ತಮ ಮಾಧ್ಯಮ ಬೇರಿಲ್ಲವೆಂದು ಮನಗಂಡ ಅವನು ಅಂದಿನಿಂದ ತನ್ನನ್ನು, ತನ್ನ ಸಾಹಿತ್ಯವನ್ನು ಚೀನೀ ಜನತೆಯ ಕ್ರಾಂತಿಗೆ ಅರ್ಪಿಸಿಕೊಂಡ. ೧೯೧೮ರಲ್ಲಿ ಪ್ರಕಟಿಸಿದ ತನ್ನ ಪ್ರಥಮ ಕಥೆ 'A Madman's Diary' (ಒಬ್ಬ ಹುಚ್ಚನ ದಿನಚರಿ)ಯ ಮೂಲಕ ಅಂದಿನ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಉಗ್ರದಾಳಿಯನ್ನು ಪ್ರಾರಂಭಿಸಿದ.

ಅವನ ವೈಚಾರಿಕತೆ ಹಾಗೂ ಬರವಣಿಗೆ ಚೀನೀ ಜನತೆಯ ಪ್ರಜಾಪ್ರಭುತ್ವ ಕ್ರಾಂತಿಯೊಂದಿಗೇ ಅಡಿಯಿಟ್ಟು ಅವರು ಊಳಿಗಮಾನ್ಯ ಜಮೀನುದಾರಿ ವ್ಯವಸ್ಥೆ ಹಾಗೂ ಸಾಮ್ರಾಜ್ಯಶಾಹಿಗಳ ವಿರುದ್ಧ ಹೂಡಿದ ಹೋರಾಟದ ನೈಜ ಚಿತ್ರಣವನ್ನು ನೀಡುವುದರೊಂದಿಗೇ ಅವನ ಕ್ರಾಂತಿಕಾರಿ ವಿಚಾರ ಹಾಗೂ ಹೋರಾಟದ ಕೆಚ್ಚುಗಳನ್ನು ಪ್ರತಿಬಿಂಬಿಸುತ್ತವೆ. ತನ್ನ ಜನರನ್ನು ಆವರಿಸಿಕೊಂಡಿದ್ದ ಜಡತ್ವವನ್ನು ದ್ವೇಷಿಸಿದರೂ ಚೀನೀ ಸಂಸ್ಕೃತಿಯ ಆಳಕ್ಕಿಳಿದ ಅವನ ಕೃತಿಗಳು ಚೀನೀಯರ ಉನ್ನತ ಮೌಲ್ಯ, ಆದರ್ಶಗಳನ್ನೂ ಎತ್ತಿ ತೋರಿಸುತ್ತವೆ.

ನಿರಂತರ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ಅಪಾರ ವಿಶ್ವಾಸವಿದ್ದ ಅವನು ೧೯೧೧ರ ಕ್ರಾಂತಿಯ ವೈಫಲ್ಯವನ್ನು ಕಂಡುಕೊಂಡ. ಅದರ ಕಾರಣಗಳನ್ನು ನಿರಂತರ ಅಧ್ಯಯನ ಚಿಂತನಗಳಿಂದ ಕಂಡುಹಿಡಿದು ಮಾರ್ಕ್ಸ್‌ವಾದ, ಲೆನಿನ್‌ವಾದಗಳು ಮಾತ್ರ ಕ್ರಾಂತಿಕಾರಿ ವೈಜ್ಞಾನಿಕ ಸಿದ್ಧಾಂತಗಳೆಂಬುದನ್ನು ಮನಗಂಡು ತನ್ನ ಜೀವಿತದ ಕೊನೆಯ ಹತ್ತು ವರ್ಷಗಳನ್ನು ಕಮ್ಯುನಿಸ್ಟ್ ಹೋರಾಟಗಳಲ್ಲಿ ಕಳೆದ.

ಸಾಹಿತ್ಯಿಕ ಪ್ರಬಂಧಗಳಲ್ಲದೇ ರಾಜಕೀಯ, ಸೈದ್ಧಾಂತಿಕ ಪ್ರಬಂಧಗಳನ್ನೂ ಬರೆದ ಆತ ಹದಿನಾರು ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ. ಮೂರು ಕಥಾ ಸಂಗ್ರಹಗಳ ಜೊತೆಗೆ ಉತ್ಕೃಷ್ಟ ಚೀನೀ ಸಾಹಿತ್ಯ ಹಾಗೂ ವಿಮರ್ಶಾಕೃತಿಗಳನ್ನು ಚೀನೀ ಭಾಷೆಗೆ ಭಾಷಾಂತರಿಸಿದ. ಸಂಖ್ಯೆಯಲ್ಲಿ ಕಡಿಮೆಯೆನಿಸಿದರೂ ತಮ್ಮ ಉತ್ಕೃಷ್ಟತೆ, ಕ್ರಾಂತಿಕಾರಿ ಗುಣಗಳಿಂದ ಅವು ಜಗತ್ತಿನ ವಿವಿಧ ದೇಶಗಳ ಅಸಂಖ್ಯ ಜನತೆ ಹಾಗೂ ಲೇಖಕರ ಮೇಲೆ ತಮ್ಮ ಪ್ರಭಾವ ಬೀರಿವೆ. ಸ್ವತಃ ಕವಿಯಾಗಿದ್ದ ಮಾವೋತ್ಸೆ ತುಂಗನ ಮಾತಿನಲ್ಲೇ ಹೇಳುವುದಾದರೆ "ಲೂ ಶೂನ್ ಒಬ್ಬ ಅದ್ವಿತೀಯ ಲೇಖಕ."

ಚೀನೀ ಮೂಲ : ಲೂ ಶೂನ್

ಕನ್ನಡಕ್ಕೆ : ಜಗದೀಶ ಮಂಗಳೂರಮಠ

ಸೋದರರಿಬ್ಬರು–ಇಲ್ಲಿ ಅವರ ಹೆಸರು ಹೇಳುವ ಅವಶ್ಯಕತೆಯಿಲ್ಲ–ಶಾಲೆಯಲ್ಲಿ ನನ್ನ ಒಳ್ಳೆಯ ಗೆಳೆಯರಾಗಿದ್ದರು. ಆದರೆ ಬಹಳ ವರ್ಷಗಳ ಅಗಲಿಕೆಯ ಪರಿಣಾಮವಾಗಿ ನಾವು ಸಂಪರ್ಕ ಕಳೆದುಕೊಂಡಿದ್ದೆವು. ಕೆಲ ಸಮಯದ ಹಿಂದೆ ಅವರಲ್ಲೊಬ್ಬ ತೀವ್ರ ಕಾಯಿಲೆಯಿಂದ ಬಳಲುತ್ತಿರುವುದಾಗಿ ಕೇಳಿದೆ. ಕಾರಣ ನನ್ನ ಹುಟ್ಟೂರಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಪ್ರಯಾಣವನ್ನು ಮುರಿದು ಅವರನ್ನು ನೋಡಲು ಹೋದೆ. ಅವರಲ್ಲೊಬ್ಬನನ್ನು ಮಾತ್ರ ನಾನು ಕಂಡೆ. ತನ್ನ ತಮ್ಮನೇ ಅನಾರೋಗ್ಯಕ್ಕೀಡಾಗಿದ್ದನೆಂದು ಅವನು ಹೇಳಿದ.

"ಅಷ್ಟು ದೂರದಿಂದ ನೀನು ನಮ್ಮನ್ನು ನೋಡಲೆಂದು ಬಂದದ್ದು ನನಗೆ ಬಹಳ ಮೆಚ್ಚಿಗೆಯಾಯಿತು. ಆದರೆ ಸ್ವಲ್ಪ ದಿವಸಗಳ ಹಿಂದೆ ಅವನು ಗುಣಹೊಂದಿ ಸರಕಾರಿ ಹುದ್ದೆಯೊಂದನ್ನು ವಹಿಸಿಕೊಳ್ಳಲು ಬೇರೆ ಊರಿಗೆ ಹೋಗಿದ್ದಾನೆ," ಎಂದು ಅವನು ಹೇಳಿದ.

ನಂತರ ನಗುತ್ತ ಆತ ತನ್ನ ತಮ್ಮನ ದಿನಚರಿಯ ಎರಡು ಪೊತ್ತಿಗೆಗಳನ್ನು ನನಗೆ ಕೊಟ್ಟು ಅವುಗಳ ಮೂಲಕ ಅವನ ಕಾಯಿಲೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಬಹುದು, ಅಲ್ಲದೆ ಆತ್ಮೀಯ ಮಿತ್ರನೊಬ್ಬನಿಗೆ ಅವುಗಳನ್ನು ತೋರಿಸುವುದರಲ್ಲಿ ಯಾವ ತೊಂದರೆಯೂ ಇಲ್ಲ ಎಂದು ಹೇಳಿದ. ದಿನಚರಿಯನ್ನು ನಾನು ತೆಗೆದುಕೊಂಡು ಹೋಗಿ ಸಂಪೂರ್ಣ ಓದಿ ನೋಡಿದೆ. ತಾನು ಹಿಂಸಿಸಲ್ಪಡುತ್ತಿರುವೆನೆಂಬ ಮನೋವಿಕಾರದಿಂದ ಆತ ಬಳಲಿರುವುದು ಅದರಿಂದ ವ್ಯಕ್ತವಾಗುತ್ತಿತ್ತು. ಬರವಣಿಗೆ ಬಹಳ ಗೊಂದಲಮಯವಾಗಿತ್ತು, ಅಸಂಬದ್ಧವಾಗಿತ್ತು. ಅಲ್ಲದೆ ಆತ ಸಾಕಷ್ಟು ಉದ್ರೇಕದ ಹೇಳಿಕೆಗಳನ್ನೂ ನೀಡಿದ್ದ. ಎಲ್ಲಕ್ಕೂ ಮಿಗಿಲಾಗಿ ದಿನಚರಿಯಲ್ಲಿ ತಾರೀಖುಗಳನ್ನೇ ಬರೆದಿರಲಿಲ್ಲ. ಕೇವಲ ಮಸಿಯ ಬಣ್ಣದಿಂದ, ಬರವಣಿಗೆಯೊಳಗಿನ ಅಂತರಗಳಿಂದ ಮಾತ್ರ ಯಾರಾದರೂ ಅದನ್ನೆಲ್ಲ ಒಂದೇ ಸಲ ಬರೆದದ್ದಲ್ಲವೆಂದು ಹೇಳಬಹುದಾಗಿತ್ತು. ಕೆಲ ಭಾಗಗಳನ್ನಂತೂ ಪರಸ್ಪರ ಬೇರ್ಪಡಿಸಿ ಕೂಡ ಬರೆದಿರಲಿಲ್ಲ. ವೈದ್ಯಕೀಯ ಸಂಶೋಧನೆಗೆ ಒಂದು ವಿಷಯವಾಗಲಿ ಎಂಬ ಉದ್ದೇಶದಿಂದ ದಿನಚರಿಯ ಒಂದು ಭಾಗವನ್ನು ಇಲ್ಲಿ ಪ್ರತಿ ಮಾಡಿ ಕೊಟ್ಟಿದ್ದೇನೆ. ಇಲ್ಲಿ ಬರುವ ಎಲ್ಲ ವ್ಯಕ್ತಿಗಳೂ ಹೊರ ಜಗತ್ತಿಗೆ ಅಪರಿಚಿತರಾದ ಅಜ್ಞಾತ ಹಳ್ಳಿಯ ಜನರಾದರೂ ಅವರ ಹೆಸರುಗಳನ್ನು ಬಿಟ್ಟರೆ ದಿನಚರಿಯೊಳಗಿನ ಒಂದು ಶಬ್ದವನ್ನು ಕೂಡ ನಾನು ಬದಲಿಸಿಲ್ಲ. ತಲೆಬರಹದ ಮಟ್ಟಿಗೆ ಹೇಳುವುದಾದರೆ ಅದನ್ನು ದಿನಚರಿಕಾರನೇ ತಾನು ಗುಣ ಹೊಂದಿದ ನಂತರ ಆಯ್ಕೆಮಾಡಿರುವುದರಿಂದ ನಾನು ಬದಲಿಸಲಿಲ್ಲ.

■

ಇಂದು ಚಂದ್ರ ತುಂಬ ಕಾಂತಿಯುತನಾಗಿದ್ದಾನೆ. ಕಳೆದ ಸುಮಾರು ಮೂವತ್ತು ವರ್ಷಗಳಿಗೂ ಮಿಕ್ಕಿದ ಅವಧಿಯಲ್ಲಿ ನಾನು ಇಂಥ ಚಂದ್ರನನ್ನು ನೋಡಿರಲೇ ಇಲ್ಲ. ಇಂದು ನೋಡಿದಾಗ ಎಂದೂ ಅನುಭವಿಸದ ಆನಂದ ಉತ್ಸಾಹಗಳಲ್ಲಿ ತೇಲಾಡಿದೆ. ಕಳೆದ ಮೂವತ್ತು ವರ್ಷಗಳ ಅವಧಿಯಲ್ಲಿ ನಾನು ಕತ್ತಲೆಯಲ್ಲೇ ಇದ್ದೆನೆಂಬುದನ್ನು ಅರ್ಥಮಾಡಿಕೊಳ್ಳತೊಡಗಿದೆ. ಆದರೆ ಇನ್ನು ಮುಂದೆ ನಾನು ಬಹಳ ಎಚ್ಚರಿಕೆಯಿಂದಿರಬೇಕು. ಇಲ್ಲವಾದರೆ ಆ ಚಾವೋನ ನಾಯಿ ನನ್ನ ಕಡೆಗೇ ಯಾಕೆ ಎರಡು ಸಲ ನೋಡಿತು ?

ಇಂದು ರಾತ್ರಿ ಚಂದ್ರನಿಲ್ಲವೇ ಇಲ್ಲ. ಇದು ಒಳ್ಳೆಯ ಶಕುನವಲ್ಲವೆಂಬುದನ್ನು ನಾನು ಬಲ್ಲೆ. ಇಂದು ಮುಂಜಾನೆ ಸಾಕಷ್ಟು ಎಚ್ಚರಿಕೆಯಿಂದಲೇ ನಾನು ಹೊರಗೆ ಹೋದಾಗ ಚಾವೋನ ಕಣ್ಣುಗಳಲ್ಲಿ ವಿಚಿತ್ರವಾದ ನೋಟವನ್ನು ಕಂಡೆ. ಬಹುಶಃ ಅವನು ನನಗೆ ಹೆದರಿದಂತಿತ್ತು ಅಥವಾ ನನ್ನನ್ನು ಕೊಂದುಬಿಡಲು ನಿರ್ಧರಿಸಿದಂತಿತ್ತು. ಅಲ್ಲದೆ ರಸ್ತೆಯಲ್ಲಿ ಏಳೆಂಟು ಜನರು ಸಹಿತ ತಮ್ಮ ತಲೆಗಳನ್ನೆಲ್ಲ ಒಟ್ಟುಗೂಡಿಸಿ ನನ್ನ ಬಗೆಗೇ ಚರ್ಚಿಸುತ್ತಿದ್ದರು. ನಾನು ಅವರನ್ನು ನೋಡಿದ್ದನ್ನು ಕಂಡಾಗ ಅವರು ಹೆದರಿದರು. ರಸ್ತೆಯಲ್ಲಿ ನಾನು ಹೋದ

ಜನರೆಲ್ಲ ಹಾಗೇ ಕಂಡರು. ಅತ್ಯಂತ ಭೀಕರ ವಾಗಿ ಕಂಡ ಒಬ್ಬ ನನ್ನನ್ನು ನೋಡಿ ಹಲ್ಲು ಕಿರಿದು ನಕ್ಕ. ಅವರ ಸಿದ್ಧತೆಗಳೆಲ್ಲ ಮುಗಿದಿವೆ ಎಂಬುದು ಅರ್ಥವಾಗಿ ಅಡಿಯಿಂದ ಮುಡಿಯ ವರೆಗೆ ನಾನು ನಡುಗಿದೆ.

ನಾನು ಹೆದರಿರಲಿಲ್ಲ. ಹಾಗೆಯೇ ಮುಂದೆ ನಡೆದೆ. ಎದುರಿಗೆ ಕೆಲ ಹುಡುಗರು ಗುಂಪುಗೂಡಿ ನನ್ನ ಬಗೆಗೇ ಮಾತನಾಡುತ್ತಿದ್ದರು. ಅವರ ಕಣ್ಣು ಗಳಲ್ಲಿ ಕೂಡ ಚಾವೋನ ಕಣ್ಣುಗಳಲ್ಲಿದ್ದಂಥ ನೋಟವೇ ಇತ್ತು. ಅವರ ಮುಖಗಳೂ ಹೆದರಿಕೆ ಯಿಂದ ಬಿಳಿಚಿಕೊಂಡಿದ್ದವು. ಈ ಹುಡುಗರ ಜೊತೆಗೆ ನಾನೆಂಥ ಜಗಳ ಮಾಡಿದ್ದೇನೆ, ಇವ ರೇಕೆ ನನ್ನ ಬಗ್ಗೆ ಹೀಗೆ ವರ್ತಿಸುತ್ತಿದ್ದಾರೆ ಎಂದು ಆಶ್ಚರ್ಯವಾಯಿತು. ನನಗೆ ತಡೆಯದಾಗಿ ಕೂಗಿ ಕೇಳಿದೆ: "ಏನದು? ನನಗೆ ಹೇಳ್ರಿ!" ಆದರೆ ಅವರು ತಟ್ಟನೆ ಓಡಿಹೋದರು.

ಚಾವೋನ ಕೂಡ ನಾನು ಎಂಥ ಜಗಳ ಮಾಡಿ ದ್ದೇನೆ, ಬೀದಿಯೊಳಗಿನ ಈ ಜನರ ಜೊತೆಗೆ ಯಾವ ಜಗಳ ಮಾಡಿದ್ದೇನೆ ಎಂದು ನನಗೆ ಆಶ್ಚರ್ಯ ವಾಯಿತು. ಇಪ್ಪತ್ತು ವರ್ಷಗಳ ಹಿಂದೆ ನಾನು ಕು ಚಿಯೂನ ಲೆಕ್ಕದ ಪುಸ್ತಕಗಳನ್ನು ಪರೀಕ್ಷಿ ಸಿದ್ದು ಹಾಗೂ ಕು ಚಿಯೂ ನನ್ನ ಮೇಲೆ ಸಿಟ್ಟಾ ದದ್ದು ಇಷ್ಟನ್ನು ಬಿಟ್ಟರೆ ಬೇರೇನೂ ನನಗೆ ತೋಚಲೊಲ್ಲದು. ಚಾವೋನಿಗೆ ಕು ಚಿಯೂನ ಪರಿಚಯವಿರದಿದ್ದರೂ ಅವನು ಆ ಘಟನೆಯ ಬಗ್ಗೆ ಕೇಳಿರಬಹುದು, ಅಲ್ಲದೆ ಅವನ ಸೇಡನ್ನು ತಾನು ತೀರಿಸಲು ನಿರ್ಧ ರಿಸಿರಬಹುದು. ಆದುದರಿಂದಲೇ ಆತ ಬೀದಿ ಯೊಳಗಿನ ಉಳಿದ ಜನರ ಜೊತೆ ಕೂಡಿಕೊಂಡು ನನ್ನ ಮೇಲೆ ಸಂಚು ನಡೆಸಿದ್ದಾನೆ. ಆದರೆ ಆ ಹುಡುಗರ ಬಗೆಗೆ ಏನು ಹೇಳಬೇಕು? ಆಗ ಅವರು ಇನ್ನೂ ಹುಟ್ಟಿರಲಿಲ್ಲ. ಹಾಗಾದರೆ ಅವರೇಕೆ ನನ್ನ ಕಡೆಗೆ ಅಂಥ ವಿಚಿತ್ರ ರೀತಿಯಲ್ಲಿ, ನನಗೆ ಹೆದರಿದ ವರಂತೆ, ನನ್ನನ್ನು ಕೊಂದುಬಿಡಲು ನಿರ್ಧರಿಸಿದವ ರಂತೆ ನೋಡಿದರು? ಇದು ನಿಜವಾಗಿಯೂ ನನ್ನನ್ನು ಭಯಭೀತನನ್ನಾಗಿ ಮಾಡುತ್ತಿದೆ. ನನಗೆ ದಿಗ್ಭ್ರಮೆ ಹಿಡಿಸುತ್ತಿದೆ. ನನ್ನ ಹೃದಯ ವನ್ನು ಕಲಕಿಬಿಡುತ್ತಿದೆ.

ನನಗೆ ಗೊತ್ತು. ಇದೆಲ್ಲವನ್ನೂ ಅವರು ತಮ್ಮ ತಂದೆ ತಾಯಿಗಳಿಂದ ಕೇಳಿಕೊಂಡಿದ್ದಾರೆ!

ಇಂದು ರಾತ್ರಿ ನನಗೆ ನಿದ್ರೆಯೇ ಬರಲೊಲ್ಲದು. ಪ್ರತಿಯೊಂದನ್ನೂ ಅರ್ಥಮಾಡಿಕೊಳ್ಳಬೇಕಾದರೆ ಅದನ್ನು ಕೂಲಂಕುಷವಾಗಿ ಪರಿಶೀಲಿಸುವುದವಶ್ಯ.

ಆ ಜನರಲ್ಲಿ ಎಷ್ಟೋ ಮಂದಿ ನ್ಯಾಯಾಧೀಶ ರಿಂದ ಬಹಿರಂಗ ಶಿಕ್ಷೆಗೊಳಗಾಗಿ ಅವಮಾನಿಸ ಲ್ಪಟ್ಟಿದ್ದಾರೆ. ಕೆಲವರು ಊರಿನ ದುಷ್ಟ ಶ್ರೀಮಂತ ರಿಂದ ಕಪಾಳಕ್ಕೆ ಹೊಡೆಸಿಕೊಂಡಿದ್ದಾರೆ. ಕೆಲವರ ಹೆಂಡಂದಿರನ್ನು ಅಮೀನರು ಬಲವಂತವಾಗಿ ಎಳೆದೊಯ್ದಿದ್ದಾರೆ, ಎಷ್ಟೋ ಜನರ ತಂದೆ ತಾಯಿಗಳು ಸಾಲಗಾರರ ಕಾಟ ತಾಳದೆ ಆತ್ಮ ಹತ್ಯೆ ಮಾಡಿಕೊಂಡಿದ್ದಾರೆ; ಆದರೂ ಅವರು ನಿನ್ನೆಯಷ್ಟು ಭಯಭೀತರಾಗಿಯಾಗಲೀ ಭಯಂಕರ ವಾಗಿಯಾಗಲೀ ಎಂದೂ ಕಂಡಿರಲಿಲ್ಲ.

ಎಲ್ಲಕ್ಕಿಂತ ದೊಡ್ಡ ಅದ್ಭುತವೆಂದರೆ ನಿನ್ನೆ ರಸ್ತೆಯಲ್ಲಿ ಹೆಣ್ಣುಮಗಳೊಬ್ಬಳು ತನ್ನ ಮಗು ವಿಗೆ ಹೊಡೆಯುತ್ತ ಹೇಳುತ್ತಿದ್ದಳು: "ದೆವ್ವನು ಥದ್ದೆ! ನನ್ನ ಸಿಟ್ಟು ತೀರಿಸಿಕೊಳ್ಳಾಕೆ ನಿನ್ನ ಕಡ- ಕೊಂಡು ಹತ್ತು ತುತ್ತು ಮಾಡಿ ತಿಂದು ಬಿಡ ಬೇಕನಸ್ತದೆ ನೋಡು!" ಆದರೆ ಹಾಗೆ ಹೇಳು ವಾಗಲೆಲ್ಲ ಅವಳು ನನ್ನ ಕಡೆಗೇ ನೋಡುತ್ತಿ ದ್ದಳು. ನನಗೆ ಅಲ್ಲಿ ನಿಲ್ಲಲಾಗದೇ ಓಡತೊಡಗಿದೆ. ಆಗ ಆ ಬಿಳಿಚಿದ ಮುಖದ ಉದ್ದನೆಯ ಹಲ್ಲು ಗಳ ಜನರೆಲ್ಲ ನನ್ನನ್ನು ನೋಡಿ ಅಣಕಿಸಿ ನಗ ತೊಡಗಿದರು. ಮುದುಕ ಚೆನ್ ಓಡಿ ಬಂದು ನನ್ನನ್ನು ಮನೆಗೆ ಕರೆದುಕೊಂಡು ಹೋಗುವುದಾಗಿ ಒತ್ತಾಯ ಮಾಡತೊಡಗಿದ.

ಅವನು ನನ್ನನ್ನು ಮನೆಗೆ ಕರೆದೊಯ್ದ. ಮನೆ ಯೊಳಗಿನ ಜನರೆಲ್ಲ ನನ್ನ ಪರಿಚಯವಿಲ್ಲದವರಂತೆ ನಟಿಸತೊಡಗಿದರು. ಅವರ ಕಣ್ಣುಗಳಲ್ಲಿ ಕೂಡ ರಸ್ತೆಯಲ್ಲಿ ಕಂಡ ಉಳಿದವರ ಕಣ್ಣುಗಳಲ್ಲಿದ್ದಂಥ ನೋಟವೇ ಇತ್ತು. ನಾನು ಕೋಣೆಯೊಳಗೆ ಹೋದ ಕೂಡಲೇ ಕೋಳಿಯನ್ನೊ ಹುಂಜವನ್ನೊ ಮುಚ್ಚಿ ಡುವಂತೆ ಹೊರಗಿನಿಂದ ಬಾಗಿಲು ಜಡಿದು ಚೀಲಿ ಹಾಕಿದರು. ಈ ಘಟನೆ ನನ್ನನ್ನು ಮತ್ತಷ್ಟು ದಿಗ್ಭ್ರಮೆಗೀಡುಮಾಡಿದೆ.

ಕೆಲವು ದಿನಗಳ ಹಿಂದೆ ತೋಳನಮರಿ ಹಳ್ಳಿಯ ನಮ್ಮ ಗೇಣಿದಾರನೊಬ್ಬ ಬೆಳೆಯ ವಿಚಾರವಾಗಿ ಮಾತನಾಡಲು ಬಂದಿದ್ದ. ತಮ್ಮ ಊರಿನಲ್ಲಿ ಕುಪ್ರಸಿದ್ಧ ವ್ಯಕ್ತಿಯೊಬ್ಬನನ್ನು ಹಳ್ಳಿಯ ಜನವೆಲ್ಲ ಕೂಡಿಕೊಂಡು ಹೊಡೆದು ಕೊಂದರೆಂದೂ, ನಂತರ ಕೆಲವರು ಆತನ ಹೃದಯವನ್ನು ಹೊರ ತೆಗೆದು, ತಮ್ಮ ಧೈರ್ಯವನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಕರಿದು ತಿಂದರೆಂದೂ ನನ್ನ ಅಣ್ಣನಿಗೆ ಹೇಳಿದ. ನಾನು ಅವರ ಮಾತಿನ ಮಧ್ಯೆ ಪ್ರವೇಶಿಸಿದಾಗ ಅವರು ನನ್ನನ್ನು ದಿಟ್ಟಿಸಿ ನೋಡಿದರು. ಅವರ ಕಣ್ಣುಗಳಲ್ಲಿ ಕೂಡ ರಸ್ತೆಯೊಳಗೆ ಕಂಡ ಉಳಿದ ಎಲ್ಲ ಜನರ ಕಣ್ಣುಗಳಲ್ಲಿರುವಂಥ ನೋಟವೇ ಇತ್ತೆಂಬುದನ್ನು ಇಂದು ಮಾತ್ರ ನಾನು ತಿಳಿದುಕೊಂಡಿದ್ದೇನೆ.

ಆ ಘಟನೆಯ ಬಗ್ಗೆ ವಿಚಾರಮಾಡಿದಾಗಲೆಲ್ಲ ಮೈಯಲ್ಲಿ ಅಡಿಯಿಂದ ಮುಡಿಯವರೆಗೆ ನಡುಕ ಹುಟ್ಟಿಬಿಡುತ್ತದೆ.

ಈ ಜನ ಮನುಷ್ಯರನ್ನೇ ತಿನ್ನುತ್ತಾರೆ. ಹಾಗಾದರೆ ಅವರು ನನ್ನನ್ನು ತಿನ್ನದಂತೆ ತಡೆಯಬೇಕಾದರೆ ಏನು ಮಾಡಬೇಕು ?

ಆ ಹೆಣ್ಣು ಮಗಳ "ನಿನ್ನ ಕಡಕೊಂಡು ಹತ್ತು ತುತ್ತು ಮಾಡಿ ತಿನಬೇಕನಸ್ತದೆ," ಆ ಬಿಳಿಚಿದ ಮುಖದ ಉದ್ದ ಹಲ್ಲುಗಳ ಜನರ ನಗೆ, ಅಂದು ನಮ್ಮ ಗೇಣಿದಾರ ಹೇಳಿದ ಕಥೆ ಇವೆಲ್ಲ ನಿಸ್ಸಂಶಯವಾಗಿಯೂ ಅವರ ಗುಪ್ತ ಸಂಕೇತಗಳಾಗಿವೆ. ಅವರ ಮಾತುಗಳೊಳಗಿನ ಎಲ್ಲ ನಂಜನ್ನೂ ಅವರ ನಗೆಯೊಳಗಿನ ಎಲ್ಲ ಕ್ರೌರ್ಯವನ್ನೂ ನಾನು ಅರ್ಥವಿಸಿಕೊಂಡಿದ್ದೇನೆ. ಅವರ ಹಲ್ಲುಗಳು ಬೆಳ್ಳಗಿವೆ, ಹೊಳೆಯುತ್ತಲಿವೆ; ಮನುಷ್ಯರನ್ನು ತಿಂದು ತಿಂದು ಅವುಗಳಿಗೆ ರೂಢಿಯಾಗಿದೆ.

ನಾನೇನೂ ದುಷ್ಟನಲ್ಲವಾದರೂ 'ಕು'ನ ಲೆಕ್ಕ ಪತ್ರಗಳನ್ನು ನಾನು ನೋಡಿ ಶಂಕಿಸಿದಾಗಿನಿಂದಲೂ ಈ ಜನ ನನ್ನ ಬಗ್ಗೆ ಸಂದೇಹ ತಳೆದಿದ್ದಾರೆ. ಇವರಲ್ಲೇನೋ ಗುಟ್ಟುಗಳು ಅಡಗಿರಬೇಕು, ಆದರೆ ಅವು ಏನೆಂದು ನಾನು ಊಹಿಸಲಾರೆ. ಒಮ್ಮೆ ಈ ಜನ ಯಾರ ಮೇಲಾದರೂ ಸಿಟ್ಟಿಗೆದ್ದರೆ ಅವನಿಗೆ ದುಷ್ಟನೆಂದು ಹೆಸರಿಟ್ಟು ಬಿಡುತ್ತಾರೆ. ನನಗೀಗ ಒಂದು ಘಟನೆ ಚೆನ್ನಾಗಿ ನೆನಪಾಗುತ್ತಿದೆ. ಅದು ಅಣ್ಣ ನನಗೆ ನಿಬಂಧ ರಚನೆಯ ಪಾಠ ಹೇಳುತ್ತಿದ್ದಾಗಿನ ಮಾತು. ನಾನು ಒಬ್ಬ ಒಳ್ಳೆಯ ವ್ಯಕ್ತಿಯ ಬಗ್ಗೆ ಬರೆಯುತ್ತಿದ್ದಾಗಲೂ ಅವಳ ಒಳ್ಳೆತನಕ್ಕೆ ವಿರುದ್ಧವಾದ ವಾದಗಳನ್ನು ಮಂಡಿಸಿದರೆ ಅಣ್ಣ ಅದಕ್ಕೆ ತನ್ನ ಸಮ್ಮತಿಯ ಮುದ್ರೆಯೊತ್ತುವಂತೆ ಪ್ರತ್ಯೇಕವಾಗಿ ಗುರುತಿಸುತ್ತಿದ್ದ. ಒಮ್ಮೊಮ್ಮೆ ನಾನು ಬರೆಯುವಾಗ ದುರ್ಜನರಲ್ಲಿಯ ದುರ್ಗುಣಗಳನ್ನು ಕ್ಷಮಿಸಿಬಿಟ್ಟರೆ ಅವನದನ್ನು ಮೆಚ್ಚಿ, "ನಿನ್ನಲ್ಲಿದು ಸಲ್ಲಕ್ಷಣ. ನಿನ್ನ ಕಲ್ಪನಾಶಕ್ತಿ ಚೆನ್ನಾಗಿರುವುದನ್ನಿದು ತೋರಿಸುತ್ತದೆ," ಅನ್ನುತ್ತಿದ್ದ. ಆದರೆ ಇವರ ರಹಸ್ಯ ಯೋಜನೆಗಳನ್ನೆಲ್ಲ ನಾನು ಹೇಗೆ ಊಹಿಸಬಲ್ಲೆ- ಅದರಲ್ಲೂ ನರಮಾಂಸ ಭಕ್ಷಣೆಯ ಸಮಯದಲ್ಲಿ ಇವರಲ್ಲಿ ಇರುವಂಥವನ್ನು? ಪ್ರತಿಯೊಂದನ್ನೂ ಅರ್ಥಮಾಡಿಕೊಳ್ಳಬೇಕಾದರೆ ಅದನ್ನು ಕೂಲಂಕಷವಾಗಿ ಪರಿಶೀಲಿಸುವುದು ಅವಶ್ಯ. ನಾನು ಜ್ಞಾಪಿಸಿಕೊಂಡಂತೆ ಪ್ರಾಚೀನ ಕಾಲದಲ್ಲಿ ಜನರು ಆಗಾಗ ನರಮಾಂಸವನ್ನು ತಿಂದದ್ದುಂಟು. ಆದರೂ ನನಗೆ ಅದರ ಬಗ್ಗೆ ಅಷ್ಟು ಸ್ಪಷ್ಟ ಜ್ಞಾನವಿಲ್ಲ. ಅದನ್ನು ತಿಳಿದುಕೊಳ್ಳಲೆಂದು ನಾನು ಪ್ರಯತ್ನಿಸಿದೆ, ಆದರೆ ನನ್ನ ಇತಿಹಾಸಕ್ಕೆ ಕಾಲ ನಿರ್ದೇಶನ ಕ್ರಮವೇ ಇಲ್ಲ. ಪ್ರತಿ ಪುಟದಲ್ಲಿಯೂ ಇವೇ ಶಬ್ದಗಳಿವೆ: "ಧರ್ಮ, ನೈತಿಕತೆ." ನನಗೆ ಹೇಗೂ ನಿದ್ರೆಯೇ ಬರುತ್ತಿರಲಿಲ್ಲವಾದುದರಿಂದ ಅರ್ಧರಾತ್ರಿಯವರೆಗೆ ಲಕ್ಷ್ಯಗೊಟ್ಟು ಸಾಲುಗಳ ನಡುವೆ ಶಬ್ದಗಳು ಕಾಣುವವರೆಗೂ ಓದಿದೆ. ಇಡೀ ಪುಸ್ತಕವೇ ಎರಡು ಶಬ್ದಗಳಿಂದ ತುಂಬಿಹೋಗಿತ್ತು– "ಮನುಷ್ಯರನ್ನು ತಿನ್ನಿರಿ."

ಪುಸ್ತಕದಲ್ಲಿ ಬರೆದ ಎಲ್ಲ ಶಬ್ದಗಳೂ, ನಮ್ಮ ಗೇಣಿದಾರನ ಎಲ್ಲ ಮಾತುಗಳೂ ವಿಚಿತ್ರವಾಗಿ ನನ್ನನ್ನೇ ದಿಟ್ಟಿಸಿ ನೋಡುತ್ತ ಸ್ನಿಗ್ಧ ನಗೆಯನ್ನು ನಗುತ್ತಿದ್ದವು. ನಾನೂ ಒಬ್ಬ ಮನುಷ್ಯ; ಅವರು ನನ್ನನ್ನು ತಿನ್ನಬೇಕೆಂದಿದ್ದಾರೆ !

ಮುಂಜಾನೆ ಕೆಲಹೊತ್ತು ಸುಮ್ಮನೇ ಕುಳಿತುಬಿಟ್ಟೆ. ಮುದುಕ ಚೆನ್ ನನಗಾಗಿ ಊಟವನ್ನು ತಂದ. ಒಂದು ಬಟ್ಟಲು ಕಾಯಿಪಲ್ಯ, ಒಂದು

ಬಟ್ಟಲು ಬೇಯಿಸಿದ ಮೀನು. ಮೀನಿನ ಕಣ್ಣುಗಳು ಬೆಳ್ಳಗಿದ್ದವು, ವಿಕಾರವಾಗಿದ್ದುವು, ಅದರ ಬಾಯಿ ಮನುಷ್ಯರನ್ನು ತಿನ್ನ ಬಯಸುತ್ತಿರುವ ಜನರ ಹಾಗೆ ತೆರೆದುಕೊಂಡಿತ್ತು. ಕೆಲವು ತುತ್ತುಗಳನ್ನು ಉಂಡನಂತರ ಗಂಟಲಲ್ಲಿ ಇಳಿಯುತ್ತಿರುವ ತುತ್ತುಗಳು ಮೀನಿನ ತುಣುಕುಗಳೊ, ಮನುಷ್ಯನ ಮಾಂಸವೊ ತಿಳಿಯದಾಯಿತು. ಎಲ್ಲವನ್ನೂ ಕೆಳಕ್ಕೆ ಚೆಲ್ಲಿಬಿಟ್ಟೆ.

ಮುದುಕ ಚೆನ್‌ನಿಗೆ ಹೇಳಿದ; "ಚೆನ್ ಇಲ್ಲಿ ನನಗೆ ಉಸಿರು ಕಟ್ಟುವಂತಾಗುತ್ತಿದೆ. ಹೊರಗೆ ಅಂಗಳದಲ್ಲಿ ಸ್ವಲ್ಪ ತಿರುಗಾಡುವ ಆಸೆಯಾಗಿದೆ ಎಂದು ಅಣ್ಣನಿಗೆ ಹೇಳು." ಚೆನ್ ಏನೂ ಮಾತನಾಡಲಿಲ್ಲ. ಸೀದಾ ಹೊರಗೆ ಹೋದ, ಮತ್ತೆ ತಿರುಗಿ ಬಂದು ಬಾಗಿಲು ತೆರೆದ.

ಅವರು ನಿಶ್ಚಯವಾಗಿಯೂ ನನ್ನನ್ನು ಹೊರಗೆ ಹೋಗಲು ಬಿಡುವುದಿಲ್ಲವೆಂಬುದು ನನಗೆ ತಿಳಿದಿತ್ತು. ಆದರೂ ಅವರು ನನ್ನೊಡನೆ ಹೇಗೆ ವರ್ತಿಸುವರೆಂಬುದನ್ನು ತಿಳಿದುಕೊಳ್ಳಲು ಕದಲದೇ ಸುಮ್ಮನೇ ಕುಳಿತೆ. ನಾನು ಅಂದುಕೊಂಡಂತೇ ಆಯಿತು! ನನ್ನ ಅಣ್ಣ ಸಾವಕಾಶವಾಗಿ ಮುದುಕನೊಬ್ಬನಿಗೆ ದಾರಿ ತೋರಿಸುತ್ತ ಕರೆದುಕೊಂಡು ಬಂದ. ಅವನ ಕಣ್ಣುಗಳಲ್ಲಿ ಕೊಲೆಗಡುಕನ ಛಾಯೆಯಿತ್ತು. ನಾನು ಅದನ್ನು ನೋಡಿಬಿಡಬಹುದೆಂಬ ಹೆದರಿಕೆಯಿಂದ ಆತ ತನ್ನ ತಲೆ ಬಾಗಿಸಿ ನನ್ನತ್ತ ತನ್ನ ಚಾಳೀಸಿನ ಅಂಚುಗಳಿಂದ ಕಳ್ಳನೋಟ ಬೀರತೊಡಗಿದ.

"ನೀನು ಇಂದು ಬಹಳ ಆರಾಮವಾಗಿರುವಂತೆ ಕಾಣಿಸುತ್ತಿ"ಎಂದ ಅಣ್ಣ.

"ಹೌದು," ಎಂದೆ ನಾನು.

"ಇಂದು ಶ್ರೀಯುತ 'ಹೊ'ರವರನ್ನು ನಿನ್ನನ್ನು ಪರೀಕ್ಷಿಸಲು ಆಮಂತ್ರಿಸಿದ್ದೇನೆ."

"ಸರಿ."ಎಂದೆ ನಾನು. ಆದರೆ ಈ ಮುದುಕ ನಿಜದಲ್ಲಿ ವೇಷ ಮರೆಸಿಕೊಂಡಿರುವ ಕೊಲೆಗಡುಕನೆಂಬುದು ನನಗೆ ಗೊತ್ತಿತ್ತು. ನನ್ನ ನಾಡಿ ಪರೀಕ್ಷಿಸುವ ನೆಪವನ್ನು ಉಪಯೋಗಿಸಿ ನಾನು ಎಷ್ಟು ದಪ್ಪಗಿದ್ದೇನೆಂಬುದನ್ನು ಆತ ಪರೀಕ್ಷಿಸುತ್ತಿದ್ದ. ಯಾಕೆಂದರೆ ಹಾಗೆ ಮಾಡುವುದರಿಂದ ನನ್ನ ಮಾಂಸದಲ್ಲಿ ಅವನಿಗೂ ಪಾಲು ಕೊಡುತ್ತಿದ್ದರು. ಆದರೂ ನಾನು ಹೆದರಿರಲಿಲ್ಲ. ನಾನೊಬ್ಬ ನರಭಕ್ಷಕನಲ್ಲವಾದರೂ ಅವರೆಲ್ಲರಿಗಿಂತ ಹೆಚ್ಚು ಧೀರನಾಗಿದ್ದೆ. ನನ್ನ ಎರಡೂ ಕೈಗಳನ್ನು ಅವನತ್ತ ಚಾಚಿ ಅವನೇನು ಮಾಡುತ್ತಿದ್ದಾನೆಂಬುದನ್ನು ನಿರೀಕ್ಷಿಸುತ್ತಾ ಕುಳಿತುಕೊಂಡೆ. ಮುದುಕ ಕೆಳಗೆ ಕುಳಿತುಕೊಂಡ. ಅವ್ಯವಸ್ಥಿತವಾಗಿ ತನ್ನ ಕೈಬೆರಳುಗಳಿಂದ ನನ್ನ ಮುಂಗೈ ಮೇಲೆ ತಡಕಾಡಿದ. ನಂತರ ಸ್ವಲ್ಪ ಹೊತ್ತು ಹಾಗೆಯೇ ಸುಮ್ಮನೇ ಕುಳಿತುಕೊಂಡ. ಆ ಮೇಲೆ ತನ್ನ ಕಣ್ಣುಗಳನ್ನು ತೆರೆದು ಹೇಳಿದ: "ನಿನ್ನ ಕಲ್ಪನೆಗಳನ್ನು ನಿನ್ನ ಜೊತೆಗೇ ಓಡಲು ಬಿಡಬೇಡ, ಸ್ವಲ್ಪ ದಿವಸ ಹಾಯಾಗಿ ವಿಶ್ರಾಂತಿ ತೆಗೆದುಕೊ; ನಿನಗೆ ಗುಣವಾಗುತ್ತದೆ."

ನಿನ್ನ ಕಲ್ಪನೆಗಳನ್ನು ನಿನ್ನ ಜೊತೆಗೇ ಓಡಲು ಬಿಡಬೇಡ, ಸ್ವಲ್ಪ ದಿವಸ ಹಾಯಾಗಿ ವಿಶ್ರಾಂತಿ ತೆಗೆದುಕೊ! ಆಗ ನಾನು ಹೆಚ್ಚು ದಪ್ಪನಾಗಿದ್ದರೆ ಸ್ವಾಭಾವಿಕವಾಗಿಯೇ ಅವರಿಗೆ ತಿನ್ನಲು ಹೆಚ್ಚು ಮಾಂಸ ಸಿಗುತ್ತದೆ. ಆದರೆ ಅದರಿಂದ ನನಗೇನು ಒಳ್ಳೆಯದಾಗಬೇಕಾಗಿದೆ? ಅಥವಾ ಅದು ಉಚಿತವೆಂವಾದರೂ ಹೇಗೆ ಹೇಳಬೇಕು? ಈ ಎಲ್ಲ ಜನರಿಗೂ ಮನುಷ್ಯ ಮಾಂಸವನ್ನು ತಿನ್ನಬೇಕಾಗಿದೆಯಾದರೂ ನೇರವಾಗಿ ಅದನ್ನು ಕೃತಿಗಿಳಿಸಲು ಧೈರ್ಯ ಸಾಲದೆ, ತಮ್ಮ ರಹಸ್ಯವನ್ನು ಕಾಯ್ದುಕೊಳ್ಳಲು ಹೊರಗೆ ಸ್ನೇಹಿತರಂತೆ ನಟಿಸುತ್ತಿರುವುದನ್ನು ಕಂಡು ನನಗೆ ಸಾಯುವಂತೆ ನಗೆ ಉಕ್ಕಿ ಬಂತು. ತಡೆದುಕೊಳ್ಳಲಾರದೆ ನಾನು ಜೋರಾಗಿ ನಗತೊಡಗಿದೆ; ನನಗೆ ಬಹಳ ವಿನೋದವುಂಟಾಗಿತ್ತು. ಈ ನಗೆಯಲ್ಲಿ ದೃಢತೆಯಿದೆ, ಕೆಚ್ಚು ಇದೆಯೆಂಬುದೂ ನನಗೆ ಗೊತ್ತಿತ್ತು. ಆದರೆ ಆ ಮುದುಕ ಮತ್ತು ನನ್ನ ಅಣ್ಣ ಈ ಇಬ್ಬರೂ ಮಾತ್ರ ಹೆದರಿ ಪೆಚ್ಚಾದವರಂತೆ ಕಂಡುಬಂದರು.

ನಾನು ಧೀರನಾಗಿರುವುದರಿಂದಲೇ ನನ್ನ ಧೈರ್ಯದೊಳಗಿನ ಸ್ವಲ್ಪ ಭಾಗವನ್ನಾದರೂ ಗಳಿಸಿಕೊಳ್ಳಲೆಂದು ಅವರು ನನ್ನನ್ನು ತಿನ್ನುವುದಕ್ಕೆ ಹೆಚ್ಚು ಕಾತರರಾಗಿದ್ದಾರೆ. ಮುದುಕ ಬಾಗಿಲಿನ ಹೊರಗೆ ಹೋದ. ಆದರೆ ಸ್ವಲ್ಪ ದೂರ ಹೋದ ಕೂಡಲೇ ತಿರುಗಿ ನನ್ನ ಅಣ್ಣಗೆ ಹೇಳಿದ, "ಒಂದೇ ಸಲಕ್ಕೆ ತಿಂದು ಬಿಡಬೇಕು" ಎಂದು! ಅಣ್ಣ ಆಗಲಿ

ಎಂಬಂತೆ ತಲೆಯಾಡಿಸಿದ. ಹಾಗಾದರೆ–ನೀನೂ ಈ ಸಂಚಿನಲ್ಲಿರುವೆಯಾ? ಈ ಅತ್ಯಾಶ್ಚರ್ಯಕರವಾದ ಸಂಶೋಧನೆಯಿಂದ ನನಗೆ ಆಘಾತವಾಯಿತಾದರೂ ಅದು ನನ್ನ ನಿರೀಕ್ಷೆಯನ್ನು ಮಾತ್ರ ಮೀರಿದ್ದಾಗಿರಲಿಲ್ಲ: ನನ್ನನ್ನು ತಿನ್ನುವುದರಲ್ಲಿ ನನ್ನ ಅಣ್ಣನೂ ಪಾಲುಗಾರನಾಗಿದ್ದಾನೆ! ನನ್ನ ಅಣ್ಣನೇ ನರಮಾಂಸ ಭಕ್ಷಕನಾಗಿದ್ದಾನೆ! ನಾನು ನರಮಾಂಸ ಭಕ್ಷಕನೊಬ್ಬನ ತಮ್ಮ! ನಾನೇ ಬೇರೆಯವರಿಂದ ತಿನ್ನಲ್ಪಡುತ್ತೇನೆ. ಆದರೆ ಅದೇನೇ ಇದ್ದರೂ ನಾನು ನರಮಾಂಸ ಭಕ್ಷಕನೊಬ್ಬನ ತಮ್ಮನಾಗಿದ್ದೇನೆ.

ಈ ಕೆಲವು ದಿವಸಗಳಲ್ಲಿ ನಾನು ಮರು ವಿಚಾರ ಮಾಡುತ್ತಿದ್ದೇನೆ: ಆ ಮುದುಕ ವೇಷಧಾರಿಯಾದ ಕೊಲೆಗಡುಕನಲ್ಲ ಹಾಗೂ ನಿಜವಾದ ವೈದ್ಯನೆಂದೇ ಇಟ್ಟುಕೊಂಡರೂ ಕೂಡ ಆತ ನರಮಾಂಸ ಭಕ್ಷಕನೇ ಆಗಿದ್ದಾನೆ. ಆತನ ಪೂರ್ವಜ ಲೀ ಶಿಹ್ ಚೆನ್ ಮೂಲಿಕೆಗಳನ್ನು ಕುರಿತು ಬರೆದ ಆ ಪುಸ್ತಕದಲ್ಲಿ ಮನುಷ್ಯನ ಮಾಂಸವನ್ನು ಕರಿದು ತಿನ್ನಬಹುದೆಂದು ಸ್ಪಷ್ಟವಾಗಿ ಹೇಳಲಾಗಿದೆ. ಇಷ್ಟರ ಮೇಲೂ ಆತ ತಾನು ಮನುಷ್ಯರನ್ನು ತಿನ್ನುವುದಿಲ್ಲವೆಂದು ಹೇಳಬಲ್ಲನೆ?

ನನ್ನ ಅಣ್ಣನ ಬಗ್ಗೆ ಹೇಳುವುದಾದರೆ ಅವನನ್ನು ದೋಷಮುಕ್ತನನ್ನಾಗಿ ಮಾಡುವುದಂತೂ ಶಕ್ಯವೇ ಇಲ್ಲ. ಅವನು ನನಗೆ ಪಾಠ ಹೇಳಿಕೊಡುತ್ತಿದ್ದಾಗ ತನ್ನ ಬಾಯಿಯಿಂದಲೇ ಹೇಳಿದ್ದ, "ಜನರು ತಮ್ಮ ಮಕ್ಕಳನ್ನೇ ತಿನ್ನುವುದಕ್ಕಾಗಿ ವಿನಿಮಯ ಮಾಡಿಕೊಳ್ಳುತ್ತಾರೆ."* ಒಮ್ಮೆ ದುಷ್ಟ ಮನುಷ್ಯನೊಬ್ಬನ ಬಗ್ಗೆ ಮಾತು ಬಂದಾಗ ಆತ ಹೇಳಿದ್ದ; "ಅವನನ್ನು ಕೊಲ್ಲಬೇಕಷ್ಟೇ ಅಲ್ಲ, ಅವನ ಮಾಂಸವನ್ನು ತಿಂದು ಅವನ ಚರ್ಮವನ್ನು ಹಾಸಿಕೊಂಡು ಮಲಗಬೇಕು."* ಆಗ ನಾನಿನ್ನೂ ಬಹಳ ಚಿಕ್ಕವನಾಗಿದ್ದೆ. ಅದನ್ನು ಕೇಳಿದ ಕೂಡಲೆ ಕೆಲ ಹೊತ್ತು ನನ್ನ ಹೃದಯ ವೇಗವಾಗಿ ಹೊಡೆದುಕೊಂಡಿತ್ತು. ಮೊನ್ನೆ ತೋಳನ ಮರಿ ಹಳ್ಳಿಯ ನಮ್ಮ ರೈತ ಮನುಷ್ಯನೊಬ್ಬನ ಹೃದಯ ಮತ್ತು ಮಾಂಸಗಳನ್ನು ತಿಂದ ಬಗ್ಗೆ ಹೇಳಿದಾಗ ಕೂಡ ಆತನಿಗೆ ವಿಸ್ಮಯವುಂಟಾಗಲಿಲ್ಲ. ಅವನು ಸಹಜವಾಗಿ ತಲೆಯಾಡಿಸುತ್ತಾ ಕುಳಿತಿದ್ದ. ಇದರಿಂದ ಅವನ ಮನೋಭಾವ ಬದಲಾಗಿಲ್ಲವೆಂಬುದು ಸ್ಪಷ್ಟವಾಗಿತ್ತು. "ಮಕ್ಕಳನ್ನೇ ತಿನ್ನಲು ವಿನಿಮಯಮಾಡಿಕೊಳ್ಳುತ್ತಾರೆ"ಯಾದುದರಿಂದ ಏನನ್ನಾದರೂ ವಿನಿಮಯಮಾಡಿಕೊಳ್ಳಬಹುದು. ಯಾರನ್ನಾದರೂ ತಿನ್ನಬಹುದು. ಹಿಂದೆ ಆತ ಯಾವುದರ ಬಗೆಗಾದರೂ ವಿವರಿಸುತ್ತಿದ್ದಾಗ ಅಲ್ಲಿಯೇ ಕೇಳಿ ಹಾಗೆಯೇ ಮರೆತುಬಿಡುತ್ತಿದ್ದೆ. ಆದರೆ ಈಗ ನನಗೆ ಗೊತ್ತಾಗಿದೆ, ಹಾಗೆ ಹೇಳುವಾಗಲೆಲ್ಲ ಅವನ ತುಟಿಯ ಸಂದುಗಳಲ್ಲಿ ಮನುಷ್ಯನ ನೆಣವಿರುತ್ತಿತ್ತಷ್ಟೇ ಅಲ್ಲ, ಅವನ ಹೃದಯ ನರಮಾಂಸ ತಿನ್ನುವುದಕ್ಕೆ ಸಿದ್ಧವಾಗಿ ಬಿಟ್ಟಿತ್ತು.

ಕಪ್ಪು ಕಗ್ಗತ್ತಲು: ಇದು ದಿನವೊ ರಾತ್ರಿಯೊ ನನಗೆ ತಿಳಿಯದಾಗಿದೆ. ಚಾವೋನ ಮನೆಯ ನಾಯಿ ಮತ್ತೆ ಬೊಗಳುತ್ತಿದೆ. ಸಿಂಹದಕ್ರೌರ್ಯ, ಮೊಲದ ಪುಕ್ಕಲುತನ, ನರಿಯವಂಚನೆ...

ಮುಂದೆ ಎದುರಿಸಬೇಕಾಗುವ ಪರಿಣಾಮಗಳ ಹೆದರಿಕೆಯಿಂದ ತಾವಾಗಿಯೇ ಅವರು ಯಾರನ್ನೂ ಕೊಲ್ಲಲು ಸಿದ್ಧರಾಗಿಲ್ಲ. ಕಾರಣ ಅವರೆಲ್ಲ ಒಂದುಗೂಡಿ ನನ್ನನ್ನು ನಾನೇ ಕೊಂದುಕೊಳ್ಳುವ ಹಾಗೆ ಬಲೆಯೊಡ್ಡಿದ್ದಾರೆ. ಕೆಲ ದಿನಗಳ ಹಿಂದಿನ ಬೀದಿಯಲ್ಲಿದ್ದ ಆ ಗಂಡಸರು, ಹೆಂಗಸರ ವರ್ತನೆಯನ್ನು ನೋಡಿದರೆ, ಇತ್ತೀಚಿನ ದಿನಗಳಲ್ಲಿನ ನನ್ನ ಅಣ್ಣನ ಕೃತಕ ಅಭಿನಯವನ್ನು ಗಮನಿಸಿದರೆ ಎಲ್ಲವೂ ಸ್ಪಷ್ಟವಾಗುತ್ತದೆ. ಅವರೆಲ್ಲರ ಹೆಬ್ಬಯಕೆಯೆಂದರೆ ಒಬ್ಬ ತನ್ನ ನಡುಪಟ್ಟಿಯನ್ನು ಬಿಚ್ಚಿ ಜಂತಿಗೆ ಕಟ್ಟಿ ಉರುಲು ಹಾಕಿಕೊಳ್ಳಬೇಕು. ಆಗ ಕೊಲೆಗಾರರೆಂದು ಯಾರೂ ಅವರನ್ನು ದೂಷಿಸಲಾರರಲ್ಲದೆ ಆಗ ಅವರು ತಮ್ಮ ಹೃದಯದ ಆಸೆಯನ್ನು ಸಂತೋಷದಿಂದ ತೀರಿಸಿಕೊಳ್ಳಲೂ ಬಲ್ಲರು, ಮನಸದಣಿ ನಕ್ಕು ಕುಣಿಯಬಲ್ಲರು. ಒಂದು ವೇಳೆ ಈ ಮನುಷ್ಯ ಭಯದಿಂದಲೋ ಚಿಂತೆಯಿಂದಲೋ ಕೊರಗಿ ಸತ್ತರೆ ಸೊರಗಿರುತ್ತಾನೆ. ಆಗಲೂ ಅವನನ್ನು ತಿಂದು ಮುಗಿಸಲು

---

* ಇವು ಚೀನೀ ಪ್ರಾಚೀನ ಗ್ರಂಥಗಳಿಂದ ಆಯ್ದುಕೊಂಡ ಉದ್ಧರಣಗಳು.

ಇವರು ಸಿದ್ಧ.

ಇವರೆಲ್ಲ ಮೃತಮಾಂಸವನ್ನು ಮಾತ್ರ ತಿನ್ನು ತ್ತಾರೆ!

ನಾನೆಲ್ಲೋ ಒಂದು ದುಷ್ಟ ಮೃಗದ ಬಗ್ಗೆ ಓದಿದ ನೆನಪು.... ಕ್ರೌರ್ಯವೇ ಮೈವೆತ್ತಂತಿರುವ ಈ ಪ್ರಾಣಿಯನ್ನು 'ಕಿರುಬ' ಎಂದು ಕರೆಯುತ್ತಾರೆಂದು ತೋರುತ್ತದೆ. ಅದು ಮೃತ ಮಾಂಸವನ್ನು ಮಾತ್ರ ತಿನ್ನುತ್ತದೆ. ದೊಡ್ಡ ದೊಡ್ಡ ಎಲುಬುಗಳನ್ನು ಕೂಡ ಅದು ಕಡಿ ಕಡಿದು ತುಂಡು ಮಾಡಿ ಸುರಿಸಿ ನುಂಗಿ ಬಿಡುತ್ತದೆ. ಅದರ ಬಗ್ಗೆ ಯೋಚಿಸಿದರೇ ಸಾಕು ಭಯ ಹುಟ್ಟುತ್ತದೆ. ಕಿರುಬ ತೋಳನ ಜಾತಿಯ ಪ್ರಾಣಿ, ತೋಳ ನಾಯಿವರ್ಗಕ್ಕೆ ಸೇರಿದ್ದು; ಒಂದಿನ ದಿನ ಚಾಪ್ಲೋನ ಮನೆಯ ನಾಯಿ ನನ್ನನ್ನು ಎಷ್ಟೋ ಸಲ ದಿಟ್ಟಿಸಿ ನೋಡಿತು. ನಿಸ್ಸಂಶಯವಾಗಿ ಅದು ಕೂಡ ಈ ಸಂಚಿನಲ್ಲಿ ಭಾಗಿಯಾಗಿದೆ. ಆ ಮುದುಕನ ಕಣ್ಣುಗಳೇನೋ ನೆಲವನ್ನೇ ನೋಡುತ್ತಿದ್ದವು, ಆದರೆ ಅದರಿಂದ ನಾನು ಮೋಸ ಹೋಗುತ್ತೇನೆಯೆ?

ನನಗೆ ಹೆಚ್ಚು ವ್ಯಥೆಯಾಗುತ್ತಿರುವುದು ನನ್ನ ಅಣ್ಣನ ಬಗೆಗೆ. ಅವನೂ ಮನುಷ್ಯ. ಆದರೂ ಅವನೇಕೆ ಹೆದರಿಲ್ಲ? ಉಳಿದವರೊಡನೆ ಕೂಡಿಕೊಂಡು ನನ್ನನ್ನು ತಿನ್ನಲು ಅವನೂ ಏಕೆ ಸಂಚು ಹೂಡಿದ್ದಾನೆ? ಇತಿಹಾಸದಲ್ಲಿ ಸಾಕಷ್ಟು ಅಂಥ ದೃಷ್ಟಾಂತಗಳು ಇವೆ ಎಂಬ ಕಾರಣದಿಂದಲೇ ಅದೊಂದು ಅಪರಾಧವಲ್ಲವೆಂದು ತಿಳಿಯಬೇಕೆ? ಅಥವಾ ಅವನು ತಾನು ತಪ್ಪು ಮಾಡುತ್ತಿರುವೆನೆಂದು ತಿಳಿದರೂ ಕೂಡ ಅದನ್ನೇ ಎಸಗಲು ತನ್ನ ಮನಸ್ಸನ್ನು ಕಲ್ಲಾಗಿಸುತ್ತಿರಬಹುದೆ?

ನಾನು ಎದುರಿಸುತ್ತಿರುವ ಪ್ರಥಮ ನರಭಕ್ಷಕನೇ ಅವನು. ನರಭಕ್ಷಣೆಯ ವಿರುದ್ಧ ಮನಸ್ಸು ತಿರುಗಿಸಲೆತ್ನಿಸಲು ಪ್ರಾರಂಭಿಸುವುದೂ ಅವನಿಂದಲೇ.

ಹಾಗೆ ನೋಡಿದರೆ ಇಂಥ ವಾದಗಳಿಗೆಲ್ಲ ಎಂದೋ ಸರ್ವಸಮ್ಮತಿಯ ಮುಕ್ತಿ ಬೀಳಬೇಕಿತ್ತು...

ಥಟ್ಟನೇ ಯಾವನೋ ಒಬ್ಬ ಒಳಗೆ ಬಂದ. ಅವನಿಗೆ ಸುಮಾರು ಇಪ್ಪತ್ತು ವರ್ಷ ಪ್ರಾಯವಿರಬೇಕು. ಅವನ ಚಹರೆಗಳನ್ನು ನಾನು ಲಕ್ಷ್ಯಗೊಟ್ಟು ನೋಡಲಿಲ್ಲ. ಅವನ ಮುಖದ ಮುಗುಳ್ನಗೆ ಅಂಟಿದಂತಿತ್ತು. ಆದರೆ ನನ್ನ ಕಡೆಗೆ ಬಾಗಿದಾಗ ಮಾತ್ರ ಅವನ ಈ ನಗೆ ನಿಷ್ಕಪಟವಾದುದಲ್ಲವೆಂದು ನನಗನಿಸಿತು.

"ಹಾಂ, ಈಗ ಹೇಳು, ಮನುಷ್ಯ ಮನುಷ್ಯನನ್ನು ತಿನ್ನುವುದು ಯೋಗ್ಯವೆ?" ನಾನು ಅವನನ್ನೇ ನೋಡುತ್ತ ಕೇಳಿದೆ.

"ಈಗ ಬರಗಾಲವೆಲ್ಲಿದೆ? ಇಂಥ ಸಮಯದಲ್ಲಿ ಯಾರೇ ಆಗಲಿ ಮನುಷ್ಯರನ್ನು ಹೇಗೆ ತಿನ್ನಬಲ್ಲರು?" ಆತ ನಗುತ್ತಲೇ ಕೇಳಿದ.

ಅವನು ಕೂಡ ಅವರಲ್ಲಿಯೇ ಒಬ್ಬನೆಂಬುದನ್ನು ನಾನು ತಟ್ಟನೆ ಗ್ರಹಿಸಿದೆ. ಆದರೂ ನನ್ನ ಧೈರ್ಯವನ್ನು ಒಟ್ಟುಗೂಡಿಸಿ ಮತ್ತೊಮ್ಮೆ ಆ ಪ್ರಶ್ನೆಯನ್ನೇ ಕೇಳಿದೆ; "ಹೇಳು, ಇದು ಯೋಗ್ಯವೆ?"

"ನೀನಿಂದು ಹೀಗೆಲ್ಲ ಯಾಕೆ ಕೇಳುತ್ತಿದ್ದೀಯಾ? ಏನೋ ತಮಾಷೆ ಮಾಡುತ್ತಿರಬೇಕು... ಅಲ್ಲವೆ? ಈ ದಿನ ತುಂಬ ಆಹ್ಲಾದದಾಯಕವಾಗಿದೆ... ಅಲ್ಲವೆ?"

"ಅದು, ಸರಿ, ದಿನವೂ ಆಹ್ಲಾದದಾಯಕವಾಗಿದೆ, ಚಂದ್ರನೂ ಬೆಳ್ಳಂಬೆಳ್ಳಗೆ ಬೆಳಗುತ್ತಿದ್ದಾನೆ. ಆದರೆ ನಾನು ನಿನ್ನನ್ನು ಕೇಳುತ್ತಿದ್ದುದೇ ಬೇರೆ... ಇದು ಯೋಗ್ಯವೇ ಹೇಳು."

"ಅಲ್ಲ..." ಹೇಳಲೋ ಬೇಡವೋ ಎಂಬಂತೆ ಅವನುಸುರಿದ. ಮುಖ ನೋಡಿದರೆ ಗಾಬರಿಯಾದವನಂತೆ ತೋರುತ್ತಿತ್ತು.

"ಅಲ್ಲ? ಹಾಗಿದ್ದರೆ ಅವರೇಕೆ ಇನ್ನೂ ಅದನ್ನು ಮಾಡುತ್ತಲೇ ಇದ್ದಾರೆ?"

"ನೀನು ಯಾತರ ಬಗ್ಗೆ ಮಾತನಾಡುತ್ತಿದ್ದೀಯೋ?"

"ನಾನ್ಯಾತರ ಬಗ್ಗೆ ಮಾತನಾಡುತ್ತಿರುವೆ? ತೋಳನ ಮರಿ ಹಳ್ಳಿಯಲ್ಲಿ ಅವರು ಮನುಷ್ಯರನ್ನು ತಿನ್ನುತ್ತಿದ್ದಾರೆ; ಅಲ್ಲದೇ ಇಡೀ ಪುಸ್ತಕದ ತುಂಬ ಕೆಂಪು ಮಸಿಯಲ್ಲಿ ಅದನ್ನೇ ಬರಿದಿದ್ದಾರೆ."

ಅವನ ಮಾತಿನ ಸರಣಿಯೇ ಬೇರೆಯಾಯಿತು. ಭಯದಿಂದ ಬೆಚ್ಚಿಕೊಂಡಂತಾದ. ನನ್ನನ್ನೇ ದಿಟ್ಟಿಸಿ ನೋಡುತ್ತಾ ಹೇಳಿದ: "ಇರಬಹುದು; ಅದೆಲ್ಲ ಹೀಗೇ ನಡೆಯೋದೆ..."

"ಅದು ಯಾವಾಗಲೂ ಹಾಗೇ ನಡೆದಿದೆ ಎಂಬ ಕಾರಣದಿಂದಲೇ ಅದನ್ನು ಸರಿ ಎಂದು ಹೇಳ ಬಹುದೆ?"

"ನಿನ್ನ ಕೂಡ ಇಂಥ ವಿಷಯುಗಳನ್ನು ನಾನು ಚರ್ಚಿಸಲಾರೆ. ಏನೇ ಆಗಲಿ ನೀನು ಇಂಥ ವಿಷಯ ಗಳ ಬಗ್ಗೆ ಮಾತನಾಡಬಾರದು. ಹಾಗೆ ಮಾತ ನಾಡುವುದೇ ತಪ್ಪು!"

ನಾನು ದಿಗ್ಗನೆ ಎದ್ದು ಕುಳಿತು ಬಿಟ್ಟಗಣ್ಣು ಬಿಟ್ಟು ನೋಡಿದೆ. ಆದರೆ ಆ ಮನುಷ್ಯ ಕಾಣೆ ಯಾಗಿದ್ದ. ನಾನು ಬೆವರಿನಲ್ಲಿ ನೆನೆದುಬಿಟ್ಟಿದ್ದೆ. ಆತ ನನ್ನ ಅಣ್ಣನಿಗಿಂತಲೂ ಬಹಳ ಚಿಕ್ಕವನಾಗಿದ್ದ. ಆದರೆ ಅವನು ಕೂಡ ಅವರ ಜೊತೆಗೂಡಿ ಬಿಟ್ಟಿದ್ದ. ಅವನ ತಂದೆ ತಾಯಿಗಳೇ ಅವನಿಗೆ ಅದನ್ನು ಹೇಳಿಕೊಟ್ಟಿರಬಹುದು. ಆಗಲೇ ಈತ ಕೂಡ ತನ್ನ ಮಗನಿಗೂ ಇದನ್ನು ಹೇಳಿಕೊಟ್ಟಿರ ಬಹುದೆಂದು ಅನಿಸಿ ನನಗೆ ಭಯವಾಗತೊಡ ಗಿತು. ಬಹುಶಃ ಅದರಿಂದಲೇ ಇರಬೇಕು, ಹುಡುಗರೆಲ್ಲ ನನ್ನ ಕಡೆಗೆ ಅಷ್ಟೊಂದು ಕ್ರೂರ ವಾಗಿ ನೋಡುತ್ತಿದ್ದಾರೆ.

ಮನುಷ್ಯರನ್ನು ತಿನ್ನಬೇಕೆನ್ನುವ ಬಯಕೆ ಯೊಂದಿಗೇ ಪ್ರತಿಯೊಬ್ಬನಿಗೂ ಒಂದು ದಿನ ತಾನೇ ಬಲಿಪಶುವಾಗಿ ಇತರರಿಗೆಲ್ಲ ಆಹಾರ ವಾಗಬಹುದೆಂಬ ಹೆದರಿಕೆಯೂ ಇದೆ. ಹೀಗಾಗಿ ಅವರು ಒಬ್ಬರನ್ನೊಬ್ಬರು ಆಳವಾದ ಸಂಶಯ ದಿಂದ ನೋಡುತ್ತಾರೆ.

ಈ ಎಲ್ಲ ಭ್ರಾಂತಿಯಿಂದ ಬಿಡಿಸಿಕೊಂಡರೆ ಮಾತ್ರ ಅವರು ಯಾವ ಆತಂಕ ತಲ್ಲಣಗಳಿಲ್ಲದೇ ಹಾಯಾಗಿ ಕೆಲಸಕ್ಕೆ ಹೋಗಬಹುದು, ತಿರು ಗಾಡಬಹುದು, ಊಟ ಮಾಡಬಹುದು, ಸುಖ ದಿಂದ ನಿದ್ರಿಸಬಹುದು. ಅವರಿಗಿರುವುದಿದೊಂದೇ ದಾರಿ. ಆದರೂ ತಂದೆ ಮಕ್ಕಳು, ಗಂಡಹೆಂಡಿರು ಬಂಧುಗಳು, ಮಿತ್ರರು, ಶಿಕ್ಷಕರು, ವಿದ್ಯಾರ್ಥಿ ಗಳು—ಅಷ್ಟೇ ಅಲ್ಲ, ಕಡು ವೈರಿಗಳೂ, ಅಪರಿ ಚಿತರು ಕೂಡ ಈ ಸಂಚಿನಲ್ಲಿ ಕೈ ಕೂಡಿಸು ತ್ತಿದ್ದಾರೆ, ಪುಟಕೊಡುತ್ತಿದ್ದಾರೆ; ಅಷ್ಟು ಮಾತ್ರ ವಲ್ಲ ಪರಸ್ಪರರನ್ನು ಅದರಲ್ಲಿ ಸಿಕ್ಕಿ ಹಾಕಿಸುವಂತೆ ಪರ್ಯಾಯವಾಗಿಯಾದರೂ ಯತ್ನಿಸುತ್ತಿದ್ದಾರೆ. ಆಶ್ಚರ್ಯವೆಂದರೆ, ಏನು ಕೊಟ್ಟರೂ ಈ ಜನ ತಮ್ಮ ಈ ನಿಲುವಿನಿಂದ ಕದಲುವುದಿಲ್ಲ.

ಇಂದು ಬೆಳಗು ಮುಂಜಾನೆ ನನ್ನ ಅಣ್ಣನನ್ನು ಕಾಣಲು ಹೋದೆ. ಪಡಸಾಲೆಯ ಬಾಗಿಲ ಹೊರಗೆ ಆತ ಮುಗಿಲನ್ನೇ ನೋಡುತ್ತ ನಿಂತಿದ್ದ. ಬಾಗಿ ಲನ್ನು ಭದ್ರವಾಗಿ ಮುಚ್ಚಿ, ಅತ್ಯಂತ ವಿನಯ ಪೂರ್ವಕವಾಗಿ, ಸಮಾಧಾನದಿಂದ ಹೇಳಿದೆ:

"ಅಣ್ಣ, ನಿನಗೆ ನಾನೊಂದು ವಿಷಯ ಹೇಳ ಬೇಕಾಗಿದೆ."

"ಸರಿ, ಅದೇನು?" ಎಂದು ಆತ ಸರಕ್ಕನೇ ನನ್ನ ಕಡೆಗೆ ತಿರುಗಿ ತಲೆಯಾಡಿಸಿದ.

"ಹೆಚ್ಚೇನಿಲ್ಲ, ಆದರೆ ಅದನ್ನು ಹೇಳುವುದೇ ನನಗೆ ಕಷ್ಟವಾಗುತ್ತಿದೆ. ಅಣ್ಣ, ಎಲ್ಲ ಕಾಡು ಮನುಷ್ಯರೂ ಮೊದಮೊದಲು ಸ್ವಲ್ಪ ನರ ಮಾಂಸವನ್ನು ತಿಂದದ್ದುಂಟು. ಕ್ರಮೇಣ ಅವರ ಜೀವನದ ದೃಷ್ಟಿಕೋನವೇ ಬದಲಾಯಿತು. ಅದ ರಿಂದ ಅವರಲ್ಲಿ ಕೆಲವರು ಮನುಷ್ಯ ಮಾಂಸ ತಿನ್ನುವುದನ್ನು ನಿಲ್ಲಿಸಿದರು. ತಾವು ಒಳ್ಳೆಯ ಮನುಷ್ಯರಾಗಬೇಕೆಂದು ಅವರು ಪ್ರಯ ತ್ನಿಸಿದ್ದರಿಂದ ನಿಜವಾದ ಮನುಷ್ಯರೇ ಆದರು. ಆದರೆ ಈಗಲೂ ಕೆಲವರು ಅದನ್ನು ನಿಲ್ಲಿಸಿಲ್ಲ. ವಿಷಜಂತುಗಳ ಹಾಗೆ; ಕೆಲವರು ಮೀನುಗಳಾಗಿ, ಹಕ್ಕಿಗಳಾಗಿ, ಮಂಗಗಳಾಗಿ, ಅಂತಿಮವಾಗಿ ಮನು ಷ್ಯರಾಗಿ ವಿಕಾಸ ಹೊಂದಿದರು. ಆದರೆ ಕೆಲ ವರು ಮಾತ್ರ ಒಳ್ಳೆಯವರಾಗಲು ಪ್ರಯತ್ನಿಸು ವುದೇ ಇಲ್ಲ. ಇನ್ನೂ ವಿಷಜಂತುಗಳ ಹಾಗೇ ಬದುಕುತ್ತಿದ್ದಾರೆ. ಮನುಷ್ಯನನ್ನು ತಿಂದು ಜೀವಿ ಸುವ ಇವರು ಮನುಷ್ಯರನ್ನು ತಿನ್ನಲಾರದವರ ಜೊತೆಗೆ ಹೋಲಿಸಿಕೊಂಡಾಗ ಅದೆಷ್ಟು ಲಜ್ಜೆ ಗೇಡು; ಬಹುಶಃ ಮಂಗಗಳನ್ನು ಕಂಡು ವಿಷ ಜಂತುಗಳು ನಾಚಿಕೆ ಪಡುವುದಕ್ಕಿಂತ ಹೆಚ್ಚಾಗಿ ಅವರಿಗೆ ನಾಚಿಕೆಯಾಗಬಹುದಲ್ಲವೇ?

"ನಾನೀಗ ಹೇಳುವುದೊಂದು ತೀರ ಹಳೆ ಗಾಲದ ಕಥೆ. ಯಾರೋ ಒಬ್ಬ ಅಡಿಗೆಯವ ತನ್ನ ಒಡೆಯನನ್ನು ಸಂತೃಪ್ತಗೊಳಿಸಲು ಸ್ವಂತ ಮಗನನ್ನೇ ಬೇಯಿಸಿ ಬಡಿಸಿದ್ದನಂತೆ. ಕ್ರಾಂತಿ ಯಾಗುವವರೆಗೆ, ಕ್ರಾಂತಿಯಾದಂದಿನಿಂದ ಹಿಡಿದು ತೋಳನ ಮರಿ ಹಳ್ಳಿಯಲ್ಲಿ ಮನುಷ್ಯ

ನೊಬ್ಬನನ್ನು ಕೊಂದ ದಿನದವರೆಗೆ, ಅಷ್ಟೇಕೆ ಈ ಭೂಮಿ ಆಕಾಶಗಳು ನಿರ್ಮಾಣವಾದ ದಿನದಿಂದ ಹಿಡಿದು ಇಲ್ಲಿಯವರೆಗೆ ಮನುಷ್ಯರು ಒಬ್ಬರನ್ನೊಬ್ಬರು ತಿನ್ನುತ್ತಲೇ ಬಂದಿದ್ದಾರೆ. ಹೋದ ವರ್ಷ ನಗರದಲ್ಲಿ ಅಪರಾಧಿಯೊಬ್ಬನಿಗೆ ಶಿಕ್ಷೆಯಾಗಿ ಅವನ ತಲೆ ಕತ್ತರಿಸಿದರು. ಕ್ಷಯ ರೋಗಿಯೊಬ್ಬ ಬ್ರೆಡ್ಡಿನ ತುಂಡೊಂದನ್ನು ಅವನ ನೆತ್ತರಿನಲ್ಲಿ ಅದ್ದಿ ಚೀಪಿದ.

"ಅವರು ನನ್ನನ್ನು ತಿನ್ನಬೇಕೆಂದಿದ್ದಾರೆ, ನೀನೊಬ್ಬನೇ ಏಕಾಕಿಯಾಗಿ ಅವರನ್ನು ತಡೆಯಲಾರೆ ಎಂಬುದೂ ನನಗೆ ಗೊತ್ತಿದೆ. ಆದರೆ ನೀನೇಕೆ ಅವರ ಜೊತೆಗೆ ಕೂಡಿಕೊಳ್ಳಬೇಕು? ನರಭಕ್ಷಕರಾಗಿ ಅವರು ಏನನ್ನಾದರೂ ಮಾಡಬಲ್ಲರು. ಅವರು ನಿನ್ನನ್ನು ಕೂಡ ತಿನ್ನಬಲ್ಲರು. ಒಂದೇ ಗುಂಪಿನವರಾದ ಜನ ಕೂಡ ಒಬ್ಬರನ್ನೊಬ್ಬರು ತಿನ್ನಬಲ್ಲರು. ಆದರೆ ಒಂದು ವೇಳೆ ನೀವು ಈ ಕೂಡಲೇ ನಿಮ್ಮ ಈ ಹಾದಿಯನ್ನು ಬದಲಿಸಿದರೆ ಪ್ರತಿಯೊಬ್ಬರೂ ಶಾಂತಿಯಿಂದ ಬದುಕಬಲ್ಲರು. ಇದು ಪುರಾತನ ಕಾಲದಿಂದಲೂ ಹೀಗೇ ನಡೆದು ಬಂದಿರಬಹುದಾದರೂ ಇಂದು ಪರಸ್ಪರರನ್ನು ನಾವು ಕರುಣೆಯಿಂದ ಕಾಣಬಲ್ಲೆವು. ಇದು ಅಶಕ್ಯವೆಂದೇ ನೀನು ಹೇಳಬಹುದು. ಆದರೆ ಇದು ಶಕ್ಯವಿದೆಯೆಂದು ನನಗನಿಸುತ್ತಿದೆ. ಅಂದು ನಮ್ಮ ಗೇಣಿದಾರ ಗೇಣಿಯನ್ನು ಕಡಿಮೆಮಾಡಲು ನಿನಗೆ ಬೇಡಿಕೊಂಡಾಗ ನೀನು ಸಾಧ್ಯವಿಲ್ಲವೆಂದು ಹೇಳಿದೆ."

ಮೊದಲು ಆತ ನನ್ನ ಕಡೆ ನೋಡಿ ತಿರಸ್ಕಾರದಿಂದ ಮೆಲ್ಲಗೆ ನಕ್ಕ, ನಂತರ ಆತನ ಕಣ್ಣುಗಳಲ್ಲಿ ಕೊಲೆಗಡುಕನ ಛಾಯೆ ಮೂಡತೊಡಗಿತು. ಅವರ ರಹಸ್ಯವನ್ನೆಲ್ಲ ನಾನು ಹೊರಗೆಡವಿದ್ದರಿಂದ ಆತನ ಮುಖ ಬಿಳಿಚಿಕೊಂಡಿತು. ಗೇಟಿನ ಹೊರಗೆ ಜನರ ಗುಂಪೇ ನೆರೆದಿತ್ತು. ತನ್ನ ನಾಯಿಯ ಜೊತೆಗೆ ಚಾವೊ ಕೂಡ ನಿಂತಿದ್ದ. ಎಲ್ಲರೂ ತಮ್ಮ ಗೋಣು ಎತ್ತರಿಸಿ ನನ್ನ ಕಡೆಗೇ ನೋಡುತ್ತಿದ್ದರು. ಎಲ್ಲರ ಮುಖಗಳೂ ನನಗೆ ಕಾಣಲಿಲ್ಲ. ಕೆಲವರು ಬಟ್ಟೆಯಲ್ಲಿ ಮುಚ್ಚಿಕೊಂಡಂತೆ ಕಂಡಿತು. ಕೆಲವರು ತಮ್ಮ ನಗೆಯನ್ನು ಹತ್ತಿಕ್ಕಿ ಹಿಡಿದು ಭಯಾನಕವಾಗಿ, ಬಿಳಿಚಿಕೊಂಡವರಂತೆ ಕಂಡರು. ಅವರೆಲ್ಲ ಒಂದೇ ತಂಡದವರೆಂದು ನನಗೆ ತಿಳಿದಿತ್ತು. ಎಲ್ಲರೂ ನರಮಾಂಸ ಭಕ್ಷಕರೇ. ಅವರೆಲ್ಲರ ಯೋಚನೆಗಳೂ ಒಂದೇ ಬಗೆಯಾಗಿರಲಿಲ್ಲವೆಂಬುದೂ ನನಗೆ ಗೊತ್ತು. ಕೆಲವರು ಇದು ಯಾವಾಗಲೂ ಹೀಗೇ ನಡೆದು ಬಂದಿದೆಯಾದ್ದರಿಂದ ಮನುಷ್ಯರನ್ನು ತಿನ್ನಬಹುದೆಂದು ವಿಚಾರ ಮಾಡಿದ್ದರು. 'ಕೆಲವರಿಗೆ ಮನುಷ್ಯನ ಮಾಂಸವನ್ನು ತಿನ್ನಬಾರದೆಂಬುದು ತಿಳಿದಿತ್ತಾದರೂ ಅವರು ತಿನ್ನಬಯಸುತ್ತಿದ್ದರು, ಬೇರೆಯವರು ತಮ್ಮ ಗುಟ್ಟನ್ನು ಕಂಡುಬಿಟ್ಟಾರೆಂದು ಮಾತ್ರ ಅವರಿಗೆ ಅಳುಕು. ಅದ್ದರಿಂದಲೇ ನನ್ನ ಮಾತುಗಳನ್ನು ಕೇಳಿದ ಕೂಡಲೇ ಅವರು ಸಿಟ್ಟಾದರು. ಆದರೆ ಆಗಲೂ ಅವರು ತಮ್ಮ ಬಿಗಿ ಹಿಡಿದ ತುಟಿಗಳೊಳಗೇ ಕಪಟದ, ತಿರಸ್ಕಾರದ ನಗೆಯನ್ನು ನಗುತ್ತಲೇ ಇದ್ದರು.

ನನ್ನ ಅಣ್ಣನಿಗೆ ಒಮ್ಮಿಂದೊಮ್ಮೆಲೇ ರೋಷ ಉಕ್ಕಿ ಬಂತು, ಆತ ಜೋರಾಗಿ ಕೂಗಿದ:

"ಹೊರಟು ಹೋಗಿ ಎಲ್ಲರೂ ಇಲ್ಲಿಂದ ಹೊರಟು ಹೋಗಿರಿ. ಹುಚ್ಚನನ್ನು ನೋಡುತ್ತ ನಿಲ್ಲುವುದರಿಂದ ನಿಮಗೇನು ಬಂದಂತಾಯಿತು?"

ಅವರ ಕಪಟತನವನ್ನು ಆಗಲಾದರೂ ನಾನು ಸ್ವಲ್ಪ ಅರ್ಥಮಾಡಿಕೊಂಡೆ. ಅವರು ತಮ್ಮ ನಿರ್ಧಾರವನ್ನು ಬದಲಿಸಬಯಸುವುದಿಲ್ಲ. ಅವರ ಯೋಜನೆಗಳೆಲ್ಲ ಆಗಲೇ ಸಿದ್ಧವಾಗಿದ್ದುವು. ನನಗೆ ಅವರು ಹುಚ್ಚನ ಪಟ್ಟ ಕಟ್ಟುವುದಕ್ಕೆ ಅಣಿಯಾಗಿ ಬಿಟ್ಟಿದ್ದರು. ಹೀಗಾಗಿ ಮುಂದೊಂದು ದಿನ ಅವರು ನನ್ನನ್ನು ತಿಂದಾಗ ಅವರಿಗೆ ಯಾವ ತೊಂದರೆಯೂ ಉಂಟಾಗುವುದಿಲ್ಲವಷ್ಟೇ ಅಲ್ಲ, ಜನರು ಬಹುಶಃ ಅದಕ್ಕಾಗಿ ಇವರಿಗೆ ಋಣಿಯೂ ಆಗಿರಬಹುದು. ಹಳ್ಳಿಯ ಜನ ದುಷ್ಟನೊಬ್ಬನನ್ನು ಕೊಂದು ತಿಂದ ಕಥೆಯನ್ನು ನಮ್ಮ ಗೇಣಿದಾರ ಹೇಳಿದ್ದ; ಆಗ ಅಲ್ಲಿ ಬಳಸಿದ್ದು ಕೂಡ ಇದೇ ತಂತ್ರವನ್ನು.

ಮುದುಕ ಚೆನ್ ಸಾಕಷ್ಟು ವ್ಯಗ್ರವಾಗಿಯೇ ನನ್ನ ಹತ್ತಿರ ಬಂದ. ಆದರೆ ಅವರಾರಿಗೂ ನನ್ನ ಬಾಯಿ ಮುಚ್ಚಿಸುವುದು ಶಕ್ಯವಾಗಲಿಲ್ಲ. ನಾನು ಅವರಿಗೆ ಹೇಳಲೇಬೇಕಾಗಿತ್ತು: ನಾನು ಹೇಳಿದೆ: "ನೀವು ಬದಲಾಗಲೇಬೇಕು. ನಿಮ್ಮ ಹೃದಯದ

ಆಳದಿಂದಲೇ ನೀವು ಬದಲಾಗಬೇಕು. ಇನ್ನು ಮುಂದೆ ಈ ಜಗತ್ತಿನಲ್ಲಿ ನರಭಕ್ಷಕರಿಗೆ ಸ್ಥಾನವಿಲ್ಲವೆಂಬುದನ್ನು ನೀವು ತಿಳಿದುಕೊಳ್ಳಲೇಬೇಕು.

“ನೀವು ಬದಲಾಗದಿದ್ದರೆ ಒಂದು ದಿವಸ ಮತ್ತಾರಾದರೂ ನಿಮ್ಮನ್ನೇ ತಿನ್ನಬಹುದು. ಜನ ಹುಟ್ಟುತ್ತಲೇ ಇರುತ್ತಾರಾದರೂ ಬೇಟೆಗಾರರು ತೋಳಗಳನ್ನು ಕೊಲ್ಲುವ ಹಾಗೆ, ನಿಜವಾದ ಮನುಷ್ಯರಿಂದಲೇ ಅವರೆಲ್ಲರೂ ನಾಶವಾಗಿ ಬಿಡುತ್ತಾರೆ, ವಿಷಜಂತುಗಳ ಹಾಗೆ!”

ಮುದುಕ ಚೆನ್ ಎಲ್ಲರನ್ನೂ ಅಲ್ಲಿಂದ ದೂರ ಕಳಿಸಿದ. ನನ್ನ ಅಣ್ಣ ಕೂಡ ಅಲ್ಲಿಂದ ಮರೆಯಾಗಿದ್ದ. ಚೆನ್ ನಾನು ಕೋಣೆಗೆ ಹೋಗುವಂತೆ ತನ್ನ ಮನವೊಲಿಸತೊಡಗಿದ.

ದಟ್ಟಗತ್ತಲಲ್ಲಿ ಈ ಕೋಣೆಯಲ್ಲಿ ಕಪ್ಪು, ಕಡುಗಪ್ಪು. ಒಮ್ಮೆಲೆ ನನ್ನ ತಲೆಯ ಮೇಲಿನ ತೊಲೆ ಜಂತಿಗಳು ಅದುರತೊಡಗಿದವು. ತುಸು ಹೊತ್ತು ಹಾಗೆಯೇ ಅದುರಿದ ನಂತರ ಅವು ದಪ್ಪವಾಗಿ ಆನೆ ಗಾತ್ರಕ್ಕೇ ಬೆಳೆದು ನನ್ನ ಮೇಲೆ ರಾಶಿರಾಶಿಯಾಗಿ ಒಟ್ಟಿಕೊಂಡುವು. ಭಾರ ತಡೆದುಕೊಳ್ಳಲಾರದಷ್ಟು ಅಸಾಧ್ಯವಾಗಿತ್ತು. ನನಗೆ ಅತ್ತಿತ್ತ ಸರಿದಾಡಲು ಕೂಡ ಶಕ್ಯವಾಗಲಿಲ್ಲ. ಆ ಭಾರ ಕೃತಕವೆಂಬುದರ ಅರಿವು ನನಗಿತ್ತು. ಆದ್ದರಿಂದಲೇ ನಾನು ಅವುಗಳೊಂದಿಗೆ ಸೆಣಸಾಡಿ ತಪ್ಪಿಸಿಕೊಂಡಾಗ ಮೈಯೆಲ್ಲ ಬೆವರಿನಿಂದ ತೊಯ್ದುಹೋಗಿತ್ತು. ಆದರೆ ನಾನೀಗ ಕೂಗಿ ಹೇಳಲೇಬೇಕಾಯಿತು:

“ನೀವು ಈಗಿನಿಂದಲೇ ಬದಲಾಗಬೇಕು; ನಿಮ್ಮ ಹೃದಯದ ಆಳದಿಂದಲೇ ಬದಲಾಗಬೇಕು! ಇನ್ನು ಮುಂದೆ ಈ ಜಗತ್ತಿನಲ್ಲಿ ನರಭಕ್ಷಕರಿಗೆ ಸ್ಥಾನವಿಲ್ಲವೆಂಬುದನ್ನು ನೀವು ತಿಳಿದುಕೊಳ್ಳಲೇಬೇಕು.

ಸೂರ್ಯನೀಗ ಬೆಳಗುತ್ತಲಿಲ್ಲ, ಬಾಗಿಲು ತೆರೆಯುತ್ತಲೂ ಇಲ್ಲ; ನಿತ್ಯ ನನಗೆ ಎರಡು ಹೊತ್ತು ಊಟ.

ನನ್ನ ಊಟದ ಕಡ್ಡಿಗಳನ್ನು * ಹಿಡಿದುಕೊಂಡೆ,

* ಚೀನೀ ಮತ್ತು ಜಪಾನಿಯರು ಊಟ ಮಾಡುವುದಕ್ಕೆ ಕಟ್ಟಿಗೆ ಕಡ್ಡಿಗಳನ್ನು ಪಯೋಗಿಸುತ್ತಾರೆ.



ಈಗ ನನ್ನ ಅಣ್ಣನ ಬಗೆಗೇ ವಿಚಾರಗಳು ನನ್ನ ತಲೆಯಲ್ಲಿ ಸುತ್ತತೊಡಗಿದವು. ನನ್ನ ಪುಟ್ಟ ತಂಗಿ ಹೇಗೆ ಸತ್ತಳೆಂಬುದು ಈಗ ನನಗೆ ಗೊತ್ತಾಗಿಬಿಟ್ಟಿದೆ. ಎಲ್ಲ ಅವನಿಂದಲೇ. ನನ್ನ ತಂಗಿಗೆ ಆಗ ಕೇವಲ ಐದು ವರ್ಷ. ಮುದ್ದಾಗಿ ಪ್ರೀತಿ ಬರುವಂತಿದ್ದಳು. ನನ್ನ ಮನಸ್ಸಿನ ಕಣ್ಣುಗಳಿಂದ ಈಗಲೂ ಅವಳನ್ನು ನೋಡಬಲ್ಲೆ. ಅವ್ವ ಅಳುತ್ತಲೇ ಇದ್ದಳು. ಆದರೆ ಈತ ಅವಳಿಗೆ ಅಳಬೇಡವೆಂದು ಬೇಡಿಕೊಂಡ. ಬಹುಶಃ ತಾನೇ ಅವಳನ್ನು ತಿಂದ ಕಾರಣದಿಂದ ಇರಬಹುದು, ಆಕೆ ಅಳುವುದನ್ನು ಕಂಡಾಗ ಅವನಿಗೆ ನಾಚಿಕೆಯೆನಿಸಿರಬೇಕು–ನಾಚಿಕೆಯೆಂಬುದೇನಾದರೂ ಅವನಲ್ಲಿ ಉಳಿದಿದ್ದರೆ.

ನನ್ನ ತಂಗಿಯನ್ನು ನನ್ನ ಅಣ್ಣನೇ ತಿಂದಿದ್ದ. ಆದರೆ ಅವ್ವನಿಗೆ ಇದರ ಕಲ್ಪನೆ ಬಂತೋ ಇಲ್ಲವೋ ಗೊತ್ತಿಲ್ಲ.

ಅವ್ವನಿಗೆ ಇದು ತಿಳಿದಿರಬಹುದೆಂದೇ ನನಗನಿಸುತ್ತಿದೆ. ಆದರೆ ಅವಳು ಅಳುವಾಗ ಅದನ್ನು ಬಾಯಿ ಬಿಟ್ಟು ಹೇಳಲಿಲ್ಲ. ಬಹುಶಃ ಅವಳು ಕೂಡ ಅದನ್ನು ಸರಿ ಎಂದೇ ಭಾವಿಸಿರಬಹುದು. ನನಗಿನ್ನೂ ನೆನಪಿದೆ. ಆಗ ನಾನಿನ್ನೂ ನಾಲ್ಕೈದು ವರ್ಷದವನಿರಬೇಕು. ಪಡಸಾಲೆಯ ಹೊರಗಡೆಗೆ ತಂಪು ನೆರಳಿನಲ್ಲಿ ಕುಳಿತಿದ್ದೆ. ಒಬ್ಬ ಮನುಷ್ಯನ ತಂದೆ ತಾಯಿಗಳಿಗೆ ಏನಾದರೂ ಕಾಯಿಲೆಯಾದಾಗ, ತಾನೊಬ್ಬ ಒಳ್ಳೆಯ ಮಗನೆಂಬುದನ್ನು ಸಿದ್ಧಪಡಿಸಲು ಅವನು ತನ್ನ ಮಾಂಸದ ತುಂಡೊಂದನ್ನು ಕೊಯ್ದು ಬೇಯಿಸಿ ಅವರಿಗೆ ತಿನ್ನಲು ಕೊಡಬೇಕು ಎಂದಾಗ ಅಣ್ಣ ಹೇಳಿದ್ದ. ಆಗ ಅವನು ಹೇಳಿದ್ದು ತಪ್ಪೆಂದು ಅಲ್ಲಿಯೇ ಇದ್ದ ಅಪ್ಪನ ಬಾಯಿಂದ ಬರಲಿಲ್ಲ. ಒಂದು ತುಂಡು ತಿನ್ನಬಹುದಾದರೆ ನಿಶ್ಚಯವಾಗಿಯೂ ಇಡೀ ಮನುಷ್ಯನನ್ನೇ ತಿನ್ನಬಹುದು. ಇಷ್ಟಾಗಿಯೂ ಮತ್ತೆ ಅವಳು ದುಃಖಿಸಿದುದನ್ನು ಕೇವಲ ನೆನೆಸಿಕೊಂಡರೆ ಸಾಕು, ನನ್ನ ಹೃದಯದಿಂದ ರಕ್ತ ಸೋರಿದಂತಾಗುತ್ತದೆ; ಈ ವಿಷಯದಲ್ಲಿ ಭಾರಿ ವಿಚಿತ್ರವೆನಿಸುವುದು ಇದೇ !

ಅದರ ಬಗ್ಗೆ ವಿಚಾರ ಬಂದಾಗಲೆಲ್ಲ ನನಗೆ ಅಸಹನೀಯವಾಗಿ ಬಿಡುತ್ತದೆ.

ನಾಲ್ಕು ಸಾವಿರ ವರ್ಷಗಳಿಂದ ಜನರು ಮನುಷ್ಯನ ಮಾಂಸವನ್ನು ತಿನ್ನುತ್ತ ಬಂದಿರುವ ಈ ಸ್ಥಳದಲ್ಲಿಯೇ ಇಷ್ಟು ವರ್ಷಗಳವರೆಗೆ ನಾನು ಬದುಕಿದ್ದೇನೆ ಎಂಬುದರ ಅರಿವು ನನಗೀಗ ಆಗುತ್ತದೆ. ನನ್ನ ತಂಗಿ ಸತ್ತಾಗ ನನ್ನ ಅಣ್ಣ ಅದೇ ನಮ್ಮ ಮನೆಯ ಹಿರಿತನವನ್ನು ವಹಿಸಿಕೊಂಡಿದ್ದ. ಅವನು ಅವಳ ಮಾಂಸವನ್ನು ಅನ್ನದಲ್ಲೂ ಉಳಿದ ತಿನಿಸುಗಳಲ್ಲೂ ಕೂಡಿಸಿ ಬೇಯಿಸಿ ನಮಗರಿವಿಲ್ಲದಂತೆಯೇ ಎಲ್ಲರೂ ಅದನ್ನು ತಿನ್ನುವಂತೆ ಮಾಡಿರಬೇಕು.

ನನಗೆ ಅರಿವಿಲ್ಲದಂತೆಯೇ ನಾನು ನನ್ನ ತಂಗಿಯ ಮಾಂಸದ ತುಣುಕುಗಳನ್ನಷ್ಟೇ ತಿಂದಿರಬೇಕು, ಈಗ ನನ್ನ ಮಾಂಸದ ಸರದಿ...

ನರಮಾಂಸ ಭಕ್ಷಣೆಯ ಈ ನಾಲ್ಕು ಸಾವಿರ ವರ್ಷಗಳ ಇತಿಹಾಸದ ನಂತರ– ನನಗೆ ಮೊದಮೊದಲು ಆ ಬಗ್ಗೆ ಏನೂ ತಿಳಿದಿರಲಿಲ್ಲವಾದರೂ–ನನ್ನಂಥ ಮನುಷ್ಯ ಈ ನೈಜ ಮನುಷ್ಯನನ್ನು ಹೇಗೆ ಎದುರಿಸಬಲ್ಲೆನೊ ?

ಬಹುಶಃ ಮನುಷ್ಯ ಮಾಂಸದ ರುಚಿನೋಡದಿರುವ ಮಕ್ಕಳಿನ್ನೂ ಇರಬೇಕಲ್ಲ ?

ಮಕ್ಕಳನ್ನಾದರೂ ರಕ್ಷಿಸಿರಿ. ✪

(ದೀಪಾವಳಿ ವಿಶೇಷ ಸಂಚಿಕೆಗೆಂದು ಆಮಂತ್ರಿತ ಕಥೆ)

ತನಗೆ ಬಂದಂತಹದೇ ಪ್ರೇಮಪತ್ರ ತನ್ನ ಪ್ರಿಯಕರನಿಂದ ತನ್ನ ಗೆಳತಿಗೂ ಬಂದಿದ್ದನ್ನು ನೋಡಿದ ಆಕೆ ಪ್ರಿಯಕರನಿಗೆ ಪತ್ರ ಬರೆದಳು: "ಸರ್ಕ್ಯೂಲರ್ ಮುಟ್ಟಿತು ಧನ್ಯವಾದ."


ಭಾರತಾಂಬೆಗೊಂದು ನಾಲಾಮಾಲೆ

ಟಿ. ಎಸ್. ಸಂಜೀವರಾವ್

ಉತ್ತರ ಭಾರತವನ್ನು ಅತಿ ದಾರುಣ ಕ್ಷೋಭೆಗೆ ಒಳಮಾಡಿದ ಈ ವರ್ಷದ ಜಲಪ್ರಳಯ ಎಲ್ಲರ ಲಕ್ಷ್ಯವನ್ನೂ ವಿಧ್ವಂಸಕ ಮಹಾಪೂರಗಳ ಕಡೆ ಎಳೆದಿದೆ. ಈ ಮಹಾಪೂರಗಳಿಂದ ಭಾರತಕ್ಕೆ ಮುಕ್ತಿಯೇ ಇಲ್ಲವೆ? ಇವುಗಳನ್ನು ನಿಲ್ಲಿಸಲು ಸಾಧ್ಯವೆ? ಈ ನೀರನ್ನೆಲ್ಲಾ ಕೂಡಿ ಹಾಕಿ, ಬೇಸಿಗೆಯಲ್ಲಿ ಬತ್ತಿಹೋಗುವ ದಕ್ಷಿಣದ ನದಿಗಳಿಗೆ ಉಣಿಸಲು ಸಾಧ್ಯವೆ?

ಈ ಪ್ರಶ್ನೆಗಳಿಗೆಲ್ಲ ಉತ್ತರವೆಂಬಂತೆ ಇದೆ, ಸಲಹೆಗಾರ ಇಂಜನಿಯರೂ, ಹಿಂದೆ ವಿಮಾನ ದಳದಲ್ಲಿ ಚಾಲಕರೂ ಆಗಿದ್ದ ದಿನ್‌ಷಾಜಿ ದಸ್ತೂರ್ ಎಂಬುವರ ಒಂದು ಬೃಹದ್ಯೋಜನೆ. ದೇಶದ ಮಧ್ಯ ಮತ್ತು ದಕ್ಷಿಣ ಭಾಗದಲ್ಲಿ ಒಂದು ಮಾಲೆಯಾಕಾರದ ದೀರ್ಘನಾಲೆಯ ರಚನೆ ಈ ಯೋಜನೆಯ ಮುಖ್ಯ ಭಾಗವಾಗಿರುವುದರಿಂದ ಅದಕ್ಕೆ ನಾಲಾಮಾಲೆ (Garland of Canals) ಯೋಜನೆ ಎಂದೇ ಹೆಸರು ಬಿದ್ದಿದೆ. ಕ್ಷೇಮಕಾರಣಿಯಾದ ಹಾಗೂ ಸಾಧ್ಯತೆ ಇದೆ ಎಂದೆನಿಸಿರುವ ಇಷ್ಟು ದೊಡ್ಡ ನಾಲಾಯೋಜನೆ ಇದುವರೆಗೂ ಯಾವ ದೇಶದಲ್ಲೂ ನಿರೂಪಣೆಗೊಂಡಿಲ್ಲ. ಒಟ್ಟು ೧೪,೦೦೦ ಕೋಟಿ ರೂಪಾಯಿ ಅಂದಾಜಿನ ಈ ಯೋಜನೆ, ಹಿಮಾಲಯದ ಇಳಿಜಾರು ಪ್ರದೇಶದಲ್ಲಿ ಹಾಗೂ ಮಧ್ಯ ಮತ್ತು ದಕ್ಷಿಣ ಭಾರತದ ಪ್ರಸ್ಥಭೂಮಿಯ ಸೂಕ್ತ ೧೨,೫೦೦ ಕಿ. ಮೀ. ಉದ್ದದ ನಾಲೆಗಳನ್ನೂ, ಅದಕ್ಕೆ ಸಂಬಂಧಿಸಿದಂತೆ ಕೊಳವೆ ಸಾಲುಗಳು, ಲೆಕ್ಕವಿಲ್ಲದಷ್ಟು ಶಾಖೋಪಶಾಖೆಗಳು, ಜಲಾಶಯಗಳು, ತೂಬುಗಳನ್ನೂ ಒಳಗೊಂಡು ಭಾರತದ ಶತಮಾನಗಳ ದಾರಿದ್ರ್ಯವನ್ನು ಅಳಿಸಿ ಹಾಕಬಹುದು ಎಂಬ ಆಸೆಯನ್ನು ಮೂಡಿಸಿದೆ.

ವಿಶ್ವಸಂಸ್ಥೆಯ ಅಂಗವಾದ ಆಹಾರ ಮತ್ತು ವ್ಯವಸಾಯ ಸಂಸ್ಥೆಯು (FAO) ಈ ವರ್ಷ



ದಿನ್‌ಷಾಜಿ ದಸ್ತೂರ್

ಫೆಬ್ರುವರಿಯಲ್ಲಿ ರೋಮ್‌ನಗರದಲ್ಲಿ ಕೂಡಿದ್ದಾಗ ಈ ಯೋಜನೆಯ ಸಮೀಕ್ಷಣೆ ನಡೆಸಿ, ಇದೊಂದು ಒಳ್ಳೆ ಯೋಜನೆ, ಭಾರತ ಸರಕಾರ ರಚಿಸಬಹುದಾದ ಯೋಜನೆಗೆ ಅಮೂಲ್ಯವಾದ ತಳಹದಿಯಂತಿದೆ ಎಂದು ಅಭಿಪ್ರಾಯಪಟ್ಟಿದೆ. ಭಾರತದ ಪ್ರಧಾನಿ ಮುರಾರ್ಜಿ ದೇಸಾಯಿಯವರು ದಸ್ತೂರರ ಯೋಜನೆಯನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. "ಈ ನಾಲಾಮಾಲೆಯ ಯೋಜನೆ ಕರಗತವಾದದ್ದೇ ಆದರೆ, ಭಾರತದಲ್ಲಿ ವಿದ್ಯುತ್ತಿನ ಅಭಾವ ತೊಲಗಿ ಹೋಗುತ್ತದೆ; ನಿರುದ್ಯೋಗ ಮಾಯವಾಗುತ್ತದೆ," ಎಂದುದ್ಗರಿಸಿದ್ದಾರೆ.

ಆದರೆ ವಿದ್ಯುತ್ತಿನ ಉತ್ಪಾದನೆಯಾಗಲೀ, ನಿರುದ್ಯೋಗ ನಿರ್ಮೂಲನವಾಗಲೀ ಈ ಯೋಜನೆಯ ಮುಖ್ಯ ಗುರಿಗಳಲ್ಲ; ಇವೆರಡೂ ಯೋಜನೆಯಿಂದ


ಈ ಮುನ್ನ ಉತ್ತರದ ನೀರನ್ನು ದಕ್ಷಿಣಕ್ಕೆ ಒದಗಿಸುವ ಯೋಜನೆಗಳು ರೂಪಗೊಂಡಿರಲಿಲ್ಲ ಎಂದೇನಲ್ಲ. ಗೋದಾವರಿ ನಾಲಾಜಲವನ್ನು ನಿರ್ಮಿಸಿದ ಬ್ರಿಟಿಶ್ ಅಧಿಕಾರಿ ಆರ್ಥರ್ ಕಾಟನ್ ಪ್ರಪ್ರಥಮವಾಗಿ ೧೫೦ ವರ್ಷಗಳ ಹಿಂದೆಯೇ ಔತ್ತರೇಯ ನದಿಗಳ ಹೆಚ್ಚಿನ ನೀರು ದಾಕ್ಷಿಣಾತ್ಯದ ನದಿಗಳಿಗೆ ಹರಿದುಬರುವಂಥ ಗಂಗಾ–ಕಾವೇರಿ ವ್ಯೂಹ ಸಾಧ್ಯವೆಂದು ಯೋಜನೆ ಹಾಕಿದ್ದ. ಆದರೆ ಆಗ ಆಳುತ್ತಿದ್ದ ಈಸ್ಟ್ ಇಂಡಿಯಾ ಕಂಪನಿ ಸರ್ಕಾರ ಅದನ್ನು ತೀರಾ ದುಂದು ಯೋಜನೆಯೆಂದು ಅಲ್ಲಗಳೆದುದಲ್ಲದೆ, ಆತನನ್ನೂ ಗಂಗಾ–ಯಮುನಾ ನಾಲೆಯನ್ನು ರಚಿಸಿ ದುಬಾರಿ ಖರ್ಚು ಮಾಡಿದನೆಂದು ಆಪಾದಿಸಿ ತಕ್ಸೀರಿಗೆ ಗುರಿಮಾಡಿತು. ಸ್ವಾತಂತ್ರ್ಯಾನಂತರ ಭಾರತ ಸರಕಾರ ಈ ವಿಷಯಕ್ಕೆ ಮಹತ್ವವಾದ ಗಮನ

ಭಾರತದ ಅನೇಕ ಅನಿಷ್ಟಗಳನ್ನು ದೂರ ಮಾಡುವ ೧೨,೫೦೦ ಕಿ. ಮೀ. ಉದ್ದದ ನಾಲಾಮಾಲೆಯ ಬೃಹದ್ಯೋಜನೆಯೊಂದನ್ನು ಈಗ ಭಾರತ ಸರಕಾರ ಪರಿಶೀಲಿಸುತ್ತಿದೆ. ಇದಕ್ಕೆ ವಿಶ್ವಸಂಸ್ಥೆಯ ಆಹಾರ ಮತ್ತು ವ್ಯವಸಾಯ ಅಂಗದ ಆಶೀರ್ವಾದವೂ ದೊರೆತಿದೆ.

ಉದ್ಭವಿಸುವ ಉಪ–ಲಾಭಗಳು, ಅಷ್ಟೆ. ಇದರ ಮುಖ್ಯ ಗುರಿ; ಸುರಿದು ಸಾಗರ ಸೇರುತ್ತಿರುವ ಅಗಾಧ ಜಲರಾಶಿಯ ಕ್ರೋಢೀಕರಣ ಹಾಗೂ ಸಫಲ ವಿತರಣೆ. ಹಿಮಾಲಯ ಪರ್ವತ ಶ್ರೇಣಿಯಲ್ಲಿ ಬೀಳುವ ಪ್ರಳಯಾಂತಕ ಜಲಧಾರೆಯನ್ನು ಕಲೆಹಾಕಿ ದಕ್ಷಿಣದ ಕಡೆ ಹರಿಯುವಂತೆ ಮಾಡುವುದು; ಉತ್ತರ ಪ್ರಾಂತಗಳನ್ನು ವರ್ಷವರ್ಷವೂ ಕ್ಷೋಭೆಗೊಳಿಸುತ್ತಿರುವ ಮಹಾಪೂರಗಳಿಗೆ ತಡೆಹಾಕುವುದು; ಇನ್ನೂ ೨೨ ವರ್ಷಗಳಲ್ಲಿ ೯೫ ಕೋಟಿ ಮೀರುವ ಭಾರತ ನಿವಾಸಿಗಳಿಗೆ ಕುಡಿಯುವ ನೀರು ಕೃಷಿ ಬೆಳವಣಿಗೆಗೆ ಅಗತ್ಯಬೀಳುವ ನೀರನ್ನು ವರ್ಷದ ಎಲ್ಲಾ ಋತುಗಳಲ್ಲೂ ಲಭ್ಯವಾಗುವಂತೆ ಮಾಡುವುದು, ಇಷ್ಟು ನೋಡಿದರೆ ಸಾಕು; ದೇಶದ ಸರ್ವತೋಮುಖ ಅಭಿವೃದ್ಧಿ ಕೈ ಹಿಡಿತದಲ್ಲಿ ಬರುತ್ತದೆ ಎಂದು ದಸ್ತೂರರು ಅಭಿಪ್ರಾಯ ಪಟ್ಟಿದ್ದಾರೆ.

ಕೊಟ್ಟಿತ್ತು. ಸ್ವತಃ ಪ್ರತಿಭಾವಂತ ನೀರಾವರಿ ಇಂಜಿನಿಯರರೂ ಭಾರತ ಸರ್ಕಾರದ ನೀರಾವರಿ ಹಾಗೂ ವಿದ್ಯುತ್ ಮಂತ್ರಿಯಾಗಿದ್ದ ಡಾ. ಕೆ ಎಲ್. ರಾವ್ ಅವರು ಗಂಗಾ–ಕಾವೇರಿಯನ್ನೂ ಕೂಡಿಸುವ ೩,೨೦೦ ಕಿ. ಮೀ. ಉದ್ದದ ಕಾಲುವೆಯ ಒಂದು ಬೃಹದ್ಯೋಜನೆಯನ್ನು ಪ್ರತಿಪಾದಿಸಿದ್ದರು. ಮೊದಮೊದಲು ಇದಕ್ಕೆ ಸಾಕಷ್ಟು ಪ್ರಾಶಸ್ತ್ಯ ಸಿಕ್ಕಿದ್ದರೂ, ಕಾರಣಾಂತರಗಳಿಂದ ಅದು ಕೊನೆಗೆ ಮೂಲೆಗೊತ್ತಲ್ಪಟ್ಟಿತು.

ಈ ಹಿಂದಿನ ಯೋಜನೆಗಳೆಲ್ಲವೂ ಭಾರತದ ಮೂಲ ಸಮಸ್ಯೆಯನ್ನು ಪರಿಹರಿಸುವುದಿಲ್ಲ; ಅವುಗಳಲ್ಲಿ ಮಹಾಪೂರಗಳನ್ನು ತಡೆಗಟ್ಟುವ ವ್ಯವಸ್ಥೆಯೇ ಇಲ್ಲ ಎಂಬುದು ದಸ್ತೂರ್ ಅವರ ಆಕ್ಷೇಪಣೆ. ದಸ್ತೂರರ ಪ್ರಕಾರ ಮಹಾಪೂರಗಳನ್ನು ತಡೆಯಬೇಕಾದರೆ ಅವು ಹುಟ್ಟುವ ಜಾಗಾದಲ್ಲೇ ಅವನ್ನು



ಮಟ್ಟು ಹಾಕಬೇಕು. ಉತ್ತರ ಭಾರತದ ಮುಖ್ಯ ನದಿಗಳೆಲ್ಲ ಹುಟ್ಟುವುದು ಹಿಮಾಲಯದಲ್ಲಿ. ಅವುಗಳನ್ನು ಕೊಬ್ಬಿಸಿ ಹರಿಸುವ ಅಪಾರ ಜಲರಾಶಿ ಮಳೆಯಾಗಿ ಹಿಮವಾಗಿ ಬೀಳುವುದು ಅಲ್ಲಿಯೇ. ಹಿಮಾಲಯ ಶ್ರೇಣಿಯ ಅಗಲಕ್ಕೂ ೪೫೦೦ ಮೀಟರು ಎತ್ತರದ ವರೆಗೆ ಒಂದು ಅಗಾಧವಾದ ಮಳೆ ಬೀಳುವ ಪಟ್ಟಾಕೃತಿಯ ಇಳಿಜಾರು ಪ್ರದೇಶವಿದೆ. ಇಲ್ಲಿ ಬೀಳುವ ನೀರಿನ ಬಹುಭಾಗ ನದಿಗಳನ್ನು ಸೇರದಂತೆ ಮಾಡಿದರೇನೆ ಮಹಾಪೂರಗಳನ್ನು ತಡೆಗಟ್ಟಬಹುದು. ದಸ್ತೂರರ ಯೋಜನೆಯ ತಂತ್ರ ಈ ಗುರಿಯುಳ್ಳದ್ದಾಗಿದೆ.

ಇವರ ಉಪಾಯ ಎಂದರೆ ಹಿಮಾಲಯ ಪರ್ವತ ಶ್ರೇಣಿಯ ಇಳಿಜಾರುಪ್ರದೇಶದ ಕೆಳ ಅಂಚಿನಲ್ಲಿ ಅಂದರೆ ಸಾವಿರ ಮೀಟರು ಎತ್ತರದಲ್ಲಿ ಪರ್ವತ ಶ್ರೇಣಿಯ ಅಡ್ಡಗಲಕ್ಕೂ ಒಂದು ಭಾರಿ ನಾಲೆಯನ್ನು ತೋಡುವುದು, ಈಗ ನದಿಗಳನ್ನು ಸೇರಿ

ವ್ಯರ್ಥವಾಗಿ ಸಮುದ್ರಕ್ಕೆ ಸುರಿದು ಬೀಳುತ್ತಿರುವ ಮಳೆ ಮತ್ತು ಮಂಜುಗಡ್ಡೆ ಕರಗಿದ ನೀರು ನಾಲೆಯಲ್ಲಿ ಶೇಖರವಾಗಿ ಹರಿಯಲು ಸಾಧ್ಯವಾಗುತ್ತದೆ. ಜಲಾಶಯಗಳ ಮೂಲಕ ಇದನ್ನು ಕಲೆ ಹಾಕಿ ಬೇಕಾದ ಕಡೆ ಉಪಯೋಗ ಮಾಡಿಕೊಳ್ಳಬಹುದು. ಅಲ್ಲದೆ ಕೊಳವೆಗಳ ಮೂಲಕ ದಕ್ಷಿಣ ಪ್ರಾಂತದಲ್ಲಿ ರಚಿಸುವ ಇನ್ನೊಂದು ಬೃಹನ್ನಾಲೆಗೆ ಹರಿದು ಬರುವಂತೆ ಮಾಡಬಹುದು. ಕಾಲುವೆ ಜಲಾಶಯ ಕೆರೆ ಕಟ್ಟೆಗಳ ದೊಡ್ಡ ಜಾಲದ ಮೂಲಕ ಈ ನೀರನ್ನೆಲ್ಲ ಭಾರತಾದ್ಯಂತ ಬೇಕಾದ ಕಡೆಯಲ್ಲಿ ಬೇಕಾದಾಗ ಉಪಯೋಗಿಸಬಹುದು.

ಮೇಲುನೋಟಕ್ಕೆ ತೀರ ಸರಳವಾಗಿ ಕಾಣುವ ಈ ಯೋಜನೆ ಅನೇಕ ಪ್ರಗಲ್ಭವಾದ ಇಂಜಿನಿಯರಿಂಗ್ ತಾಂತ್ರಿಕ ವಿಶೇಷಗಳಿಂದ ಕೂಡಿದೆ. ಕೆ. ಎಲ್. ರಾವ್ ಅವರ ಯೋಜನೆಯಲ್ಲಿ ನೀರನ್ನು ದೊಡ್ಡ ಪ್ರಮಾಣದಲ್ಲಿ ಉತ್ತರದ ನದೀ ಪಾತ್ರಗಳಿಂದ ದಕ್ಷಿಣದ ಪ್ರಸ್ಥಭೂಮಿಯ ಮೇಲಕ್ಕೆ ಪಂಪುಮಾಡುವ ಅವಶ್ಯಕತೆ ಇತ್ತು. ಇದಕ್ಕೆ ಸಾವಿರಾರು ಮೆಗಾ-ವ್ಯಾಟ್ ವಿದ್ಯುತ್ತು ಬೇಕಾಗುತ್ತಿತ್ತು. ದಸ್ತೂರರ ಯೋಜನೆಯಲ್ಲಿ ವಿದ್ಯುತ್ತಿನ ಅವಶ್ಯಕತೆಯೇ ಇಲ್ಲವೆನ್ನಬಹುದು. ಹಿಮಾಲಯ ಪರ್ವತ ಶ್ರೇಣಿಯ ನಾಲೆ ಸಮುದ್ರ ಮಟ್ಟದಿಂದ ಒಂದು ಸಾವಿರ ಮೀಟರ್ ಎತ್ತರದಲ್ಲಿರುತ್ತದೆ: ಅದೇ ದಕ್ಷಿಣ ಕಾಲುವೆ ಕೇವಲ ಐನೂರು ಮೀಟರ್ ಎತ್ತರದಲ್ಲಿರುತ್ತದೆ. ಅಂದರೆ ಉತ್ತರದಿಂದ ದಕ್ಷಿಣಕ್ಕೆ ನೀರು ಕೊಳವೆಗಳ ಮೂಲಕ ಕೇವಲ ಗುರುತ್ವಾಕರ್ಷಣ ಶಕ್ತಿಯಿಂದಲೇ ಹರಿಯಬಲ್ಲದು, ಕೆಲವೊಂದು ಕಡೆ ಪಂಪು ಮಾಡುವ ಅವಶ್ಯಕತೆ ಬೀಳಬಹುದೇನೋ ಅಷ್ಟೆ.

ಹಿಮಾಲಯ ಪರ್ವತ ಶ್ರೇಣಿಯ ಕಾಲುವೆ ೩೮೦೦ ಕಿ.ಮೀ. ಉದ್ದವಿದ್ದು ಕಾಶ್ಮೀರದಿಂದ ಅಸ್ಸಾಮಿನವರೆಗೂ ಹಬ್ಬಿರುತ್ತದೆ. ಇದರ ಅಗಲ ಸರಾಸರಿ ೩೦೦ ಮೀಟರು; ಆಳ ಸುಮಾರು ೧೦ಮೀಟರು. ಅಲ್ಲದೆ ಕಾಲುವೆಯ ಇಕ್ಕೆಲಗಳಲ್ಲೂ ೬ ಮೀಟರು ಎತ್ತರದ ಬಂಡೆಗಳೂ ಇರುತ್ತವೆ. ಈ ಕಾಲುವೆ ಮುಖ್ಯವಾಗಿ ಹಿಮಾಲಯದ ಇಳಿಜಾರು ಪ್ರದೇಶದಲ್ಲಿ ಜಾರಿ ಹೋಗುವ ಮಳೆ ನೀರು, ಮಂಜು ಕರಗಿದ ನೀರು ಇವನ್ನು ತಡೆ ಹಿಡಿದು, ಶೇಖರಿಸಿ, ಕೆಳಗಿನ ಬಯಲು ಪ್ರದೇಶಕ್ಕೂ, ದಕ್ಷಿಣದ ನಾಲೆಗೂ ವಿತರಣೆ ಮಾಡುವುದು, ಈ ಬೃಹನ್ನಾಲೆಯ ಉದ್ದಕ್ಕೂ ಮೂರು ಮೂರು ಕಿ. ಮೀ. ಅಂತರದಲ್ಲಿ ಉತ್ತರ–ದಕ್ಷಿಣವಾಗಿ ಅನೇಕಾನೇಕ ಪೂರಕ ಕಾಲುವೆಗಳು ನಿರ್ಮಾಣವಾಗುತ್ತವೆ, ಇವೂ ಸಹ ೩೦ ಮೀಟರು ಅಗಲ, ೧೦ ಮೀಟರು ಆಳ, ಸುಮಾರು ೨೦೦ ಕಿ.ಮೀ. ಉದ್ದ ಇದ್ದು ತಪ್ಪಲು ಪ್ರದೇಶದ ಭೂಮಿಯವರೆಗೆ ಅಂದರೆ ಸುಮಾರು ೧೦೦೦ ಮೀಟರು ಕೆಳಕ್ಕೆ ಇಳಿಯುತ್ತದೆ. ಈ ನಾಲಾಶಾಖೆಗಳಿಗೆ ಅನೇಕಾನೇಕ ತೂಬುಗಳೂ, ಲಾಟಗಳೂ ಇದ್ದು ಬೆಟ್ಟದ ಮೇಲಿನ ನೀರನ್ನು ಅವಶ್ಯಕತೆ ಇರುವ ಕೆಳಗಿನ ಬಯಲು ಪ್ರದೇಶಕ್ಕೆ ಹರಿಸಲು ತಾಂತ್ರಿಕ ವ್ಯವಸ್ಥೆ ಇರುತ್ತದೆ. ಅಲ್ಲದೆ ದೊಡ್ಡ ನಾಲೆಯ ಉದ್ದಕ್ಕೂ ಅನೇಕ ಕಡೆ ಜಲಾಶಯಗಳನ್ನು ನಿರ್ಮಾಣಮಾಡಿ ಹೆಚ್ಚಿನ ನೀರನ್ನು ಶೇಖರಿಸಿಡುವ ಉಪಾಯವೂ ಇದೆ. ಈಗ ಅವ್ಯಾಹತವಾಗಿ ಹರಿದು ಬಂದ ನದಿಗಳನ್ನು ಕೊಬ್ಬಿಸಿ ಮಹಾಪೂರಗಳನ್ನುಂಟುಮಾಡುವ ಜಲರಾಶಿ, ಕಾಲುವೆ ಜಲಾಶಯ ತೂಬುಗಳ ಜಾಲದಲ್ಲಿ ಸೆರೆ ಹಿಡಿಯಲ್ಪಟ್ಟು, ರಾಷ್ಟ್ರದ ಒಂದು ಮಹಾಭೀತಿಯನ್ನು ಶಮನಗೊಳಿಸುತ್ತದೆ ಎಂದು ದಸ್ತೂರರ ಅಭಿಪ್ರಾಯ.

ದಕ್ಷಿಣದ ನಾಲಾಮಾಲೆ ಉತ್ತರದ್ದಕ್ಕಿಂತಲೂ ತುಂಬಾ ಹಿರಿದು. ಒಟ್ಟು ಇದರ ಉದ್ದ ೮೮೦೦ ಕಿ. ಮೀ. ಅಂದರೆ ಉತ್ತರದ್ದಕ್ಕಿಂತ ೫೦೦೦ ಕಿ. ಮೀ. ಹೆಚ್ಚು ಇದರ ಆಳವೂ ೧೦ ಮೀಟರು ಇದ್ದು, ೬ ಮೀಟರು ಎತ್ತರದ ಬಂಡೆಗಳನ್ನು ಇಕ್ಕೆಲಗಳಲ್ಲೂ ಹೊಂದಿರುತ್ತದೆ. ಈ ಕಾಲುವೆ ಮಧ್ಯ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಕೇರಳ ಹಾಗೂ ಆಂಧ್ರ ಪ್ರದೇಶದ ಮತ್ತು ಬಿಹಾರಗಳ ಕೆಲವು ಭಾಗಗಳನ್ನೂ ಸುತ್ತುವರೆದು ಒಂದು ಬೃಹದಾಕಾರದ ಜಲಮಾಲೆಯರೂಪದಲ್ಲಿ ಕಂಗೊಳಿಸುತ್ತದೆ. ಈ ಮಾಲೆಯ ಎಲ್ಲ ಭಾಗಗಳೂ ಸಮುದ್ರ ಮಟ್ಟದಿಂದ ೫೦೦ ಕಿ. ಮೀ. ಎತ್ತರದಲ್ಲೇ ಇರುತ್ತವೆ. ಇದಕ್ಕೆ ಶಾಖೆಉಪಶಾಖೆಗಳಾಗಿ ೨೨೦೦ ಕಾಲುವೆಗಳು ಇದ್ದು ಅಲ್ಲಲ್ಲಿ ನಿರ್ಮಾಣವಾಗುವ ಅನೇಕ ಜಲಾಶಯಗಳನ್ನು ತುಂಬುತ್ತಿರುತ್ತವೆ. ಮಧ್ಯ ಹಾಗೂ ದಕ್ಷಿಣಭಾರತದ ಮುಖ್ಯ ನದಿಗಳೆಲ್ಲಕ್ಕೂ ಇದರ ಸಂಪರ್ಕವಿರುತ್ತದೆ. ಈ ನಾಲಾಜಾಲ

ಒಟ್ಟು ಒಂದು ಲಕ್ಷ ಐದು ಸಾವಿರ ಕೋಟಿ (೧,೦೫,೦೦೦,೦೦,೦೦) ಘನ ಮೀಟರು ನೀರನ್ನು ಹಿಡಿದಿಡುವ ಸಂಗ್ರಹಶಕ್ತಿ ಹೊಂದಿರುತ್ತದೆ.

ಈ ನಾಲಾಮಾಲೆಗೆ ನೀರು ಹಿಮಾಲಯ ಪರ್ವತ ಶ್ರೇಣಿಯ ನಾಲೆಯಿಂದ ಪೂರೈಕೆಯಾಗುತ್ತದೆ. ಈ ಎರಡೂ ನಾಲೆಗಳನ್ನು ಸಂಪರ್ಕಿಸಲು ಹತ್ತು ಭಾರಿ ಕೊಳವೆಗಳ ಸಮುದಾಯವೇ ಇರುತ್ತದೆ. ಒಂದೊಂದು ಕೊಳವೆಯ ಅಗಲ ೨.೬ ಮೀಟರಿನಷ್ಟು ಇರುತ್ತದೆ. ಉತ್ತರದ ನಾಲೆಗೂ ದಕ್ಷಿಣದ ನಾಲೆಗೂ ೫೦೦ ಮೀಟರು ಎತ್ತರದ ವ್ಯತ್ಯಾಸವಿರುವುದರಿಂದ, ಬೇರಾವ ಸಹಾಯವೂ ಇಲ್ಲದೆ ನೀರು ಗುರುತ್ವಾಕರ್ಷಣೆಯಿಂದ ಉತ್ತರದಿಂದ ದಕ್ಷಿಣಕ್ಕೆ ಹರಿದು ಬರುತ್ತದೆ.

ಈ ಅಗಾಧ ಜಲರಾಶಿಯನ್ನು ಕೂಡಿ ಹಾಕಲು ಉತ್ತರದಲ್ಲೂ ದಕ್ಷಿಣದಲ್ಲೂ ಅನೇಕ ಜಲಾಶಯಗಳಿರುತ್ತವೆ. ಹಿಮಾಲಯದ ನಾಲೆಗೆ ಹೊಂದಿಕೊಂಡಂತೆ ೩೦೦ ಜಲಾಶಯಗಳೂ, ದಕ್ಷಿಣದ ನಾಲಾಮಾಲೆಗೆ ಹೊಂದಿಕೊಂಡಂತೆ ೬೦೦ ಜಲಾಶಯಗಳು ನಿರ್ಮಾಣಮಾಡಲ್ಪಡುತ್ತವೆ. ಪ್ರತಿಯೊಂದು ಜಲಾಶಯವೂ ಸುಮಾರು ೫ ಲಕ್ಷ ಎಕರೆ–ಅಡಿ * ನೀರನ್ನು ಶೇಖರಿಸುವ ಸಾಮರ್ಥ್ಯ ಹೊಂದಿರುತ್ತದೆ. ಇದಲ್ಲದೆ ರಾಜಸ್ಥಾನದಲ್ಲಿ ೯೦ ಮೀಟರು ಎತ್ತರ ಅಣೆಕಟ್ಟುಳ್ಳ ೩೦ ಕೋಟಿ ಎಕರೆ–ಅಡಿಗಳಷ್ಟು ನೀರನ್ನು ಶೇಖರಿಸಬಲ್ಲ ಒಂದು ಭಾರಿ ಜಲಾಶಯವನ್ನೂ, ಬಿಹಾರದಲ್ಲಿ ಸೋನ್ ನದಿಗೆ ಅಡ್ಡವಾಗಿ ೧೦ ಕೋಟಿ ಎಕರೆ–ಅಡಿಗಳಷ್ಟು ನೀರು ಹಿಡಿಯುವ ಇನ್ನೊಂದು ಜಲಾಶಯವನ್ನೂ ಕಟ್ಟಲಾಗುವುದು.

ಈ ಬೃಹದ್ಯೋಜನೆ ಕರಗತವಾದರೆ, ಭಾರತದ ಪ್ರತಿಯೊಂದು ಹೆಕ್ಟೇರು ಜಮೀನಿಗೂ ಸದಾ ಕಾಲದಲ್ಲಿ ಯಥೇಚ್ಛವಾಗಿ ನೀರು ಒದಗಿಸುವ ಸಾಮರ್ಥ್ಯ ಬರುತ್ತದೆ ಎಂದು ಹೇಳುತ್ತಾರೆ ದಸ್ತೂರರವರು. ಇದರಿಂದ, ಕೃಷಿಭೂಮಿಯನ್ನು ಈಗಿರುವುದಕ್ಕಿಂತ ಎರಡರಷ್ಟು ಹೆಚ್ಚಿಸಬಹುದೆಂದು ಅವರ ಆಶಯ. ಮುಂಗಾರು ಹಿಂಗಾರುಗಳ ದೈನ್ಯದಲ್ಲಿ ದೇಶ ಬವಣೆಗೊಳ್ಳಬೇಕಿಲ್ಲ.

ಯೋಜನೆಯ ಫಲವಾಗಿ ಭಾರತದ ಕೃಷಿ ಉತ್ಪನ್ನವನ್ನು ವರ್ಷಕ್ಕೆ ೨.೭೦.೦೦೦ ಕೋಟಿ ರೂಪಾಯಿನಷ್ಟರವರೆಗೂ ಏರಿಸಬಹುದು ಎಂದು ದಸ್ತೂರರ ಎಣಿಕೆ. ನಾಲೆಗಳನ್ನು ನೋಡಿಕೊಳ್ಳುವ ಹಾಗೂ ಇತರ ವ್ಯವಸ್ಥಾಪಕ ಖರ್ಚುಗಳನ್ನು ಕಳೆದು ಈ ಉತ್ಪನ್ನ ೧.೩೦.೦೦೦ ಕೋಟಿ ರೂಪಾಯಿಯಷ್ಟು. ಅಂದರೆ ಭಾರತದ ಈಗಿನ ವಾರ್ಷಿಕ ಉತ್ಪನ್ನದ (GNP) ಎರಡರಷ್ಟು ಬರಿ ಕೃಷಿಯಿಂದಲೇ ಬರುತ್ತದೆ ಎಂದು ದಸ್ತೂರರ ಅಭಿಪ್ರಾಯ.

ಹಿಮಾಲಯ ನಾಲೆಯಿಂದ ಪ್ರಸ್ಥಭೂಮಿಯ ನಾಲಾಮಾಲೆಗೆ ನೀರು ೫೦೦ ಮೀಟರಿನಷ್ಟು ಕೆಳಗೆ ಇಳಿಯುತ್ತದೆಯಷ್ಟೆ. ಈ ಇಳಿಯುವ ನೀರಿನ ಶಕ್ತಿಯನ್ನುಪಯೋಗಿಸಿಕೊಂಡು ಅಖಂಡ



"ನೀವೇನೂ ಯೋಚನೆ ಮಾಡ್ಬೇಡಿ ಸಾರ್... ನಿಮ್ಹ ಹತ್ತಿರ ನಾನು ಒಂದು ಪೈಸಾನೂ ಕೇಳೋಲ್ಲ."


* ಒಂದು ಎಕರೆ ವಿಸ್ತೀರ್ಣ × ಒಂದು ಅಡಿ ಆಳ = ಒಂದು ಎಕರೆ ಅಡಿ.

ವಿದ್ಯುತ್ ಉತ್ಪಾದನೆಯನ್ನು ಮಾಡಬಹುದು. ದೇಶದ ಎಲ್ಲ ನದಿಗಳೂ ಸದಾ ಕಾಲದಲ್ಲೂ ತುಂಬಿ ಹರಿಯುವುದರಿಂದ ಜಲಸಾರಿಗೆಯನ್ನು ಬೇಕಾದ ಹಾಗೆ ಬೆಳಸಿಕೊಳ್ಳಬಹುದು. ಹಡಗು, ದೋಣಿಗಳ ಉಪಯೋಗ ಮಾಡಿ ಸಾರಿಗೆ ವೆಚ್ಚ ವನ್ನು ಕಮ್ಮಿ ಮಾಡಿಕೊಳ್ಳಬಹುದು.

ಈ ಯೋಜನೆಯ ಸಾಧ್ಯತೆಯ ಬಗ್ಗೆ ಅನುಮಾನ ಗಳು, ಆಕ್ಷೇಪಣೆಗಳು, ಟೀಕೆಗಳು ಹುಟ್ಟದೇ ಇಲ್ಲ. ಹಿಮಾಲಯ ಪರ್ವತ ಶ್ರೇಣಿಯಲ್ಲಿ ೧೦೦೦ ಮೀಟರು ಎತ್ತರದಲ್ಲಿ ಇಂಥಾ ಭಾರಿ ಕಾಲುವೆ ಯನ್ನು ತೋಡುವುದಾದರೂ ಹೇಗೆ? ಪರ್ವತ ಪ್ರದೇಶದ ಸುತ್ತು ಬಳಸುಗಳನ್ನು ಗಣನೆಗೆ ತೆಗೆದು ಕೊಂಡರೆ ಕಾಲುವೆ ಕೇವಲ ೩೮೦೦ ಕಿ.ಮೀ. ಉದ್ದ ದಲ್ಲಿ ಆಗುತ್ತದೆಯೆ? ತೋಡಿದ ಮೇಲೆ ಭೂಪಾತ, ನೀರ್ಗಲ್ಲ ಪ್ರವಾಹಗಳಿಂದ ಅದನ್ನು ಸಂರಕ್ಷಿಸುವುದಾದರೂ ಹೇಗೆ ಎಂಬ ಅನೇಕಾ ನೇಕ ಪ್ರಶ್ನೆಗಳು ಏಳುತ್ತವೆ. ಇವಕ್ಕೆಲ್ಲ ಉತ್ತರ ವನ್ನು ದಸ್ತೂರರು ತಯಾರು ಮಾಡಿಕೊಂಡೇ ಇರುತ್ತಾರೆ.

ಯೋಜನೆಯ ಖರ್ಚು ೧೪,೦೦೦ ಕೋಟಿ ರೂಪಾಯಿ ಎಂದು ಅಂದಾಜು ಮಾಡಲಾಗಿತ್ತು. ಹಣದ ಉಬ್ಬರವನ್ನು ಗಣನೆಗೆ ತೆಗೆದುಕೊಂಡರೆ ಹಾಗೂ ಈ ಯೋಜನೆ ಪೂರ್ಣವಾಗುವುದಕ್ಕೆ ೧೫–೨೦ ವರ್ಷಗಳಾದರೂ ಆಗಬಹುದೆಂಬು ದನ್ನು ಯೋಚಿಸಿದರೆ, ಕೊನೆಗೆ ತಗಲುವ ಖರ್ಚು ಅಂದಾಜಿನ ಹತ್ತರಷ್ಟಾದರೂ ಆಗುವು ದಿಲ್ಲವೇ? ಇಷ್ಟೆಲ್ಲ ಹಣ ಎಲ್ಲಿಂದ ಬರ ಬೇಕು? ಈ ಮಹತ್ತರವಾದ ಕಲ್ಯಾಣಯೋಜ ನೆಗೆ ಹಣ ಒದಗಿಸಬಲ್ಲ ಸಂಸ್ಥೆ ಎಂದರೆ ವಿಶ್ವ ಸಂಸ್ಥೆ ಮತ್ತು ಅದರ ಅಂಗಗಳಾದ ವಿಶ್ವಬ್ಯಾಂಕು (I B R D) ಹಾಗೂ ಆಹಾರ ಮತ್ತು ಕೃಷಿ ಸಂಸ್ಥೆ (FAO) ಇವು ಮೂರೂ ಆಗಲೆ ದಸ್ತೂರರ ಯೋಜನೆಯಲ್ಲಿ ಆಸಕ್ತಿ ತೋರಿಸಿವೆ.

ಪ್ರತಿ ವರ್ಷ ಮಹಾಪೂರ, ಅನಾವೃಷ್ಟಿ ಗಳಿಂದ ದೇಶ ಅನುಭವಿಸುತ್ತಿರುವ ಹಾನಿಯನು ನೋಡಿದರೆ, ಈ ಯೋಜನೆಯ ಖರ್ಚು ಏನೂ ಅಲ್ಲ ಎನ್ನುತ್ತಾರೆ ದಸ್ತೂರರವರು. ಲಾಭದ ಕಡೆ ಸ್ವಲ್ಪ ನೋಡಿ! ಕೃಷಿ ಉತ್ಪನ್ನವನ್ನು ಏಳ ರಷ್ಟು ಹೆಚ್ಚಿಸಬಹುದು; ವಿದ್ಯುತ್ತಿನ ಕೊರತೆ ಯನ್ನು ಪೂರ್ಣವಾಗಿ ನೀಗಬಹುದು; ನಿರು ದ್ಯೋಗವನ್ನು ನಿರ್ಮೂಲಮಾಡಬಹುದು; ಜಲ ಸಾರಿಗೆಯನ್ನು ದೇಶಾದ್ಯಂತ ಹಬ್ಬಿಸಲು ಸಾಧ್ಯ ವಾಗುವುದರಿಂದ ಸಾರಿಗೆ ಖರ್ಚನ್ನು ತೀರ ಕಡಿಮೆ ಮಾಡಿಕೊಳ್ಳಬಹುದು; ಎಲ್ಲಕ್ಕಿಂತ ಹೆಚ್ಚಾಗಿ ಭಾರತ ಭೂಮಿಯ ವಿಶಿಷ್ಟ ಜನ ರೆಲ್ಲರನ್ನು ಒಂದೇ ಹಿತಾಸಕ್ತಿಗಳಿಂದ ಒಗ್ಗೂಡಿ ಸುವ 'ಮಹಾ ಯೋಜನೆ' ಇದು ಎಂದು ದಸ್ತೂ ರವರು ಕಳಕಳಿಯಿಂದ ಹೇಳುತ್ತಾರೆ. ✿



"ಫೋರ್‌ಮನ್ ನಿನ್ನನ್ಯಾಕೆ ಸಿಕ್ಕಾಪಟ್ಟೆ ಬೈದದ್ದು?"

"ಫೋರ್‌ಮನ್ ಅಂದ್ರೆ ನಿಂತು ಕೆಲ್ಸ ನೋಡಿಕೊಳ್ಳೋನು."

"ಹೌದಪ್ಪ, ಸರಿ. ಆದ್ರೆ ನಿನ್ನನ್ನ ಬೈದದ್ಯಾಕೆ ಅಂತ?"

"ಅವ್ನಿಗೆ ನನ್ನ ಮೇಲೆ ಭಾರಿ ಹೊಟ್ಟೆಕಿಚ್ಚು."

"ಯಾಕೆ?"

"ನಾನು ನಿಂತ್ಕೊಂಡು—ಅತಿತ್ಲಾಗಡ್ಡಾಡ್ತಿರೋದು ನೋಡಿ ಉಳಿದವರೆಲ್ಲಾ ನನ್ನನ್ನೇ ಫೋರ್‌ಮನ್ ಅಂತ ತಿಳ್ಕೊಂಡಿದ್ದಕ್ಕೆ."

ಪರಕಾಯ ಪ್ರವೇಶ

ರಾಜಶೇಖರ ಭೂಸನೂರಮಠ

ಪತ್ರಿಕೆಗಳಲ್ಲಿ ಕೆಲವೊಮ್ಮೆ ಚಿತ್ರವಿಚಿತ್ರ ವರ್ತಮಾನಗಳು ಬರುತ್ತವೆ. 'ಎರಡು ತಲೆಗಳ ಶಿಶುವಿನ ಜನನ' 'ಹಾರುವ ತಟ್ಟೆಯ ದರ್ಶನ' ಇತ್ಯಾದಿ, ಇತ್ಯಾದಿ. ನಾಗರಿಕ ಜಗತ್ತಾಗಲೀ, ವಿಜ್ಞಾನಿಗಳಾಗಲೀ ಅಂಥ ಸುದ್ದಿಗಳ ಜಾಡಿನಲ್ಲಿ ನಡೆದು ನಿಗೂಢಕರವಾದ ವಿಶ್ವವೊಂದನ್ನು ಪ್ರವೇಶಿಸುವ ಬದಲು ಅದೇಕೋ ಅನಾಸ್ಥೆ ತಳೆದು ಎಂದಿನ ನೀರಸ ಸಂಶೋಧನೆಗಳನ್ನು ಪುರಸ್ಕರಿಸುತ್ತಾರೆ.

ನಾನೊಬ್ಬ ಪತ್ರಿಕಾ ವರದಿಗಾರ. ಆದರೆ ನಾನು ಅತಿರಂಜಿತ ವರದಿಗಳನ್ನು ಮಾತ್ರ ಕೊಡುತ್ತೇನೆಂದು ಶಂಕಿಸಬೇಡಿರಿ. ಸತ್ಯನಿಷ್ಠ ವರದಿಗಾರನೆಂದು ನನ್ನ ವೃತ್ತಿಬಾಂಧವರು ನನಗೆ ಪುರಸ್ಕಾರದ ಪದವಿಗಳನ್ನು ಸಾಕಷ್ಟು ಕೊಟ್ಟಿದ್ದಾರೆ. ಆದರೆ ನನ್ನ ಹೃದಯದ ಮೂಲೆಯಲ್ಲಿ ಎಲ್ಲೋ ಒಂದು ರಹಸ್ಯಪ್ರಿಯ ಚೈತನ್ಯವಿದೆ, ಬಯಕೆ ಇದೆ. ಅಸಾಧರಣವಾದ ಏನಾದರೂ ಸುದ್ದಿ–ಸಾಹಿತ್ಯ ಸಿಕ್ಕರೆ ಅದು ಜಾಗ್ರುತವಾಗಿ ನನ್ನ ವ್ಯಕ್ತಿತ್ವವನ್ನೇ ಆಕ್ರಮಿಸುತ್ತದೆ. ಆಗ ನಾನು ಪತ್ರಿಕಾ ವರದಿಗಾರನೆಂಬುದನ್ನು ಮರೆತು ಆ ಚೈತನ್ಯದ ಮುಷ್ಟಿಯಲ್ಲಿ ಇನ್ನೊಬ್ಬ ವ್ಯಕ್ತಿಯಾಗುತ್ತೇನೆ; ಪರಕಾಯ ಪ್ರವೇಶ ಮಾಡಿದವರಂತೆ ನನ್ನತನವನ್ನು ತೊರೆದು ಆ ವಿಚಿತ್ರವಿಶ್ವದಲ್ಲಿ ಲೀನನಾಗುತ್ತೇನೆ! ಆ ಆನಂದ, ರೋಮಾಂಚನ, ವಿಶೇಷ ತೃಪ್ತಿ ಸಾಮಾನ್ಯ ದಿನಗಳಲ್ಲಿ ದುರ್ಲಭ.

ಮಿಸ್ ಮಿರಾಂಡಾಳ ಡೈರಿ ಅಕಸ್ಮಾತ್ತಾಗಿ ಸಿಕ್ಕಾಗ ಅಂಥದೊಂದು ಅಪೂರ್ವ ಅನುಭವ ನನ್ನದಾಯಿತು! ನಾನೇ (ಪುರುಷನಾಗಿದ್ದರೂ) ಮಿಸ್ ಮಿರಾಂಡಾಳಾದೆನೆಂದರೂ ಅಡ್ಡಿ ಇಲ್ಲ.

ಆ ಡೈರಿ ಹೇಗೆ ಮತ್ತು ಎಲ್ಲಿ ಸಿಕ್ಕಿತೆಂದು ನೆನೆಸಿದರೆ ಆಶ್ಚರ್ಯವಾಗುತ್ತದೆ. ಹಿಮಾಲಯದಾಚೆ ತಿಬೇಟಿನಲ್ಲಿ ನಾನು ವೇಷ ಮರೆಸಿಕೊಂಡು (ಸಾಧುವಾಗಿ) ರಹಸ್ಯ ಸ್ಫೋಟದ ಕಾರ್ಯಕ ನಡೆಸಿದ್ದೆ. ನಕಾಶೆಯಲ್ಲಿ ಗುರುತಿಸಲಾಗದ ಸರೋವರ! ಗುಲಾಬಿ ರಟ್ಟಿನ ಡೈರಿ ಅನಾಥವಾಗಿ ಬಿದ್ದಿತ್ತು! ಅದನ್ನೆತ್ತಿಕೊಂಡು ಕಣ್ಣಾಡಿಸಿದೆ. 'ಅರೇಬಿಯನ್ ನೈಟ್ಸ್' ಓದಿದಾಗ ಕೂಡ (ಚಿಕ್ಕವನಿದ್ದಾಗ) ನನಗೆ ಅಷ್ಟು ರೋಮಾಂಚನವಾಗಿರಲಿಲ್ಲ! ಡೈರಿಯಲ್ಲಿ ಯಾವುದೇ ಕ್ರಮ ಇದ್ದಂತಿರಲಿಲ್ಲ; ತಾರೀಖುಗಳಿದ್ದವು. ಇಲ್ಲವಿದ್ದರೆ ಎಲ್ಲವೂ ಕಟ್ಟುಕತೆ ಎಂದೇ ತಿಳಿಯುತ್ತಿದ್ದೆನಷ್ಟೆ. ಆ ದಿನಚರಿಯ ಪುಟಗಳನ್ನು ಇಲ್ಲಿ ಪುನರಾವರ್ತಿಸಿದರೆ ನಾನು ಸಂಗ್ರಹಿಸಿದ ಒಟ್ಟು ಮಾಹಿತಿಯು ಛಂದ ನಿಮಗೆ ಅನುಭವಕ್ಕೆ ಬರಲಿಕ್ಕಿಲ್ಲ. ಆದ್ದರಿಂದ ಸ್ವಲ್ಪ ಸ್ವಾತಂತ್ರ್ಯ ವಹಿಸಿ, ಸಂಪಾದಕನ ಮತ್ತು ಟಿಪ್ಪಣಿಕಾರನ ಪಾತ್ರ ವಹಿಸಿ, ಮಿರಾಂಡಾಳ ಜೀವನದ ಡೈರಿಗೆ ಸಂಬಂಧಪಟ್ಟ) ಪುಟಗಳನ್ನು ಸಂಕ್ಷಿಪ್ತವಾಗಿ ನಿಮ್ಮ ಮುಂದಿಟ್ಟಿದ್ದೇನೆ. ನೀವೇ ಓದಿರಿ...

*

"ನಾನು ಏನು ಮಾಡುತ್ತಿದ್ದೇನೆ?" (ಮಿರಾಂಡಾಳ ಡೈರಿಯ ಒಂದು ಪುಟದ ಅವತರಣಿಕೆ. ಅವ

(ದೀಪಾವಳಿ ವಿಶೇಷ ಸಂಚಿಕೆಗೆಂದು ಆಮಂತ್ರಿತ ಲೇಖನ)



ತರಣ ಚಿಹ್ನೆಗಳೆಲ್ಲ ಡೈರಿಯ ಭಾಗಗಳೆಂದು ಗಮನಿಸಬೇಕು. ಕನ್ನಡ ಭಾವಾನುವಾದ ಮತ್ತು ಸಂಪಾದನೆ ನನ್ನದು.) 'ನಾಲ್ಕು ದಶಕ ದಾಟಿದರೂ ಇದೀಗ ಹೊಸ ಜಗತ್ತಿಗೆ ಕಾಲಿಡಲು ತವಕಿಸುತ್ತಿದ್ದೇನಲ್ಲ? ನನ್ನ ಬಾಳೇ ಸಹಾರಾ ಮರುಭೂಮಿ. ಸ್ಕೂಲಿನಲ್ಲಿ ಶಿಕ್ಷಕಿಯಾಗಿ ಸಾವಿರಾರು ಮಕ್ಕಳಿಗೆ ಪಾಠಪರೀಕ್ಷೆ ನಡೆಸಿದ ಯಂತ್ರವಾಗಿದ್ದೆ! ಆದರೆ ಒಂದಾದರೂ ಮಗುವಿನ ಹೃದಯ ನನ್ನದಾಯಿತೇ? ಬ್ರಹ್ಮಚಾರಿಣಿಯಾದ ನಾನು ಮಕ್ಕಳನ್ನು ತಿಳಿದುಕೊಳ್ಳಬಲ್ಲೆನೇ? ನಾನೇಕೆ ಒಂಟಿಯಾದೆ? ನಾನೇ ನಿರ್ಮಿಸಿಕೊಂಡ ಕೋಟೆಯಲ್ಲಿ ನಾನೇಕೆ ಬಂದಿಯಾದೆ? ಇದು ಯಾರ ತಪ್ಪು?...

'ಸಮಾಜದಲ್ಲಿ ನನಗೆ ಗೌರವವಿದೆ, ಅಂತಸ್ತಿದೆ. ಮಿಸ್ ಮಿರಾಂಡಾ ಎಂದರೆ ಆದರ್ಶ ಶಿಕ್ಷಕಿ ಎಂದು ಇಡೀ ನಾಡೇ ಪುರಸ್ಕರಿಸುತ್ತಿದೆ. ನನ್ನ "ನೀತಿಪಾಠ"ಗಳಂತೂ ನೂರಾರು ಶಾಲೆಗಳಲ್ಲಿ ಅನುಕರಿಸಲ್ಪಟ್ಟಿವೆ. ಆದರೂ ಏನೋ ಶೂನ್ಯತೆ ನನ್ನನ್ನಾವರಿಸಿದೆ. ನನಗೆ ನಾನೇ ಮೋಸಗೊಳ್ಳುತ್ತ ಕಾಲಹರಣ ಮಾಡುತ್ತಿದ್ದೇನೆಂಬ ಭಾವನೆ ಬಲಿಯುತ್ತಿದೆ...

'ಈ ಜನ್ಮ ಸಿಕ್ಕುವದು ಒಮ್ಮೆ ಮಾತ್ರ ಎಂದು ಹೇಳುತ್ತಾರಲ್ಲ? ಕೆಲವು ಧರ್ಮಗಳಲ್ಲಿ ಪುನರ್ಜನ್ಮದ ಬಗೆಗೆ ನಂಬಿಕೆ ಇದೆ. ವೈಜ್ಞಾನಿಕವಾಗಿ ಯಾವುದು ಸರಿ? ನಾನು ಕಳೆದುಕೊಂಡ ದಾರಿಯಲ್ಲಿ ಏನೇನಿತ್ತು? ನಾನು ಗೃಹಿಣಿಯಾಗಬಹುದಿತ್ತು! ಕಾವ್ಯದ ಗೊಂಬೆಯಾಗಬಹುದಿತ್ತು ಅಥವಾ ಇಂಗ್ಲಂಡಿನ ರಾಣಿಯೂ ಆಗಬಹು-

ದಿತ್ತು. ಇಲ್ಲವೆ ಐನ್‌ಸ್ಟೀನನಂತೆ ವಿಶ್ವಸ್ವರೂಪ ವನ್ನೇ ಗುರುತಿಸಬಲ್ಲ ದಾರ್ಶನಿಕಳಾಗಬಹು ದಿತ್ತು. ಬದುಕಿನ ಹೊಳೆಯಲ್ಲಿ ಮೀಯಲು ನಿರಾಕರಿಸಿದ ನನಗೆ ವಿರಾಗಿಣಿ ಎಂದು ಯಾರಾ ದರೂ ಹೊಗಳಿದರೆ ಮೈ ಚುಚ್ಚಿದಂತಾಗುತ್ತದೆ! ಅಯ್ಯೋ! ಎಲ್ಲವನ್ನೂ ಕಳೆದುಕೊಂಡು ದರಿದ್ರ ಳಾಗಿದ್ದೇನೆ ನಾನು...

'ಇನ್ನು ಹತ್ತು ವರ್ಷ ದುಡಿದಿದ್ದರೆ ಎಲ್ಲ-ರಂತೆ ನಾನೂ ರಿಟೈರ್ ಆಗಿ ದ್ಯಾಟ್ ಗುಡ್ ಓಲ್ಡ್ ಲೇಡಿ ಮಿಸ್ ಮಿರಾಂಡಾ ಆಗುವವರ ಲ್ಲಿದ್ದೆ! ಈ ಮಧ್ಯೆ ಏನು ಹುಚ್ಚು ಹಿಡಿಯಿತು? ತಿಬೇಟಿನ ಗೃಹಸ್ಥನೊಬ್ಬ ನನಗೆ ಪರಿಚಿತನಾದ. ಹಿಮಾಲಯದ ತಪ್ಪಲಿನ ಪಾರ್ವತ್ಯ ನಾಡದು. ಯೋಗ – ಧ್ಯಾನ – ದರ್ಶನ–ಬುದ್ಧ – ಪರಿಷ್ಕೃತರ ನೆಲವೀಡು. ಏನೋ ಆಕರ್ಷಣೆ! ಆ ಸದ್ಗೃಹಸ್ಥನ ಮುಖಾಂತರ ತಿಬೇಟಿನ ಮಿಶನ್ನೊಂದರ ಸದಸ್ಯೆ-ಯಾದೆ. ದೇವರು– ವೇದಾಂತ– ಅಧ್ಯಾತ್ಮ ಮುಂತಾದವುಗಳೆಡೆಗೆ ಮನಸ್ಸು ಹರಿಯತೊಡಗು ವುದು ಮುಪ್ಪಿನ ಲಕ್ಷಣವಂತೆ. ನಾನೀಗಾಗಲೇ ಯೌವನ ಕಳೆದುಕೊಂಡಿದ್ದೇನೆಯೇ ? ಹಸಿರು ಮಾಗಿದೆಯೇ?...

'ನನ್ನ ಅಂತರಾತ್ಮ ಬೇರೆಯೇ ಹೇಳುತ್ತಿದೆ! ನನಗೆ ನಿಜವಾಗಿ ಪುನರ್ಜನ್ಮ ಬೇಕಾಗಿದೆ! ಮತ್ತೆ ಹುಡುಗಿಯಾಗಿ ನಲಿಯಬೇಕಾಗಿದೆ ! ಯುವತಿ-ಯಾಗಿ ಜಗತ್ತಿನ ಸುಂದರಾಂಗರನ್ನು ಅನುಭವಿಸ ಬೇಕಾಗಿದೆ!! ಮುದ್ದು ಮಕ್ಕಳನ್ನು ಹೆತ್ತು ಮಹಾ ಮಾತೆಯಾಗಬೇಕಾಗಿದೆ! ಇದನ್ನೆಲ್ಲ ತಿಬೆಟ್ ಕೊಡಬಲ್ಲುದೇ? ಅಲ್ಲಿಯ ಲಾಮಾಗಳು ನನಗೆ ಶಾಂತಿ ಕೊಡಬಲ್ಲರೇ? ಏನಿದು ಹುಚ್ಚುತನ...?

'ನೌಕರಿಗೆ ಏಕಾಏಕಿ ರಾಜೀನಾಮೆ ಕೊಟ್ಟು ತಾಯ್ನಾಡಿಗೂ ಕ್ರಿಶ್ಚಿನ್ ಧರ್ಮಕ್ಕೂ ಶರಣು ಹೇಳಿ ಈಗ ನಾನು ತಿಬೇಟಿಗೆ ಹೊರಟಿದ್ದೇನೆ, ಹೊಸ ಬಾಳನ್ನು ಅರಸಿಕೊಂಡು. ಹುಚ್ಚು ಹಿಡಿಸಿ ಕೊಳ್ಳುವದಕ್ಕಿಂತ, ಆತ್ಮಹತ್ಯೆಗಿಂತ ಇದು ಮೇಲಲ್ಲವೇ?...

*

'ತಿಬೇಟಿನಲ್ಲಿ ಆರು ತಿಂಗಳೇ ಉರುಳಿವೆ. ಆದರೆ ಇಲ್ಲಿ ಕಾಲ–ಸ್ಥಳಗಳಿಗೆ ಅರ್ಥವೇ ಇದ್ದಂತಿ-ಲ್ಲ. ಎಲ್ಲವೂ ಸ್ಥಾಯಿ. ಇಂಗ್ಲಂಡಿನಲ್ಲಿದ್ದ ಎದೆ-ಗುದಿ ಈಗಿಲ್ಲ. ಆದರೆ ನಾನು ಅರಸಿ ಬಂದದ್ದು ಶಾಂತಿಯನ್ನಲ್ಲ. ಶಿಕ್ಷಕಿಯಾಗಿ ನಾನು ಸ್ವಸ್ಥ-ಳಾಗಿಯೇ ಇದ್ದೆನಲ್ಲ ? ನಾನು ಸೇರಿಕೊಂಡ "ಮಿಶನ್" ತೀವ್ರ ನಿರಾಶೆಯನ್ನುಂಟು ಮಾಡಿದೆ! ಅದರ ಸದಸ್ಯತ್ವ ಕೂಡ ಬಿಟ್ಟು ಈಗ ನನ್ನನ್ನೇ ನಾನು ಶೋಧಿಸಿಕೊಳ್ಳುತ್ತಿದ್ದೇನೆ...

'ಇಲ್ಲಿಯ ಪರಿಸರವೇ ಹಾಗೆ. ರಾಗದ್ವೇಷ ಗಳಿಲ್ಲ, ವೇಗಾವೇಗಗಳಿಲ್ಲ. ನಾನು ಇಲ್ಲಿ ಹಿಪ್ಪಿ ಯಾಗಿ ಓಡಾಡಿಕೊಂಡಿದ್ದರೂ ಯಾರೂ ನನ್ನನ್ನು ಗಮನಿಸುವದಿಲ್ಲ. ಇದೂ ಒಂದು ತರಹದ ಸಾವಿನ ರೂಪವಿರಬಹುದೇ?...

'ಇಂದು ನನಗೆ ಒಬ್ಬ ಯುವಕನ ಪರಿಚಯ ವಾಯಿತು. ಆತ ಹುಚ್ಚನಂತೆ ಮಾತನಾಡುತ್ತಾನೆ. ತನ್ನ ದೂರದ ಹಳ್ಳಿಗೆ ಬರಲು ಆಹ್ವಾನಿಸಿದ್ದಾನೆ. ಅಲ್ಲಿಗೆ ಹೋಗಲೇ? ಆದರೆ ಆತ ಹುಚ್ಚನಲ್ಲವೆಂದು ಹೇಗೆ ನಂಬಲಿ? ತನ್ನ ವಯಸ್ಸು ನಾಲ್ಕು ನೂರು ವರ್ಷಗಳಿಗಿಂತ ಹೆಚ್ಚೆಂದು ಆತ ಸಮರ್ಥಿಸಿಕೊಳ್ಳು ತ್ತಾನೆ, ಆತನ ಹಳ್ಳಿಯಲ್ಲಿ ಮುದುಕರಾದವರು ಕ್ರಿಸ್ತಪೂರ್ವದವರಂತೆ! ಬುದ್ಧನನ್ನು ನೋಡಿದ ಒಬ್ಬಿಬ್ಬರು ಕೂಡ ಇದ್ದಾರಂತೆ! ಇದನ್ನೆಲ್ಲ ನಂಬಿದರೆ ನಾನು ಇತಿಹಾಸಕಾಲದಲ್ಲಿ ಕಾಲಿಡುತ್ತಿದ್ದೇನೆನಿ-ಸುತ್ತಿದೆ!...

'ಹಿಮಾಲಯದ ಅತ್ಯಂತ ದುರ್ಗಮ ಪ್ರದೇ-ಶದಲ್ಲಿದೆ ಆ ಹಳ್ಳಿ. ಹಳ್ಳಿಯೇನು? ಶಿಬಿರವೆಂದರೇ ಸರಿ! ಏಕೆಂದರೆ ಹಳ್ಳಿಯಲ್ಲಿರಬೇಕಾದ ದೈನಂದಿನ ಕಾರ್ಯಕ್ರಮಗಳಾವುವೂ ಇಲ್ಲಿ ಕಾಣುತ್ತಿಲ್ಲ! ಜನ ಬೇಸಾಯ ಮಾಡುವದಿಲ್ಲ, ಸಾಂಘಿಕ ಜೀವನವಿಲ್ಲ,ಪತಿ ಪತ್ನಿಪುತ್ರಪೌತ್ರರೆಂಬ ಕೌಟುಂಬಿಕ ಜಂಜಾಟಗಳಿಲ್ಲ! ಹಿಮಾಲಯದ ಹವೆಯೇ ಇವ ರಿಗೆ ಸಂಜೀವಿನಿಯೋ ಏನೋ ಕಾಣೆ! ಹೈಬ ರ್ನೇಟೆಡ್ (ಸುಷುಪ್ತ) ಕುಲವಿದು!...

'ನಾನೂ ಶತಮಾನ ಬದುಕಬೇಕು! ಆಧುನಿಕ ನಾಗರಿಕತೆಯ ಗಾಳಿಯೇ ಬಡಿಯದ ಈ ಶಿಬಿರದೊಳಗೆ ನಾನೂ ತಪಸ್ಸು ಮಾಡಬೇಕು. ಆದರೆ ಗುರುವೆಲ್ಲಿ ? ಇವರೆಲ್ಲರು ಅಮರರಿದ್ದದ್ದೇ ನಿಜವಾಗಿದ್ದರೆ ನಾನೂ ಅವರಂತೆ ಅಮರಳಾಗಬೇಕು. ಬದುಕಿನ ಶೂನ್ಯತೆ ತುಂಬುವವರೆಗೆ ಬದುಕುಳಿ

[illegible]...

'ನನಗೆ ಆಶ್ಚರ್ಯಪಡಿಸುವ ಸಂಗತಿ ಎಂದರೆ ಇಲ್ಲಿಯವರ ನಿರ್ಲಿಪ್ತತೆ, ಜಾಡ್ಯ. ನಿಷ್ಕ್ರಿಯತೆ. ಹಾಗೆ ನೋಡುವರೆ ಪ್ರಾಣಿಗಳಿಗೂ ಇವರಿಗೂ ಏನೂ ಭೇದವೇ ತೋರದು! ಈ ಸ್ಥಿತಪ್ರಜ್ಞರಲ್ಲಿ ಯಾವ ಚೈತನ್ಯವಿದೆ ? ಶತ ಶತಮಾನ ಬೇಸರವಿಲ್ಲದೆ ಬದುಕಿರಲು ಕಾರಣವೇನಿದೆ?...

'ಇಂದು ನನಗೆ ಒಂದು ಸುಳಿವು ಸಿಕ್ಕಿತು. ಒಬ್ಬ ಅಪರಿಚಿತ ಲಾಮಾ ನನ್ನನ್ನು ನೋಡಿ ಮುಗುಳ್ನಕ್ಕ. "ಮಿಸ್ ಮಿರಾಂಡಾ. ನಮ್ಮಲ್ಲಿ ವಾಸಿಸುವ ಯೋಗ್ಯತೆ ನಿನಗಿಲ್ಲ, ಮರಳಿ ಇಂಗ್ಲಂಡಿಗೆ ಹೋಗು." ಎಂದು ಇಂಗ್ಲೀಷಿನಲ್ಲಿ ಆದೇಶಿಸಿದ! ನಾನು ಅವನಿಗೆ ನಮಸ್ಕಾರ ಮಾಡಿ, "ನೀವು ಇಂಗ್ಲೀಷ್ ಯಾವಾಗ ಕಲಿತಿರಿ ?" ಎಂದು ಕೇಳಿದೆ. "ಇಲ್ಲ ಮಗೂ, ನನಗೆ ಇಂಗ್ಲೀಷ್ ಬರುವುದೇ ಇಲ್ಲ. ನಮಗೆ ಯಾವ ಭಾಷೆಯೂ ಬೇಡ" ಎಂದ! ನನಗೆ ಇದು ಒಗಟಾಯಿತು...

'ಆತನನ್ನೇ ನನ್ನ ಗುರುವಾಗಿ ಸ್ವೀಕರಿಸಲು ನಿರ್ಧರಿಸಿದೆ. ಆದರೆ ಆತ ಒಪ್ಪಬೇಕಲ್ಲ?...

'ಒಂದು ಧರ್ಮಪಂಥವಿದೆಯಂತೆ. ನನ್ನ ಹೊಸ ಗುರು ಸರಾಗವಾಗಿ ಇಂಗ್ಲೀಷ್ ಮಾತನಾಡುತ್ತಾರೆ. ಅವರೇ ಹೇಳಿದ ಸಂಗತಿ ಇದು. ಬೈಬಲ್ಲಿನ ಕಳೆದುಕೊಂಡ ಕುರಿಮರಿಯಂತೆ ನಾನು ಇಲ್ಲಿ ಬಂದಿದ್ದೇನೆ. ಕ್ರಿಶ್ಚಿಯನ್ ಧರ್ಮದ ಮಾನವತಾ ತತ್ತ್ವಗಳಿಗೂ ಈ ಪಂಥದವರ ನಡವಳಿಕೆಗೂ ಸಾಮ್ಯವಿದೆ. ಆದರೆ ಯಾವುದೋ ದಿವ್ಯರಹಸ್ಯದ ಅಥವಾ ದೀರ್ಘಾಯುಷ್ಯದ ರಹಸ್ಯದ ರಾಸಾಯನಿಕ ಸೂತ್ರ ಇವರಲ್ಲಿದೆ ಎಂದು ಬಲವಾಗಿ ನಂಬುತ್ತೇನೆ. ಟೆಲಿಪತಿ (ದೂರ ಮನಃ ಸ್ಪರ್ಶ) ಮತ್ತು ಅತೀಂದ್ರಿಯ ಜ್ಞಾನ (ESP) ಇಲ್ಲಿರಬಹುದೆಂದು ಸಂಶಯ ನನಗೆ. ಹೇಗಾದರೂ ಮಾಡಿ ಈ ಪಂಥ ಸೇರಿ ಗೆಲ್ಲಲು ನಿರ್ಧರಿಸಿದ್ದೇನೆ...

*

'ನನ್ನ "ಗುರು" ತಮ್ಮ ಗುರುಗಳ ಹತ್ತಿರ ನನ್ನ ವಿಷಯ ತಿಳಿಸಿದ್ದಾರೆ. ಅವರಿಗೆ ನನ್ನ ಮೇಲೆ ಕರುಣೆ ಮತ್ತು ವಿಶ್ವಾಸ. ಆದರೆ ಹೆಣ್ಣಾದ–ಅದೂ ಬೇರೊಂದು ಕುಲದವಳಾದ–ನನ್ನನ್ನು ತಮ್ಮ ಪಂಥಕ್ಕೆ ಸೇರಿಸಲು ಹಿಮಾಲಯದಷ್ಟು ತೊಂದರೆಗಳಿವೆಯಂತೆ. ಅದಕ್ಕೆ ಜನ್ಮ ಜನ್ಮಾಂತರಗಳ ಸಂಸ್ಕಾರ ಬೇಕಂತೆ. ಆದರೂ ನಾನು ಛಲ ಬಿಡೆ. ಎಲ್ಲ ನಿರ್ಬಂಧನೆಗಳಿಗೂ ತಯಾರು. ಏನು ಬೇಕಾದರೂ ಕಷ್ಟ ಸೋಸಬಲ್ಲೆ. ನನ್ನ ಗುರುಗಳು ತಮ್ಮಿಂದಾದ ಪ್ರಯತ್ನ ಮಾಡುವುದಾಗಿ ಭರವಸೆ ಕೊಟ್ಟಿದ್ದಾರೆ...

'ನೀರಿಗೆ ಬಿದ್ದ ಮೇಲೆ ಈಸಲೇಬೇಕು. ಗುರುಗಳ ಧರ್ಮಪಂಥ ಸೇರುವ ಪೂರ್ವಸಿದ್ಧತೆ ಇಂದು ಪ್ರಾರಂಭವಾಯಿತು. ಮೊದಲು ದೈಹಿಕ ಪರೀಕ್ಷೆ, ನಂತರ ಮಾನಸಿಕ ಮತ್ತು ಕೊನೆಗೆ ಆತ್ಮದ ಪರೀಕ್ಷೆಯಂತೆ. ಇಂದಿನಿಂದ ಒಂದೇ ಹೊತ್ತು ಮಿತಾಹಾರ-ಅದೂ ಬೇಯಿಸದ್ದು. ಮಾಂಸಾಹಾರವಂತೂ ಕನಸುಮನಸಿನಲ್ಲೂ ವರ್ಜ್ಯ. ಗಟ್ಟಿ ನೆಲದ ಮೇಲೆ ಹಾಸಿಗೆ ಇಲ್ಲದೆ ಮಲಗಬೇಕು– ಅದೂ ದಿನಕ್ಕೆ ಬರಿ ನಾಲ್ಕು ತಾಸು ಮಾತ್ರ. ಉಳಿದ ವೇಳೆ "ಓಂ ಧರ್ಮಂ ಶರಣಂ ಗಚ್ಛಾಮಿ" ಎಂದು ಉಚ್ಚರಿಸುತ್ತ ಪದ್ಮಾಸೀನಳಾಗಿ ಕೂತಿರಬೇಕಂತೆ!...

*

'ದೈಹಿಕ ಸಿದ್ಧತೆ ಪ್ರಾರಂಭವಾಗಿ ಒಂದು ತಿಂಗಳೇ ಆಯಿತಲ್ಲ ? ಈ 'ದಿನಚರಿಯನ್ನು' ಮಾತ್ರ ಬರೆಯಲು ನಿರ್ಬಂಧವಿಲ್ಲ. ಏಕಾಂತ ವಾಸ. ಇನ್ನೂ ಹೇಗೆ ಬದುಕಿರುವೆನೋ ನನಗೇ ಅಚ್ಚರಿ. ಈಗ ಮನಸ್ಸಿನ ಚಂಚಲತೆ ಕೂಡ ಎಷ್ಟೋ ಕಡಿಮೆಯಾದಂತಿದೆ. ಗುರುಗಳು ಮತ್ತು ಧರ್ಮಪಂಥದವರು ನನ್ನನ್ನು ಪರೀಕ್ಷೆಗೊದು ಕೆಣಕುತ್ತಿದ್ದಾರೆಂದು ಅಂದುಕೊಂಡಿದ್ದೇನೆ. ಇಲ್ಲದಿದ್ದರೆ ಎಲ್ಲರೊಂದಿಗೆ ನಗ್ನಳಾಗಿ ನಾನು ಅಡ್ಡಾಡಲು ಅದೇಕೆ ಹೇಳುತ್ತಿದ್ದರು ? ನಮ್ಮ ಪಾಶ್ಚಿಮಾತ್ಯ ನಾಡಿನಲ್ಲಾಗಿದ್ದರೆ ಇದೆಲ್ಲ ಅಶ್ಲೀಲವೆನ್ನುತ್ತಿದ್ದರು ! ಇಲ್ಲಿ ನಿಜವಾಗಿಯೂ ನಾವೆಲ್ಲ ನಿಸರ್ಗದೊಂದಿಗೆ ಒಂದಾಗಿ ಪ್ರಾಣಿಗಳಷ್ಟು ಸರಳ ಜೀವನ ಸಾಗಿಸಿದ್ದೇವೆ. ನನಗೆ ಮತ್ತೆ ತಾರುಣ್ಯ ಬಂದಂತೆನಿಸುತ್ತಿದೆ. ಬಹುಶಃ ನಾನು ನೂರಿನ್ನೂರು ವರ್ಷ ಹೀಗೇ ಬದುಕಬಲ್ಲೆ–ನೆಂಬ ಆತ್ಮವಿಶ್ವಾಸ ಚಿಮ್ಮುತ್ತಿದೆ.

'ಇನ್ನು ನಾಲ್ಕಾರು ದಿನ ಬರಿ ನೀರು ಮಾತ್ರ

ನನ್ನ ಆಹಾರ. ಇಡೀ ದಿನವೆಲ್ಲ ಒಂಟಿಗಾಲ ಮೇಲೆ ನಿಲ್ಲಿಸುತ್ತಾರೆ. ಒಮ್ಮೊಮ್ಮೆ ಇದೆಲ್ಲ ನಾನೇ ನಿರ್ಮಿಸಿಕೊಂಡ ನರಕವೆನಿಸುತ್ತದೆ. ಆದರೆ ಗುರುಗಳ ಶಾಂತಮುದ್ರೆ ನೋಡಿದಾಗ ಏನೋ ಮೋಡಿಗೊಳಗಾಗುತ್ತೇನೆ...

'ಇಂಗ್ಲಂಡಿನ ಮಹಿಳೆಯೊಬ್ಬಳಿಗೆ ಚಾಟಿ ಏಟು ಎಂದರೆ ಆತ್ಮಾಭಿಮಾನಕ್ಕೆ ಪೆಟ್ಟು—ಅದೂ ಈ ಬೇರೆ ಕುಲದವರಿಂದ. ಆದರೀಗ ಅದನ್ನೂ ಮೌನವಾಗಿ ಸಹಿಸಿಕೊಂಡಿದ್ದೇನೆ. ಹೊಟ್ಟೆ ಬೆನ್ನು ಕೈಕಾಲೆನ್ನದೆ ರಪರಪ ಬೆತ್ತದೇಟು ಕೊಡುತ್ತಾರೆ. ನಾನು ತುಟಿ ಕಚ್ಚಿಕೊಂಡು ಕಣ್ಣೀರು ತುಳುಕಿಸದೆ ನಿಂತಿರಬೇಕು. ಮುಳ್ಳು—ಗಳ ಮೇಲೆ ಬರಿಗಾಲ ಮೇಲೆ ಓಡಾಡಬೇಕು. ನಸುಕಿನಲ್ಲಿ ತಾಸುಗಟ್ಟಲೆ ಹಿಮದಷ್ಟು ತಂಪಾದ ನೀರಿನಲ್ಲಿ ಮುಳುಗು ಹಾಕಬೇಕು. ...

'ಇಂದು ಶುಭ ದಿನ. ನಾನು ದೈಹಿಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದೇನೆ. ಇನ್ನು ಯೋಗಾಸನ ಪ್ರಾರಂಭಿಸಬೇಕಂತೆ. ನೀರ ಮೇಲೆ ನಡೆಯಲು, ನೆಲ ಬಿಟ್ಟು ಮೇಲೇಳಲು, ಇನ್ನೂ ಏನೇನೋ ಸಾಧ್ಯ. ಆದರೆ ಇಂಥ ಸರ್ಕಸ್ಸಿಗಾಗಿ ನಾನಿಲ್ಲಿ ಬಂದಿಲ್ಲವೆಂದು ನನ್ನ ಅಂತರಾತ್ಮ ಒಮ್ಮೊಮ್ಮೆ ಪ್ರತಿಭಟಿಸುತ್ತದೆ....

'ಈಗ ನನ್ನ ಮನಸ್ಸಿನ ಪರೀಕ್ಷೆಯಾಗಲಿದೆ. ಏನೇನೋ ಪ್ರಶ್ನೆಗಳು. ಆಶ್ಚರ್ಯವೆಂದರೆ ಹೇಗೋ ಉತ್ತರ ಹೊಳೆಯುತ್ತವೆ...

■

'ಎಂದೂ ಓದಿರದ ಗ್ರಂಥಗಳು ಈಗ ನನಗೆ ಬಾಯಿಪಾಠವಾಗಿವೆ. ಯೋಗ ಶಿಕ್ಷಣ ಅದ್ಭುತವಾಗಿದೆ! ನನ್ನ ಮನಸ್ಚಕ್ಷುವಿನ ಮುಂದೆ ಅಕಲ್ಪಿತ ದೃಶ್ಯಗಳು ಮೂಡುತ್ತಿರುತ್ತವೆ. ನನ್ನ ಮನಸ್ಸು ದೇಹವನ್ನು ಬಿಟ್ಟು ಎಲ್ಲೆಲ್ಲೋ ಅಲೆಯುತ್ತಿದ್ದಂತೆ ಭಾಸವಾಗುತ್ತಿದೆ...

'ಮನಸ್ಸಿನ ಶಿಕ್ಷಣ ದೈಹಿಕ ಶಿಕ್ಷಣದಷ್ಟು ಕಠಿಣವಾಗಿಲ್ಲ. ಮತ್ತು ಕಠೋರವೂ ಆಗಿಲ್ಲ. ಬಹುಶಃ ಈವರೆಗಿನ ನನ್ನ ಸಹಿಷ್ಣುತೆಯೇ ಈ ಅನಿಸಿಕೆಗೆ ಕಾರಣವಾಗಿರಬಹುದು. ಆದರೂ ಇದು ಕೂಡ ಅಗ್ನಿಪರೀಕ್ಷೆಯೇ!

'ನನ್ನನ್ನು ಸಿಟ್ಟಿಗೆಬ್ಬಿಸಲು ಏನೆಲ್ಲ ಮಾಡುತ್ತಾರೆ, ಏನೆಲ್ಲ ನುಡಿಯುತ್ತಾರೆ! ಆದರೂ ನಾನು ಶಾಂತಳಾಗಿದ್ದೇನೆ. ಅಹಂಭಾವವನ್ನು ಅದೆಷ್ಟು ಚುಚ್ಚುತ್ತಾರೆ! ಕಾಮುವನ್ನು ಕೆರಳಿಸುತ್ತಾರೆ! ಪಶುಗಳಂತೆ ಬಲಾತ್ಕರಿಸಲು ನೋಡಿದರು. ನಾನು ಸುಮ್ಮನಿದ್ದೆ. ಎಲ್ಲವೂ ನಾಟಕ ನನ್ನ ಪರೀಕ್ಷೆಗೆ—ಎಂದು ತಿಳಿದಿಲ್ಲವೇ ನನಗೆ?

'ಆಶ್ಚರ್ಯವೆಂದರೆ ನಾನು ಎಂದೂ ಕೇಳಿ ಕೂಡ ಅರಿತಿರದ ಪಾಲಿ ಭಾಷೆಯಲ್ಲಿ ವಿದ್ವತ್ಪೂರ್ಣವಾಗಿ ಮಾತಾಡುತ್ತಿದ್ದೇನೆ! ಇದೇ ರೀತಿ ಜಗತ್ತಿನ ಎಷ್ಟೋ ಪ್ರಾಚೀನ ಭಾಷೆಗಳ ಓದು ಬರಹ ತಂತಾನೆ ಬರುತ್ತಿದೆ.

'ಜಗತ್ತಿನಲ್ಲಿದ್ದ ಎಲ್ಲ ಗ್ರಂಥಾಲಯಗಳ ಪುಸ್ತಕಗಳಲ್ಲಿದ್ದ ಎಲ್ಲ ವಿಷಯವೂ ಅದು ಹೇಗೋ ನನಗೆ ತಿಳಿದುಬಿಟ್ಟಿದೆ! ಈ ಅನಿಸಿಕೆಗೆ ವೈಜ್ಞಾನಿಕ ತಳಹದಿಯೂ ಇದೆ...

■

'ಈಗ ನಾನೊಬ್ಬಳು ಹುಚ್ಚಿಯೆಂದರೂ ಸರಿ. ಜ್ಞಾನ—ಅಜ್ಞಾನದ ನಡುವೆ, ಕತ್ತಲು ಬೆಳಕುಗಳ ನಡುವೆ, ನೀತಿ—ಅನೀತಿಗಳ ನಡುವೆ ಏನು ಭೇದವೂ ತೋರುತ್ತಿಲ್ಲ. ಈಗ ಕೊನೆಯ ಹಂತದ ಪರೀಕ್ಷೆಗೆ ಸಿದ್ಧಳಾಗಿದ್ದೇನೆಂದು ಗುರುಗಳು ಹೇಳಿದ್ದಾರೆ. ಹೇಳುವದೇನು ಬಂತು? ಅವರ ಮುಖ ನೋಡಿದರೆ ಅವರ ಮನಸ್ಸಿನ ಮಾತು ನೇರವಾಗಿ ನನ್ನನ್ನು ತಲುಪುತ್ತದೆ...

'"ನಿನಗೆ ಶಾಂತಿ ಬೇಕೋ? ಜಗತ್ತು ಬೇಕೋ?" ಎಂದು ಧರ್ಮಪಂಥದವರು ಪ್ರಶ್ನಿಸಿದ್ದಾರೆ! ನಾನೊಂದು ಜೀವಮಾನ ವ್ಯರ್ಥ ಕಳೆದಿರುವೆನಲ್ಲ? ಜಗತ್ತೇ ಬೇಕು—ಎನ್ನುವ ಅಭಿಪ್ರಾಯ ಕೊಡುತ್ತೇನೆ. "ಹಾಗಿದ್ದರೆ ನಮ್ಮ ಧರ್ಮ ಪಂಥದಲ್ಲಿ ನೀನು ಸೋಲಲೂ ಸಿದ್ಧಳಿರಬೇಕು." ಎನ್ನುತ್ತಾರೆ. ನಾನು ದುಡುಕಿ "ಹೂಂ" ಎನ್ನುತ್ತೇನೆ...

'ನನ್ನ ವ್ಯಾವಹಾರಿಕ ಬುದ್ಧಿ ಇನ್ನೂ ಜಾಗೃತವೇ ಆಗಿದೆ. ಇಲ್ಲಿನ ನನ್ನ ಅನುಭವವನ್ನೆಲ್ಲ, ಶಕ್ತಿಯನ್ನೆಲ್ಲ ಜಗತ್ತಿನ ಮುಂದೆ ಏಕೆ ಪ್ರಕಟಿಸಬಾರದೆಂದು ಪ್ರಶ್ನಿಸಿಕೊಳ್ಳುತ್ತೇನೆ. ಟಿಬೇಟಿನ ಈ ಮೂಲೆಯಲ್ಲಿದ್ದ ಜ್ಞಾನಧಾರೆ—ವಿಶೇಷ ಆತ್ಮಶಕ್ತಿ ಜಗತ್ತಿಗೆ ಏಕೆ ಸಿಗಬಾರದೆಂದು ನನ್ನ

ವಾದ...

'ಜಗತ್ತಿನ ಕರ್ಮ! ವಿಶ್ವನಿಯಾಮಕನನ್ನು ಮೀರಿ ಜಗತ್ತಿಗೆ ಸುಖ ದುಃಖ ಉಣಿಸಲು ನೀನೆಷ್ಟರವಳು? ಎಂದು ಗುರು ಎಚ್ಚರಿಸಿದ್ದಾರೆ. ಆದರೆ ನಾನು ಸೃಷ್ಟಿದೇವಿಯ ಅವತಾರವಾಗಲಿದ್ದೇನೆ. ನನ್ನ ಸ್ತನಪಾನದಿಂದಲೇ ಜೀವರಾಶಿ ಬದುಕಲಿ ಎಂದು ಹಾರೈಸುತ್ತೇನೆ...

'ಇದೇ ನನ್ನ ಕೊನೆಯ ಪರೀಕ್ಷೆ! ಆಧ್ಯಾತ್ಮಿಕ ಅಥವಾ spiritual ಪರೀಕ್ಷೆ! ಇದರಲ್ಲಿ ದಾಟಿದರೆ ನಾನು ಕೂಡ ದೀರ್ಘಾಯುಷಿ-ಯಾಗುವೆನಂತೆ. ಇಲ್ಲಿಯ ರಹಸ್ಯ ಬೀಜ ಕೈಗೆಟುಕುವದಂತೆ...

*

'ನನ್ನ ಈಗಿನ ಅನುಭವಗಳನ್ನು ತಿಳಿಸಲು ಯಾವ ಭಾಷೆಗೂ ಶಕ್ತಿ ಸಾಲದು. ಈ ದಿನಚರಿ ಬರೆದವಳು ನಾನೇ : ಆದರೂ ವಸ್ತುಸ್ಥಿತಿ ಬರಹದಲ್ಲಿಡಲು ಬಾರದು!...

'ನಾನೀಗ ದೂರ ಮನಃಸ್ಪರ್ಶಕಳಷ್ಟೇ? ಅಲ್ಲದೆ ತ್ರಿಕಾಲಸಂತೆ ಲೋಕಗಳ ಅನುಭವವೇ ನನ-ಗಾಗುತ್ತಿದೆ. ಹಾರುವ ಹಕ್ಕಿಯೊಂದನ್ನು ನೋಡಿ-ದೆನೆಂದರೆ, ನಾನೇ ಆ ಹಕ್ಕಿಯಾಗಿ ಹಾರಿದ ಸಂಪೂರ್ಣ ಜೀವಂತ ಅನುಭವ ನನ್ನದಾಗುತ್ತದೆ! ಹಳೆಯ ನೆನಪು ಬಂದಿತೆನ್ನಿರಿ, ಆ ಕ್ಷಣವೇ ನಾನು ಅಲ್ಲಿ ಹೋಗಿ ಅಲ್ಲಿಯ ಸಂಪೂರ್ಣ ಅನುಭವದ ಸಂಕೀರ್ಣತೆ ನನ್ನದಾಗುತ್ತದೆ!...

'ಸ್ವಾರಸ್ಯದ ವಿಷಯ—ಅದೇ ನನ್ನ ಕಾಲು ಜಾರುಪಿಕೆಗೆ ಕಾರಣವಾಗಿದ್ದುದೂ ಹೌದು—ನನ್ನ ಯೌವನದ ದಿನಗಳೂ ಬಯಕೆಯ ನೆನಹುಗಳು. ಖೋಡಿ ಮನಸ್ಸು ಮತ್ತೂ ಮತ್ತೂ ಆ ಆಳಕ್ಕಿಳಿದು ಇಣುಕಿ ನೋಡುತ್ತಿದೆ. ನನ್ನ ತಪಸ್ಸಿನ ಸಾಧನೆಯ ಫಲವನ್ನೆಲ್ಲ ಈ . ಚಪಲಕ್ಕಾಗಿ ಎಲ್ಲಿ ವ್ಯಯಿಸುತ್ತೇನೋ ಎಂಬ ಭಯಭ್ರಾಂತಿ ಬೇರೆ!...

'ಆದರೂ—ವಿವರವಾಗಿ ಬರೆಯಲೇ? ಜಾರ್ಜ್ ನನ್ನ ಗೆಳತಿ ಲೂಸಿಯ ಕಜಿನ್. ನಾನಿನ್ನೂ ಪದವಿಗಾಗಿ ಓದುತ್ತಿದ್ದ ಕಾಲ. ನನಗೆ ಹೇಳಿಕೊಳ್ಳುವ ರೂಪವಿರಲಿಲ್ಲ (ಈಗಲೂ ಇಲ್ಲ.) ಆದರೆ ಯೌವನದ ಕಾಮನೆಗಳಿರುತ್ತವಲ್ಲ? ಲೂಸಿ ಅದ್ಭುತ ಸುಂದರಿ, ಹೆಣ್ಣುಗಳು ಕೂಡ ಆಕೆಯನ್ನು ಮೋಹಿಸಬೇಕು! ಜಾರ್ಜ್ ನನ್ನವನಾಗಬೇಕೆಂಬ ಒಂದೇ ಹಂಬಲ ನನಗಾಗ. ಅದು ಸಾಧಿಸದ್ದರಿಂದ ಬ್ರಹ್ಮಚಾರಿಣಿಯಾದೆನಷ್ಟೆ? ವಿರಕ್ತಿ ಬೆಳೆಯಿತಷ್ಟೇ? ಬಾಳು ಶೂನ್ಯವಾಯಿತಷ್ಟೇ?...

'ನಾನು ಪಡೆದ ಹೊಸ ಶಕ್ತಿಯಿಂದ ಕಾಲದಲ್ಲಿ ಪಯಣಿಸಿದೆ. ಜಾರ್ಜನ ಪ್ರೇಯಸಿಯಾದ—ಮತ್ತು ಮುಂದೆ ಮಡದಿಯಾದ—ಲೂಸಿಯ ಮನಸ್ಸನ್ನು ಹೊಕ್ಕೆ! ಎಂಥ ದಿವ್ಯ ಅನುಭವ! ಕಳೆದ ಮುತ್ತು ನನಗೆ ಸಿಕ್ಕವು! ಪ್ರೇಮದ ನಿಧಿ ನನ್ನದಾಯಿತು.

ನಾನೇ ಲೂಸಿಯಾದೆ, ಚೆಲುವೆಯಾದೆ. ಚಲನಚಿತ್ರಗಳಲ್ಲಿಯಂತೆ ಕಾಲ ಮತ್ತೆ ಹಿಂದೆ ಸರಿದಿತ್ತು. ತಿಬೇಟನ್ನೂ, ಧರ್ಮಪಂಥವನ್ನೂ ಮರೆತೆ! ನನ್ನೆದುರಿಗೆ, ಮಿರಾಂಡಾ—ನಾನೇ ಅಲ್ಲವೇ?—ನಿಂತಿದ್ದಳು. ಜಾರ್ಜ್ ಮಿರಾಂಡಾಳನ್ನು ತಿರಸ್ಕರಿಸಿ ಲೂಸಿ ಆಗಿದ್ದ ನನ್ನನ್ನು ಮೆಚ್ಚಿದ.

'ಲೂಸಿಯ ಸಂಪೂರ್ಣ ಬಾಳನ್ನು ನಾನೀಗ ಬಾಳಿದೆ—ಕಾಯಾ ವಾಚಾ ಮನಸಾ! ನಾನೀಗ ಮಿರಾಂಡಾ ಆಗಿರಲಿಲ್ಲ! ಆದರೆ ಲೂಸಿ ಚೆಲ್ಲು ಹುಡುಗಿ. ಅವಳ ಕಾಮಕೇಳಿಗಳನ್ನೆಲ್ಲ ಅನುಭವಿಸಿದೆ! ಜಾರ್ಜ್ ಮೋಸ ಮಾಡಿ ಇನ್ನೊಬ್ಬ-ಳೊಡನೆ ಸರಸವಾಡುತ್ತಿದ್ದನು. ನಾನು ಲೂಸಿ-ಯನ್ನು ಬಿಟ್ಟು ಆತನ ಹೊಸ ಪ್ರೇಯಸಿಯನ್ನು ಸೇರಿಸಿಕೊಂಡೆ!

'ಹೀಗೆ ನಾನು ಮನಬಂದಂತೆ ಜಾರ್ಜ್‌ನನ್ನು ಹಿಂಬಾಲಿಸಿದೆ! ಕೊನೆಗೆ , ಜಾರ್ಜನೂ ಆಗಿ ನೋಡಿದೆ. ಮಿರಾಂಡಾ ನನಗೆ ತುಗಿಯಂತೆ ಕಂಡಳು. ಲೂಸಿ ನನ್ನ ಮನಸೂರೆಗೊಂಡಳು. ಆದರೆ ಮುಂದೆ ಆಕೆಯ ಒಡನಾಟ ಬೇಸರವಾಗಿ ರೋಜಿ ನನ್ನ ಜೀವನ ಪ್ರವೇಶಿಸಿದಳು.

*

'ಇದು ಹುಚ್ಚಿಯ ದಿನಚರಿಯೆಂದು ನನಗೇ ಅನಿಸಿದೆ. ಆದರೆ ಬೆಂಕಿಗೆ ಬೆಂಕಿ ಸುಡುವದಿಲ್ಲ. ನೀರಿಗೆ ನೀರು ನೆನೆಯುವುದಿಲ್ಲ, ಎಂದು ಹೇಗೆ ತಿಳಿಸಿಹೇಳಲಿ? ನಾನೇ ಬೆಂಕಿಯೂ, ನೀರೂ, ಹವೆಯೂ, ಸಕಲ ಜೀವರಾಶಿಯೂ ಆಗಿ ನಿಂತರೆ

ಯಾವ ಚೌಕಟ್ಟಿನಲ್ಲಿ ನನ್ನ ಅನುಭವಗಳನ್ನು ಬರೆಯಲಿ? ನಾನು ಮಿರಾಂಡಾತನವನ್ನು ಕಳೆದುಕೊಂಡದ್ದಂತೂ ಸ್ಪಷ್ಟವಿದೆ. ಆದರೂ ಅಹಂ ಎಂಬುದು ಹೋಗಿಲ್ಲ. ಸೃಷ್ಟಿಲೀಲೆಯನ್ನು ನಿಬ್ಬೆರಗಾಗಿ ನೋಡುತ್ತ ನಿಲ್ಲಬೇಕೆನಿಸುತ್ತದೆ. ನ್ಯೂಟನ್ ಐನ್‌ಸ್ಟೀನ್— ಡಾರ್ವಿನ್— ಪ್ಲೇಟೋರಂಥವರು ಎಷ್ಟು ಅಲ್ಪರೆಂದು ಕನಿಕರಪಡುತ್ತೇನೆ! ಮನುಷ್ಯ ಒಂದು ಕ್ರಿಮಿ ಮಾತ್ರ!...

'ಕಾಲಾತೀತವಾಗಿ ವಿಶ್ವವನ್ನು ಇಣುಕಿ ನೋಡಿದಾಗ ವಿಸ್ಮಿತಳಾಗಿದ್ದೇನೆ! ನಾನೇ ಪೃಥ್ವಿ, ನಾನೇ ಚಂದ್ರ, ನಾನೇ ತಾರೆಗಳು! ನಾನೇ ಅಣು ಪರಮಾಣುಗಳು! ಮನುಷ್ಯನ ದೃಷ್ಟಿಯ ಇಪ್ಪತ್ತನೆಯ ಶತಮಾನ ನನಗೆ ಏನೂ ಅಲ್ಲ! ನಾನು ಮೂವತ್ತನೆಯ ಶತಮಾನಕ್ಕೂ ಹೋಗಬಲ್ಲೆ! ದೂರದ ತಾರೆಗಳಲ್ಲಿರುವ ಮನುಷ್ಯರಂತೆ ಜೀವಿಗಳನ್ನು ಕಂಡು ಮಾತನಾಡಿಸಬಲ್ಲೆ!...

'ಆದರೆ ಪುನಃ ಪುನಃ ನನಗೆ ಈ ಅನಂತವಿಶ್ವವಾಗಲೀ, ಅದರ ಅಗಾಧತೆಯಾಗಲೀ ಬೇಡವೇ ಬೇಡವೆಂಬ ವಿಚಿತ್ರ ವಿರಕ್ತಿ ಬಲಿಯುತ್ತಿದೆ. ಈ ಧರ್ಮಪಂಥದವರು ಸಾವಿರಾರು ವರ್ಷ ವಯಸ್ಸಾದವರೆಂದು ಈಗ ನನಗೆ ಏನೂ ಸಂಶಯ ಉಳಿದಿಲ್ಲ. ಅವರ ಜಾಡ್ಯ, ನಿಷ್ಕ್ರಿಯತೆ ಎಲ್ಲವೂ ಈಗ ಅರ್ಥವಾಗುತ್ತಿದೆ. ಅವರ ಶರೀರಗಳು ಭೌತಿಕ ಕೇಂದ್ರಗಳು ಮಾತ್ರ! ಆದರೆ ಅವರ ಮನಸ್ಸು ಚೈತನ್ಯ ಕಾಲಾತೀತವಾಗಿ ಅನಂತ ವಿಶ್ವವನ್ನೇ ವ್ಯಾಪಿಸಿದೆ!...

'ನಾನು ಆಧ್ಯಾತ್ಮಿಕ– spiritual–ಪರೀಕ್ಷೆಯಲ್ಲಿ ಪಾರಾಗಲಿಲ್ಲ. ಆಶ್ಚರ್ಯವೆಂದರೆ ನನಗೆ ಎಳ್ಳಷ್ಟೂ ಅಸಮಾಧಾನವಾಗಲೀ, ನಿರಾಶೆಯಾಗಲೀ ಆಗಿಲ್ಲ! ಧರ್ಮಪಂಥ ಸೇರಲು ನಾನು ಅನರ್ಹಳೆಂದು ನಿರ್ಣಯಿಸಿದ್ದಾರೆ. ನಾನು ಇಲ್ಲಿಯೇ ಸಾಮಾನ್ಯ ಪ್ರಜೆಯಂತೆ ವಾಸಿಸಬಹುದಂತೆ. ಇಂಗ್ಲಂಡಿಗೆ ಮರಳಿ ಹೋಗುವ ಪ್ರಶ್ನೆಯೇ ಇಲ್ಲ!...'

ಅಪೂರ್ಣವಾದ ದಿನಚರಿ ಈ ಸ್ಥಿತಿಯಲ್ಲಿ ನನಗೆ ಸಿಕ್ಕಿತು. ಅದ್ಭುತ ಛಲದ ಮಿರಾಂಡಾ ಧರ್ಮಪಂಥಕ್ಕೆ ಸೇರಲು ಹೇಗೆ ಅನರ್ಹಳಾದಳೆಂದು ನನಗೆ ಕುತೂಹಲ ತಡೆಯದಾಯಿತು. ಒಬ್ಬ ಬಿಳಿ ಮಹಿಳೆ ಇಲ್ಲಿರುವಳೋ ಹೇಗೆಂದು ಆ ಪ್ರದೇಶವನ್ನು ಸುತ್ತಿದೆ.

ಮೊದಲ ಮೂರು ನಾಲ್ಕು ದಿನ ಏನೂ ಸುಳಿವು ಸಿಗಲಿಲ್ಲ. ನಿರಾಶನಾಗಿ ಕ್ಯಾಂಪು ಕೀಳುವವನಿದ್ದೆ. ಸರೋವರದ ಪಶ್ಚಿಮ ದಂಡೆಗೆ ಒಬ್ಬ ನಗ್ನ ಸಾಧು ನೀರಲ್ಲಿ ಮುಳುಗು ಹಾಕುತ್ತಿರುವುದು ಕಂಡಿತು. ಸೂರ್ಯನ ಪ್ರಥಮ ಕಿರಣಗಳು ಆತನ ತೇಜಃಪುಂಜ ಮುಖವನ್ನು ಬೆಳಗಿದ್ದವು. ನಾನು ಸಾಧುವಿನ ಹತ್ತಿರ ಹೋಗಿ, "ಸ್ವಾಮೀಜಿ, ಮಿರಾಂಡಾ ಎಂಬ ಮಹಿಳೆಯನ್ನು ಕಾಣಬೇಕಿತ್ತು," ಎಂದು ಏನೂ ಪೀಠಿಕೆ ಹಾಕದೆ ನೇರವಾಗಿ ಪ್ರಶ್ನಿಸಿದೆ.

ಆತನ ಮುಖಚರ್ಯೆಯಲ್ಲಿ ಏನೂ ಬದಲಾವಣೆ ತೋರಲಿಲ್ಲ. "ಮಿರಾಂಡಾ ಶರೀರ ತ್ಯಜಿಸಿದ್ದಾಳೆ," ಎಂದು ಉತ್ತರಿಸಿದ.

ನಾನು ಮಿರಾಂಡಾಳ ಗುಲಾಬಿ ಡೈರಿಯನ್ನು ಆತನ ಮುಂದೆ ಹಿಡಿದು, "ಇದು ಅವಳ ಸೊತ್ತು. ತಾವು ಮಿಸ್ ಮಿರಾಂಡಾರ ಗುರುಗಳೇ?" ಎಂದು ಕೇಳಿದೆ. "ಬಂಧೂ, ಮಿರಾಂಡಾ ಅಮ್ಮನ ಬಗೆಗೆ ನೀವು ಏನೂ ಕೇಳದಿದ್ದರೇ ವಿಹಿತ" ಎಂದನಾತ.

"ನಾನು ಈ ದಿನಚರಿ ಓದಿದ್ದೇನೆ ಮಿರಾಂಡಾಳನ್ನು ನೀವು ಧರ್ಮಪಂಥಕ್ಕೆ ಏಕೆ ಸೇರಿಸಿಕೊಳ್ಳಲಿಲ್ಲವೆಂದು ಮನಸ್ಸಿಗೆ ನೋವಾಯಿತು," ಎಂದೆ ನನ್ನ ಭಾವನೆಯನ್ನು ಹತ್ತಿಕ್ಕದೆ.

'ಅದು ಅವಳೇ ಆರಿಸಿಕೊಂಡ ಮಾರ್ಗವಾಗಿತ್ತು. 'ಶಾಂತಿ ಬೇಕೋ? ಜಗತ್ತು ಬೇಕೋ?' ಎಂದು ನಾವು ಕೇಳಿದಾಗ 'ಜಗತ್ತು ಬೇಕು' ಎಂದು ಆರಿಸಿಕೊಂಡಳು. ಆಕೆ ಇಂಗ್ಲಂಡಿನಿಂದ ಬಂದದ್ದೂ ಅದೇ ಉದ್ದೇಶಕ್ಕಾಗಿ! ಆಕೆ ಬೇಡಿದ್ದು ಆಕೆಗೆ ಸಿಕ್ಕಿತು. ಆಶೆ ಈಡೇರಿದ ಮೇಲೆ ಈ ಭೌತಿಕ ವಿಶ್ವದಲ್ಲಿ ಆಕೆಯ ದೇಹ ಶಾಂತವಾಯಿತು. ಅದಕ್ಕೇಕೆ ಕೊರಗು?" ಎಂದು ಸಾಧು ನುಡಿದು ಮತ್ತೆ ಮುಳುಗು ಹಾಕಿದ.

ನನಗೆ ಏನಾಯಿತೋ ಏನೋ? ಆ ಗುಲಾಬಿ ದಿನಚರಿಯನ್ನು ಬಿಸಾಕಿ, ಸರೋವರತಟದ ಮೇಲೆ ಕುಳಿತು ಗಳಗಳನೆ ಅತ್ತುಬಿಟ್ಟೆ. ✡

ಫರ್ಮಾನ ಅಂತಿಮ ಪ್ರಮೇಯ


ಜಿ. ಟಿ. ನಾರಾಯಣರಾವ್

ಪೈಥಾಗೊರಸನ ಸಂಖ್ಯಾತ್ರಯಗಳು

A ಬಿಂದುವಿನಲ್ಲಿ ನೀವು ನಿಂತಿರುವಿರೆಂದು ಭಾವಿಸಿ. ಅಲ್ಲಿಂದ ನೇರ ಗೆರೆ ಮೇಲೆ 3 ಹೆಜ್ಜೆ ನಡೆದು *B* ಬಿಂದುವನ್ನು ತಲಪುವಿರಿ. *B*ಯಲ್ಲಿ ಎಡಕ್ಕೆ ತಿರುಗಿ ನೇರ ಗೆರೆ ಮೇಲೆ 4 ಹೆಜ್ಜೆ ನಡೆದು *C* ಬಿಂದುವನ್ನು ಸೇರುವಿರಿ. ಈಗ *C* ಬಿಂದುವಿನಿಂದ ನೇರ ಗೆರೆ ಮೇಲೆ *A* ಬಿಂದುವಿಗೆ ನಡೆದು ಬನ್ನಿ. ಕರಾರುವಾಕ್ಕಾಗಿ 5 ಹೆಜ್ಜೆಗಳು ಸಾಕು, ಹೆಚ್ಚು ಅಲ್ಲ, ಕಡಿಮೆ ಸಲ್ಲ. (ಚಿತ್ರ ೧ ನೋಡಿ)

ನಿಮ್ಮ ಪ್ರಯೋಗ ಈ ಹೇಳಿಕೆಯನ್ನು ಸಮರ್ಥಿಸದಿದ್ದರೆ—ಅಂದರೆ *C*ಯಿಂದ *A*ಗೆ ನಡೆದು ಬರುವಾಗ 5ಕ್ಕಿಂತ ಹೆಚ್ಚು ಯಾ ಕಡಿಮೆ ಹೆಜ್ಜೆ ಇಡಬೇಕಾಗಿ ಬಂದರೆ—ಈ ಆಟದ ಷರತ್ತುಗಳನ್ನು ನೀವು ಎಲ್ಲಿಯೋ ಮುರಿದಿರುವಿರೆಂದೇ ಅರ್ಥ. ಉದಾಹರಣೆಗೆ ನಿಮ್ಮ ಹೆಜ್ಜೆಗಳ ನಡುವಿನ ಅಂತರ ಹೆಚ್ಚುಕಡಿಮೆ ಆಗಿರಬಹುದು ಅಥವಾ ನೀವು ಮಟ್ಟಸ ನೆಲದ ಮೇಲೆ ಪ್ರಯೋಗ ಮಾಡಿಲ್ಲದಿರಬಹುದು. (ಮುಂದಿನ ಪುಟದಲ್ಲಿಯ ಚಿತ್ರ ನೋಡಿ)

ಈ ಪ್ರಯೋಗದಲ್ಲಿ ಗೆಲವು ಗಳಿಸಿದ ಬಳಿಕ ನೀವು ಸಹಜವಾಗಿ ಇನ್ನೊಂದು ಇದೇ ತೆರನಾದ ಪ್ರಯೋಗ ನಡೆಸಲು ತಕ್ಕಷ್ಟು ಹುರುಪಿನಿಂದಲೇ ಮುಂದಾಗುವಿರಿ. *A*ಯಿಂದ *D*ಗೆ 4 ಹೆಜ್ಜೆ ನಡೆದು ಅಲ್ಲಿ ಎಡಕ್ಕೆ ತಿರುಗಿ ಮುಂದೆ 5 ಹೆಜ್ಜೆ ಇಟ್ಟು *E* ತಲಪುವಿರಿ. *E*ಯಿಂದ *A*ಗೆ ಮರಳುವಾಗ ಇಟ್ಟ ಹೆಜ್ಜೆ ಎಣಿಸುವಿರಿ. ನಿಮ್ಮ ನಿರೀಕ್ಷೆಯ ಪ್ರಕಾರ 6 ದೊರೆಯಬೇಕು. ಆದರೆ *EA* ಅಂತರ ಕೊಂಚ ಹಿಗ್ಗಿರುವಂತೆ ತೋರುತ್ತದೆ: 6ಕ್ಕಿಂತ ಹೆಚ್ಚು 7ಕ್ಕಿಂತ ಕಡಿಮೆ. ಪ್ರಯೋಗದ ಯಾವುದೇ ಷರತ್ತನ್ನು ನೀವು ಮುರಿದಿರುವುದಾದ್ದರಿಂದ ಘಟಿಸಿದ



ಚಿತ್ರ ೧

ಓದುಗರೊಡನೆ

ಭೀಮಸಮುದ್ರದ ನಮ್ಮ ಓದುಗ ಶ್ರೀ ಎಂ. ಎಸ್. ಪರಮಶಿವಾರ್ಯರು ಇಂತು ಬರೆಯುತ್ತಾರೆ:

"ಸಪ್ಟೆಂಬರ್ 'ಕಸ್ತೂರಿ'ಯಲ್ಲಿ ಶ್ರೀ ಜಿ. ಟಿ. ನಾರಾಯಣರಾಯರು ಬರೆದ 'ಅವಿಭಾಜ್ಯ ಸಂಖ್ಯೆಗಳ ಅನಂತ ಸಾಮ್ರಾಜ್ಯ' ಎಂಬ ಲೇಖನ ಗಣಿತಪ್ರಿಯರಿಗೆ ಅಮೂಲ್ಯವಾಗಿದೆ. ಆದರೆ ಅದರಲ್ಲಿ 'ಪುನರಾವರ್ತಿತ ಏಕಕ ಸಂಖ್ಯೆ'ಗಳಲ್ಲಿ 1111 = 111 × 101 ಮತ್ತು 11111 = 47 × 271ರ ಗುಣ್ಯಗಳಾದ 111 ಮತ್ತು 47 ತಪ್ಪಾಗಿ ಅಚ್ಚಾಗಿವೆ. ಅವು ಕ್ರಮವಾಗಿ 11 ಮತ್ತು 41 ಇರಬೇಕಿತ್ತು. ಇದು ಮುದ್ರಾರಾಕ್ಷಸನ ಹಾವಳಿ ಎಂದು ಭಾವಿಸಲೆ?"

ನಿಮ್ಮ ಸಂದೇಹ ಪರಿಹಾರಕ್ಕೋಸ್ಕರ ಲೇಖಕರನ್ನು ಕೇಳಿದಾಗ ಅವರು ಉತ್ತರಿಸಿದ್ದಿಷ್ಟು:

"ನನ್ನ ಕಣ್ಣು ತಪ್ಪಿನಿಂದ ಉಳಿದು ಹೋಗಿರುವ ದೋಷಗಳನ್ನು ತೋರಿಸಿಕೊಟ್ಟಿರುವ ಶ್ರೀ ಎಂ. ಎಸ್. ಪರಮಶಿವಾರ್ಯರಿಗೆ ಧನ್ಯವಾದಗಳು. 1111 = 11 × 101 ಮತ್ತು 11111 = 41 × 271 ಆಗಬೇಕು."

ಅರ್ಥಪೂರ್ಣ ಪ್ರತಿಕ್ರಿಯೆಯನ್ನು ಓದುಗರಿಂದ 'ಕಸ್ತೂರಿ' ಸದಾ ಸ್ವಾಗತಿಸುತ್ತದೆ.

–ಸಂ–

ಅಸಾಧ್ಯ ಇದಲ್ಲ. ಹೀಗೆ ಸಂಗತಿ ಹಿಡಿದರೆ ನಿಮ್ಮ ಊಹೆಯೇ ತಪ್ಪು.

ಮೊದಲನೆಯ ಪ್ರಯೋಗದಲ್ಲಿ 3, 4, 5 ಅನುಕ್ರಮ ಸಂಖ್ಯೆಗಳು ನಿಜ. ಅಂದ ಮಾತ್ರಕ್ಕೆ ಎಲ್ಲ ಪ್ರಯೋಗಗಳಲ್ಲಿಯೂ ಹೀಗೆಯೇ ಇರಬೇಕೆಂದು ನಿರೀಕ್ಷಿಸಲು ನಿಮಗಿರುವ ಅಧಿಕಾರವೇನು?

ಚಿತ್ರಗಳನ್ನು ಎಚ್ಚರಿಕೆಯಿಂದ ನೋಡಿ. ತ್ರಿಭುಜ ABCಯಲ್ಲಿ B ಕೋನ ಲಂಬಕೋನ. ತ್ರಿಭುಜ ADEಯಲ್ಲಿ D ಕೋನ ಲಂಬಕೋನ. ಅಂದರೆ ಎರಡೂ ಲಂಬಕೋನ ತ್ರಿಭುಜಗಳು. ಲಂಬಕೋನದ ಎದುರಿನ ಭುಜಕ್ಕೆ ವಿಕರ್ಣವೆಂದು ಹೆಸರು.

ತ್ರಿಭುಜ ABCಯಲ್ಲಿ ಎರಡು ಭುಜಗಳು ಮತ್ತು ವಿಕರ್ಣದ ಉದ್ದಗಳು ಪೂರ್ಣಾಂಕಗಳಾಗಿವೆ: 3, 4, 5. ತ್ರಿಭುಜ ADEಯಲ್ಲಿ ಹೀಗಿಲ್ಲ: 4, 5, 6–7ರ ನಡುವಿನ ಸಂಖ್ಯೆ. ತಾತ್ತ್ವಿಕವಾಗಿ ನೀವೀಗ ಈ ಮುಂದಿನ ಪ್ರಶ್ನೆ ಕೇಳಬಲ್ಲಿರಿ: ಭುಜಗಳ ಹಾಗೂ ವಿಕರ್ಣದ ಉದ್ದಗಳು ಪೂರ್ಣಾಂಕಗಳಾಗಿರುವ ಇತರ ಲಂಬಕೋನ ತ್ರಿಭುಜಗಳಿವೆಯೇ ?

ಈ ಪ್ರಶ್ನೆಗೆ ಉತ್ತರ ಹುಡುಕಲು 3, 4, 5ರ ನಡುವೆ ಏನಾದರೂ ವಿಶೇಷ ಸಂಬಂಧ ಇದೆಯೇ ಎಂಬುದನ್ನು ಪತ್ತೆ ಹಚ್ಚುವುದು ಅಪೇಕ್ಷಣೀಯ:


$3 \times 3 = 3^2 = 9$, $4 \times 4 = 4^2 = 16$,

$5 \times 5 = 5^2 = 25$

ಈಗ $9 + 16 = 25$

ಅಂದರೆ $3^2 + 4^2 = 5^2$

4, 5, 6 ರ ನಡುವೆ ಇಂಥ ಸಂಬಂಧ ಇದೆಯೇ ?



ಚಿತ್ರ ೨

ಪರೀಕ್ಷಿಸಿ ನೋಡಿ:

$4^2 + 5^2 = 16 + 25 = 41$

$6^2 = 36$

ಇವೆರಡೂ ಸಮ ಅಲ್ಲ.

ಹಾಗಾದರೆ 3, 4, 5 ಸಂಖ್ಯೆಗಳ ನಡುವೆ ಇರುವಂತೆ ಪರಸ್ಪರ ಸಂಬಂಧವಿರುವ ಇತರ ಸಂಖ್ಯಾತ್ರಯಗಳುಂಟೇ? ಈ ಪ್ರಶ್ನೆ ಕ್ರಿಸ್ತಪೂರ್ವ 800 ರಿಂದ 500 ರಷ್ಟು ಹಿಂದೆಯೇ ಭಾರತೀಯ ಗಣಿತವಿದರನ್ನು ಕಾಡಿತ್ತು. ಅವರು ಇದಕ್ಕೆ ಕೆಲವು ಉತ್ತರಗಳನ್ನು ಪಡೆದಿದ್ದರು. ಆ ಅವಧಿಯಲ್ಲಿ ರಚಿತವಾದ ಶುಲ್ವಸೂತ್ರಗಳಲ್ಲಿ ನಿರೂಪಿತವಾಗಿರುವ ಕೆಲವು ಮುಖ್ಯ ಸಂಖ್ಯಾತ್ರಯಗಳಿವು:

3, 4, 5; 5, 12, 13; 7, 24, 25; 8, 15, 17; 12, 35, 37.

ಇಲ್ಲಿನ ಒಂದೊಂದು ತ್ರಯದಲ್ಲಿಯೂ ಮೊದಲ ಎರಡು ಸಂಖ್ಯೆಗಳ ವರ್ಗಗಳ ಮೊತ್ತ ಮೂರನೆಯ ಸಂಖ್ಯೆಯ ವರ್ಗಕ್ಕೆ ಸಮವಾಗಿದೆ.

ಕ್ರಿಸ್ತಪೂರ್ವ ಸುಮಾರು 582ರಿಂದ 497ರ ತನಕ ಬಾಳಿದ್ದ ಗ್ರೀಕ್ ಗಣಿತವಿದ ಪೈಥಾಗೊರಸ್ ಕೂಡ ಈ ಸಮಸ್ಯೆಯನ್ನು ಸ್ವತಂತ್ರವಾಗಿ ಎದುರಿಸಿದ್ದ. "ಯಾವುದೇ ಲಂಬಕೋನ ತ್ರಿಭುಜದಲ್ಲಿ ವಿಕರ್ಣದ ಮೇಲಿನ ಚೌಕದ ಸಲೆ ಉಳಿದೆರಡು ಭುಜಗಳ ಮೇಲಿನ ಚೌಕಗಳ ಸಲೆಗಳ ಮೊತ್ತಕ್ಕೆ ಸಮ" ಎಂಬ ಪ್ರಸಿದ್ಧ ಜ್ಯಾಮಿತೀಯ ಪ್ರಮೇಯವನ್ನು ಆತನ ಹೆಸರಿನಿಂದಲೇ ಇಂದು ಬೋಧಿಸಲಾಗುತ್ತಿದೆ. ಚಿತ್ರದಲ್ಲಿ (ಚಿತ್ರ ೩ ನೋಡಿ)

$LM^2 + MN^2 = LN^2$


$LM = 3,\ MN = 4$ ಆದಾಗ $LN = 5$ ಆಗುತ್ತದೆ. $LM = 4,\ MN = 5$ ಆದಾಗ $LN = 41$ರ ವರ್ಗಮೂಲ ಆಗುತ್ತದೆ. ಇದು ಪೂರ್ಣಾಂಕವಲ್ಲ, 6 ಕ್ಕಿಂತ ದೊಡ್ಡ ಆದರೆ 7ಕ್ಕಿಂತ ಚಿಕ್ಕ ಸಂಖ್ಯೆ. ಎಂದೇ ನಿಮಗೆ EA ಅಂತರವನ್ನು ಪೂರ್ಣಾಂಕ ಹೆಜ್ಜೆಗಳಿಂದ ನಿಭಾಯಿಸಲು ಸಾಧ್ಯವಾಗಲಿಲ್ಲ.

3, 4, 5; 5, 12, 13 ಮೊದಲಾದ ವಿಶೇಷ ಸಂಖ್ಯಾಸಮುದಾಯಗಳಿಗೆ ಪೈಥಾಗೊರಸನ ಸಂಖ್ಯಾತ್ರಯಗಳೆಂದು ಹೆಸರು. ಪ್ರತಿಯೊಂದು ತ್ರಯದಲ್ಲಿಯೂ ಮೊದಲ ಎರಡು ಸಂಖ್ಯೆಗಳ ವರ್ಗಗಳ ಮೊತ್ತ ಮೂರನೆಯ ಸಂಖ್ಯೆಯ ವರ್ಗಕ್ಕೆ ಸಮವಾಗಿದೆ. ಆದ್ದರಿಂದ ಪೈಥಾಗೊರಸ್‌ತ್ರಯಗಳು ಭುಜಗಳಾಗುವಂತೆ ರಚಿಸಿದ ಎಲ್ಲ ತ್ರಿಭುಜಗಳೂ ಲಂಬಕೋನ ತ್ರಿಭುಜಗಳಾಗುತ್ತವೆ.

ಡಯೊಫ್ಯಾಂಟಸ್‌ನ ಫ್ಯಾಂಟಸಿ

ಡಯೊಫ್ಯಾಂಟಸ್ ಕ್ರಿಸ್ತಶಕ ಸುಮಾರು 250 ರ ವೇಳೆಗೆ ಅಲೆಕ್ಸಾಂಡ್ರಿಯದಲ್ಲಿ (ಗ್ರೀಸ್) ಗಣಿತ ಸಾರ್ವಭೌಮನಾಗಿ ಮೆರೆಯುತ್ತಿದ್ದನೆಂದು ಪ್ರತೀತಿ. ಈ ಫ್ಯಾಂಟಮನ ಸಾಹಸಗಳು ಇಂದಿಗೂ ಗಣಿತ ರಂಗದಲ್ಲಿ ತರಂಗಗಳನ್ನು ಎಬ್ಬಿಸುತ್ತಲೇ ಇವೆ. ಇಂದು ಬೀಜಗಣಿತವೆಂದು ಪ್ರಸಿದ್ಧವಾಗಿರುವ ಗಣಿತವಿಭಾಗದ ಪ್ರವರ್ತಕರ ಪೈಕಿ ಈತ ಪ್ರಸಿದ್ಧ. ಸುಲಭ ಉದಾಹರಣೆಯೊಂದನ್ನು ನೋಡಿ.

ದತ್ತ ಧನ ಪೂರ್ಣಾಂಕವನ್ನು ಎರಡು ಧನ ಪೂರ್ಣಾಂಕಗಳ ಮೊತ್ತವಾಗಿ ಒಡೆಯಬಹುದೇ?



ಚಿತ್ರ 3

ಉದಾಹರಣೆಗೆ 5, 11.

$5 = 1 + 4 = 2 + 3.$

$11 = 1 + 10 = 2 + 9 = 3 + 8 = 4 + 7 = 5 + 6$

ಸಂಖ್ಯೆ ದೊಡ್ಡದಾದಂತೆ ಈ ಸುಲಭ ಪ್ರಶ್ನೆಗೆ ಕೂಡ ದೊರೆಯುವ ಪರಿಹಾರಗಳ ಸಂಖ್ಯೆ ಬಲು

[illegible]ಬೇಕಾಗುತ್ತದೆ. ಎಲ್ಲವನ್ನೂ ಬರೆಯ ಹೋದರೆ [illegible] ಕ್ರಮ. ಹೀಗಲ್ಲವೆ

$$x+y=5, \quad u+v=11$$

ಎಂಬುದಾಗಿ ಬರೆದರೆ ನಿರೂಪಣೆ ಅಡಕವಾಗುತ್ತದೆ. ಬೀಜಗಣಿತದ ಭಾಷೆಯಲ್ಲಿ ಈ ಸಮೀಕರಣಗಳು ಹೇಳುವುದಿಷ್ಟು: x ಮತ್ತು y ಎಂಬ ಎರಡು ಅಜ್ಞಾತಗಳು ಅಥವಾ ಚರಗಳು ಅವುಗಳ ಮೊತ್ತ ಸದಾ 5 ಆಗಿರುವಂತೆ ಬಂಧಿತವಾಗಿವೆ; u ಮತ್ತು v ಎಂಬ ಎರಡು ಅಜ್ಞಾತಗಳು ಅಥವಾ ಚರಗಳು ಅವುಗಳ ಮೊತ್ತ ಸದಾ 11 ಆಗಿರುವಂತೆ ಬಂಧಿತವಾಗಿವೆ. ಇವು ಪ್ರತಿಯೊಂದೂ ಒಂದೊಂದು ಒಪ್ಪಂದ (ಕಾಂಟ್ರ್ಯಾಕ್ಟ್).

ಹೀಗೆ ನಮ್ಮ ಪರತ್ತುಗಳನ್ನು ಬೀಜಗಣಿತದ ಸಮೀಕರಣಭಾಷೆಯಲ್ಲಿ ನಿರೂಪಿಸಿದ ಬಳಿಕ ಆ ಸಮೀಕರಣವನ್ನು ತಾಳೆಪಡಿಸುವಂತೆ ಅಜ್ಞಾತಗಳ ಎಲ್ಲ ಬೆಲೆಗಳನ್ನೂ ಪತ್ತೆ ಹಚ್ಚುವುದು ಮುಂದಿನ ಹೆಜ್ಜೆ.

$$x+y=5$$

ಸಮೀಕರಣವನ್ನು ಅನುಕ್ರಮವಾಗಿ x ಮತ್ತು y ಅಜ್ಞಾತಗಳ 1, 4; 2, 3; 3, 2; 4, 1 ಬೆಲೆಗಳು ತಾಳೆಪಡಿಸುತ್ತವೆ. ಬೇರೆ ಯಾವ ಬೆಲೆಗಳೂ ಇಲ್ಲ. (ನಮ್ಮ ವ್ಯವಹಾರ ಧನ ಪೂರ್ಣಾಂಕಗಳೊಡನೆ ಮಾತ್ರ). ಈ ನಾಲ್ಕು ಜೊತೆ ಬೆಲೆಗಳಿಗೆ ಸಮೀಕರಣದ ಪರಿಹಾರಗಳೆಂದು ಹೆಸರು.

$$u+v=11$$

ಸಮೀಕರಣಕ್ಕೆ ಹತ್ತು ಪರಿಹಾರಗಳಿವೆ ಎಂದು ನೀವೇ ಹೇಳಬಲ್ಲಿರಿ; ಅವನ್ನು ಪತ್ತೆಹಚ್ಚಿ ಬರೆಯಲೂ ಬಲ್ಲಿರಿ. ಇಂಥ ಸಮೀಕರಣಗಳನ್ನು ಸಾರ್ವತ್ರಿಕವಾಗಿ $x+y=z$ ಎಂದು ಬರೆಯುತ್ತೇವೆ. ಇದರ ಪರಿಹಾರಗಳು ಅನಂತ ಸಂಖ್ಯೆಯಲ್ಲಿವೆ: 1, 2, 3; 1, 4, 5; 2, 7, 9, ಇತ್ಯಾದಿ. ಇದು ಅತ್ಯಂತ ಸರಳರೂಪದ ಡಯೊಫ್ಯಾಂಟೈನ್ ಸಮೀಕರಣ. ವ್ಯಾಪಕವಾಗಿ ಡಯೊಫ್ಯಾಂಟೈನ್ ಸಮೀಕರಣವೆಂದರೆ "ಪೂರ್ಣಾಂಕ ಗುಣಕಗಳಿರುವ, ಎರಡು ಅಥವಾ ಹೆಚ್ಚು ಅಜ್ಞಾತಗಳನ್ನು ಒಳಗೊಂಡಿರುವ ಮತ್ತು ಸಾರ್ವತ್ರಿಕವಾಗಿ ಹೇಳುವುದಾದರೆ, ಪ್ರತಿಯೊಂದು ಅಜ್ಞಾತವನ್ನೂ ತಾಳೆಪಡಿಸಬಲ್ಲ ಮೌಲ್ಯಗಳು ಅನಂತ ಸಂಖ್ಯೆಯಲ್ಲಿರುವ ಅನಿರ್ಧರಣೀಯ ಸಮೀಕರಣ." ಇದಕ್ಕೆ ಉದಾಹರಣೆಯಾಗಿ $x^2+y^2=z^2$ ಡಯೊಫ್ಯಾಂಟೈನ್ ಸಮೀಕರಣವನ್ನು ಪರಿಶೀಲಿಸೋಣ. ಇದರಲ್ಲಿ x, y, z ಎಂಬ ಮೂರು ಅಜ್ಞಾತಗಳಿವೆ. ಪ್ರತಿಯೊಂದರ ಗುಣಕವೂ (coefficient) 1. $x=3$, $y=4$, $z=5$; $x=5$, $y=12$, $z=13$ ಮುಂತಾದ ಪೈಥಾಗೊರಸ್ ತ್ರಯಗಳು ಈ ಸಮೀಕರಣವನ್ನು ತಾಳೆಪಡಿಸುತ್ತವೆ.

ಪೈಥಾಗೊರಸ್ ತ್ರಯಗಳು ಎಷ್ಟಿವೆ? ಅವನ್ನು ಪತ್ತೆಹಚ್ಚಲು ಸಾರ್ವತ್ರಿಕ ಸೂತ್ರ ಉಂಟೆ? ಖುದ್ದು ಪೈಥಾಗೊರಸನೇ ಇಂಥ ಒಂದು ಸೂತ್ರ ನೀಡಿದ್ದ:

$$x=2n+1, \quad y=2n^2+2n, \quad z=2n^2+2n+1$$

ಇವುಗಳಲ್ಲಿ n ಗೆ ನಮಗಿಷ್ಟ ಬಂದ ಬೆಲೆಗಳನ್ನು ಆದೇಶಿಸಬಹುದು. ಪ್ರತಿಯೊಂದು ಸಲವೂ ಒಂದೊಂದು ಪೈಥಾಗೊರಸ್ ತ್ರಯ ಲಭಿಸುತ್ತದೆ. ಅಂದರೆ, $x^2+y^2=z^2$ ಡಯೊಫ್ಯಾಂಟೈನ್ ಸಮೀಕರಣದ ಪರಿಹಾರ ದೊರೆಯುತ್ತದೆ. ಉದಾಹರಣೆಗೆ $n=1$ ಆದಾಗ 3, 4, 5; $n=2$ ಆದಾಗ 5, 12, 13. ಆದರೆ nಗೆ ಯಾವ ಬೆಲೆ ಕೊಟ್ಟಾಗ್ಯೂ ಶುಲ್ವಸೂತ್ರಕಾರರು ಕಂಡುಕೊಂಡಿದ್ದ 8, 15, 17 ಹಾಗೂ 12, 35, 37 ತ್ರಯಗಳನ್ನು ಈ ಸೂತ್ರ ನೀಡುವುದಿಲ್ಲ. ಅವರಾದರೂ ಯಾವುದೇ ಸಾರ್ವತ್ರಿಕ ಸೂತ್ರ ಶೋಧಿಸಿ ಅದರ ನೆರವಿನಿಂದ ಈ ವಿಶಿಷ್ಟ ತ್ರಯಗಳನ್ನು ಪಡೆದಿದ್ದರೆಂಬುದಕ್ಕೆ ಆಧಾರ ದೊರಕಿಲ್ಲ. ಪ್ರಾಯಶಃ ಯಜ್ಞವೇದಿಕೆಗಳ ನಿರ್ಮಾಣ ಕಾಲದಲ್ಲಿ ವಿವಿಧ ಗಾತ್ರಗಳ ಇಟ್ಟಿಗೆಗಳನ್ನು ಜೋಡಿಸುತ್ತಿದ್ದಾಗ ಈ ತ್ರಯಗಳನ್ನು ಅವರು ಗುರುತಿಸಿದ್ದಿರಬಹುದು.

ಪೈಥಾಗೊರಸನ ಕಾಲಾನಂತರ ಬಂದ ಆತನ ಪಂಥದ ಗಣಿತವಿದರು ಸ್ವತಂತ್ರವಾಗಿ ಅಥವಾ ಇತರ ಗಣಿತಪಂಥದವರ ಚಿಂತನೆಯಿಂದ ಪ್ರಭಾವಿತರಾಗಿ ಪೈಥಾಗೊರಸ್-ತ್ರಯಗಳನ್ನು ನೀಡಬಲ್ಲ ಸಾರ್ವತ್ರಿಕ ಸೂತ್ರವನ್ನು ಕೊಟ್ಟಿದ್ದಾರೆ:

$$x=2n, \quad y=n^2-1, \quad z=n^2+1$$

ಇವುಗಳಲ್ಲಿ nಗೆ ನಮಗಿಷ್ಟ ಬಂದ ಬೆಲೆಗಳನ್ನು

ಆದೇಶಿಸಿ ಸಂವಾದಿ ಪೈಥಾಗೊರಸ್‌ತ್ರಯಗಳನ್ನು ಪಡೆಯಬಹುದು. ಉದಾಹರಣೆ $n=2$ ಆದಾಗ 3, 4, 5, ಮತ್ತು $n=4$ ಆದಾಗ 8, 15, 17 ದೊರೆಯುತ್ತವೆ.

ಫರ್ಮಾನ ಫರ್ಮಾನ್

$$x+y=z, \quad x^2+y^2=z^2$$

ಎಂಬ ಡಯೊಫ್ಯಾಂಟೈನ್ ಸಮೀಕರಣಗಳ ಪರಿಹಾರಗಳು ಅನಂತ ಸಂಖ್ಯೆಯಲ್ಲಿವೆ. ಇವನ್ನು ಕೊಡಬಲ್ಲ ಸಾರ್ವತ್ರಿಕ ಸೂತ್ರಗಳು ತಿಳಿದಿವೆ. ಹಾಗಾದರೆ ಇದೇ ಜಾತಿಗೆ ಸೇರಿದ ಇನ್ನೂ ಮೇಲಿನ ಮಜಲಿನ ಡಯೊಫ್ಯಾಂಟೈನ್ ಸಮೀಕರಣಗಳಿಗೆ ಈ ತೀರ್ಮಾನಗಳು ಅನ್ವಯವಾಗುವುವೇ ಎಂಬ ಪ್ರಶ್ನೆ ಸಹಜವಾಗಿ ಹೊಳೆಯುತ್ತದೆ:

$x^3+y^3=z^3$, $x^4+y^4=z^4$, $x^5+y^5=z^5$ ಇತ್ಯಾದಿ.

ನಾವು ಹಲವು ವಿದ್ಯಾರ್ಥಿಗಳು ಪ್ರೌಢ ಶಾಲೆಯಲ್ಲಿ ಓದುತ್ತಿದ್ದಾಗ $x^3+y^3=z^3$ ಸಮೀಕರಣವನ್ನು ತಾಳೆಪಡಿಸಬಲ್ಲ ಪೂರ್ಣಾಂಕಗಳನ್ನು ಪತ್ತೆಹಚ್ಚಿಯೇ ತೀರುವೆವು ಎಂಬುದಾಗಿ ಪಣತೊಟ್ಟು ಶಪಥ ಮಾಡಿ ಆ ದಿಶೆಯಲ್ಲಿ ಸಾಮೂಹಿಕವಾಗಿ ಪ್ರಯತ್ನಶೀಲರಾದೆವು. ಅಂದರೆ x, yಗಳಿಗೆ ಬೇರೆ ಬೇರೆ ಬೆಲೆಗಳನ್ನು ಆದೇಶಿಸಿ zನ ಸಂವಾದಿ ಬೆಲೆಗಳನ್ನು ಹುಡುಕಲು ತೊಡಗಿದೆವು. ಆದರೆ ಎಷ್ಟೋ ಕಾಗದ ಕತ್ತಿ ಕಾಲ ವೆಚ್ಚಿಸಿದರೂ z ಮಾತ್ರ ಪೂರ್ಣಾಂಕರೂಪದಲ್ಲಿ ಪ್ರತ್ಯಕ್ಷವಾಗಲಿಲ್ಲ. ಹೀಗಾಗಿ ಸರ್ವಾನುಮತದಿಂದ "ಸಂಖ್ಯೆಗಳ ರಚನೆಯಲ್ಲಿಯೇ ಮೂಲಭೂತ ದೋಷವಿದೆ" ಎಂಬ ತತ್ವವನ್ನು ಮಂಡಿಸಿ ಮಂಜೂರು ಮಾಡಿ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಿದೆವೆಂದು ತೃಪ್ತಿ ತಳೆದೆವು. ಕುಣಿಯಲು ಬಾರದ ನರ್ತಕಿ...

ಶಾಲಾ ಪ್ರಪಂಚದಲ್ಲಿ ತಲೆ ಮುಂದುವರಿಯದೆ ಸಮಾಜಕ್ಕೆ ಕಗ್ಗಂಟಾಗಿಯೂ ಅನ್ವೇಷಿಸದ ಸಮಸ್ಯೆಗಳು ನಮ್ಮನ್ನು ಗಣಿತದ ಅಂಗಳಕ್ಕಾಗಿ ಸೆಳೆದು ಬಿಡುವುದು ಅಪರೂಪವೇನಲ್ಲ. ನಮ್ಮ ಹಲವಾರು ಪ್ರಯತ್ನಗಳು ವಿಫಲವಾದುದರ ಅರ್ಥವೇನು ?, ಅವು ಸಾಲವೆಂದು ಮಾತ್ರ. ಅನಂತ ಪ್ರಯತ್ನಗಳು ಇರಬೇಕಾದಲ್ಲಿ ಈ ಹಲವು ಪ್ರಯತ್ನಗಳು ಸಮಸ್ಯೆಯ ಹೊರ ಅಂಚನ್ನು ಕೂಡ ಸ್ಪರ್ಶಿಸಿರವು. ವಾಸ್ತವವಾಗಿ ತಾಳೆ ನೋಡಿ ಇತ್ಯರ್ಥಿಸುವ ಸಮಸ್ಯೆಯೇ ಇದಲ್ಲ.

ಫ್ರಾನ್ಸಿನ ಪಿಯರೆ ಡ ಫರ್ಮಾ (1601–1665) ಎಂಬ ಹವ್ಯಾಸಿ ಗಣಿತವಿದನ ಅಪಾರ ಗಣಿತಾಸಕ್ತಿಗಳ ಪೈಕಿ $x^n+y^n=z^n$ ಸಮೀಕರಣದ ಪರಿಹಾರವೂ ಒಂದಾಗಿತ್ತು. nನ ಬೆಲೆ 2 ಕ್ಕಿಂತ ಜಾಸ್ತಿಯಾದ ಯಾವುದೇ ಪೂರ್ಣಾಂಕವಾದಾಗ ಈ ಸಮೀಕರಣವನ್ನು ತಾಳೆಪಡಿಸಬಲ್ಲ ಪೂರ್ಣಾಂಕಗಳು ಇವೆ ಅಥವಾ ಇಲ್ಲ ಎಂಬುದಕ್ಕೆ ಸಾಧನೆ (proof) ಒದಗಿಸುವುದು ಅವನ ಎದುರಿದ್ದ ಸವಾಲು. ಈ ಸಮಸ್ಯೆಯನ್ನು ಉಲ್ಲೇಖಿಸಿದ್ದ ಗಣಿತಗ್ರಂಥದ ಪುಟದಲ್ಲಿ ಫರ್ಮಾ ಚುಟುಕು ಟಿಪ್ಪಣಿ ಬರೆದ: "3ನೆಯ ಘಾತದ ಸಂಖ್ಯೆಯನ್ನು ಎರಡು 3ನೆಯ ಘಾತದ ಸಂಖ್ಯೆಗಳಾಗಿ ಒಡೆಯಲು ಸಾಧ್ಯವಾಗದು. 4ನೆಯ ಘಾತದ ಸಂಖ್ಯೆಯನ್ನು ಎರಡು 4ನೆಯ ಘಾತದ ಸಂಖ್ಯೆಗಳಾಗಿ ಒಡೆಯಲು ಸಾಧ್ಯವಾಗದು. ಸಾರ್ವತ್ರಿಕವಾಗಿ 2ನೆಯ ಘಾತಕ್ಕಿಂತ ಮೇಲಿನ ಯಾವುದೇ ಘಾತದ ಸಂಖ್ಯೆಯನ್ನು ಅದೇ ಘಾತದ ಎರಡು ಸಂಖ್ಯೆಗಳಾಗಿ ಒಡೆಯುವುದು ಅಸಾಧ್ಯ. ಈ ಸಾರ್ವತ್ರಿಕ ಪ್ರಮೇಯಕ್ಕೆ ನಾನೊಂದು ಅತ್ಯಂತ ಅದ್ಭುತವಾದ ಸಾಧನೆಯನ್ನು ನಾನು ಪಡೆದಿದ್ದೇನೆ. ಆದರೆ ಅದನ್ನು ನಿರೂಪಿಸಲು ಈ ಪುಟದ ಹಾಳೆ ಅಂಚಿನ ಜಾಗ ಸಾಲದು." ಇದರ ಅರ್ಥ ಹೀಗಿದೆ: n ನ ಬೆಲೆ 2ಕ್ಕಿಂತ ಜಾಸ್ತಿಯಾದ ಪೂರ್ಣಾಂಕವಾದಾಗ $x^n+y^n=z^n$ ಡಯೊಫ್ಯಾಂಟೈನ್ ಸಮೀಕರಣವನ್ನು ತಾಳೆಪಡಿಸಬಲ್ಲ ಪೂರ್ಣಾಂಕಗಳಿಲ್ಲ.

1637ರ ಅಂದಾಜಿಗೆ ಫರ್ಮಾ ಈ "ಅತ್ಯಂತ ಅದ್ಭುತ" ಸಾಧನೆಯು ಬೆಳಕು ಕಂಡಿರಬೇಕು. ಆತ ಗತಿಸಿದ (1665) ತರುವಾಯ ಪ್ರಕಟಿಸಲಾದ ಆತನ ಪ್ರಬಂಧಸಂಕಲನಗಳ ಮೂಲಕ ಇದು ಫರ್ಮಾನ ಅಂತಿಮ ಪ್ರಮೇಯ ಎಂಬ ಅಭಿಧಾನದಿಂದ ಪ್ರಪಂಚದ ಬೆಳಕನ್ನು ಕಂಡಿತು.

ಹದಿನೇಳನೆಯ ಶತಮಾನದ ಶ್ರೇಷ್ಠ ಗಣಿತಜ್ಞ, ಹವ್ಯಾಸಿ ಗಣಿತವಿದರ ರಾಜ, ಬೌದ್ಧಿಕವಾಗಿ ಪರಮೋಚ್ಚ ಮಟ್ಟದ ಪ್ರಾಮಾಣಿಕ ಎಂದು

ಚಿತ್ರದೀಪ

ಕಥೆ, ಕಾದಂಬರಿ : ನೀವು ಓದಿರುವ ಕಥೆ ಕಾದಂಬರಿಗಳು ಚಿತ್ರೀಕರಿಸಲು ಯೋಗ್ಯವೆಂದು ಕಂಡುಬಂದಲ್ಲಿ ಅವುಗಳ ಯೋಗ್ಯತೆಯ ಬಗ್ಗೆ ವಿಶ್ಲೇಷಣಾತ್ಮಕ ಲೇಖನಗಳನ್ನು ಕಥೆಪ್ರಕಟವಾದ ಪತ್ರಿಕೆ ಅಥವಾ ಕಾದಂಬರಿಯ ಪ್ರಕಾಶಕರ ವಿವರಗಳ ಸಮೇತ ಬರೆದು ಕಳುಹಿಸಿರಿ.

ಛಾಯಾದೇವಿ : ಕಲೆ, ಕಲಾವಿದ ಹಾಗೂ ನಿಸರ್ಗದ ಕಲಾತ್ಮಕ ಚಿತ್ರಗಳನ್ನು ವೃತ್ತಿಪರ ಯಾ ಹವ್ಯಾಸಿ ಛಾಯಾಗ್ರಾಹಕರಿಂದ ಆಹ್ವಾನಿಸುತ್ತೇವೆ.

ಸವಿನೆನಪು : ಒಳಾಂಗಣ ಅಥವಾ ಹೊರಾಂಗಣ ಚಿತ್ರೀಕರಣದ ವೇಳೆ ನೀವು ಖ್ಯಾತ ನಟನಟಿಯರ ಜೊತೆಗಿದ್ದ ಚಿತ್ರಗಳನ್ನು ತೆಗೆಸಿರಬೇಕಲ್ಲವೇ? ಅಂಥ ಚಿತ್ರಗಳ ಕ್ಯಾಬಿನೆಟ್ ಸೈಜಿನ ಹೊಸ ಪ್ರತಿ ತೆಗೆದು ಚಿತ್ರದಲ್ಲಿರುವವರ ಹೆಸರುಗಳ ಸಮೇತ ಕಳುಹಿಸಿರಿ.

ಚೌರ : ಸಿನಿಮಾ ತಯಾರಿಸುವುದಾಗಿ ಪ್ರಸಿದ್ಧ ನಟನಟಿಯರನ್ನಾಗಿ ಮಾಡುತ್ತೇವೆ ಎಂದು ಆಸೆ ಆಮಿಷ ತೋರಿಸಿ ಅನೇಕರು ನಿಮಗೆ 'ಚೌರ' ಮಾಡಿರಬಹುದು. ಅಂಥ ಘಟನೆ ಮತ್ತು ವ್ಯಕ್ತಿಗಳ ಬಗ್ಗೆ ಸಂಕ್ಷಿಪ್ತವಾಗಿ ಬರೆದು ಕಳುಹಿಸಿರಿ.

ಪ್ರೇಕ್ಷಕರ ಪ್ರಶಸ್ತಿ : ಎಲ್ಲಾ ಕನ್ನಡ ಚಿತ್ರಗಳನ್ನು ನೋಡಿ. ತಕ್ಷಣ ವಿಮರ್ಶೆ ಬರೆದು ಚಿತ್ರದೀಪಕ್ಕೆ ಕಳುಹಿಸಿರಿ. ಜನವರಿಯಿಂದ ಡಿಸೆಂಬರ್‌ವರೆಗೆ ಬಿಡುಗಡೆಯಾಗುವ ಎಲ್ಲಾ ಕನ್ನಡ ಚಿತ್ರಗಳ ವಿಮರ್ಶೆಗಳನ್ನು ಸಂಗ್ರಹಿಸಿ ೧೯೭೭ರ ಶ್ರೇಷ್ಠ ಚಿತ್ರ, ಶ್ರೇಷ್ಠ ಕಲಾವಿದರು ಮತ್ತು ಶ್ರೇಷ್ಠ ತಂತ್ರಜ್ಞರಿಗೆ ಪ್ರೇಕ್ಷಕರ ಪ್ರಶಸ್ತಿ ನೀಡಲು ಚಿತ್ರದೀಪ ಯೋಜನೆಯೊಂದನ್ನು ನಿರೂಪಿಸಿದೆ. ಅದ್ದರಿಂದ ಈಗಲೇ ವಿಮರ್ಶಾ ಪ್ರಜ್ಞೆ ಬೆಳೆಸಲು ಎಲ್ಲಾ ಕನ್ನಡ ಚಿತ್ರಗಳನ್ನು ನೋಡಿರಿ. ಇದರಿಂದ ಚಿತ್ರೋದ್ಯಮವೂ ಬೆಳೆಯುತ್ತದೆ. ನಿಷ್ಪಕ್ಷಪಾತ ಪ್ರಶಸ್ತಿಯೂ ಲಭಿಸುತ್ತದೆ.

"ಚಿತ್ರದೀಪ" ದಲ್ಲಿ ಪ್ರಕಟವಾಗುವ ಎಲ್ಲಾ ಚಿತ್ರಗಳಿಗೂ, ಲೇಖನಗಳಿಗೂ ಯೋಗ್ಯ ಸಂಭಾವನೆ ಉಂಟು,

ಸಂಪಾದಕ "ಚಿತ್ರದೀಪ"
ಜನತಾಕರ್ನಾಟಕ ನ್ಯೂಸ್ ಪ್ರಿಂಟರ್ಸ್ ಲಿ.,
೧೦೫, ೧ನೇ ಮೇನ್ ರಸ್ತೆ,
ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು–೫೬೦೦೦೩.

ಮುಂತಾಗಿ ಫರ್ಮಾನನ್ನು ಗಣಿತಚರಿತ್ರಕಾರರು ವರ್ಣಿಸಿದ್ದಾರೆ. ಅವನ ಗಣಿತಪ್ರೇಮಂತಿಕೆಯನ್ನು ಅರಿತಿದ್ದ ಮುಂದಿನ ಪೀಳಿಗೆಯ ಗಣಿತ-ವಿದರು ಫರ್ಮಾ ಕಂಡಿದ್ದ, ಆದ್ದರಿಂದ ನಿಜಕ್ಕೂ ಅಸ್ತಿತ್ವ ಪಡೆದಿದ್ದ, ಆದರೆ ತಮಗೆ ಉಪಲಬ್ಧವಿರದ, ಅಂತಿಮ ಪ್ರಮೇಯದ ಸಾಧನೆಯ ಶೋಧನೆಯಲ್ಲಿ ನಿರತರಾದರು. ಆ ಹಾದಿಯಲ್ಲಿ ಹಲವಾರು ನೂತನ ವಿಸ್ಮಯಕರ ಉಪೋತ್ಪನ್ನಗಳು ಅವರಿಗೆ ಲಭಿಸಿದುವು. ನವಶಾಖೆಗಳೇ ಉದಯಿಸಿದುವು. ಗಣಿತ ಸರ್ವಾಂಗಸುಂದರವಾಗಿ ವಿಕಸಿಸಿತು. ಇವೆಲ್ಲವೂ ನಿಜ. ಆದರೆ ಫರ್ಮಾ ಕಂಡಿದ್ದ ಆ "ಅತ್ಯಂತ ಅದ್ಭುತವಾದ ಸಾಧನೆ" ಮಾತ್ರ ಯಾರ ಕೈಗೂ ಎಟುಕಿರಲಿಲ್ಲ, ಎಲ್ಲರಿಗೂ ಕೈಗೊಟ್ಟಿತ್ತು.

ಗಣಿತಪ್ರಪಂಚದ ಈ ಚಿರಂತನ ಆಸಕ್ತಿಯನ್ನು ಗುರುತಿಸಿದ ಪ್ಯಾರಿಸ್ ಅಕ್ಯಾಡಮಿ 1816ರಲ್ಲಿ ಕಣಕ್ಕೆ ಇಳಿಯಿತು. ಫರ್ಮಾನ ಅಂತಿಮ ಪ್ರಮೇಯಕ್ಕೆ ಸಾಧನೆ ಒದಗಿಸುವವರಿಗೆ ಹಿರಿ ಮೊತ್ತದ ಬಹುಮಾನವಿತ್ತು ಗೌರವಿಸುವುದಾಗಿ ಅದು ಸಾರಿತು. ಆ ವೇಳೆಗೆ ಜೀವಂತನಾಗಿದ್ದ, ಪ್ರಪಂಚದ ಸಾರ್ವಕಾಲಿಕ ಸರ್ವಶ್ರೇಷ್ಠ ಗಣಿತ ವಿದ್ವಾಂಸರ ಪೈಕಿ ಒಬ್ಬನೆಂದು ಹೆಸರಾಂತ ಜರ್ಮನಿಯ ಕಾರ್ಲ್ ವಿಲ್‌ಹೆಲ್ಮ್ ಫ್ರೀಡರಿಶ್ ಗೌಸ್ (1777-1855) ಎಂಬಾತನ ಮುಂದೆ ಅವನ ಸ್ನೇಹಿತರು ಈ ಸವಾಲನ್ನು ಸ್ವೀಕರಿಸಿ ಸಾಧಿಸಲು ಹಲವಾರು ಆಮಿಷಗಳನ್ನು ಒಡ್ಡಿದರು. "ಪ್ಯಾರಿಸ್ ಬಹುಮಾನದ ಪ್ರಕಟಣೆಯತ್ತ ನನ್ನ ಗಮನ ಸೆಳೆದದ್ದಕ್ಕಾಗಿ ನಾನು ನಿಮಗೆ ಆಭಾರಿ ಆಗಿದ್ದೇನೆ. ಆದರೆ ಫರ್ಮಾನ ಅಂತಿಮ ಪ್ರಮೇಯ, ಕೇವಲ ಒಂಟಿ ಸವಾಲಾಗಿ ನನ್ನಲ್ಲಿ ಯಾವ ಕುತೂಹಲವನ್ನೂ ಪ್ರೇರಿಸದು. (ಆಸಕ್ತ ವಿಷಯಗಳನ್ನು ಅಧ್ಯಯನ ಮಾಡುವ ಬೇಸಿನಲ್ಲಿ ಎದುರಾಗುವ ಸವಾಲುಗಳು ಮಾತ್ರ ನನ್ನಲ್ಲಿ ಕುತೂಹಲವನ್ನು ಪ್ರಚೋದಿಸುತ್ತವೆ-ಲೇ.) ಏಕೆಂದರೆ ರುಜುವಾತಿಸಲು ಅಥವಾ ನಿವಾರಿಸಲು ಸಾಧ್ಯವಾಗದ ಇಂಥ ಸಾಕಷ್ಟು ಹೇಳಿಕೆಗಳನ್ನು ನಾನು ಅತಿ ಸುಲಭವಾಗಿ ಮಂಡಿಸಬಲ್ಲೆ" ಎಂಬ ಮಾತುಗಳಿಂದ ಗೌಸ್ ಇದನ್ನು ಲಘುವಾಗಿ ಬದಿಗೊತ್ತಿದ.

ಚಿನ್ನದ ಮೊಟ್ಟೆ ಇಡುವ ಹೇಂಟೆ

ಪ್ರಸಕ್ತ ಶತಮಾನ ಉರುಳುವ ಹೊತ್ತಿಗೆ ಫರ್ಮಾನ ಅಂತಿಮ ಪ್ರಮೇಯ ವರ್ತಮಾನ ಯುಗದ ಅಸಾಧಿತ ಮಹಾಸಮಸ್ಯೆಗಳ ಪೈಕಿ ಒಂದು ಎಂಬ ಉಚ್ಚ ಅಂತಸ್ತು ಪಡೆದಿತ್ತು. ಇದನ್ನು ಗಮನಿಸಿದೋ? ಎಂಬಂತೆ ಜರ್ಮನಿಯ ಪ್ರೊಫೆಸರ್ ಪಾಲ್ ವೂಲ್ಫ್‌ಸ್ಕೇಲ್ ಎಂಬಾತ ಈ ಪ್ರಮೇಯಕ್ಕೆ ಸಂಪೂರ್ಣ ಸಾಧನೆ ಒದಗಿಸುವಾತನಿಗೆ ಒಂದು ಲಕ್ಷ ಮಾರ್ಕುಗಳ ಧನ ಬಹುಮಾನವೀಯುವುದಾಗಿ ಘೋಷಿಸಿ (1908) ಅದನ್ನು ವಿತರಿಸಲು ನ್ಯಾಸವನ್ನು ರೂಪಿಸಿದ.

ಸಾರಿಗೆ, ಸಂಪರ್ಕ, ಪ್ರಚಾರ, ಮುದ್ರಣ ಮೊದಲಾದವು ತೀವ್ರವಾಗಿ ವೃದ್ಧಿಗೊಂಡ ಇಪ್ಪತ್ತನೆಯ ಶತಮಾನದಲ್ಲಿ ಈ ಸವಾಲು ಬಹುಸಂಖ್ಯಾತ ಗಣಿತಾಸಕ್ತರ ಲಕ್ಷ್ಯವನ್ನು ಸೆಳೆಯಿತು. ಹಿರಿಯರು ಕಿರಿಯರು ಎಲ್ಲರೂ ಇದರತ್ತ, ಅಥವಾ ಇದು ಹುದುಗಿಸಿಟ್ಟುಕೊಂಡಿದ್ದ ಚಿನ್ನದತ್ತ, ಧಾವಿಸಲಾರಂಭಿಸಿದರು. "ನಾನು ಫರ್ಮಾನ ಅಂತಿಮ ಪ್ರಮೇಯದ ಸಾಧನೆ ಪಡೆಯುವುದರಲ್ಲಿ ನಿರತನಾಗಿದ್ದೇನೆ" ಎಂದು ಹೇಳಿಕೊಳ್ಳುವುದು ಪಂಡಿತರ ಸಂಗದಲ್ಲಿ, ಅವರಿಗಿಂತ ಮಿಗಿಲಾಗಿ ಪಾಮರರ ಸಂಗದಲ್ಲಿ, ಬೌದ್ಧಿಕ ಅಂತಸ್ತಿನ ಪ್ರತೀಕವಾಗಿತ್ತು. ಇಂಥ ಆಸಕ್ತಿಯಿಂದ ಹೊರಬಂದ "ಸಾಧನೆ"ಗಳ ಹರಿವಿಗೆ ಎಡೆ ತಡೆ ಇರಲಿಲ್ಲ. ಅನುಸ್ಯೂತ ಪ್ರವಾಹವದು. ಇದರಿಂದ ಗಣಿತಕ್ಕೇನೋ ಅಪಾರ ಲಾಭವಾಯಿತು. ಆದರೆ ಫರ್ಮಾನ ಅಂತಿಮ ಪ್ರಮೇಯದ "ಮುಚ್ಚಿದ್ದ ಅಲಿಬಾಬನ ಗವಿಬಾಗಿಲು" ತೆರೆಯಿತೇ? ಇಲ್ಲ. ತಾವು ಸಮರ್ಪಕವಾದ ಹಾಗೂ ಸಂಪೂರ್ಣವಾದ ಸಾಧನೆ ಪಡೆದಿದ್ದೇವೆಂದೇ ಈ ಸಾಧಕರು "ಪ್ರಾಮಾಣಿಕವಾಗಿ" ನಂಬಿ ತಮ್ಮ "ಸಾಧನೆ"ಗಳನ್ನು ಜರ್ಮನಿಯ ನ್ಯಾಸಕ್ಕೆ ಬಹುಮಾನಕ್ಕಾಗಿ ಕಳಿಸುತ್ತಿದ್ದರು. ಅಪ್ರಾಮಾಣಿಕ ವ್ಯವಹಾರವೂ ಇಲ್ಲಿ ಸಾಕಷ್ಟು ಕುದುರಿತ್ತು. ಗತ ಶತಮಾನಗಳಲ್ಲಿ ಪ್ರಕಟವಾಗಿ ತಪ್ಪೆಂದು ಮೂಲೆಗುಂಪಾಗಿದ್ದ ಇತಿಹಾಸದ ಕಸಗಳನ್ನು ಈ ಚೋರರು ಬುದ್ಧಿಪೂರ್ವಕವಾಗಿ ಕದ್ದೆತ್ತಿ, ಅವನ್ನು ಆಧುನಿಕ ಗಣಿತದ ಪರಿಭಾಷೆಯಿಂದ ಸಿಂಗರಿಸಿ ಸ್ವಂತ "ಸಾಧನೆ"ಗಳೆಂದು ಚಲಾಯಿಸುವ

ಅನ್ಯವಹಾರವೇನೂ ಕಡಿಮೆ ಇರಲಿಲ್ಲ.

ಡೇವಿಡ್ ಹಿಲ್‌ಬರ್ಟ್ (1862–1943) ಜರ್ಮನಿಯ ಗಣಿತವಿದ್ವಾಂಸ. ಈತನನ್ನು ಈ ಯುಗದ ಗಣಿತಪ್ರಜ್ಞೆಯ ಪ್ರತೀಕ, ಗಣಿತಶಾಸ್ತ್ರ ಹಲವಾರು ವಿಭಾಗಗಳಾಗಿ ಒಡೆದುಹೋಗಿ ಒಂದೊಂದು ವಿಭಾಗವೂ ಮಹಾನದಿಯಾಗಿ ವಿಶೇಷೀಕರಣಗೊಂಡು ಪ್ರವಹಿಸಲು ತೊಡಗುವ ಮೊದಲು ಇದ್ದ ವಿಶ್ವಗಣಿತವಿದ್ವಾಂಸರ ಪೈಕಿ ಕೊನೆಯವನು ಎಂದು ಮುಂತಾಗಿ ಅರ್ಥಪೂರ್ಣವಾಗಿ ವರ್ಣಿಸುವುದುಂಟು. ಪ್ರಪಂಚದ ಎಲ್ಲೆಡೆಗಳಿಂದ ಜರ್ಮನಿಯ ನ್ಯಾಸಕ್ಕೆ ಹರಿದುಬರುತ್ತಿದ್ದ ಫರ್ಮಾನ ಅಂತಿಮ ಪ್ರಮೇಯದ "ಸಾಧನೆ"ಗಳನ್ನು ತಪಾಸಿಸಲು ನೇಮಕಗೊಂಡಿದ್ದ ಬಹುಮಾನಸಮಿತಿಯ ಅಧ್ಯಕ್ಷ ಹಿಲ್‌ಬರ್ಟ್. ಸ್ವತಃ ಈತನೇ ರಂಗಪ್ರವೇಶ ಮಾಡಿ ಬಹುಮಾನನಿಧಿಯನ್ನು ಗಿಟ್ಟಿಸಬಹುದಿತ್ತೋ ಏನೋ! ಆದರೆ ಇವನು ಉದ್ದೇಶಪೂರ್ವಕವಾಗಿ ಆ ಪ್ರಲೋಭನೆಯಿಂದ ದೂರ ಉಳಿದು ಇತರರಿಗೆ ಸ್ಪರ್ಧಿಸಲು ಎಡೆಮಾಡಿಕೊಟ್ಟ.

"ಫರ್ಮಾನ ಅಂತಿಮ ಪ್ರಮೇಯಕ್ಕೆ ಸಾಧನೆ ಕೊಟ್ಟಿದ್ದೇನೆ ಎಂದು ಯಾರೇ ಹೇಳಲಿ ಅದರಲ್ಲಿ ಏನೋ ಐಬು ನುಸುಳಿರುವುದು ಖಾತ್ರಿ. ಅದು ಏನೆಂದು ಪತ್ತೆ ಹಚ್ಚು" ಎಂದು ಹಿಲ್‌ಬರ್ಟ್ ತನ್ನ ಅನುಯಾಯಿಗಳಿಗೆ ಹೇಳುತ್ತಿದ್ದನಂತೆ. ಅಂದರೆ ಈ ಪ್ರಮೇಯದ ಬಗ್ಗೆ ಅವನ ನಿಲವು ಏನಿತ್ತೆಂದು ಪರೋಕ್ಷವಾಗಿ ಊಹಿಸಬಹುದು.


ಮೊದಲ ಜರಡಿಯಲ್ಲಿ ಉಳಿಯುವ "ಕಾಳು"ಗಳು ಸಮಿತಿಯ ಮುಂದೆ ಹೋಗುತ್ತಿದ್ದುವು. ಖುದ್ದು ಹಿಲ್‌ಬರ್ಟನೇ ಅಧ್ಯಕ್ಷನಾಗಿದ್ದ ಈ ಸಮಿತಿ ಈ ಕಾಳುಗಳ ಒಳಗೆ ಹುದುಗಿದ್ದ ಸೂಕ್ಷ್ಮದೋಷಗಳನ್ನು ಗುರುತಿಸಿ ಇವು ಕೂಡ ಜಳ್ಳುಗಳೆಂದೇ ತಿರಸ್ಕರಿಸುತ್ತಿತ್ತು. ಪ್ರಪಂಚದ ಶ್ರೇಷ್ಠ ಗಣಿತವಿದರು ಸದಸ್ಯರಾಗಿದ್ದ ಸಮಿತಿ ತನ್ನ ತೀವ್ರ ಚರ್ಚೆಯ ವೇಳೆ ಪದೇ ಪದೇ ಅಧ್ಯಕ್ಷ ಹಿಲ್‌ಬರ್ಟನಿಗೆ ಆತ ಗಣಿತದೇವಿಯ ಈ ರತ್ನಭಂಡಾರದ ಬೀಗ ಮುದ್ರೆಯನ್ನು ಒಡೆಯಬೇಕು, ಆತ ಒಬ್ಬನೇ ಈ ಮಹಾಕಾರ್ಯ ನಿರ್ವಹಿಸಲು ಶಕ್ತ ಎಂಬುದಾಗಿ ಅರಿಕೆ ಸಲ್ಲಿಸುತ್ತಿತ್ತು. ಹಿಲ್‌ಬರ್ಟ್ ನೀಡುತ್ತಿದ್ದ ಉತ್ತರದ ಸಾರಾಂಶ ಸ್ವಾರಸ್ಯಪೂರ್ಣವಾಗಿದೆ: "ಪ್ರಾಯಶಃ ನಾನೊಬ್ಬ ಮಾತ್ರ ಈ ಶಿವಧನುಸ್ಸನ್ನು ಹಿಡಿದೆತ್ತಿ ಹೂಜಿನಿಮಿಡಿಯಲು ಸಮರ್ಥನಾಗಿರುವುದು ಅದ್ಭುತವೇ ಸರಿ. ಆದರೆ ಇಷ್ಟೊಂದು ಉತ್ಕೃಷ್ಟವಾದ ಚಿನ್ನದ ಮೊಟ್ಟೆಗಳನ್ನು ಇಡುವ ಈ ಹೇಂಟೆಯನ್ನು ಕೊಲ್ಲದಿರಲು ನಾನು ಎಚ್ಚರಿಕೆ ವಹಿಸಬೇಕು."

ವರ್ತಮಾನ ಸ್ಥಿತಿ

ಬಹುಮಾನವೊ ಅಪಮಾನವೊ ಸಂಖ್ಯಾಪ್ರಪಂಚದಲ್ಲಿ ಆಸಕ್ತರಾದ ಗಣಿತವಿದರ ಎದುರು ಇಂದಿಗೂ (1978) ಫರ್ಮಾನ ಅಂತಿಮ ಪ್ರಮೇಯ ಚಿದಂಬರರಹಸ್ಯವಾಗಿಯೇ ಉಳಿದಿದೆ. ಲೆಕ್ಕವಿಲ್ಲದಷ್ಟು ಗಣಿತಾಸಕ್ತರು, ವೃತ್ತಿಪರರು ಮತ್ತು ಹವ್ಯಾಸಿಗಳು ವರ್ಷ ವರ್ಷ ಇದರ ಸಾಧನೆಯ ದಿಶೆಯಲ್ಲಿ ಹೊಸ ಜಾಡುಗಳನ್ನು ಅರಸಿ ಗುರಿ ಕೈಗೆಟುಕಿತೆಂದು ಹರ್ಷಿಸಿ ತಮ್ಮ "ಸಾಧನೆ"ಗಳನ್ನು ಪ್ರಕಟಿಸುತ್ತಾರೆ. ಆದರೆ ಅವರ ಅತಿ ಪ್ರಜ್ಞಾವಂತ ಹಾಗೂ ಪರಿಪಕ್ವ ಧೀಮಂತಿಕೆಯ ಪದರನ್ನು ಕೂಡ ಯಾವುದೊ ಅನಂತಾಲ್ಪ ದೋಷ ಎಲ್ಲಿಯೊ ಬಲು ನಯವಾಗಿ ಅಡ್ಡಹಾಯ್ದು ಇಡೀ ಕೆನೆವಾಲಿನ ಭಾಂಡವನ್ನೇ ಹುಳಿ ಹಿಂಡಿ ಕೆಡಿಸಿಬಿಟ್ಟಿರುತ್ತದೆ; ಫರ್ಮಾನ ಮಾಯಾಮೃಗ ನುಣುಚಿ ಮರೆಯಾಗಿ ದೂರದಲ್ಲೆಲ್ಲೊ ಮತ್ತೆ ತಲೆಯೆತ್ತಿ ಛಿಡಿಸುತ್ತ ಗೆಣೆಳು ಹೊಯ್ದುಕೊಳ್ಳುತ್ತದೆ.

ಇಂದಿನ ಸ್ಥಿತಿ ಏನು? n ನ ಬೆಲೆ 3ರಿಂದ 25,000 ದ ವರೆಗೆ ಇರುವಾಗ $x^n + y^n = z^n$ ಡಯೊಫ್ಯಾಂಟೈನ್ ಸಮೀಕರಣವನ್ನು ತಾಳಿಪಡಿಸಬಲ್ಲ ಪೂರ್ಣಾಂಕಗಳು ಇಲ್ಲವೆಂದು ರುಜುವಾತಿಸಲಾಗಿದೆ. ಪೂರ್ಣಾಂಕಗಳ ಶ್ರೇಣಿ ಅನಂತ ಎಂಬುದನ್ನು ಗಮನಿಸುವಾಗ ಈಗಿನ "ಸಾಧನೆ" ನಿಜಕ್ಕೂ ಸಿಂಧುವಿನ ಎದುರಿನ ಬಿಂದು.

ಪ್ರತ್ಯುತ್ಪನ್ನಮತಿಗಳಿಗೆ ಪಂಥಾಹ್ವಾನ ಎಸೆಯುತ್ತ ಮೂರು ಶತಮಾನಗಳಿಗೂ ಮಿಕ್ಕಿ ನಿಂತಿದೆ ಫರ್ಮಾನ ಅಂತಿಮ ಪ್ರಮೇಯ. ಈ ಮತ್ಸ್ಯಯಂತ್ರವನ್ನು ಭೇದಿಸಬಲ್ಲ ಅರ್ಜುನ ಎಲ್ಲಿರುವನೊ! ಎಂದು ಬರುವನೊ!



ಎ. ವಿ. ಲಕ್ಷ್ಮೀನಾರಾಯಣ


ಹಳ್ಳಿಗಳ ನೈಜ ಬದುಕು-ನಗರ ಜೀವನದ ಒಣ ಥಳುಕು ಇವುಗಳ ಮಧ್ಯೆ ತೊಳಲಾಡುವವ ಈ ಕಥಾನಾಯಕ. ಒಂದನ್ನು ತಾನಾಗಿಯೇ ತಿರಸ್ಕರಿಸಿದ. ಆತ ಅದಕ್ಕಾಗಿ ಮತ್ತು ಇನ್ನೊಂದರಿಂದ ತಿರಸ್ಕರಿಸಲ್ಪಟ್ಟವನಾಗಿ ಪಶ್ಚಾತ್ತಾಪ ಪಡುತ್ತಾನೆ. ಸ್ನೇಹಜೀವಿಯಾಗಿ ದೂರದ ಬೆಟ್ಟ ನುಣ್ಣಗಿದೆಯೆಂದು ಭಾವಿಸುತ್ತಾನೆ. ತನ್ನ ಮನದಳಲನ್ನು ತೋಡಿಕೊಳ್ಳುತ್ತಾನೆ. ಇದೊಂದು ಹೊಸ ಬಗೆಯ ನಿರೂಪಣೆ.

ಬಿಚ್ಚರವಾದ ಮೇಲೆ ವಿನೋದನದ ರಾತ್ರಿಯ ಮಧುರರಂಜಿತ ಗೀತೆಗಳನ್ನು ಕೇಳುಕೊಂಡು, ನಾನು ಹಗಲಲ್ಲಿ ಬಿಳಿಚಿಕೊಂಡಿರುವ ಬೃಂದಾವನದ ನೆರಳಿನ ಮರಕ್ಕೊರಗಿ ಕೂತು ಈ ಕಥೆ ಹೇಳುತ್ತಿದ್ದೇನೆ.

ಬಹುಶಃ ಇಲ್ಲಿಂದ ಪ್ರಾರಂಭಿಸಬಹುದು.

ಅವತ್ತು ಸಿಟಿ ಆಫೀಸಿನಿಂದ ಪೀಣ್ಯದ ಫ್ಯಾಕ್ಟರಿಗೆ ಯಾವುದೋ ಕೆಲಸಗಾರರ ಮುಂಗಡದ ತರ ಲೆಕ್ಕ ಸರಿಪಡಿಸಿಕೊಂಡು ಬರುವುದಕ್ಕೆಂದು ಹೋಗಿದ್ದೆ ಅರ್ಧ ಗಂಟೆ ತಲೆ ಚಚ್ಚಿಕೊಳ್ಳುವಷ್ಟು ಹೊತ್ತಿ ಆಫೀಸಿನ ಫೋನ್ ಕರೆ:

"ನಿಮ್ಮನ್ನು ಹುಡುಕಿಕೊಂಡು ಯಾರೋ ಬಂ



ದ್ದಾರೆ."

ಹೆಸರು ಪಾಲಿಸಿ ಅಂತ: ಸಿಲೋನಿನಿಂದ ಬಂದಿದ್ದಾರಂತೆ.

ತೀರಾ ಅನಿರೀಕ್ಷಿತ; ಅಥವಾ ನಾವಿದನ್ನು ಬಯಸಿರಲಿಲ್ಲ.

"ಇಲ್ಲೇ ವೈಟ್ ಮಾಡೋಕೆ ಹೇಳ್ಲೋ ಅಥ್ವಾ ಅಲ್ಲಿಗೆ ಕಳಿಸ್ಲೋ?"

"ಏನೂ ಬೇಡ. ನಾನೇ ಬಂದ್ಬಿಟ್ಟೆ. ಇನ್ನರ್ಧ ಗಂಟೇಲಿ ಸಿಟಿ ಆಫೀಸ್ನಲ್ಲಿರ್ತೀನಿ. ಅವ್ರನ್ನ ಅಲ್ಲೇ ಕೂರಿಸ್ಕಂಡಿರಿ."

ಅವಸರ ಅವಸರವಾಗಿ ಲೆಕ್ಕ ಮುಗಿಸಿ ಹೊರಡಲು ಅಣಿಯಾದೆ. ಬಸ್ಸು ತಕ್ಷಣ ಸಿಗುವುದಿಲ್ಲ. ಬೇಗ ಬರುತ್ತೇನೆಂದು ಬೇರೆ ಹೇಳಿಬಿಟ್ಟಿದ್ದೇನೆ. ಆಕೆಯೂ ಕಾದು ಕಾದು ಬೇಜಾರು ಬರುವ ಹಾಗಾಗಬಾರದು.

ಅಡ್ಮಿನಿಸ್ಟ್ರೇಟಿವ್ ಆಫೀಸರರ ಬಳಿ ಹೋಗಿ, "ಸರ್, ಸಿಟಿ ಆಫೀಸಿನ ಕಡೆ ಯಾವುದಾದರೂ ಕಾರು ಹೋಗೋದಿದೆಯಾ?" ಅಂದೆ.

"ಈಗ್ತಾನೆ ಹೋಯ್ತಲ್ಲಪ್ಪ ಜೀಯೆಮ್ಮಾರು. ತಾಳು ಈಗ ಬಹುಶಃ ಕೋಳಿ ಆ ಕಡೆ ಹೋಗಬಹುದೂಂತ ಕಾಣುತ್ತೆ; ವಿಚಾರಿಸ್ತೀನಿ," ಅಂದವರು ಫೋನ್ ಮಾಡಿ, ನನ್ನ ಕಡೆ ತಿರುಗಿ, "ತಕ್ಷಣ ಗೇಟ್ ಹತ್ರ ಹೋಗು. ಅವ್ರು ಹೊರ್ಟಿದ್ದಾರಂತೆ" ಅಂದರು. ಕೊಪ್ಲಿ ನಮ್ಮ ಆಫೀಸರ ಬಾಯಿಯಲ್ಲಿ ಕೋಳಿಯಾಗಿದ್ದರು ಅಷ್ಟೆ. ನನಗೆ ಅರ್ಜೆಂಟಾದದ್ದರಿಂದ ಕೋಳಿಯಲ್ಲ ಯಾವುದೇ ಪ್ರಾಣಿಯ ಕಾರಿನಲ್ಲಿ ಹೋಗಲೂ ನಾನು ಸಿದ್ಧನಾಗಿದ್ದೆ. ಸದ್ಯ ಕಾರಿನಲ್ಲಿ ಸ್ಥಳಾವಕಾಶ ಇತ್ತು. ಇನ್ನರ್ಧ ಗಂಟೆಯೊಳಗೆ ಸಿಟಿ ಆಫೀಸಿನಲ್ಲಿರುತ್ತೇನೆ.

ಕೊಪ್ಲಿಯವರಿಗೆ ಹಿಂದಿಯನ್ನು ಬಿಟ್ಟು, ಮನುಷ್ಯರಾಡುವ ಯಾವುದೇ ಭಾಷೆಯೂ ಬರುತ್ತಿರಲಿಲ್ಲವಾದ್ದರಿಂದ, ನಾನು ನಿಶ್ಚಿಂತೆಯಾಗಿ ಹಿಂದಿನ ಸೀಟಿ

ಗೊರಗಿ ಕನಸು ಕಾಣತೊಡಗಿದೆ.

ಮಾಲಿನಿ ಕಾಯುತ್ತಿದ್ದಾಳೆ.

ಇದು ಪ್ರಾರಂಭವಾದದ್ದು ಬಹುಶಃ ಹೀಗೆ:

ಆಫೀಸಿನಲ್ಲಿ ನಾವು ಸುಮಾರು ಇಪ್ಪತ್ತೂ ಚಿಲ್ಲರೆ ಜನರಿದ್ದೇವೆ. ಅಕೌಂಟ್ಸ್ ವಿಭಾಗವಾದ್ದರಿಂದ ನಾನು ಸರಿಯಾದ ಸಂಖ್ಯೆ ಹೇಳಬೇಕು. ಇಪ್ಪತ್ತಮೂರು. ಯಥಾಪ್ರಕಾರ ನಾವು ಒಂದೊಂದು ದ್ವೀಪಗಳು. ಆಡುವ ಅಲ್ಪಸ್ವಲ್ಪ ಮಾತುಗಳೂ ನಮ್ಮ ಕೆಲಸದ ಸುತ ಲೇ ಸುತ್ತಬೇಕು.

ಈ ಪ್ರಕಾರದಲ್ಲಿ ಕೆಲವು ಮನ್ವಂತರಗಳನ್ನು ಕಳೆದ ಮೇಲೆ,"ನಾವೆಲ್ಲಾ ಸೇರಿ,ಒಂದಿಷ್ಟು ಪೇಪರ್ರು, ಮ್ಯಾಗಜೀನು ತರಿಸಬಾರದೇಕೆ ? ಜಗತ್ತಿನಲ್ಲಿ ಏನೇನು ನಡೀತಿದೇಂತ ನಮಗೂ ಗೋತ್ತಾಗೋದು ಬೇಡವೇ ?" ಎಂಬ ಸಲಹೆ, ಕ್ಯಾಷಿಯರ್‌ನ ಪಕ್ಕದ ಟೇಬಲಿನಿಂದ ಬಂತು.

ಹೌದು, ನಮ್ಮ ರಾಜಕೀಯ ಸಾಮಾಜಿಕ ಪ್ರಶ್ನೆ ಎಲ್ಲರಿಗೂ ಗೊತ್ತಿದ್ದದ್ದೇ. ಯಾವಾಗಲೂ ಪ್ರಸ್ತುತ ಪರಿಸ್ಥಿತಿಯ ಬಗ್ಗೆ 'ಇವರು ಬಂದ ಮೇಲೆ ದೇಶ ಹಾಳಾಗ್ಹೋಯ್ತು' ಅನ್ನುವ ಮಾತನ್ನು ಬಿಟ್ಟರೆ ಬೇರೆ ಯಾವುದೇ ವಿಮರ್ಶೆಗೆ ಯಾರೂ ಶಕ್ತರಿರಲಿಲ್ಲ.

ಬೆಳಿಗ್ಗೆ ಮನೆ ಬಿಡುವಾಗ ಪತ್ರಿಕೆ ಬಂದಿರುವು ದಿಲ್ಲ. ಸಂಜೆ ಹೋಗುವಾಗ ಅದು ಹಳೆಯದಾಗಿರುವುದರಿಂದ ನೆರೆ ಹೊರೆಯವರು ಓದಲು ತೆಗೆದುಕೊಂಡು ಹೋಗಿರುತ್ತಾರೆ. ಹೀಗಾಗಿ ನಮಗೆ ಆಫೀಸಿನ ಒಂದಿಷ್ಟು ಮುಖಗಳು, ಮನೆಯ ಒಂದಿಷ್ಟು ಮುಖಗಳನ್ನು ಬಿಟ್ಟರೆ ಬೇರೆಲ್ಲ ಅಪ-ರಿಚಿತ ಮತ್ತು ನಮ್ಮ ಆಫೀಸಿನ ಮುಖ ಮನೆಗೆ, ಮನೆಯ ಮುಖ ಆಫೀಸಿಗೆ ಅಪರಿಚಿತ.

ಆಶ್ಚರ್ಯವಾಗುತ್ತದೆ. ನಾವು ಬದುಕಿನ ಅಮೂಲ್ಯ ವೇಳೆಯ ಬಹುಭಾಗವನ್ನು, ಈ ಆಫೀಸಿನ ಕೆಲಸದಲ್ಲಿ ಕಳೆಯುತ್ತಿದ್ದೇವೆ. ಆದರೆ ನಾವು ಏನು ಕೆಲಸ ಮಾಡುತ್ತೇವೆ. ಹೇಗೆ ಮಾಡುತ್ತೇವೆ ಅನ್ನುವುದು ಸ್ನೇಹಿತರ ಪಾಲಿಗೆ, ಮನೆಯವರ ಪಾಲಿಗೆ ಗೌಣ. ಇವರಿಗೆ, ಬಂಧು ಬಳಗಕ್ಕೆ ಹೇಳಿಕೊಳ್ಳುವುದಕ್ಕೊಂದು ಒಳ್ಳೆಯ ಹುದ್ದೆ ಬೇಕೇ ಹೊರತು ಈ ಆಫೀಸಿನ ಬದುಕಿಗೆ ಮತ್ತಾವ ಬೆಲೆಯೂ ಇಲ್ಲ. ಅದರಲ್ಲೂ ಲೆಕ್ಕಪತ್ರದ ಈ ವ್ಯವಹಾರಕ್ಕೂ ಬದುಕಿನ ಮಾಂಸಖಂಡಗಳಿಗೂ ಬಹು ದೂರ.

ಹೀಗಾಗಿ ಆ ಟೇಬಲ್ಲಿನ ಸಲಹೆ ನಮ್ಮಲ್ಲಿ ಹೊಸ ಉತ್ಸಾಹವನ್ನೂಕುತೂಹಲವನ್ನೂತುಂಬಿತು. ಯಾರ್ಯಾರು ಎಷ್ಟೆಷ್ಟು ಹಣ ಹಾಕಬೇಕು, ಯಾವ ಯಾವ ಪತ್ರಿಕೆ ತರಿಸಬೇಕು, ಓದುವ ಸರದಿ ಹೇಗೆ ಮುಂತಾದುವೆಲ್ಲ ತೀರ್ಮಾನವಾದವು. ಸಂಗ್ರಹಿಸಿದ ಹಣದ ಲೆಕ್ಕ ಪತ್ರ ಇಡುವ ಕಾರ್ಯ, ಪತ್ರಿಕೆಗಳನ್ನು ತರಿಸುವ ಕೆಲಸ ಯೋಗ್ಯವಾಗಿ ನಡೆಯಬೇಕಾಗಿರುವದರಿಂದ ಅದನ್ನು ಶಿಸ್ತಿನ ಸುಬ್ಬಣ್ಣನವರಿಗೆ ವಹಿಸಲಾಯಿತು. 'ಶಿಸ್ತು' ಎಂಬ ಅಕ್ಷರಗಳು ಅವರ ಹೆಸರಿನ ಒಂದು ಅಂಗವಾಗಿ ಬಿಟ್ಟಿವೆ. ಹೆಂಡತಿಯ ಜೊತೆಯ ಸಂಬಂಧದಲ್ಲೂ ಅವರು ಅಶಿಸ್ತಿಗೆಡೆಗೊಡುವುದಿಲ್ಲವೆಂದು ಪ್ರತೀತಿ.

ಈ ಪತ್ರಿಕೆಗಳು ಬದುಕಿಗೊಂದಿಷ್ಟು ಚುರುಕು ಮುಟ್ಟಿಸಿದವು. ನಿವೃತ್ತ ವಯಸ್ಸಿಗೆ ಬಂದವರು ಮ್ಯಾಟ್ರಿಮೋನಿಯಲ್ ಕಾಲಮ್ಮನ್ನೂ ಕೆಲಸ ಖಾಯಂ ಆದವರು ಚಿಲ್ಲರೆ ವಾಂಟೆಡ್ ಕಾಲಮ್ಮ-ನ್ನೂ ನಿಶ್ಚಿಂತೆಯಿಂದ ನೋಡುತ್ತಿದ್ದೆವು.

'ಹೊಸದಾಗಿ ಪ್ರಾರಂಭವಾದ ಸಂಸ್ಥೆಗೆ ತರುಣರೂ ಉತ್ಸಾಹಶಾಲಿಗಳೂ ಆದ ಅಕೌಂಟೆಂಟ್ಸ್ ಬೇಕಾಗಿದ್ದಾರೆ, ರಿಟೈರ್ ಆದವರಿಗೆ ಆದ್ಯತೆ.' 'ನಮ್ಮ ಸಂಸ್ಥೆಗೆ ಟ್ರಾವೆಲಿಂಗ್ ಸೇಲ್ಸ್‌ಮ್ಯಾನ್–ಕಂ–ಸ್ಟೆನೊಗ್ರಾಫರ್ ಬೇಕಾಗಿದ್ದಾರೆ' ಮುಂತಾದ ಜಾಹೀರಾತುಗಳನ್ನು ನೋಡಿ ಖುಷಿಪಟ್ಟದ್ದು, 'ನಾನು ಕೊಟ್ರಕೊರಮಯ್ಯ ಎಂಬ ನನ್ನ ಹೆಸರನ್ನು ಕೊಟ್ರಕೊರಮಪ್ಪ ಎಂದು ಬದಲಾಯಿಸಿಕೊಂಡಿದ್ದೇನೆ' ಎಂಬ ಜಾಹೀರಾತಿನಿಂದ ಆನಂದತುಂದಿಲರಾದದ್ದೂ ಇದೇ ದಿನಗಳಲ್ಲಿ.

ಒಂದು ಸಂಜೆ, ಆಫೀಸುವೇಳೆ ಮುಗಿದಮೇಲೆ ಇಂಗ್ಲಿಷ್ ಮಾಸಿಕವೊಂದರ ಹಾಳೆ ತಿರುವಿಹಾಕುತ್ತಾ ಸೀಟಿನಲ್ಲೆ ಕೂತಿದ್ದೆ. ಮೇಜಿನ ಮೇಲೆ ಇನ್ನೂ ಒಂದೆರಡು ಪತ್ರಿಕೆಗಳಿದ್ದರೂ, ಬೇರೆಯವರು ಓದುವುದನ್ನೇ ನೋಡುವ ಅಭ್ಯಾಸ ಸಹಜವಾದ್ದರಿಂದ ನನ್ನ ಬಲಭುಜ, ಎಡಭುಜ ಹಾಗೂ ಮುಂಭಾಗಗಳಲ್ಲಿ ಮೂವರು ಸಹೋದ್ಯೋಗಿಗಳು ನನ್ನ ಕೈಯ್ಯಲ್ಲಿದ್ದ ಪತ್ರಿಕೆಯ ಮೇಲೆ ಗಮನವನ್ನು

ಕೇಂದ್ರೀಕರಿಸಿದ್ದರು.

ಪೆನ್ ಫ್ರೆಂಡ್ಸ್ ಕಾಲಂ ಬಂದಾಗ ಹಾಗೇ ಹಾಳೆ ಮುಗುಚಿದೆ;

"ಏನ್ಸಾರ್ ನೀವು? ಇಂಪಾರ್ಟೆಂಟ್ ಪೇಜನ್ನೇ ಹಾರಿಸ್ತೀರಲ್ಲ, ಸ್ವಲ್ಪ ಇರಿ ಸಾರ್," ಎಂದು ಮೂವರೂ ಹಿಂದಿನ ಹಾಳೆಗೆ ಬಂದರು.

"ನೋಡೋಣ; ಯಾವುದಾದರೂ ಸುಂದರಾಂಗಿಯರ ವಿಳಾಸ ಸಿಕ್ಕೀತೋ" ಎಂದು ಹೆಸರುಗಳನ್ನು ಓದಿದರು. ನನಗೂ ಕೊಂಚ ಕುತೂಹಲ ಕೆರಳಿ ನೋಡುತ್ತಿದ್ದಾಗ "ಸಾರ್, ಇವತ್ತು ಈ ಪುಸ್ತಕ ಕೊಡ್ತೀರಾ ಸಾರ್? ಒಂದೆರಡು ಅಡ್ರೆಸ್ ನೋಟ್ ಮಾಡ್ಕೊಂಡು ಕೊಟ್ಬಿಡ್ತೀವಿ" ಎಂದು ದುಂಬಾಲು ಬಿದ್ದರು.

"ಸ್ವಾಮಿ, ನಾನು ತಗೊಂಡಿರೋದೇ ಇವತ್ತು. ಇನ್ನೂ ಎರಡು ದಿನ ಟೈಮಿದೆ. ಆಮೇಲೆ ಏನು ಬೇಕಾದ್ರೂ ಮಾಡ್ಕೊಳ್ಳಿ" ಎಂದೆ. ಹಾಗಾದ್ರೆ "ಇಲ್ಲೇ ಅಡ್ರೆಸ್ ನೋಟ್ ಮಾಡ್ಕೋತೀವಿ" ಎಂದಾಗ ನನಗೆ, "ಟೈಮಿಲ್ಲಾರೀ ಹೊರಟೆ" ಎಂದು ಹೇಳಿ ಪುಸ್ತಕ ಕೈಯಲ್ಲಿ ಹಿಡಿದು ಅವಸರವಸರವಾಗಿ ಹೊರಟೆ; ಕಾರಣ—ನನಗೂ ಪತ್ರ ಬರೆಯುವ ಆಸೆಯಾದದ್ದು ಮತ್ತು ನಾನು ಬರೆಯಬಹುದಾದವರಿಗೆ ಬೇರೆ ಯಾರೂ ಬರೆಯಲು ನನಗಿಷ್ಟವಿಲ್ಲದ್ದು ಇದನ್ನು ಈಗ ಒಪ್ಪಿಕೊಳ್ಳಬಹುದು.

ಮನೆಗೆ ಬರುವಾಗ ಬಸ್ಸಿನಲ್ಲಿ ಮತ್ತೆ ಪುಸ್ತಕ ತೆರೆದು ವಿಳಾಸಗಳ ಸಾಲು ಸಾಲು ಹುಡುಕಿದೆ. ನನಗೆ ತೀರಾ ಅಪರಿಚಿತವಾದ, ವಿದೇಶೀಯಳಾದ, ನನ್ನೆಲ್ಲ ಗುಣಗಳಿಗೂ ವಿರುದ್ಧವಾದ ಗುಣಗಳಿರುವ ವ್ಯಕ್ತಿಯ ಸ್ನೇಹದಿಂದ ಬದುಕಿಗೊಂದು ಹೊಸ ತಿರುವು ಬರಬಹುದೆಂದು ಹುಡುಕಿದೆ.

ಭಾರತೀಯ ಹೆಸರೇ ಮಸ್ತಾಗಿ ಇದ್ದದ್ದು. ಜೊತೆಗೆ ಅಲ್ಲೊಂದು ಇಲ್ಲೊಂದು ಪರದೇಶಿಗಳು. ಈ ಹುಡುಕಾಟದ ಕೊನೆಗೆ ದೊರೆತವಳು ಮಾಲಿನಿ.

ಹೆಸರು ಮಾಲಿನಿ; ವಯಸ್ಸು ಇಪ್ಪತ್ತುಮೂರು; ಹವ್ಯಾಸಗಳು: ಇಂಗ್ಲಿಷ್ ಮ್ಯೂಸಿಕ್, ಸಿನಿಮಾ, ಪ್ರವಾಸ, ವಿಳಾಸ: ಕೊಲಂಬೋ, ಶ್ರೀಲಂಕಾ.

ಆಗಬಹುದು, ಹೆಚ್ಚುಕಡಿಮೆ ಎಲ್ಲಾ ಗುಣಗಳು ನನಗೆ ವಿರುದ್ಧವೇ. ಹಳ್ಳೀ ಹಾಡುಗಳನ್ನು ಬಿಟ್ಟರೆ ಬೇರೆ ಸಂಗೀತ ಗೊತ್ತಿಲ್ಲದ ನನಗೆ ಪಾಶ್ಚಾತ್ಯ ಸಂಗೀತ ಹಾಗಿರಲಿ, ಭಾರತೀಯ ಶಿಷ್ಟ ಸಂಗೀತವೇ ಅಪರಿಚಿತ. ಸಿನಿಮಾಕ್ಕೂ ನನಗೂ ಯೋಜನಾಂತರ. ಇನ್ನು ಪ್ರವಾಸ; ನಮ್ಮ ಹಳ್ಳಿ ಬಿಟ್ಟರೆ ಕಂಡದ್ದು ಬೆಂಗಳೂರು–ಮೈಸೂರು. ಅದರಲ್ಲೂ ಚಾಮರಾಜಪೇಟೆ, ರಾಜಾಜಿನಗರ ಮತ್ತು ಸೌತ್‌ಎಂಡ್.

ನಿರ್ಧಾರ ಮಾಡಿ, ಪುಸ್ತಕ ಮಡಚಿ ಮನೆಗೆ ಬಂದೆ. ಮರುದಿನ ಆಫೀಸಿನ ಬಿಡುವಿನ ವೇಳೆಯಲ್ಲಿ ಬರೆಯಲು ಕೂತೆ.

ಜೀವಮಾನದಲ್ಲಿ ಬರೆಯುತ್ತಿರುವ ಮೊದಲ ಕಾಗದ. ಊರಲ್ಲಿದ್ದಾಗ ಸಂಬಂಧಿಕರು, ಸ್ನೇಹಿತರು, ಶತ್ರುಗಳು ಎಲ್ಲಾ ಊರಲ್ಲೇ ಇದ್ದರು. ಪತ್ರ ಬರೆಯುವ ಪ್ರಶ್ನೆಯೇ ಇಲ್ಲ. ಬೆಂಗಳೂರಿಗೆ ಹೇಳದೆ ಕೇಳದೇ ಓಡಿಬಂದವನಾದ್ದರಿಂದ ಬರೆಯಲಿಲ್ಲ; ಕಾಲೇಜಿನಲ್ಲಿ ವ್ಯಾವಹಾರಿಕ ಕನ್ನಡ ಕಲಿತದ್ದೆಷ್ಟೋ ಅಷ್ಟೇ.

'ಮಾನ್ಯರೇ, ನೀವು ನನಗೆ ಕೊಡಬೇಕಾದ ಬಾಕಿ ಸಾವಿರ ರೂಪಾಯಿಗಳನ್ನೂ ತಕ್ಷಣವೇ ಪಾವತಿ ಮಾಡದಿದ್ದಲ್ಲಿ ನಿಮ್ಮ ಮೇಲೆ ಕೋರ್ಟಿನಲ್ಲಿ ಕ್ರಮ ಜರುಗಿಸಲಾಗುವುದು. ವಿಶ್ವಾಸವಿರಲಿ. ಇಂತೀ... ನಿಮ್ಮ ಪ್ರೀತಿಯ' ಮುಂತಾಗಿ ಪತ್ರ ಬರೆಯುವುದನ್ನು ಹೇಳಿ ಕೊಟ್ಟಿದ್ದರೂ ಬರೆದದ್ದು ಪರೀಕ್ಷೆಗಷ್ಟೇ.

ಬಿಳಿಯ ಹಾಳೆಗಳನ್ನೂ ಜೋಡಿಸಿ ಕೂತಿದ್ದೇನೆ ಮೊದಲ ಪತ್ರ ಬರೆಯಲು. ವಿದೇಶಕ್ಕೆ, ಅದರಲ್ಲೂ ಒಂದು ಹೆಣ್ಣಿಗೆ.

ಯಾವ ವಿಶೇಷಣವನ್ನೂ ಹಚ್ಚದೇ, 'ಮಾಲಿನಿ' ಎಂದು ಪ್ರಾರಂಭಿಸಿ, ಒಂದೂವರೆ ಪುಟ ಬರೆದೆ. ನನಗೇ ಆಶ್ಚರ್ಯ, ಪತ್ರ ಇನ್ನೂ ಮುಗಿದಿಲ್ಲ.

ನಮ್ಮ ದೇಶದಲ್ಲಿ ಅತ್ಯಂತ ನಿಬಿಡವಾದ ವನ್ಯ ಪ್ರದೇಶದ ಕೊಂಪೆಯಿಂದ ಬೆಂಗಳೂರಿನಂಥ ನಗರಕ್ಕೆ ಬಂದು, ಈ ಅಜಗಜಾಂತರ ವ್ಯತ್ಯಾಸದ ವಿಸ್ಮಯಕ್ಕೆ ಮೂಕನಾಗಿ ಒಂದಿಷ್ಟು ವರ್ಷ ಕಳೆದೆ. ಕ್ರಮೇಣ ಎಲ್ಲವೂ ಹಳೆಯದಾಗಿ ಸವೆದುಹೋದವು. ಈ ಸವಕಲು ನೆಲದಲ್ಲಿ ತೆವಳುತ್ತಿರುವವನಿಗೆ ನಿನ್ನ ಪರಿಚಯ. ನೀನು ಬರೆಯಬಹುದಾದ ಪತ್ರ ಒಂದಿಷ್ಟು ಹೊಸ ಉಸಿರು ತುಂಬೀತು ಎಂದು ಕಾದಿದ್ದೇನೆ. ನಿನ್ನ ಅಭಿರುಚಿ, ಸಂಪ್ರದಾಯ ಈ ಹೊಸತನದ ನಿರೀಕ್ಷೆಗೆ ಕಾರಣ. ಯಾಕೆಂದರೆ ಇಲ್ಲಿ ನಾವು

ಭೇಟಿ ಮಾಡುವ ಜನಗಳು, ಸ್ನೇಹಿತರು ಹೆಚ್ಚು ಕಡಿಮೆ ಒಂದೇ ಗುಂಪಿನ ಭಾವದವರಾದ್ದರಿಂದ ಅಭಿಪ್ರಾಯಗಳ ಘರ್ಷಣೆಯಿಲ್ಲದೇ ಪ್ರಪಂಚ 'ಹೀಗೆ' ಎಂದು ನಿರ್ಧರಿಸಿದವರು. ಹೀಗಾಗಿ ನಮ್ಮ ವಿರುದ್ಧ ಗುಣದವರೊಡನೆಯೂ ಸಂಬಂಧ. ಆತ್ಮೀಯತೆ ಇಟ್ಟುಕೊಳ್ಳುವುದು ಸಾಧ್ಯವಾಗಿದ್ದರೆ ಎಷ್ಟು ಚೆನ್ನಿತ್ತು! ಒಂದು ದಿನ ಊರಿನ ಅಪ್ಪ ಅಮ್ಮನ ಸಂಬಂಧ ಕಡಿದುಕೊಂಡು ಈ ನಗರಕ್ಕೆ ಬಂದಹಾಗೆ ಅಂಥದೇ ಒಂದು ದಿನ ಈ ನಗರದ ದುರ್ಬಲ ರಕ್ತನಾಳಗಳ ಸಂಬಂಧ ಕತ್ತರಿಸಿಕೊಂಡು ದೇಶದಿಂದಾಚೆ ಬರಲು ಸಾಧ್ಯವಾಗಬಹುದಾದರೆ!

ಈ ನನ್ನ ನಾಡು ಮತ್ತು ನಿನ್ನ ನಾಡಿನ ನಡುವೆ ಭೋರ್ಗರೆಯುವ ಕಡಲಿಗೆ, ಬಾಯ್ತೆರೆದ ತಿಮಿಂಗಿಲಗಳು ಸುತ್ತುತ್ತ ಸೆಳೆಯುವ ಸುಳಿಗಳು. ಈಗಲೂ ಅಲ್ಲಲ್ಲಿ ರಾಮಸೇತುವೆಯ ಭಗ್ನಾವಶೇಷ ಇದೆಯಂತೆ; ನಾನು ಕಂಡಿಲ್ಲ. ಒಂದಲ್ಲ ಒಂದುದಿನ ಈ ಪ್ರಚಂಡ ಅಲೆಗಳ ಪರಿಳಿತದಲ್ಲಿ ತೇಲುತ್ತಾ, ಈಜಿ ಈಜಿ ಸಿಲೋನಿನ ಕಡಲ ತಡಿಯನ್ನು ತಬ್ಬಿಕೊಳ್ಳಬಾರದೆಂದಿಲ್ಲವಷ್ಟೇ!

ಮತ್ತೆರಡು ವಾರಗಳಲ್ಲಿ ಲಂಕೆಯಿಂದ ಸುಂದರ ವರ್ಣದ ಲಕೋಟೆಯೊಂದು ಆಫೀಸಿನ ನನ್ನ ವಿಳಾಸಕ್ಕೆ ಬಂತು. ವಿರಾಮದವರೆಗೆ ಹೇಗೋ ಕುತೂಹಲ ತಡೆದು. ವ್ಯವಧಾನವಾಗಿ ಪತ್ರ ಬಿಚ್ಚಿದೆ.

ನನ್ನ ಪತ್ರಕ್ಕೆ ಕೃತಜ್ಞತೆ. ಭಾರತದ ಬಗ್ಗೆ ಕುತೂಹಲ. ಆಗಾಗ್ಗೆ ಪತ್ರ ಬರೆಯಬೇಕೆಂಬ ಅಭಿಲಾಷೆ ಇವೆಲ್ಲಾ ಪತ್ರದಲ್ಲಿ. ಆದರೂ ನನ್ನ ಮೊದಲ ಕಾಗದದ ಬಗ್ಗೆ ಆಕೆಗೆ ಅಸಮಾಧಾನ.

'ಪತ್ರದ ಮಾತುಗಳು ಕುತೂಹಲ. ಉತ್ಸಾಹಕ್ಕಿಂತ ಹೆಚ್ಚಿಗೆ. ಯಾವುದೋ ನೋವು-ನಿರಾಶೆಯಿಂದ ತುಂಬಿದ ಹಾಗಿದೆ. ಎಷ್ಟೋ ಮಾತುಗಳು ನನ್ನ ವಯಸ್ಸಿಗೆ. ಬಹುಶಃ ನಿಮ್ಮ ವಯಸ್ಸಿಗೂ (ನಿಮ್ಮ ವಯಸ್ಸು ಗೊತ್ತಿಲ್ಲದಿದ್ದರೂ) ಮೀರಿದ ಅನಿಸಿಕೆ. ಅಲ್ಲದೇ ನೀವು ನಿಮ್ಮ ಬಗ್ಗೆ ಹೆಚ್ಚಾಗಿ ಏನೂ ಬರೆದಿಲ್ಲ. ಮುಂದಿನ ಪತ್ರದಲ್ಲಿ ವಿವರವಾಗಿ ಬರೆಯಿರಿ. ನಾನು ಮಾತ್ರ ನನ್ನ ಜೀವನದ ಚರಿತ್ರೆಯನ್ನು ನೀವು ಕೇಳದಿದ್ದರೂ ಬೇರೆ ಕೆಲಸವಿಲ್ಲದ್ದರಿಂದ ವಿವರವಾಗಿ ಬರೆಯುತ್ತೇನೆ. ಒಂದೇ ಸಾರಿ ಓದಲು ಬೇಸರವಾದರೆ ಕಂತಿನ ಪ್ರಕಾರ ಓದಿ. ಬೇಸರವಾದರೆ ಕ್ಷಮೆಯಿರಲಿ.

'ನಾನು ಈಗ ರಾಜಧಾನಿ ಕೊಲಂಬೋದಲ್ಲಿ ನೆಲಸಿದ್ದೇನಾದರೂ ಹುಟ್ಟೂರು ಒಂದು ಪುಟ್ಟ ಹಳ್ಳಿ. ದಟ್ಟ ಕಾಡಿನ ಪಕ್ಕದಲ್ಲಿ ನಮ್ಮ ಹಳ್ಳಿಯ ಮನೆಯಿತ್ತು. ಎಡಕ್ಕೆ ಇಳಿಜಾರಾದ ಟೀ ತೋಟ. ಎದುರಿಗೆ, ಕಣ್ಣು ಚಾಚಿದಷ್ಟು ದೂರ ಭತ್ತದ ಹಸಿರು ಗದ್ದೆ. ಇದಷ್ಟು ನಮಗೆ ಸೇರಿದ ಜಾಗವೇನಲ್ಲ. ನಮ್ಮ ಪಾಲಿಗೆ ಒಂದೆರಡು ಎಕರೆ ಮಾತ್ರ. ಜೊತೆಗೊಂದು ಕೈ ಹಂಚಿನ ಮನೆ.

'ಈ ಗದ್ದೆಯ ಅಂಚಿನಲ್ಲಿ ಚಿಮ್ಮುತ್ತ ನಡೆದ ದಿನಗಳ ನೆನಪು ಇನ್ನೂ ಹಸಿರು. ಯೋಚನೆಯಿಂದ ಕಣ್ಣು ಮಂಜಾಗುತ್ತದೆ. ಯಾಕೆಂದರೆ ಈಗ ಇವನ್ನೆಲ್ಲಾ ಕಳೆದುಕೊಂಡವಳು ನಾನು.

'ನಾನು ತೀರಾ ಚಿಕ್ಕವಳಿದ್ದಾಗ ಅಣ್ಣನನ್ನು ನಗರಕ್ಕೆ ವಿದ್ಯಾಭ್ಯಾಸಕ್ಕೆ ಕಳುಹಿಸಿದ್ದರು. ಅವನು ಅಭ್ಯಾಸವನ್ನು ಅರ್ಧಕ್ಕೆ ಕೈಬಿಟ್ಟು ವ್ಯಾಪಾರ, ವ್ಯವಹಾರ ಸುರುಹಚ್ಚಿದ. ತಂದೆಗೆ ತೀರಾ ಅಸಮಾಧಾನ. ಅವನನ್ನು ಹೇಗಾದರೂ, ಮರಳಿ ಅಭ್ಯಾಸಕ್ಕೆ ಹಚ್ಚಬೇಕೆಂಬ ಅವರ ಅಭಿಲಾಷೆ ನೆರವೇರುವ ಮೊದಲೇ ಹಠಾತ್ತಾಗಿ ಕಣ್ಣು ಮುಚ್ಚಿದರು.

'ಅಣ್ಣ ಮನೆಗೆ ಬಂದವನು ನಾಲ್ಕು ದಿನದ ಮೇಲೆ ಅಮ್ಮನ ಮನವೊಲಿಸಿ. ಜಮೀನನ್ನೆಲ್ಲಾ ಮಾರಿದ. ಮನೆಯನ್ನು ಮಾರುವ ಏರ್ಪಾಡು ನಡೆದಿದ್ದರೂ ಅಮ್ಮ ಬೇಡವೆಂದಿದ್ದಕ್ಕೆ. ಅದೊಂದು ಮಾತ್ರ ನಮ್ಮ ಪಾಲಿಗೆ ಉಳಿದಿದೆ. ವರ್ಷಕ್ಕೊಮ್ಮೆ ಹೋಗಿ ಸುಣ್ಣ ಬಣ್ಣ ಮಾಡಿಸಿ. ನಾಲ್ಕು ದಿನವಿದ್ದು ಬರುವ ಪರಿಪಾಠವನ್ನಂತೂ ಮರೆಯದೇ ಮುಂದುವರಿಸಿಕೊಂಡು ಬಂದಿದ್ದೇವೆ.

'ನೆಲ ಮಾರಿದ ಹಣದಿಂದ ಅಣ್ಣ ನಗರದಲ್ಲೊಂದು ಸಣ್ಣ ಕಾರ್ಖಾನೆ ಕೊಂಡುಕೊಂಡ. ಅವನು ಮೊದಲು ಅಲ್ಲೇ ಕೆಲಸ ಮಾಡುತ್ತ ವ್ಯಾಪಾರ ಮಾಡಿಕೊಂಡಿದ್ದನಂತೆ. ಆ ಕಾರ್ಖಾನೆ ಚೆನ್ನಾಗಿ ನಡೆಯತೊಡಗಿತು. ನಾನು ಕೊಲಂಬೋಗೆ ಬಂದಾಗ ತುಂಬಾ ಚಿಕ್ಕವಳು; ಈಗ ಕನಸೇನೋ ಅನ್ನುವ ಹಾಗೆ ಅಸ್ಪಷ್ಟ ನೆನಪು.

ನಂತರ ನನ್ನನ್ನು ಇಂಗ್ಲೀಷ್ ಶಾಲೆಗೆ ಸೇರಿಸಿದ. ನನಗೊಬ್ಬಳು ಪುಟ್ಟ ತಂಗಿ ಇದ್ದಾಳೆ, ಅವಳು ನರ್ಸರಿಗೆ ಹೋಗತೊಡಗಿದಳು. ವ್ಯಾಪಾರದ ಉನ್ನತಿ

ಯಿಂದ ಕೊರತೆಯಿಲ್ಲದ ಜೀವನ. ಈಗಲೂ ಅಷ್ಟೆ. ಬಂದ ಕೆಲವೇ ವರ್ಷಗಳಲ್ಲಿ ನಾವು ನಗರದ ಗಣ್ಯ ವ್ಯಕ್ತಿಗಳ ಸಾಲಿಗೆ ಸೇರಿಹೋಗಿದ್ದೇವೆ. ಮೊದಲಿನ ಗ್ರಾಮ್ಯ ಭಾಷೆಯಂತೂ ಮರೆತುಹೋಗಿದೆ. ನನಗಂತೂ ಇಂಗ್ಲಿಷಿನ ಹೊರತು ಬೇರೆ ಭಾಷೆ ಬಾರದು.

'ಕಾಲೇಜಿನ ಬಗ್ಗೆ ಹೇಳಲಾ! ಇಂಗ್ಲಿಷ್ ಸಾಹಿ-ತ್ಯದ ಜೊತೆಗೆ ಪಾಶ್ಚಾತ್ಯ ಸಂಗೀತದ ಅಭ್ಯಾಸ. ನನಗೆ ತುಂಬಾ ಪ್ರಿಯ. ಈ ಸಂಗೀತ. ಸಂಜೆಯ ವೇಳೆ ಗೆಳತಿಯರ ಜೊತೆ ಮನೆಯಲ್ಲಿ ಅಭ್ಯಾಸ ಮಾಡು ತ್ತೇನೆ, ನರ್ತನದ ಜೊತೆ.

'ಆದರೂ ಇಲ್ಲಿನ ಅವಕಾಶ ತುಂಬಾ ಸೀಮಿತ. ಈಚೆಗಂತೂ ಮನೆಯಲ್ಲಿ ಅಭ್ಯಾಸ ಮಾಡಿದ ರೆಷ್ಟೋ ಅಷ್ಟೆ. ನನಗೆ ಚಲನಚಿತ್ರಗಳೆಂದರೆ, ಅದರಲ್ಲೂ ಇಂಗ್ಲಿಷ್ ಚಿತ್ರಗಳೆಂದರೆ ತುಂಬಾ ಇಷ್ಟ. ಆದರ ಹಣೆಬರಹವೂ ಅಷ್ಟೆ. ವರ್ಷಕ್ಕೆ ಮೂರೋ ನಾಲ್ಕೋ ಚಿತ್ರಗಳು ಬಂದರೆ ಅದೃಷ್ಟ.

'ಬೆಂಗಳೂರಿಗೆ ಇಂಗ್ಲಿಷ್ ಚಿತ್ರಗಳು ತುಂಬಾ ಬರುತ್ತವಂತೆ. ವಿಷ್ಯಾದಲ್ಲೆ ಪಾಶ್ಚಾತ್ಯ ಸಂಗೀತಕ್ಕೆ ಬೆಂಗಳೂರು ಪ್ರಸಿದ್ಧವಂತೆ. ನಿಮ್ಮ ಪತ್ರ ನೋಡಿದ ಮೇಲೆ ಒಂದಿಷ್ಟು ಕನಸು ಕಟ್ಟಿದ್ದೇನೆ. ಈ ವರ್ಷಕ್ಕೆ ಕಾಲೇಜಿನ ಓದು ಮುಗಿಯುತ್ತದೆ. ಮನೆಯಲ್ಲಿ ಅಮ್ಮನಿಗೆ ವಯಸ್ಸಾಯಿತು. ಆಕೆ ಒಂಟಿಯಾಗಿರಬೇಕಿಲ್ಲ. ನನ್ನ ತಂಗಿಯಿದ್ದಾಳೆ. ಜೊತೆಗೆ. ಅಮ್ಮನಿಗೆ ಸದ್ಯದಲ್ಲೇ ಮದುವೆಮಾಡುವ ಯೋಜನೆಯಿದೆ.

'ಒಂದು ಉಪಕಾರ ಮಾಡುತ್ತೀರಾ? ಸ್ನೇಹ ವನ್ನು ದುರುಪಯೋಗಕ್ಕೆ ಉಪಯೋಗಿಸಿಕೊಳ್ಳುತ್ತೇ ನೆಂದು ತಿಳಿಯಬೇಡಿ.. ಬೆಂಗಳೂರಿನಲ್ಲಿರುವ ಯಾವು ದಾದರೂ ಕಾನ್ವೆಂಟಿನಲ್ಲಿ ಪಾಶ್ಚಾತ್ಯ ಸಂಗೀತ ಶಿಕ್ಷಕಿಯ ಕೆಲಸ ಖಾಲಿಯಿದೆಯೇ ಅಥವಾ ಆಗುವ ಸಾಧ್ಯತೆ ಇದೆಯೇ ವಿಚಾರಿಸುತ್ತೀರಾ?

'ಇಷ್ಟು ದೂರದಿಂದ ಅಲ್ಲಿಗೆ ಬಂದು ಒಂಟಿಯಾಗಿ ನೆಲೆಸಿಯಾಳೇ ಎಂಬ ಯೋಚನೆ ಬೇಡ. ಏಕಾಂಗಿ ಯಾಗಿ ಜಗತ್ತಿನ ಯಾವುದೇ ಭಾಗಕ್ಕೆ ಹೋಗಲು ನೆಲೆಸಲು ನಾನು ಸಿದ.'

ಕಾಗದವನ್ನು ಹತ್ತಾರು ಸಾರಿ ಓದಿದೆ. ಅವಳ ಸ್ವಭಾವ ಎಂಥದ್ದೋ ನನಗಂತೂ ಹೊಳೆಯುತ್ತಿಲ್ಲ. ಪತ್ರ ಬರೆಯಬಾರದೆಂದು ಎರಡು ದಿನ ಸುಮ್ಮ ನಿದ್ದೆ. 'ಈ ಗದ್ದೆಯ ಅಂಚಿನಲ್ಲಿ ಚಿಮ್ಮುತ್ತ ನಡೆದ ದಿನಗಳ ನೆನಪಿನಿಂದ ಕಣ್ಣು ಮಂಜಾಗುತ್ತದೆ' ಎಂಬ ವಾಕ್ಯ ಏನೋ ಭರವಸೆ ಮೂಡಿಸಿದಂತಿದೆ. ಬರೆ-ಯಲು ಕೂತೆ. ಆದರೆ ನನ್ನ ಅಮೋಘವಾದ. ಪತ್ರ ಬರೆಯುವ ಅವಕಾಶ ಸಿಕ್ಕಿರುವಾಗ ಕೊರಗುವುದಾದರೇಕೆ?

ಮಾಲಿನಿ, 'ನಿಮ್ಮ ವಯಸ್ಸೆಷ್ಟೆಂದು ಗೊತ್ತಿಲ್ಲ ವಾದರೂ' ಎಂಬ ಉದಾರತೆಯೊಂದಿಗಿನ ವಾಕ್ಯ ಹಾಗೂ ಪತ್ರದ ಇನ್ನಿತರ ಸಾಲುಗಳು, ನಾನು ಮುಚ್ಚುಮರೆ ಯಿಲ್ಲದೇ ಬರೆಯುವುದನ್ನು ಅನಿವಾರ್ಯಗೊಳಿಸಿವೆ.

ನನಗೀಗ ಮೂವತ್ತು ವರ್ಷ. ಮದುವೆಯಾ ಗಿದೇ ಹನ್ನೆರಡು ವರ್ಷಗಳು ಕಳೆದುಹೋದವು. ಒಂಭತ್ತು ವರ್ಷದ ಮಗನಿದ್ದಾನೆ.

ಇನ್ನು ನನ್ನ ಜೀವನ ಚರಿತ್ರೆ. ಪೂರ್ವಜರ ಬಗ್ಗೆ ಡಾರ್ವಿನ್ನನ ವಾದ ಬಿಟ್ಟು, ಬೇರೆ ಗೊತ್ತಿಲ್ಲ. ಅಪ್ಪನ ಅಪ್ಪ, ಅಮ್ಮನ ಅಮ್ಮ ಇವರ ಹೆಸರುಗಳೂ ನನಗೆ ಗೊತ್ತಿಲ್ಲ.

ನನ್ನ ಹುಟ್ಟೂರೊಂದು ಹಳ್ಳಿ. ನಿನ್ನ ಪತ್ರದ ಸಾಲುಗಳನ್ನು ಭಟ್ಟಿಯಿಳಿಸಬಹುದಾದಷ್ಟು ಹೋಲಿ ಕೆಗಳಿವೆ. ಇವತ್ತಿಗೂ ನನ್ನೂರಿನಲ್ಲೊಂದು ಅಂಗ ಡಿಯಿಲ್ಲ. ಹೋಟೆಲಿಲ್ಲ. ಒಂದು ಬೆಂಕಿ ಪೆಟ್ಟಿಗೆ ತರಬೇಕಾದರೂ ನನ್ನೂರ ಜನರು ಹನ್ನೆರಡು ಮೈಲಿ ದೂರದ ಕೊಪ್ಪಕ್ಕೆ ಪಾದಯಾತ್ರೆ ಮಾಡಬೇಕು.

ನನಗೆ ಮೂರು ಜನ ಅಕ್ಕಂದಿರು. ಗಂಡು ಮಕ್ಕ ಳಲ್ಲಿ ಹಿರಿಯವನು ನಾನೇ. ಒಂದು ಕಾಲದಲ್ಲಿ ನಮ್ಮಪ್ಪನಿಗಿಂತ ನಾನೇ ಹಿರಿಯ ಅಂದುಕೊಂಡಿದ್ದೆ. ಒಬ್ಬ ತಮ್ಮ. ಒಬ್ಬಳು ತಂಗಿ. ಅಕ್ಕಂದಿರಿಗೆಲ್ಲಾ ನಾನು ಊರು ಬಿಡುವ ಮೊದಲೇ ಮದುವೆಯಾಗಿತ್ತು. ನನಗೆ ಚಿಕ್ಕಂದಿನಿಂದಲೂ ಓದುವ ದುರಭ್ಯಾಸ.

ಉತ್ತಮೇಶ್ವರದ ಭಾಗೋತರಾಟದ ಹ್ಯಾಂಡ್ ಬಿಲ್ಲಾದರೂ ಸರಿ; ಶಿವಮೊಗ್ಗ ಅಡಿಕೆ ಸೊಸೈಟಿಯ ವಾರ್ಷಿಕ ವರದಿಯಾದರೂ ಸರಿ, ಆದರೆ ಮಿಡ್ಲ್ ಸ್ಕೂಲಿಗೇ ಮಂಗಳ ಹಾಡಿಸಿ ಮನೆಯಲ್ಲಿ ಕೂರಿಸಿ ದ್ದರು. ಅವರಿಗೆ ಮುಂದೆ ಓದಿಸುವ ಚೈತನ್ಯವಿರ ಲಿಲ್ಲವೆಂದು ನನಗೆ ಈಗ ಮಾತ್ರ ಗೊತ್ತು.

ಓದುವ ಪಿತ್ತ ನೆತ್ತಿಗೇರಿದಾಗ ಒಂದು ಮಳೆ ಗಾಲದ ರಾತ್ರಿ, ಯಾರಿಗೂ ಹೇಳದೇ ಕೇಳದೆ

ನೀವು ನಿಮ್ಮ ನಿತ್ಯದ ಕೆಲಸಗಳನ್ನು ಪುನಃ ಮಾಡುವುದಕ್ಕೆ ಉತ್ಸುಕರಾಗಿದ್ದೀರಾ?

ಗ್ಲೂಕೋಸ್-ಡಿ® ನಿಮಗೆ ತಕ್ಷಣ ಶಕ್ತಿಯನ್ನಿತ್ತು ದಣಿವನ್ನು ನಿವಾರಿಸುತ್ತದೆ.

ಗ್ಲೂಕೋಸ್-ಡಿಯಿಂದ ನೀವು ಮನೆಗೆಲಸಗಳನ್ನು ಮಾಡಲು ಸಿದ್ಧರಾಗುತ್ತೀರಿ. ಏಕೆಂದರೆ ಗ್ಲೂಕೋಸ್-ಡಿ ನಿಮಗೆ, ದಣಿವಾದ ಮೇಲೆ ಪುನಃ ಹುರುಪನ್ನೂ ಉಲ್ಲಾಸವನ್ನೂ ಪಡೆಯಲು ಬೇಕಾದ, ತುಂಬಿತುಳುಕುವ ಶಕ್ತಿಯನ್ನೀಯುತ್ತದೆ. ಡಾಕ್ಟರರಿಂದ ಶಿಫಾರಸು ಪಡೆಯುವ ಗ್ಲೂಕೋಸ್-ಡಿ ಬಹಳ ಉಚ್ಚ ದರ್ಜೆಯ ಗ್ಲೂಕೋಸ್ ಆಗಿದ್ದು, ವಿಟಮಿನ್ 'ಡಿ', ಕ್ಯಾಲ್ಸಿಯಂ ಹಾಗೂ ಫಾಸ್ಫರಸ್—ಇವುಗಳನ್ನು ಒಳಗೊಂಡಿದೆ.

ಗ್ಲೂಕೋಸ್-ಡಿ ನಿಮಗೆ ದಣಿವಾಗಲು ಬಿಡುವುದಿಲ್ಲ, ಮತ್ತು ನೀವು ಮನೆಗೆಲಸಗಳನ್ನು ಉಲ್ಲಾಸದಿಂದ ಮಾಡಿಕೊಂಡು ಇರಲು ಬೇಕಾದಂತಹ ಶಕ್ತಿಯನ್ನು ನಿಮಗೆ ನೀಡುತ್ತದೆ.

ಗ್ಲೂಕೋಸ್-ಡಿ®

—ಇದೀ ಕುಟುಂಬಕ್ಕೆ ತಕ್ಷಣ ಶಕ್ತಿಯ ಸಾಧನ



ಮನೆ ತೊರೆದು ಹೊರಟೆ. ನಮ್ಮ ಮೇಲಿನ ಮನೆಯಲ್ಲಿ ಕೆಳಗಿನ ಮನೆಯಲ್ಲಿ ನನ್ನ ವಯಸ್ಸಿನವರು ಆಗಲೇ ಒಂದೊಂದು ರೌಂಡು ಹೋಗಿ ಬಂದಿದ್ದರು. ಇದರಿಂದ ನನಗಿಷ್ಟು ಕುಮ್ಮಕ್ಕು. ಊರಿನಲ್ಲಿ ವರ್ಷ ಗಟ್ಟಲೆ ಹಣವಿಲ್ಲದೇ ಕಳೆಯಬಹುದಾಗಿದ್ದರೂ ಹೊರಗೆ ಹೊರಟ ಮೇಲೆ ಉಸಿರಾಡಿಸಲೂ ಹಣ ಬೇಕೆಂದು ಗೊತ್ತಿತ್ತು.

ಯಾಲಕ್ಕಿ ಮಾರಾಟ ಮಾಡಿ ಬಂದ ದುಡ್ಡಿನಿಂದ ಅಮ್ಮ 'ನಿಂಗೆ ಉತ್ತಮೇಶ್ವರ ಜಾತ್ರೇಲಿ ಅಂಗಿ ಚಡ್ಡಿ ಹೊಲಿಸ್ಕಣುಕಾತು' ಅಂತ ಕೊಟ್ಟಿದ್ದ ಕೆಲವು ರೂಪಾಯಿಗಳನ್ನೂ ಜೇಬಿಗೆ ಸೇರಿಸಿದೆ. ತತ್ಕಾಲಕ್ಕೆ ಊರು ಬಿಡುವುದಕ್ಕೆ ಇದು ಸಾಕು. ಮುಂದೆ!

ಅಮ್ಮನ ಪಾಲಿಗೆ ಚಿನ್ನದ ಆಭರಣ ಎಂದಿದ್ದ ಎರಡೇ ಎರಡು ಚಿನ್ನದ ಬಳೆಗಳನ್ನು ನಡುಮನೆಯ ಗೂಡಿನಲ್ಲಿ ಒಂದು ಕರಡಿಗೆಯಲ್ಲಿಟ್ಟಿದ್ದಳು. ಕತ್ತಲಲ್ಲಿ ಸದ್ದಾಗದಂತೆ ಅವನ್ನು ಜೇಬಿಗೆ ಸೇರಿಸಿಕೊಂಡು 'ಕಾರೆಂಬ ಕತ್ತಲೆಯು, ಭೋರೆಂದು ಮಳೆ' ಸುರಿಯುತ್ತಿರುವಾಗ, ಒಂದು ಕೊಡೆ ಹಿಡಿದು ಬೆಳಗೊಳದತ್ತ ಹೊರಟುಬಿಟ್ಟೆ.

ದಿನವಿಡೀ ನಡೆದೆ. ಹಸಿವಾಗಿ ಪ್ರಾಣ ಹೋಗುತ್ತದೆನ್ನುವಾಗ ಯಾವುದಾದರೂ ಹೋಟೆಲು ಕಣ್ಣಿಗೆ ಬಿದ್ದರೆ, ಒಂದಿಷ್ಟು ಅವಲಕ್ಕಿ ಗೋಳ್ಬಜೆ ತಿಂದು, ನೀರು ಕುಡಿದು ಮುಂದುವರೆದೆ. ಯಾವುದೋ ಲಾರಿಯವನು ನನ್ನನ್ನು ಕಡೂರಿನ ವರೆಗೆ ಕರೆದುಕೊಂಡು ಬಂದು ಬಿಟ್ಟ. ಮುಂದೆ!

ನನಗೆ ಮೊದಲಿನಿಂದಲೂ ಮೈಸೂರಿಗೆ ಹೋಗಿ ಓದುವ ಕನಸು. ಅಲ್ಲಿನ ಮಹಾರಾಜಾ ಕಾಲೇಜು, ರಾಮಕೃಷ್ಣಾಶ್ರಮ, ಕುವೆಂಪು ಈ ಎಲ್ಲ ಪ್ರಬಲ ಆಕರ್ಷಣೆಗಳು, (ಮಾಲಿನಿ, ನನ್ನ ಕಾಗದದ ಎಷ್ಟೋ ವಿಚಾರಗಳು ಹಿಂದು ಮುಂದಿಲ್ಲದೇ ನಿನಗೆ ಅರ್ಥವಾಗಲಾರವು. ಆದರೆ ಕ್ಷಮಿಸು, ಮನಸ್ಸಿಗೆ ಬಂದಹಾಗೆ ಹಸಿಹಸಿಯಾಗೆ ಬರೆಯುತ್ತಿದ್ದೇನೆ).

ನಿಲ್ದಾಣದಲ್ಲಿ ನಿಂತಿದ್ದ ಬಸ್ಸನ್ನು ಎಲ್ಲಿಗೆಂದು ವಿಚಾರಿಸಿದೆ. ಬೆಂಗಳೂರಿಗೆಂದು ತಿಳಿಯಿತು. 'ಮೈಸೂರಿಗೆ ಹೋಗುವ ಬಸ್ಸು ಎಷ್ಟು ಹೊತ್ತಿಗೆ?' ಎಂದೆ. 'ಹೊರಟು ಐದು ನಿಮಿಷ ಆಗ್ಹೋಯ್ತಲ್ಲೋ ಮಾಣಿ' ಎಂದರು.

ಬಸ್ ಹಾರ್ನ್ ಆಯಿತು. ಯೋಚಿಸುವಷ್ಟು ತಾಳ್ಮೆ, ಕಾಲಾವಕಾಶ ಇರಲಿಲ್ಲ. ಬಸ್ಸೇರಿದೆ. ಹೀಗಾಗಿ ಬೆಂಗಳೂರಿಗೆ ಬಂದೆ. ನೆನೆದರೆ ಆಶ್ಚರ್ಯವಾಗುತ್ತೆ. ಆ ಐದು ನಿಮಿಷಗಳು ನನ್ನ ಬದುಕಿನ ದಾರಿಯನ್ನೇ ಬದಲಾಯಿಸಿಬಿಟ್ಟವಲ್ಲಾ!

ಬಂಗಾರದ ಬಳೆಗಳನ್ನು ಗಿರವಿಯಿಟ್ಟೆ. ಮುಂದೆ ಒಂದು ದಿನ ಅಮ್ಮನಿಗೆ ಇಂಥದೇ ಹತ್ತು ಬಳೆಗಳನ್ನು ಮಾಡಿಸಿಕೊಡುತ್ತೇನೆಂಬ ಆತ್ಮವಿಶ್ವಾಸದಿಂದ.

ಹೈಸ್ಕೂಲು ಸೇರಿದೆ. ಚೆನ್ನಾಗಿ ಓದುವ ಗೊಡ್ಡು ವಿದ್ಯಾರ್ಥಿಗಳ ನೀರಸ ಬದುಕು ಬದುಕುತ್ತಾ, ಮೊದಲ ಶ್ರೇಣಿ ಪಡೆದು ಕಾಲೇಜು ಸೇರಿದೆ. ಕಾಲೇಜಿನ ಕೊನೆಯ ವರ್ಷ ಬಾಳಿಗೊಂದು ಹೊಸ ತಿರುವು ತಂದಿತು.

ಅವತ್ತು ಕಾಲೇಜಿಗೆ ಹೋದಾಗ ತಡವಾಗಿತ್ತು. ಪಾಠಗಳು ಪ್ರಾರಂಭವಾದ್ದರಿಂದ ತರಗತಿಗೆ ಹೋಗುವ ಹಾಗಿಲ್ಲ. ಆನಂದದಿಂದ ಲೈಬ್ರರಿಗೆ ಹೋದೆ. ಸಾವಿರ ಪುಟಗಳ ಗ್ರಂಥದ ಸಣ್ಣಕ್ಷರಗಳನ್ನು ಓದ ತೊಡಗಿದೆ.

ಬಳೆಗಳ ಸದ್ದು. ತಲೆಯೆತ್ತಿ ನೋಡಿದರೆ ಸೌಮ್ಯ, ಮೃದು ನಡಿಗೆಯಲ್ಲಿ ನಡೆದು ಬರುತ್ತಿದ್ದಾಳೆ. ಮೆಲುದನಿಯಲ್ಲಿ "ಗುಡ್ ಮಾರ್ನಿಂಗ್" ಅಂದಳು. ಲೈಬ್ರರಿಯಲ್ಲಿ ಸದ್ದು ಮಾಡಬಾರದೆಂದು ಶಾಸ್ತ್ರವೇ ಇರುವಾಗ ಆಕೆ ಮೆಲುದನಿಯಲ್ಲಿ ಮಾತಾಡಿದ್ದು ಸಹಜವಾಗಿದ್ದರೂ, ಆ ಸ್ವರ ನನ್ನ ಪಾಲಿಗೆ ತೀರಾ ಆಪ್ಯಾಯಮಾನವಾಗಿತ್ತು.

ಆಶ್ಚರ್ಯವಾಗುತ್ತದೆ. ಅವತ್ತು ನಾನು ತಡವಾಗಿ ಹೋಗದಿದ್ದರೆ, ಸೌಮ್ಯ ಲೈಬ್ರರಿಗೆ ಬಾರದಿದ್ದರೆ ನನ್ನ ಬದುಕಿಗೆ ದಾರಿಯೇ ಬೇರೆಯಾಗುತ್ತಿತ್ತಲ್ಲವೇ? ಹಾಗೆ ಬಂದ ಸೌಮ್ಯ ಈಗ ನನ್ನ ಹೆಂಡತಿ.

ಒಂದು ವಯಸ್ಸಿನಲ್ಲಿ ಸೀರೆ ಸುತ್ತಿದ ಯಾವುದೇ ಪ್ರಾಣಿ ನಮ್ಮನ್ನು ಮಾತನಾಡಿಸಿದರೂ, ನಾವದನ್ನು ಪ್ರೀತಿಸುತ್ತೇವೆಂಬ ಭ್ರಮೆಯಾಗುತ್ತದೆ. ಆಕೆ ಒಳಗೆ ಪ್ರವೇಶಿಸಿದ ಕ್ಷಣದಿಂದಲೇ ನಾನವಳನ್ನು ಪ್ರೀತಿಸತೊಡಗಿದ್ದರಿಂದ, ಆಕೆ ಹಿಂದುವೋ ಕ್ರೈಸ್ತಳೋ, ಬಡವಳೋ ಶ್ರೀಮಂತಳೋ ಹೊಸಳ್ಳಿಯ ಹುಡುಗಿಯೋ ಗಾಂಧಿಬಜಾರಿಯೋ ಯಾವುದೂ ಗೊತ್ತಾಗಲಿಲ್ಲ.

ಯಾವುದೇ ನೋಟ್ಸಿನ ವಿನಿಮಯವಿಲ್ಲದೇ ನಮ್ಮ ಸ್ನೇಹ ಬೆಳೆಯಿತು. ಆಕೆಯ ತಾಯಿ ತೀರಿ ಕೊಂಡಿದ್ದಾರಂತೆ. ಇರುವುದು ತಂದೆ, ಇನ್ನಿಬ್ಬರು ತಂಗಿಯರು ಮಾತ್ರ. ಮನೆಗೆ ಆಹ್ವಾನಿಸಿದಳು ಒಂದು ದಿನ.

"ಅಯ್ಯೋ ಮಾರಾಯ್ತಿ, ನಾ ಬರುಲ್ಲ."

"ಅಪ್ಪ ನಿಮ್ಮನ್ನು ನೋಡಬೇಕಂತೆ."

"ಯಾಕಂತೆ?"

"ನಮ್ಮಿಬ್ಬರ ಸ್ನೇಹ ಅವರಿಗೆ ಗೊತ್ತಾಗಿದೆ" 'ನಾನು ಮದುವೆಯಾಗೋದೇ ಆದಪಕ್ಷದಲ್ಲಿ ಅವ-ರನ್ನೇ ಆಗುವುದು' ಅನ್ನಲಿಲ್ಲ. ಬದಲಾಗಿ, 'ನಾನು ಮದುವೆಯಾಗೋದು ಗ್ಯಾರೆಂಟಿ. ಅದರಲ್ಲೂ ಅವರನ್ನೇ ಆಗೋದಂತೂ ಇನ್ನೂ ಗ್ಯಾರೆಂಟಿ' ಅಂದಿದ್ದೇನೆ."

"ನನಗೆ ದೊಡ್ಡ ಮನುಷ್ಯರ ಮನೆಗೆ ಹೋಗಿ ಮೊದಲಿನಿಂದಲೂ ಅಭ್ಯಾಸವಿಲ್ಲ."

"ದೊಡ್ಡ ಮನುಷ್ಯರ ಮಗಳನ್ನು ಪ್ರೀತಿಸಿ ಮೊದಲಿನಿಂದಲೂ ಅಭ್ಯಾಸವಿತ್ತೇನೋ?"

"ಆಗ್ಲಿ ಮಾರಾಯ್ತಿ, ಬರ್‍ತಿನಿ. ಆದ್ರೂ ಏನೇನು ಕೇಳ್ತಾರೋ ಗೊತ್ತಿಲ್ಲ. 'ಮೋಸ್ಟ್ ಎಕ್ಸ್‌ಪೆಕ್ಟೆಡ್ ಕ್ವೆಶ್ಚನ್ಸ್' ಯಾವುವ್ದಂತ ಸ್ವಲ್ಪ ಗುರ್ತು ಹಾಕಿಕೊಡ್ತಿಯಾ?"

ಅವಳು ಒಂದು ಎಕ್ಸ್‌ರಸೈಜ್ ಹಾಳೇಲಿ ಎಲ್ಲಾ ಗುರುತು ಹಾಕಿ ಕೊಟ್ಟಳು. ನಾನು ಹಾಸ್ಟೆಲಿಗೆ ಬಂದವನು, ಒಂದು ಬಿಳೀ ಹಾಳೆಯ ಮೇಲೆ, ಎಡ ಭಾಗಕ್ಕೆ ಪ್ರಶ್ನೆಗಳನ್ನು ಬಲಭಾಗಕ್ಕೆ ಉತ್ತರ-ಗಳನ್ನು ಮುದ್ದಾಗಿ ಬರೆದು, ಸ್ಪೆಲಿಂಗ್ ಸರಿಯಾಗಿದೆಯೋ ನೋಡಿ ಮಡಿಸಿ ಜೇಬಿನಲ್ಲಿಟ್ಟು ಕೊಂಡೆ.

ಮರುದಿನ ಸಂಜೆ ಕಾಲೇಜು ಮುಗಿಸಿಕೊಂಡು, ಅವರ ಮನೆಯ ಕಡೆ ಆತುರದಿಂದ ಹೆಜ್ಜೆ ಹಾಕಿದೆ. ಮನೆಯ ಮುಂದೆ ಕಂಪೌಂಡಿನಲ್ಲಿ ದಿಂಡೇ ಹಂದ್ನದ ಹಾಗಿದ್ದ ಒಂದು ನಾಯಿ. ಒಳಗೆ ಮನುಷ್ಯರಿರ ಬಹುದೆಂಬ ಧೈರ್ಯದಿಂದ ಬಾಗಿಲು ತಟ್ಟಿದೆ. ನಂತರ ನೋಡಿದರೆ ಕಾಲಿಂಗ್ ಬೆಲ್ಲಿತ್ತು. ಕಸಿವಿಸಿ ಯಾಯಿತು.

ರಹಸ್ಯದ್ವಾರ ತೆರೆಯಿತು. ಬಿಳೀ ಪ್ಯಾಂಟು, ಬಿಳೀ ಷರಟು, ಬಿಳೀ ಟೋಪಿ ಹಾಕಿದ್ದ ಕರ್ರಗಿನ ವ್ಯಕ್ತಿಯೊಂದು ನನ್ನನ್ನು ಕರೆದುಕೊಂಡು ಹೋಗಿ ಸೋಫಾದ ಮೇಲೆ ಕೂರಿಸಿತು. ಯಾವ ದಿಕ್ಕಿನಿಂದ ಯಜಮಾನರು ಬರಬಹುದೆಂದು ದಶದಿಕ್ಕುಗಳನ್ನೂ ಆತುರ ಆತಂಕಗಳಿಂದ ದಿಟ್ಟಿಸುತ್ತ ಕೂತೆ.

ಉಪ್ಪರಿಗೆಯ ಮೇಲೆ ಭೀಮಾಕಾರದ ವ್ಯಕ್ತಿ ಯೊಂದು ಪ್ರತ್ಯಕ್ಷವಾಗಿ ನಿಧಾನವಾಗಿ ಕೆಳಗಿಳಿದು ಬಂತು. ಗಕ್ಕನೆ ಎದ್ದು ನಿಂತು ಕೈ ಮುಗಿದು–

"ನಮಸ್ಕಾರ; ಹ್ಹಹ್ಹ ಹ್ಹ......" ಎಂದೆ.

"ಕೂತ್ಕೋ."

ಅಂದವರು ಎದುರಿಗಿದ್ದ ಇಡೀ ಸೋಫಾ ಆಕ್ರ ಮಿಸಿ ಕೂತರು. ನೋಡಿದೆ. ಅವರ ಕೈಬೆರಳು ನನ್ನ ರಟ್ಟೆಗೆ ಸಮನಾಗಿತ್ತು. ಅಷ್ಟು ದೊಡ್ಡ ಆಕಾರದ ಎದುರು, ಮಳೆಯಲ್ಲಿ ತೊಯ್ದ ಗುಬ್ಬಚ್ಚಿಯ ಹಾಗೆ ಮುದುರಿ ಕೂತೆ.

ಒಂದೊಂದಾಗಿ ಪ್ರಶ್ನೆ ಕೇಳಿದರು. ದೇವರ ದಯ ದಿಂದ ನನಗೆ ಒಂದೂ ಅರ್ಥವಾಗಲಿಲ್ಲ. ಒಂದಕ್ಕೆ 'ಎಸ್' ಎಂದೂ ಮತ್ತೊಂದಕ್ಕೆ 'ನೋ' ಎಂದೂ ಮೂರನೆಯದಕ್ಕೆ 'ಹೌದು' 'ಅಲ್ಲ' ಎಂಬ ಎರಡೂ ಅರ್ಥ ಬರುವ ಹಾಗೆ ತಲೆಯಾಡಿಸಿ, ಎದ್ದುನಿಂತು, "ನೋಡಿ ಸರ್. ನಿಮ್ಮೆಲ್ಲ ಪ್ರಶ್ನೆಗಳಿಗೂ ಉತ್ತರ ಇಲ್ಲಿದೆ." ಎಂದು ಹೇಳಿ, ಜೇಬಿನಲ್ಲಿದ್ದ ಚೀಟಿಯನ್ನು ಅವರ ಮುಂದಿರಿಸಿ, ಹಿಂದಕ್ಕೆ ತಿರುಗಿನೋಡದೇ ಓಡೋಡುತ್ತಲೇ ಹಾಸ್ಟೆಲಿಗೆ ಬಂದು, ಹಿತವಾಗಿ ತಣ್ಣೀರು ಸ್ನಾನ ಮಾಡಿದೆ.

ಯೋಚಿಸಿದೆ. ಅವರದ್ದು ಮೂರು ಅಂತಸ್ತಿನ ಮನೆ. ನಮ್ಮ ಗುಡಿಸಲಿಗೆ ಅಂತಸ್ತೇ ಇಲ್ಲ. ಇನ್ನು ಅವರ ದೇಹದಾರ್ಢ್ಯ ? ನಾನು ಮುಖ್ಯವಾಗಿ ಸಪೂ ರವಾದ ಅಡಿಕೆ ಮರಗಳ ನಡುವೆ ಬೆಳೆದವನು.

ಮರುದಿನ ಖಂಡಿತಾ ಸೌಮ್ಯ ಕಾಲೇಜಿನಲ್ಲಿ ನನ್ನೊಡನೆ ಮಾತನಾಡುವುದಿಲ್ಲವೆಂಬ ದೃಢಸಂಚಿಕೆ. ಆದರೆ, ನಾನು ಹೋಗುವುದಕ್ಕೆ ಮೊದಲೇ ಆವರಣ ದಲ್ಲಿ ನನಗಾಗಿ ಕಾದಿದ್ದಳು. ಕಣ್ಣುಗಳಲ್ಲಿ ಜಯಭೇ ರಿಯ ಹೊಳಪು.

"ರೀ, ನಿಮ್ಮ ಉತ್ತರಗಳಿಗೆ ಅಪ್ಪ ತೊಂಭತ್ತೈ ದು ಮಾರ್ಕು ಕೊಟ್ಟಿದ್ದಾರೆ!"

"ಇನ್ನೈದು ಮಾರ್ಕುಗಳು ಅಂದವಾದ ಬರ ವಣಿಗೆಗಾಗಿ ಮೀಸಲಿದ್ದವೊ?"

"ಅಲ್ಲ, ಮದುವೆಯಾದ ಮೇಲೆ ನೀವು ಬೇರೆ ಮನೆ ಮಾಡಬಾರದು; ನಮ್ಮ ಜೊತೆಯಲ್ಲೇ ಅದೇ ಮನೆಯಲ್ಲೇ ಇರಬೇಕು. ಇದಕ್ಕೊಪ್ಪಿದರೆ ನೂರಕ್ಕೆ ನೂರು."

ನನ್ನ ಓದು ಮುಗಿದ ವರ್ಷವೇ ಮದುವೆಯಾಯಿತು. ಸೌಮ್ಯ ಇನ್ನೂ ಒಂದು ವರ್ಷ ಓದ ಬೇಕಾಗಿದ್ದರೂ ಅಲ್ಲಿಗೆ ನಿಲ್ಲಿಸಿದ್ದಳು. ಆ ರಂಗು ರಂಗಿನ ದಿನಗಳಲ್ಲಿ ನಾವು ನೆಲದ ಮೇಲೆ ಇರಲಿಲ್ಲ. ಸುಮಾರು ಆರು ತಿಂಗಳ ಕಾಲ ಮಧುಚಂದ್ರವೆಂದು ಇಡೀ ಭಾರತ ಸುತ್ತಿದೆವು.

ಮರಳಿ ಬಂದ ಮೇಲೆ ಮಾವನ ಮನೆಯಲ್ಲಿಯೇ ಸೆಟ್ಲ್ ಆದೆ. ನನ್ನ ಮದುವೆ ಸುದ್ದಿಯನ್ನು ಅಪ್ಪ, ಅಮ್ಮ ಯಾರಿಗೂ ಹೇಳಿರಲಿಲ್ಲ. ಒಂದು ದೃಷ್ಟಿಯಲ್ಲಿ ಒಳಿಯದೇ ಆಯಿತು. ಯಾಕೆಂದರೆ ಈ ಮದುವೆ ನೋಡಿದ್ದರೆ ಅವರ ಸ್ಥಿತಿ ಏನಾಗುತ್ತಿತ್ತೋ ಹೇಳಲು ಬರುವಂತಿಲ್ಲ. ನನ್ನ ಮನಸ್ಸಿಗೆ ಬಂದ ಹುಡುಗಿಯನ್ನು ಅವರನ್ನು ಹೇಳದೇ ಕೇಳದೇ ಮದುವೆಮಾಡದ್ದಕ್ಕಲ್ಲ; ಈ ವೈಭವ ನೋಡಿ! ಎಂಥ ವಿಜೃಂಭಣೆ ಅಂತೀ?

ನನಗೆ ಕೊಟ್ಟ ಉಡುಗರೆ ಲೆಕ್ಕಪತ್ರ ಯಾವುದೂ ಇಲ್ಲ. ಐದು ಬೆರಳಿಗೂ ನಾಲ್ಕು ಉಂಗುರ. ಕಾಲು ತೊಳೆಯುವುದಕ್ಕೆ ಬೆಳ್ಳಿ ತಟ್ಟೆ. ತಂಬಿಗೆ. ಲೋಟ. [illegible] ಇವಳ ಮೈಮೇಲೆ ಗಾಡಿ ಬಂಗಾರ. ಸಥ್ಯ ಊಟಕ್ಕೆ ಬೆಳ್ಳಿಯ ಅನ್ನ. ಬಂಗಾರದ ಉಪ್ಪಿನಕಾಯಿ ಬಡಿಸಿ [illegible] ! [illegible] ಗ್ರಾಮದಲ್ಲಿ [illegible] ಬೆಳ್ಳಿ ಪಾತ್ರೆಗಳನ್ನು ಸೇರಿಸಿದರೂ ಇದರ ಅರ್ಧದಷ್ಟಾಗುತ್ತಿರಲಿಲ್ಲ

ಆರತಕ್ಷತೆಯ ವೈಭವವಂತೂ ಏನಂತೀ! ನನಗಂತೂ ಕರ ಜೋಡಿಸಿ, ಶಿರ ಬಾಗಿಸಿ ಸಾಕು ಸಾಕಾಗಿ ಹೋಯಿತು. ಕನಿಷ್ಟ ಎಂಟುನೂರು ಎಂಟುನೂರ ಹತ್ತು ಸಾರಿ ಹಲ್ಲು ಕಿರಿದಿರಬೇಕು. ನನ್ನ ಜೀವಮಾನದಲ್ಲೇ ದಿನವೊಂದಕ್ಕೆ ಅಷ್ಟು ಬಾರಿ ಹಲ್ಲು ಕಿರಿದಿದ್ದು ಅದೇ ಮೊದಲ ಮತ್ತು ಕೊನೆಯ [illegible]

ಮನೆಗೆ ಬಂದು ನೆಲೆಸಿದ ಒಂದಿಷ್ಟು ವರ್ಷಗ [illegible] ಏಕತಾನ ಶುರುವಾಯಿತು ನೋಡು. [illegible] ಉದ್ಯೋಗದಿಂದಲಂತೂ ಪುರುಷನಿಗೆ ಲಕ್ಷಣ. ನನಗೆ ಹೆಂಡತಿಯ ವಯಸ್ಸು ಗೊತ್ತಿಲ್ಲ. ಆದರೆ ಅವಳಿಗೆ ನನ್ನ ಸಂಬಳ ಗೊತ್ತು.

ಸಂಬಳ ನಾಲ್ಕಾಣೆ ಕಡಿಮೆಯಾದರೂ ಚಿಂತೆಯಿಲ್ಲ; ಯಾವುದಾದರೂ ಕೆಲಸಕ್ಕೆ ಸೇರಲೇಬೇಕೆಂದು ನಿರ್ಧರಿಸಿದೆ. ಆಗ ಕೆಲಸಕ್ಕೆ ಇಷ್ಟೆಲ್ಲಾ ಕಷ್ಟವಿರಲಿಲ್ಲ. ಹೆಸರಾದ ಸಂಸ್ಥೆಯ ಅಕೌಂಟ್ಸ್ ವಿಭಾಗದಲ್ಲಿ ಕೆಲಸ ಸಿಕ್ಕಿತು. ಸಂಬಳ ಕಡಿಮೆಯೇನಲ್ಲ.

ಆದರೂ ದುಡಿಯುವ ತೃಪ್ತಿಯಿಲ್ಲ. ಯಾಕೆಂದರೆ ಸಂಸಾರ ನಡೆಯುವುದು ನನ್ನ ದುಡಿಮೆಯಿಂದಲ್ಲ. ಮಾವನ ಮನೆಯಲ್ಲಿ ಬಿಟ್ಟಿ ಅಳಿಯನಾಗಿರುವ ಕಷ್ಟ ನೀನು ಅರ್ಥ ಮಾಡಿಕೊಳ್ಳಲಾರೆ ಮಾಲಿನಿ. ಹಣ ಖರ್ಚು ಮಾಡುವ ಹಾಗಿಲ್ಲ; ಮಾಡದೇ ಇರುವ ಹಾಗೂ ಇಲ್ಲ. ಅವಳಿಗೆ ಸರಿಯಾದ ಸೀರೆ ಆರಿಸಲು ನನ್ನಿಂದ ಆಗಿಲ್ಲ. ಅವಳೇ ಆರಿಸಬೇಕು; ಅದಕ್ಕೆ ಅವಳಪ್ಪನೇ ದುಡ್ಡು ಕೊಡಬೇಕು.

ಕಾರಿನಲ್ಲೇ ಓಡಾಡುತ್ತಿದ್ದರೂ ಅವರಿಗೆ ರಾತ್ರಿ ಊಟಕ್ಕೆ ಒಂದಿಷ್ಟು ಖಾರದ ಬೋಂಡ ತರುವ ಅಭ್ಯಾಸ. [illegible] ಆಗಲಿ ಎಂದು ಪ್ರತಿದಿನ ನಾನೇ ತೆಗೆದುಕೊಂಡು ಹೋಗತೊಡಗಿದೆ. ಒಂದು [illegible] ನಂತರ ಮನೆಯಲ್ಲಿ ನಡೆಯುತ್ತಿದ್ದ ಸಂಭಾಷಣೆ ನನ್ನನ್ನು [illegible].

ಇವರ [illegible] ದಾಯಾದಿ ಅಜ್ಜಿಯೊಬ್ಬಳಿದ್ದರು. ಅವರು ಪಕ್ಕದ ಮನೆಯವರೊಡನೆ ಆಡುತ್ತಿದ್ದ ಮಾತು ಅನಿವಾರ್ಯವಾಗಿ ನನ್ನ ಕಿವಿಗೆ ಬಿತ್ತು.

"ಏನ್ರಿ? ಮನೆ ಅಳಿಯ ಸಂಪಾದ್ನೆ ಮಾಡೋದ್ರಲ್ಲಿ ಮನೆಗೂ ಏನಾದ್ರೂ ಕೊಡೋ ಪದ್ಧತಿಯುಂಟೋ ಅಥವಾ ಬಿಟ್ಟೀನೋ?"

"ಅದ್ಯಾಕೆ ಜಾನ್ಕಮ್ಮ ಹಾಗಂತೀರಾ? ದಿನಾ ರಾತ್ರಿ ನಾಕಾಣೆ ಬೋಂಡಾ ಕಟ್ಟಿಸಿಕೊಂಡು ಬರ್ತಾರೆ; ಸಾಲ್ದೇ?"

ವ್ಯಂಗ್ಯ ನನ್ನನ್ನು ಚುಚ್ಚಿತು. 'ನಾಕಾಣೆ ಬೊಂಡಾ' ಅಂತಾರಲ್ಲಾ ಇನ್ನೆಷ್ಟು ತೆಗೆದುಕೊಂಡು ಹೋಗಲು ಸಾಧ್ಯ? ಒಂದು ದಿನ ಐನೂರರೂಪಾಯಿಗೆ ಬೋಂಡಾ ತೆಗೆದುಕೊಂಡು ಹೋಗಬೇಕೆಂದುಕೊಂಡೆ!

ಆಡಲೂ ಆರದೇ ಅನುಭವಿಸಲೂ ಆರದೇ ಒಳಗೊಳಗೇ ಬೆಂದೆ. ಇದಕ್ಕಿಂತಲೇ ಅಲ್ಲ ಹೆಂಡತಿಯ ಜೊತೆ ನಾಲ್ಕು ಪ್ರೀತಿಯ ಮಾತಾಡಬೇಕಿದ್ದರೆ ಯಾರಾದರೂ ಇದ್ದೇ ಇರುತ್ತಾರೆ. ಅಷ್ಟೇಕೆ! ಕೋಪ ಬಂದಾಗ ನಾಲ್ಕು ಗುದ್ದೋಣವೆಂದರೂ ಯಾರಾದರೂ ಎದುರಿಗಿರುವುದರಿಂದ ನಿರುಪಾಯನಾಗಿ ನುಂಗಿಕೊಳ್ಳಬೇಕು.

ನನಗೀಗ ಒಂಬತ್ತು ವರ್ಷದ ಮಗನಿದ್ದಾನೆ. ಇಂಗ್ಲೀಷ್ ಸ್ಕೂಲಿಗೆ ಹೋಗುತ್ತಾನೆ. ಇಂಗ್ಲೀಷ್ ಮಾತಾಡುತ್ತಾನೆ. ಮದುವೆಯಾದ ಮೂರು ವರ್ಷದ ಹೊತ್ತಿಗೆ ನಾನೂ, ಸೌಮ್ಯ ಮಾತು ತುಂಬಾ ಕಡಿಮೆ ಮಾಡಿದ್ದೆವು. ಮಗ ಹುಟ್ಟಿದ ಮೇಲೆ ಮುಗಿದೇ ಹೋಯಿತು. ಈಗ ಬಹುಶಃ ನಾವಿಬ್ಬರೂ ಮಾತನಾಡುತ್ತಿಲ್ಲವೆಂದು ಕಾಣುತ್ತದೆ; ಇರಬಹುದು. ಯಾವುದೂ ಸರಿಯಾಗಿ ಗೊತ್ತಿಲ್ಲ.

ಇಷ್ಟೆಲ್ಲ ಬರೆದು ಪೋಸ್ಟಿಗೆ ಹಾಕಿದೆ. ಬಹುಶಃ ವಿಷಯ ಇದೇ ಆದರೂ ಇದೇ ರೀತಿಯಲ್ಲಿ ಬರೆದಿರಲಾರೆ. ಈಗ ಬರೆಯುವುದಾದರೆ ಈಗಿನ ಮನಸ್ಥಿತಿಯಲ್ಲಿ ಹೀಗೇ ಬರೆಯುತ್ತಿದ್ದೆ ಎನ್ನಬಹುದು.

ನಮ್ಮ ಈ ಕಾಗದದ ನಂತರ ಅವಳಿಂದ ಯಾವುದೇ ಪತ್ರವ್ಯವಹಾರವನ್ನೂ ನಾನು ನಿರೀಕ್ಷಿಸಿರಲಿಲ್ಲ. ಆದರೆ ನನ್ನ ಆಶ್ಚರ್ಯಕ್ಕೆ ಹಿಂದಿನ ಕಾಗದಕ್ಕಿಂತಲೂ ಬೇಗ ಉತ್ತರ ಬಂತು. ನಮ್ಮ ಗಂಡ ಹೆಂಡಿರ ಜಗಳದ ಬಗ್ಗೆ ಯಾವುದೇ ಕೆಟ್ಟ ಕುತೂಹಲವನ್ನು ತಾಳದೇ ಬೇರೆ ಬೇರೆ ವಿಷಯಗಳ ಬಗ್ಗೆ ಬರೆದಿದ್ದಳು. ಅವರ ಬಗ್ಗೆ ಸಹಜವಾಗಿ ವಿಚಾರಿಸಿದ್ದಳು.

ನನಗೊಂದಿಷ್ಟು ಬರವಣಿಗೆಯ ಹವ್ಯಾಸ ಇರುವುದನ್ನು ಯಾವುದೋ ಕಾಗದದಲ್ಲಿ ಬರೆದಿದ್ದೆನೆಂದು ಕಾಣುತ್ತದೆ. 'ನೀವು ಬರೆದ ಪುಸ್ತಕಗಳನ್ನೆಲ್ಲಾ ತಪ್ಪದೆ ಕಳಿಸಿಬಿಡಿ. ನಾನದನ್ನು ಓದಲಾರೆನಾದರೂ ಇಟ್ಟುಕೊಳ್ಳುವುದೇ ಒಂದು ಸಂತೋಷದ ಸಂಗತಿ' ಎಂದು ಬರೆದಿದ್ದಳು. ಇದುವರೆಗೆ ನನ್ನ ಬರವಣಿಗೆಯೊಂದೂ ಯಾವುದೇ ಪತ್ರಿಕೆಯಿಂದ ಸ್ವೀಕೃತವಾಗಿಲ್ಲವೆಂಬ ವಿಚಾರವನ್ನು ಅವಳಿಗೆ ತಿಳಿಸಲು ಮನಸ್ಸಾಗದೇ ಹೇಗೋ ವಿಷಯ ಮರೆಸಿದ್ದೆ.

ಅವಳು ತಂಗಿಜೊತೆ ತೆಗೆಸಿದ ಫೋಟೋ ಕಳಿಸಿದಳು. ಸ್ಕರ್ಟ್ ಹಾಕಿಕೊಂಡು ಬಾಬ್ ಕಟ್ ಮಾಡಿಸಿಕೊಂಡ ಆಕೆ ಪುಟ್ಟ ಹುಡುಗಿಯಂತೆ ಕಾಣುತ್ತಿದ್ದಳು. ಜೊತೆಗೆ 'ನಿಮ್ಮ ಫ್ಯಾಮಿಲಿಯ ಫೋಟೋ ಕಳಿಸಿ' ಎಂದೂ ಬರೆದಿದ್ದಳು.

ಮದುವೆಯ ದಿನ ಬಿಟ್ಟರೆ ಮತ್ತೆಂದೂ ನಾವು ಒಟ್ಟಿಗೆ ಫೋಟೋ ತೆಗೆಸಿದ್ದೇ ಇಲ್ಲ. ಎಲ್ಲಿಂದ ಕಳಿಸುವುದು? ಅಲ್ಲದೆ ನಾನು ಮಾಲಿನಿಯ ಜೊತೆ ಪತ್ರವ್ಯವಹಾರ ನಡೆಸಿರುವುದು ಸೌಮ್ಯಳಿಗೆ ಗೊತ್ತಿಲ್ಲ. ಕಾಗದಗಳನ್ನೆಲ್ಲ ಆಫೀಸಿನ ಲಾಕರಿನಲ್ಲಿಟ್ಟು ಭದ್ರವಾಗಿ ಬೀಗ ಹಾಕಿದ್ದೆ; ಅವಳು ಕಳಿಸಿದ ಫೋಟೋವನ್ನೂ ಅಷ್ಟೆ!

ನಾನು ಫೋಟೋ ಕಳಿಸಲಿಲ್ಲ. ಹಾಗೂ ನಂತರ ಪತ್ರವನ್ನು ಬರೆಯಲಿಲ್ಲ. ಅವಳಿಂದಲೂ ಅಷ್ಟೆ. ಕಾಗದವಿಲ್ಲ. ಈಗ ಅನಿರೀಕ್ಷಿತವಾಗಿ ಬಂದಿಳಿದಿದ್ದಾಳೆ. ಏನು ಮಾಡುವುದು? ಆಕೆ ನಮ್ಮ ಮನೆಯಲ್ಲೇ ಇಳಿದುಕೊಳ್ಳುತ್ತೇನೆಂದರೆ ಏನು ಉತ್ತರ ಹೇಳುವುದು ?

ಕಾರು ಗಕ್ಕನೆ ನಿಂತಿತು. ನಮ್ಮ ಆಫೀಸು ಕಾರಿಳಿದು ಕಾರಿಡಾರು ದಾಟಿ, ರಿಸೆಪ್ಷನ್ ರೂಮಿಗೆ ಹೋಗುವಾಗ ಎದೆಯಲ್ಲಿ ಸಣ್ಣ ನಡುಕ. ಸೌಮ್ಯ ಲೈಬ್ರರಿಯಲ್ಲಿ ಹೆಜ್ಜೆ ಇಟ್ಟಹಾಗೆ.

ಗುರುತಿಸಿ, "ಹಲೋ ಹೌ ಆರ್ಯು?" ಅಂದೆ ಎದ್ದು ನಿಂತು, ಕಣ್ಣರಳಿಸಿ, "ಹೌ ಆರ್ ಯು"? ಅಂದಳು. "ಒಂದ್ನಿಮಿಷ" ಎಂದು ಹೇಳಿ, ಆಕೆಯನ್ನು ಕೂರಿಸಿ ನನ್ನ ಸೀಟಿಗೆ ಹೋಗಿ ಕೈಯಲ್ಲಿದ್ದ ಫೈಲನ್ನು ಮೇಜಿನ ಮೇಲಿಟ್ಟು, ಒಂದು ಕ್ಷಣ ಏನು ಮಾಡುವುದೆಂದು ಯೋಚಿಸಿದೆ.

ಫೈನಾನ್ಸ್ ಮೆನೇಜರ್ ಹತ್ತಿರ ಹೋಗಿ ಅರ್ಧ ಗಂಟೆ ಅನುಮತಿ ಪಡೆದು ಹೊರಬಂದೆ. ಇಬ್ಬರೂ ಆಫೀಸಿನಿಂದ ಈಚೆ ಬಂದೆವು.

"ಮತ್ತೇನು? ಹೊರಟಿದ್ದು ಯಾವಾಗ? ಬೆಂಗಳೂರಿಗೆ ಬಂದದ್ದು ಯಾವಾಗ?"

"ಹೊರಟು ನಾಲ್ಕು ದಿನವಾಯಿತು. ಅಲಹಾಬಾದಿಗೆ ಬಂದೆ, ಅಣ್ಣನ ಜೊತೆ. ಅವನಿಗೆ ವ್ಯಾಪಾರ ನಿಮಿತ್ತ ಸ್ವಲ್ಪ ಕೆಲಸವಿತ್ತು."

"ತೀರಾ ಅನಿರೀಕ್ಷಿತ; ಕಾ—ಗದ ಕೂಡಾ ಇಲ್ಲ."

"ಟೈಮಿರಲಿಲ್ಲ; ನಿಮಗೆ ತೊಂದರೆಯಾಯ್ತೂಂತ ಕಾಣುತ್ತೆ."

"ಛೆ! ಅಂಥಾದ್ದೇನಿಲ್ಲ. ನೀವು ಯಾವಾಗ

ಬೇಕಾದರೂ ಬರಬಹುದು. ನಡಿ. ಒಂದಿಷ್ಟು ಕಾಫಿ, ಕುಡಿದು ಮನೆಗೆ ಹೋಗೋಣ."

"ಮನೆಗೆ ಈಗ ಬೇಡ. ನಾನು ಹೋಟೆಲಿನಲ್ಲಿ ರೂಮು ಮಾಡಿದ್ದೇನೆ. ಮೊದಲು ಅಲ್ಲಿಗೆ ಹೋಗೋಣ. ನಂತರ ನಿಧಾನವಾಗಿ ಎಲ್ಲಿಗೆ ಹೋಗುವುದೆಂದು ತೀರ್ಮಾನಿಸೋಣ."

ನಾನು ಅಟೋಗಾಗಿ ಕಾದೆ. ಅವಳು ಟ್ಯಾಕ್ಸಿಯನ್ನು ನಿಲ್ಲಿಸಿ, 'ಬನ್ನಿ' ಎಂದು, ಮಹಾತ್ಮಾಗಾಂಧಿ ರಸ್ತೆಯಲ್ಲಿದ್ದ ದೊಡ್ಡ ಹೋಟೆಲಿನ ಹೆಸರು ಹೇಳಿದಳು.

"ಊರಿಂದ ವಿಮಾನ ಪ್ರಯಾಣವೇ?"

ನನ್ನತ್ತ ತಿರುಗಿ, ಕಣ್ಣಲ್ಲೇ ನಕ್ಕು, "ಯಾಕೆ? ಕಡಲಿನ ಪ್ರಚಂಡ ಅಲೆಗಳ ಏರಿಳಿತವನ್ನು ಈಜಿಕೊಂಡು ದಾಟುತ್ತ, ಭಾರತದ ನೆಲವನ್ನು ತಬ್ಬಿಕೊಳ್ಳಬಾರದೆಂದಿಲ್ಲವಷ್ಟೆ?" ಅಂದಳು.

ಎಲಾ ಹುಡುಗಿ! "ಚೆನ್ನಾಗಿದೆ. ಏನೆಂದರೂ ನಿನ್ನ ನೆನಪಿನ ಶಕ್ತಿ ಅಗಾಧ. ಆಗಲಿ; ನಾನು ಅಪೇಕ್ಷೆಪಟ್ಟಿದ್ದನ್ನು ನೀನು ಮಾಡಿತೋರಿಸಿದೆಯಲ್ಲ!"

ಟ್ಯಾಕ್ಸಿ ನಿಂತಿತು. ಲಿಫ್ಟಿನಲ್ಲಿ ಕೊನೆಯ ಮಹಡಿಗೆ ಬಂದೆವು. ಹದಿನಾರನೆಯ ನಂಬರಿನ ರೂಮು ಬಾಗಿಲು ತೆರೆದಳು. ವಿಸ್ತಾರವಾದ ಕೊಠಡಿ. ಮಂಚ, ಶ್ರೀಮಂತ ಹಾಸಿಗೆ. ಟೆಲಿಫೋನು. ಮೇಜಿನ ಮೇಲೆ ಬರೆಯುವ ಸಾಮುಗ್ರಿಗಳು. ಕಿಟಕಿಗೆ ನವಿರಾದ ತೆರೆ. ಇಂತಹ ರೂಮೊಂದನ್ನು ಪ್ರವೇಶಿಸಿದ್ದು ನಾನು ಇದೇ ಮೊದಲು.

"ಕೂತ್ಕೊಳ್ಳಿ" ಎಂದು, ಬೆಲ್ಲೊತ್ತಿ ತಣ್ಣಗಿನ ಪಾನೀಯಕ್ಕೆ ಆದೇಶವಿತ್ತಳು. ಚೀಲಿನ ಮೇಲಿದ್ದ ದಿಂಬಿನ ಕವರು ನುಲುಗೀತೆಂದು ಹಗುರಾಗಿ ಕೂತೆ. "ಇಪ್ಪತ್ತಮೂರು ವರ್ಷಾಂತ ಪತ್ರಿಕೇಲಿತ್ತು. ಆದರೆ ನೀನು ಚಿಕ್ಕವಳಾಗಿ ಕಾಣುತ್ತಿ."

"ಹೌದು. ನಾನಿನ್ನೂ ಇಪ್ಪತ್ತಕ್ಕೆ ಕಾಲಿರಿಸಿದ್ದೇನಷ್ಟೆ. ಆದರೆ ಶಾಲೆಗೆ ಸೇರಿಸುವಾಗ ತಪ್ಪಾಗಿ ಕೊಟ್ಟಿದ್ದಾರೆ; ತಿದ್ದಬೇಕು. ಅದನ್ನೇ ಪತ್ರಿಕೆಗೆ ಕೊಟ್ಟಿದ್ದೆ."

"ಇವತ್ತು ಕಂಪ್ಲೀಟ್ ರೆಸ್ಟ್ ತಗೋ. ನಾಳೆ ನಿಧಾನವಾಗಿ ಬೆಂಗಳೂರಲ್ಲಿ ನೋಡಬೇಕಾದ ಸ್ಥಳ ನೋಡೋಣ."

"ಇಲ್ಲ. ಬೆಂಗ್ಳೂರಲ್ಲಿ ನಾನು ಇನ್ನೂ ಕೆಲವಾರು ದಿನ ಇರ್ತೀನಿ. ಮೊದಲು ಮೈಸೂರು ನೋಡಬೇಕಂತ ಆಸೆ. ಬಹಳ ವರ್ಷಗಳ ಹಿಂದೆ ನನ್ನ ಅಣ್ಣ ಅಲ್ಲಿಗೆ ಬಂದಿದ್ದ. ದಸರಾ ವರ್ಣನೆ ಕೇಳಿ ನನಗೂ ನೋಡುವ ತವಕ."

"ನೀನು ಕನಸು ಕಟ್ಟಿರೋ ದಸರಾ ಈಗಿಲ್ಲ. ಆದರೂ ಮೈಸೂರು ತುಂಬಾ ಸುಂದರ ನಗರ. ಒಂದು ಕಾಲದಲ್ಲಿ ನಾನು ಅಲ್ಲಿಗೇ ಹೋಗಬೇಕು, ಓದಬೇಕು ಅಂತ ಅಭಿಲಾಷೆ ಇಟ್ಟುಕೊಂಡವನು. ಮೂರು ನಾಲ್ಕು ಸಾರಿ ನೋಡಿದ್ದೇನೆ; ಎಷ್ಟು ನೋಡಿದರೂ ಸವೆಯಲಾರದ ನಗರ."

"ನಾಳೆ ಅಲ್ಲಿಗೆ ಹೋಗೋಣವಾ? ನಿಮಗೆ ಒಂದೆರಡು ದಿನಗಳ ಮಟ್ಟಿಗೆ ರಜಾ ಹಾಕಿ ನನ್ನ ಜೊತೆ ಬರಲು ಸಾಧ್ಯವೇ? ನಾನು ಮೊದಲೇ ತಿಳಿಸಿ ಬಂದಿದ್ದರೆ ಚನ್ನಾಗಿತ್ತು. ಹೇಳದೇ ಕೇಳದೇ ಬಂದು ನಿಮಗೆ ತೊಂದರೆ ಕೊಡುತ್ತಿದ್ದೇನೆ."

"ತೊಂದರೆಯ ಪ್ರಶ್ನೆಯೇ ಇಲ್ಲ. ನಾಳೆ ನನಗೆ ಬರಲು ಸಾಧ್ಯವಾಗಬಹುದು. ಯಾವುದಕ್ಕೂ ಆಫೀಸಿಗೆ ಹೋದವನು ನಿನಗೆ ಫೋನ್ ಮಾಡುತ್ತೇನೆ'

"ಹಾಗಾದರೆ ಗ್ಯಾರೆಂಟಿಯಿಲ್ಲಾನ್ನಿ."

"ಛೆ! ಛೆ! ಹಾಗಲ್ಲ; ಖಂಡಿತಾ ಬರ್‍ತೀನಿ. ಎಷ್ಟೊತ್ತಿಗೆ ಎಲ್ಲಿ ಮೀಟ್ ಮಾಡೋಣ ಅನ್ನೋ ಬಗ್ಗೆ ಫೋನ್ ಮಾಡುತ್ತೇನೆ ಅಂದಿದ್ದಷ್ಟೆ."

ಕೋಕಾಕೋಲಾ ಕುಡಿದು ಆಫೀಸಿಗೆ ಮರಳಿದೆ. ಇದು ನನ್ನ ಯೌವನದ ದಿನಗಳಾಗಿದ್ದರೆ ನಮ್ಮ ಭೇಟಿಗೆ ಎಂಥ ಅರ್ಥ ಬರುತ್ತಿತ್ತು. ಈಗ ಯಾವುದೇ ಸ್ನೇಹಿತರನ್ನು ಭೇಟಿಯಾಗುವ ಹಾಗೆ, ಸಹಜವಾಗಿ ಮಾಲಿನಿಯನು ಭೇಟಿಯಾಗುತ್ತಿದ್ದೇನೆ. ಇದೂ ಬಹುಶಃ ಒಳ್ಳೆಯದೇ. ನಮ್ಮ ಸ್ನೇಹ ಯಾವ ಫಲಾಪೇಕ್ಷೆಯಿಲ್ಲದ ನಿರ್ವ್ಯಾಜ ಪ್ರೇಮ ಇರಬಹುದು!

ಈಗ ನಾಳೆ ರಜಾ ತೆಗೆದುಕೊಳ್ಳುವ ಬಗೆ ಹೇಗೆ? ಬರುತ್ತೇನೆಂದು ಮಾತು ಕೊಟ್ಟಿದ್ದಾಯಿತು. ರಜಾ ತೆಗೆದುಕೊಳ್ಳುವುದು ಕಷ್ಟವಾಗಲಾರದಾದರೂ ಮನೆಯಲ್ಲಿ ಹೇಳದೇ ಮೈಸೂರಿಗೆ ಹೋಗುವುದು ಹೇಗೆ?

ನಮ್ಮ ಫ್ಯಾಕ್ಟರಿಯ ಬ್ರಾಂಚೊಂದು ಮೈಸೂರಿನಲ್ಲಿ ಇರುವುದು ನಿಜ. ಅದರ ಲೆಕ್ಕಪತ್ರಗಳನ್ನು ನಾನೇ ನೋಡಿಕೊಳ್ಳುವುದು. ವರ್ಷಕ್ಕೊಂದೆರಡು

ಸಾರಿ. ಇದೇ ಕಾರಣಕ್ಕಾಗಿ ಅಲ್ಲಿಗೆ ಹೋಗಿ ಬರಬೇಕಾಗುತ್ತದೆ. ಈಗಲೂ ಅದೇ ನೆಪದಲ್ಲಿ ಹೋಗಬಾರದೇಕೆ?

ಫೈನಾನ್ಸ್ ಮೇನೇಜರನ್ನು ಕೇಳಿದೆ. ಧಾರಾಳ ಸ್ವಭಾವದ ಅವರು, 'ಅದಕ್ಕೇನು, ಅಗತ್ಯವಾಗಿ ಹೋಗಿ ಬಾ; ಕೆಲಸ ಬಾಕಿ ಉಳಿಸಿ ಬರಬೇಡ. ಒಂದೆರಡು ದಿನ ತಡವಾದರೂ ಚಿಂತೆಯಿಲ್ಲ' ಅಂದು ಅವರ ಒಂದೆರಡು ಕೆಲಸಗಳನ್ನೂ ಹೇಳಿದರು.

ಈ ಸಮಸ್ಯೆಯೇನೋ ಬಗೆಹರಿಯಿತು. ಆದರೆ ಮನೆಯಲ್ಲಿ ಹೇಳುವುದು ಹೇಗೆ? ಇಷ್ಟು ದಿನ, ಮಾಲಿನಿಯೊಡನೆ ನಡೆದ ಪತ್ರವ್ಯವಹಾರಗಳನ್ನು ರಹಸ್ಯವಾಗಿರಿಸಿದ್ದರೂ, ಹೆಂಡತಿಯೊಡನೆ ಮಾತಾಡಬೇಕಾದಾಗ ಸುಳ್ಳು ಹೇಳಬೇಕಾದ ಸಂದರ್ಭ ಬಂದದ್ದು ತೀರಾ ಕಡಿಮೆ.

ಈಗಲೂ ಅಷ್ಟೆ. ಮೈಸೂರಿಗೆ ಆಫೀಸಿನ ಕೆಲಸದ ಮೇಲೆ ಹೋಗುತ್ತಿದ್ದೇನೆ ಅನ್ನುವುದು. ಹೋಗುತ್ತಿರುವುದೂ ಅದಕ್ಕೇ ತಾನೇ? ಈ ನಿರ್ಧಾರದಿಂದ ಮನಸ್ಸು ಕೊಂಚ ಹಗುರಾದರೂ, ಮಾಲಿನಿ ಯಾಕೆ ಬಂದಿರಬಹುದು? ಬೆಂಗಳೂರಲ್ಲೆ ಕೆಲಸ ಹಿಡಿದು ನೆಲೆಸುತ್ತಾಳೆಯೇ? ಮನೆಗೆ ಬರುತ್ತೇನೆಂದರೆ ಏನು ಮಾಡುವುದು? ಈ ಆಲೋಚನೆಗಳು ಮನಸ್ಸನ್ನು ಆವರಿಸಿದವು.

ನಾಲ್ಕರ ಹೊತ್ತಿಗೆ ಫೋನ್ ಮಾಡಿ, 'ಬೆಳಿಗ್ಗೆ ಏಳಕ್ಕೆ ನಿನ್ನ ರೂಮಿಗೆ ಬರುತ್ತೇನೆ; ಸರಿಯೇ?' ಎಂದೆ. 'ಅಷ್ಟು ಹೊತ್ತಿಗೆ ಬಂದರೆ ಸಾಕು; ನಾನೂ ರೆಡಿಯಾಗಿರುತ್ತೇನೆ. ಇವತ್ತು ಸಂಜೆ ಆಫೀಸು ಮುಗಿದ ನಂತರ ರೂಮಿಗೆ ಬನ್ನಿ. ಒಂದಿಷ್ಟು ದೂರ ಲೈಟಾಗಿ ಹೋಗಿ ಬರೋಣ' ಅಂದಳು. 'ಹೋ. ಆಗಲಿ; ಅದಕ್ಕೇನು?' ಅಂದವನು ನಂತರ ನಿಧಾನವಾಗಿ ಪಶ್ಚಾತ್ತಾಪಪಟ್ಟೆ.

ಮಹಾತ್ಮಾ ಗಾಂಧಿ ರಸ್ತೆಯ ಅಂಚಿನ ಮೇಲೆ ಸಂಜೆಯ ಬೆಳಕಿನಲ್ಲಿ ನಡೆದೆವು. ಮಾತಿಲ್ಲದೆ ನಡೆದೆವು. ನಾನೇ ಮೌನ ಮುರಿದು 'ಎಲ್ಲಿಗೆ ಹೋಗೋಣ?' ಎಂದೆ. 'ಸುಮ್ಮನೇ ಹತ್ತಿರ ಯಾವುದಾದರೂ ಪಾರ್ಕಿದ್ದರೆ ಅತ್ತ ನಡೆಯಿರಿ. ಒಂದು ಗಂಟೆ ಕಳೆದು ಬರೋಣ.'

ಕಬ್ಬನ್ ಪಾರ್ಕಿಗೆ ಪ್ರವೇಶಿಸಿದ ಕ್ಷಣ, ಯಾರಾದರೂ ಪರಿಚಯದವರು ಇದ್ದಾರೋ ಎಂದು ಆತಂಕದಿಂದ ಸುತ್ತಮುತ್ತ ನೋಡಿದೆ. ಸೌಮ್ಯ ಅಥವಾ ನನ್ನ ಮಗ ಇಲ್ಲಿಗೆ ಬರಲಾರರೆಂದು ಗೊತ್ತು; ಕೊಂಚ ಸಮಾಧಾನ.

ಒಂದು ತಾಸಿನಷ್ಟು ಹೊತ್ತು ಪಾರ್ಕಿನಲ್ಲಿ ತೇಲು ಮರದಡಿಯ ಕಲ್ಲು ಬೆಂಚಿನ ಮೇಲೆ ಕೂತೆವು. ಎದುರಿಗೆ ಆಟವಾಡುತ್ತಿದ್ದ 'ವಿಶೇಷ' ನಾಯಿ ಕೋತಿಗಳನ್ನೂ ತೋರಿಸಿದೆ. ಜನ್ಮತಃ ಒಂದಕ್ಕೊಂದು ಸಂಬಂಧವಿಲ್ಲದ ಎರಡು ಜೀವಗಳು ಅನ್ಯೋನ್ಯವಾಗಿರುವ ವಿಚಾರ, ಪೇಪರಿನಲ್ಲಿ ಓದಿಯೇ ನನಗೆ ಗೊತ್ತಾದದ್ದಾದರೂ, ತುಂಬಾ ದಿನಗಳಿಂದ ಅವುಗಳ ಬಗ್ಗೆ ಗೊತ್ತಿರುವ ಹಾಗೆ ಮಾತಾಡಿದೆ.

ಒಟ್ಟಾಗಿ ಆಟ ಆಡುತ್ತಿದ್ದವು. ಯಾರಾದರೂ ತಿಂಡಿ ಎಸೆದರೆ, ಒಟ್ಟಾಗಿ ಹಂಚಿಕೊಂಡು ತಿನ್ನುತ್ತಿದ್ದವು. "ಒಂದೇ ಬುಡಕಟ್ಟಿನ ಮನುಷ್ಯರೇ ಹೊಂದಿಕೊಳ್ಳದೇಯಿರುವಾಗ, ಅವುಗಳ ಪ್ರೇಮ ಅಸಾಧಾರಣವಾದದ್ದಲ್ಲವೇ?" ಅಂದೆ.

ಮಾಲಿನಿಯೂ ಬೆರಗಾಗಿ ನೋಡುತ್ತಿದ್ದಳು. ನಿಜಕ್ಕೂ ಇದು ವಿಸ್ಮಯಕಾರಿಯೆಂದು ಒಪ್ಪಿಕೊಂಡಳು. ಮತ್ತೆ ಒಂದಿಷ್ಟು ಹೊತ್ತು ಅದೂ ಇದೂ ಮಾತಾಡಿದೆವು. "ಕಬ್ಬನ್ ಪಾರ್ಕ್ ನಿಜಕ್ಕೂ ಸುಂದರವಾಗಿದೆ" ಅಂದಳು.

ತಾನು ಹಸಿರು ತೋಟಗಳ ನಡುವಿನ ಹಳ್ಳಿಯಿಂದ ಬಂದ ಹುಡುಗಿಯೆಂದು ಬರೆದ ಮಾಲಿನಿ ಇವಳೇನೇ? ಯಾಕೆಂದರೆ, ಒಂದು ಸಾರಿ ನಮ್ಮೂರಿನಿಂದ ಬಂದ ನಾಲ್ಕಾರು ಜನರನ್ನು ಕರೆದುಕೊಂಡು ಈ ಪಾರ್ಕಿಗೆ ಬಂದಿದ್ದೆ. ಅರ್ಧ ಗಂಟೆ ಸುತ್ತಿದ ಮೇಲೆ, ಪಾರ್ಕಿನ ರೆಸ್ಟಾರೆಂಟಿನಲ್ಲಿ ಕಾಫಿ ಕುಡಿಯುತ್ತ ಕೂತಿದ್ದಾಗ, 'ಪಾರ್ಕಿಗೆ ಹೋಗಬೇಕಾದರೆ ಇನ್ನು ತುಂಬಾ ದೂರ ನಡೆಯಬೇಕಾ?" ಎಂಬ ಪ್ರಶ್ನೆ ಕೇಳಿದರು. ಆಗ ನನ್ನ ಮೂರ್ಖತನ ಗೊತ್ತಾಯಿತು. ಹಸುರಿನ ಸಾಮ್ರಾಜ್ಯದಿಂದ ಬಂದವರಿಗೆ ಅಲ್ಲೊಂದು ಇಲ್ಲೊಂದು ಮರಗಳಿರುವ ಹರಕು ಗಡ್ಡದ ಹಾಗೆ ನೆಲದ ಮೇಲೆ ಹುಲ್ಲು ಹಬ್ಬಿರುವ ಇಂಥಾ ಜಾಗ ತೋರಿಸುವುದಕ್ಕೆ ಅರ್ಥವಿಲ್ಲ.

ಸಂಜೆ ಏಳೂವರೆಯಾಗುತ್ತಾ ಬಂದಿತ್ತು. "ನಡೆಯಿರಿ; ಎಲ್ಲಿಯಾದರೂ ರಾತ್ರಿ ಆಹಾರದ ಯೋಚನೆ ಕಳೆದುಬಿಡೋಣ. ಆಮೇಲೆ ರೂಮಿಗೆ ಹೋಗ್ತ

ತ್ತೇನೆ" ಅಂದಳು. "ನಡಿ, ನಿನಗೆಲ್ಲಿ ಇಷ್ಟವೋ ಅಲ್ಲಿಗೆ" ಎಂದು ಜವಾಬ್ದಾರಿ ಕಳೆದುಕೊಂಡೆ.

ರಸ್ತೆ ಬದಿಯಲ್ಲಿ ಟ್ಯಾಕ್ಸಿಗಾಗಿ ಕಾದೆ. ಆಟೋ ನಿಲ್ಲಿಸಿ ಒಳಗೆ ಕೂತಳು. ಯಾವುದೋ ಅಪರಿಚಿತ ರಸ್ತೆಯ ಬೃಹದಾಕಾರದ ಕಟ್ಟಡದ ಮುಂದೆ ನಿಂತಿತು ಆಟೋ. ಲಿಫ್ಟ್ ಏರಿದೆವು. ಇಳಿದು ಯಾವುದೋ ವಿದೇಶಿ ಮಾದರಿಯ ರೆಸ್ಟಾರೆಂಟಿಗೆ ಪ್ರವೇಶಿಸಿದಳು. ನಾನು ಕುಗ್ಗಿ ಹೋಗಿದ್ದರೂ ಎದೆ ಸೆಟೆಸಿ ನಡೆಯುವವನ ಹಾಗೆ ನಟಿಸಿದೆ. ಒಳಗೆ ಯಾವುದೋ ರಹಸ್ಯ ಸ್ಥಳದಂತೆ. ಕಂಡೂ ಕಾಣದ ಮಂದ ಬೆಳಕು; ಕೆಂಪು ಬಣ್ಣದ ಬೆಳಕು ಸೀಟುಗಳು ಎಲ್ಲಿದ್ದಾವೆಂದೇ ನನಗೆ ಅಸ್ಪಷ್ಟ.

ಹಿನ್ನೆಲೆಗೆ ಪಾಶ್ಚಾತ್ಯ ಸಂಗೀತದ ಮೆಲುದನಿ ಬಿಟ್ಟರೆ ಬೇರೆ ಸದ್ದಿಲ್ಲ. ನಿರ್ಜನ ಪ್ರದೇಶದಂಥ ಮೌನ. ಕೂತೆವು. ಅಸ್ಪಷ್ಟ ನೆರಳು ಬೆಳಕಿನಲ್ಲಿ ಮಾಲಿನಿ ಯಾರೋ ಅನ್ನುವಷ್ಟು ಅಪರಿಚಿತಳಾಗಿ ಕಾಣಿಸಿದಳು.

ಗರಿಗರಿಯಾಗಿ ಸೂಟು ಧರಿಸಿ, ಅಗಲವಾಗಿ ಟೈ ಕಟ್ಟಿದ ವ್ಯಕ್ತಿಯೊಬ್ಬ ಬಂದು ಮೆನು ಕಾರ್ಡ್ ಕೊಟ್ಟ. 'ಮೋಂಬತ್ತಿ' ಅಂದಳು ಮಾಲಿನಿ. ಆತ ಪುಟ್ಟದಾದ ಗ್ಲಾಸಿನ ದೀಪದ ಕಂಬದ ಮೇಲೆ ಮೋಂಬತ್ತಿ ಉರಿಸಿ ತಂದು, ಮೇಜಿನ ಮೇಲಿಟ್ಟ. ಹಿನ್ನೆಲೆಯ ಕೆಂಪು ದೀಪ, ಮುಖದ ಬಳಿಯ ಮೋಂಬತ್ತಿಯ ಬೆಳಕಿನಲ್ಲಿ ಮಾಲಿನಿ ತುಂಬ ಆಕರ್ಷಕವಾಗಿ ಕಾಣಿಸಿದಳು.

ಮೆನು ಕಾರ್ಡ್ ನೋಡಿ, "ಹಾಟ್ ಡ್ರಿಂಕ್ಸ್" ಅಂದಳು. "ಹೌದು; ನಂಗೆ ಕಾಫಿ" ಅಂದೆ. "ಓ! ಸರಿ ಬಿಡಿ" ಅಂದವಳು ಸೂಟುಧಾರಿಗೆ ಅದೇನೋ ಆರ್ಡರ್ ಮಾಡಿದಳು: ನನಗೆ ಸರಿಯಾಗಿ ಅರ್ಥವಾಗಲಿಲ್ಲ.

ಗ್ಲಾಸಿನ ಪುಟ್ಟ ಬಟ್ಟಲಿನಲ್ಲಿ ಕಂದು ವರ್ಣದ ಪಾನೀಯ, ಒಂದು ಶೀಸೆಯ ತುಂಬ ಇನ್ನೇನೋ ತಂದು ಇಡಿದ. ನನಗೆ ಆಳೆತ್ತರ ಗಾಜಿನ ಲೋಟದಲ್ಲಿ ಅನಾನಸಿನ ರಸ. ಬಟ್ಟಲಿಗೆ ಶೀಸೆಯಿಂದ ಬಗ್ಗಿಸಿ ನಿಧಾನವಾಗಿ ಒಂದು ಹನಿ ಗುಟುಕರಿಸಿದಳು. ಹಾಗೆಯೇ ತುಂಬ ಸಾವಕಾಶದಿಂದ ಹೀರುತ್ತಾ ಹೋದಳು.

ಸಂಗೀತದ ದನಿ ಜೋರಾಯಿತು. ನನಗರ್ಥವಾಗದ ವಿಚಿತ್ರ ದನಿ. ಒಮ್ಮೆ ವಿಕಾರವಾದ ಹಾಗೆ ಒಮ್ಮೆ ಸೌಮ್ಯವಾದ ಹಾಗೆ. ತಟ್ಟೆಯನ್ನು ಎತ್ತರದಿಂದ ಹೊತ್ತು ಹಾಕಿದ ಹಾಗೆ; ಎಮ್ಮೆ ಕರು ಕೂಗಿದ ಹಾಗೆ. ಆದರೂ ನನಗರ್ಥವಾಗದ, ನನ್ನ ಹಿಡಿತಕ್ಕೆ ಸಿಕ್ಕದ ಯಾವುದೋ ಅಸ್ಪಷ್ಟ ಲಯ. ಮಾಲಿನಿಯ ಕಾಲುಗಳು, ಮೈ ಸಂಗೀತದ ಏರಿಳಿತಕ್ಕೆ ನವಿರಾಗಿ ಸ್ಪಂದಿಸಿದವು. ಬಲಗೈಯ ನೀಳ ಬೆರಳಿನ ನಯುಹಸ್ತವನ್ನು ಮೋಂಬತ್ತಿಯ ಮುಂದೆ ಜೋಲಿಸಿ, ಎಡಗೈಯಲ್ಲಿ ಹೀರಿದಳು. ಮುಖದ ಅವರ್ಣನೀಯ ಅನುಭವಕ್ಕೆ ಮಾದಕವಾಗಿ (ಛೆ!) ಕಣ್ಣು ತೇಲಿಸಿದಳು.

ಕ್ರಮೇಣ ಇವಳು ಎದ್ದು ನಿಂತು ಮೈ ಬಳಿಯುತ್ತಾ, ಹೃದಯ ರಕ್ತನಾಳಗಳನ್ನು ಮಿಡಿದು ಮಂಪರಿನ ಹಿನ್ನೆಲೆಯ ದನಿಗೆ ಹೆಜ್ಜೆ ಹಾಕಿ ನರ್ತಿಸುತ್ತಾಳೆ ಅಂದುಕೊಳ್ಳುತ್ತಾ......

೨

ಮರುದಿನ ಮುಂಜಾನೆ ಏಳರ ಸುಮಾರಿಗೆ ರೂಮಿಗೆ ಹೋದೆ. ಬಾಗಿಲು ತೆರೆದ ಹುಡುಗಿ ಮಾಲಿನಿಯೇ ಅಲ್ಲವೇ ಅನ್ನುವಷ್ಟು ಬದಲಾಗಿದ್ದಳು. ನಿನ್ನೆ ಕಂಡ ರೂಪಕ್ಕೂ ಇವತ್ತಿಗೂ ಅಜಗಜಾಂತರ. ನಿನ್ನೆ ಸಂಜೆ ಪುಟ್ಟ ಹುಡುಗಿ: ಇಂದು ಮುಂಜಾನೆ ಸುಂದರ ತರುಣಿ.

ಬಾಚಿ ಮಾಡಿದ ಕೂದಲನ್ನೇ ಹಿಂದಕ್ಕೆ ನಯವಾಗಿ ಬಾಚಿ, ಎಡಕ್ಕೆ ಗುಲಾಬಿ ಹೂ ಸಿಕ್ಕಿಸಿದ್ದಳು. ನೀಳವಾದ ಮುಖ. ಹಣೆಯ ನಡುವೆ ಕಿರಿದಾದ, ಆದರೆ ಸ್ಪಷ್ಟವಾದ, ಕುಂಕುಮ. ನವಿರಾದ ಕಿತ್ತಳೆ ವರ್ಣದ ಸೀರೆಯನ್ನು ಸಣ್ಣಗೆ ನೆರಿ ಹಿಡಿದು, ಹೆಜ್ಜೆ ಮುಚ್ಚುವಂತೆ ಉಟ್ಟಿದ್ದಳು. ಅದೇ ಬಣ್ಣದ ಜಾಕೆಟ್: ವಾಚಿನ ಬೆಲ್ಟ್.

"ನಾನು ನಿನ್ನೆ ಕಂಡ ಮಾಲಿನಿ ನೀನೇನಾ?"

"ಯಾಕೆ? ಬಟ್ಟೆ ಬದಲಾದರೆ ಜೀವ ಬದಲಾಗುತ್ತಾ? ಇವೆಲ್ಲಾ ನನಗೆ ಆಸೆ. ಇವತ್ತು ಇದ್ದ ಹಾಗೆ ನಾಳೆಯಿರಬಾರದು. ಯಾವುದೂ ಸವಕಲು, ಬೋರು ಅಂತಾಗಬಾರದು. ಇಲ್ಲಿನ ಹೊಸತನ ಬದುಕಿಗೂ ಹೊಸ ಚೈತನ್ಯ ತುಂಬುತ್ತೇಂತ ತಿಳಿದವಳು ನಾನು. ಒಂದೊಂದ್ಸಾರಿ ಅನ್ಸತ್ತೆ. ಈ ದೇಹಾನ ಯಾರಾದ್ರೂ ಹೀಗೇ ಎತ್ಕೊಂಡ್ರು

ಆರ್ಥಿಕ ಸ್ವಾತಂತ್ರ್ಯ ಸಾಧನೆಯತ್ತ
ಕರ್ನಾಟಕದ ಮುನ್ನಡೆ

ಆರ್ಥಿಕ ಪ್ರಗತಿ

೧೯೭೭–೭೮ ರಲ್ಲಿ ಕರ್ನಾಟಕ ಆರ್ಥಿಕ ಕ್ಷೇತ್ರದಲ್ಲಿ ಶೇಕಡ ೬ ರಷ್ಟು ಪ್ರಗತಿ ಸಾಧಿಸಿದೆ ಎಂದು ಅಂದಾಜು ಮಾಡಲಾಗಿದೆ. ಅಖಿಲ ಭಾರತ ಪ್ರಗತಿಯ ಪ್ರಮಾಣ ಶೇಕಡ ಐದು ಮಾತ್ರ.

೧೯೭೪-೭೫ ರಲ್ಲಿ ೨೫೪೪ ಕೋಟಿ ರೂ. ಆಗಿದ್ದ ರಾಜ್ಯದ ಆದಾಯ ೧೯೭೭-೭೮ರ ಹೊತ್ತಿಗೆ ೨೮೦೦ ಕೋಟಿ ರೂ. ಏರಿದೆ ಎಂದು ಅಂದಾಜು ಮಾಡಲಾಗಿದೆ.

ತಲಾ ವರಮಾನ ೧೯೭೪-೭೫ ರಲ್ಲಿ ರೂ. ೭೮೪ ಇದ್ದದ್ದು ೧೯೭೭-೭೮ ರಲ್ಲಿ ರೂ. ೮೪೦ ಕ್ಕೆ ಏರಿದೆ.

ಅಭಿವೃದ್ಧಿ ವೆಚ್ಚದ ಪ್ರಮಾಣವೂ ಇದೇ ಅವಧಿಯಲ್ಲಿ ತಲಾ ೯೯ ರೂ. ನಿಂದ ೧೫೬ ರೂ.ಗೆ ಏರಿದೆ.

ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಕಟಣೆ.

ಹೋಗಿ ಚಿತೆಯ ಮೇಲಿಟ್ಟು, ಧಗದಗಿಸುವ ಬೆಂಕಿಯಲ್ಲಿಟ್ಟು ಸುಟ್ಟುಬಿಡುವುದಾದರೆ, ಆ ಉರಿದು ಹೋದ ದೇಹದ ಬೂದಿಯಿಂದ ನಾನು ಮರು ಹುಟ್ಟು ಪಡೆದುಬರುವುದು ಸಾಧ್ಯವಾದರೆ ಎಷ್ಟು ಸೊಗಸು!"

ಕರೆಗಂಟೆಯುನ್ನೊತ್ತಿ ಬಿಸಿಬಿಸಿ ಕಾಫಿ ತರಿಸಿ ಕೊಟ್ಟಳು. "ಬೇಗ ಹೊರಡೋಣವಾ? ಹೇಗೂ ಇಪ್ಪತ್ತು ನಿಮಿಷಕ್ಕೊಂದು ಬಸ್ಸಿವೆ. ಪರವಾ-ಗಿಲ್ಲನ್ನು" ಅಂದೆ.

"ಬಸ್ಸು? ಅದರ ತಂಟೆಯೇ ಬೇಡ. ಟ್ಯಾಕ್ಸಿಗೆ ಹೇಳಿದೀನಿ. ದಿನದ ಬಾಡಿಗೆ ಮೇಲೆ ಬೇಕಾದಲ್ಲಿ ಹೋಗಬಹುದು ನಮ್ಮ ಟೈಮಿಗೆ ಸರಿಯಾಗಿ." ನಾನು ಸಣ್ಣವನಾದ ಹಾಗೆನಿಸಿ ಪೆಚ್ಚಾದೆ!

ಬೆಂಗಳೂರು ಬಿಟ್ಟಾಗ ಏಳೂಕಾಲು. ನಮ್ಮ ಮನೆಯ ಮುಂದೆಯೇ ಕಾರು ಹೋಗಬೇಕಾದ ದಾರಿ. ಮುದುರಿ ಕೂತೆ. ಮನೆ ದಾಟಿ ಎಷ್ಟೋ ದೂರ ಹೋದ ಮೇಲೆಯೇ ತಲೆಯೆತ್ತಿದ್ದು. ಹಿತವಾದ ಗಾಳಿ; ಓಡುವ ಕಾರು; ಹಿಂದಕ್ಕೆ ಧಾವಿಸುವ ಎರಡೂ ಪಕ್ಕದ ಮರಗಳು. ಮಾಲಿನಿ ಕಣ್ಣರಳಿಸಿ, ಸುತ್ತ ಮುತ್ತ ನೋಡುತ್ತಿದ್ದಳು. ಕಾಲು ದೂರ ಕಳೆದ ಮೇಲೆ ನನ್ನತ್ತ ತಿರುಗಿದಳು.

"ಮನೆ ಬಿಟ್ಟು ಎಷ್ಟು ವರ್ಷ ಆಯ್ತು ಅಂದ್ರಿ, ನೀವು?"

"ನನ್ನ ಎಣಿಕೆಗೆ ಸಿಗದೆ ಜಾರಿ ಹೋಗುತ್ತಿವೆ ವರ್ಷಗಳು. ಒಮ್ಮೊಮ್ಮೆ ಮೊನ್ನೆ ಮೊನ್ನೆ ಬಂದ ಹಾಗೆ ಅನ್ನಿಸುತ್ತೆ. ಒಂದೊಂದು ಸಾರಿ ಯುಗ ಯುಗವೇ ಕಳೆದುಹೋಗಿರಬೇಕು ಅಂದುಕೊಳ್ಳುತ್ತೇನೆ. ಆದರೂ ಊರಿನ ನೆಲದ ಸಂಬಂಧ ಗಾಢವಾಗಿ ಕಲಕುತ್ತೆ ಮಾಲಿನಿ!"

"ನೀವೇ ಹಿರಿಯ ಮಗ ಅಂದಿರಾ?"

"ಮೂರು ಜನ ಅಕ್ಕಂದಿರು; ನಂತರ ನಾನು."

"ನಿಮ್ಮ ಈ ವಿಚಾರದಲ್ಲಿ ಬಹಳಷ್ಟು ಬರೆದಿದ್ದಿರಿ ಅಲ್ಲವಾ! ಎಲ್ಲ ಹೇಳಿ ಈಗ. ಕಾಗದದಲ್ಲಿ ಎಲ್ಲಾ ಸ್ಪಷ್ಟ ಇರೋದಿಲ್ಲ ನೋಡಿ. 'ನಾನು ಹಳ್ಳಿಯಿಂದ ಬಂದೋನು' ಅನ್ನೋ ಮಾತು ಹೆಮ್ಮೆಯ ಮಾತು ಇರಬಹುದು. ತನ್ನ ಬಗೆಗಿನ ತಿರಸ್ಕಾರದ ಮಾತೂ ಇರಬಹುದು. ಹೇಳುವ ವ್ಯಕ್ತಿ ಎದುರಿಗಿಲ್ಲದಾಗ ನಾವು ಯಾವ ಅರ್ಥ ಬೇಕಾದರೂ ಮಾಡಿಕೊಳ್ಳಬಹುದು ಅಲ್ವಾ?!"

"ನಾನೆಂದಾದರೂ ಅಹಂಕಾರ ಪಟ್ಟಿದ್ದಿದ್ದರೆ ಶುದ್ಧ ಹಳ್ಳಿಯಿಂದ ಬಂದವನು. ಅದ್ರಲ್ಲೂ ಬಡ ಸಂಸಾರದಿಂದ ಬಂದವನು ಅನ್ನೋ ವಿಚಾರಕ್ಕೆ. ಈ ವಿಚಾರಕ್ಕೆ ಅಹಂಕಾರ ಹೇಗೆ ಒಳ್ಳೆಯದಲ್ಲವೋ ತಿರಸ್ಕಾರವೂ ಒಳ್ಳೆಯದಲ್ಲ ಅಂದುಕೊಂಡರೂ ತಪ್ಪಿಸಿಕೊಳ್ಳಲಾರದವನಾಗಿದ್ದೇನೆ!"

"ನಿಮ್ಮ ಅಕ್ಕಂದಿರು ಯಾರಾದರೂ ಬೆಂಗ-ಳೂರಿನಲ್ಲಿ ಇದ್ದಾರಾ?"

"ಇಲ್ಲ; ಅವರೆಲ್ಲ ಪುಣ್ಯವಂತರು. ನಮ್ಮೂರಿನ ಹತ್ತಿರದಲ್ಲೇ ಅನುಕೂಲವಾದ ಗಂಡು ದೊರೆತಿದ್ದು ಮದುವೆಮಾಡಿಕೊಂಡು ಸಂತೃಪ್ತ ಜೀವನ ನಡೆಸಿಕೊಂಡಿದ್ದಾರೆ. ಅವರೆ, ಬಹುಶಃ, ಅವರಿಗೆ ತಾವು ಸುಖವಾಗಿದ್ದೇವೆಂದು ಗೊತ್ತಿಲ್ಲ."

"ತಂಗಿ?"

"ನನಗೆ ನೆನಪಿರುವ ತಂಗಿ ತುಂಬಾ ಚಿಕ್ಕವಳು. ಹತ್ತನೇ ಕ್ಲಾಸಿನಲ್ಲಿ ಓದುತ್ತಿದ್ದಳು. ಅದೇ ಸಮಯದಲ್ಲಿ ನಾನು ಮನೆಯಿಂದ ಓಡಿ ಬಂದದ್ದು. ಈಗ್ಗೆ ಕೆಲವು ವರ್ಷಗಳ ಹಿಂದೆ ಅವಳ ಮದುವೆಯೂ ಆಯಿತಂತೆ. ಮೈಸೂರಿನಲ್ಲಿ ಅನುಕೂಲವಾದ ಸಂಬಂಧ ದೊರೆಯಿತಂತೆ. ನಾನು ಮದುವೆಗೆ ಹೋಗಿರಲಿಲ್ಲ. ಯಾರೂ ನನ್ನನ್ನು ಕರೆಯುವ ಗೋಜಿಗೂ ಬಂದಿರಲಿಲ್ಲ. ನನ್ನ ಮದುವೆಗೆ ಯಾರನ್ನೂ ಕರೆದಿದ್ದೆ ಹೇಳು? ನಮ್ಮೂರಿನಲ್ಲಿ ವಯಸ್ಸಿಗೆ ಬಂದ ತಂಗಿ ಮನೆಯಲ್ಲಿರುವಾಗ ಮದುವೆಯಾದ ಮಹಾಪುರುಷರಲ್ಲಿ ನಾನೇ ಮೊದಲಿಗನಾಂತಾ ಕಾಣುತ್ತೆ. ಮದುವೆಯಾಗುವ ಕಾಲಕ್ಕೆ ನನಗೊಬ್ಬಳು ತಂಗಿಯಿದ್ದಾಳೆಂಬ ನೆನಪೂ ಇರಲಿಲ್ಲ.

"ಒಮ್ಮೆ ಯಾರೋ ಊರಿನ ಕಡೆಯವರು ಬೆಂಗಳೂರಿಗೆ ಬಂದಾಗ ತಂಗಿಗೆ ಇಲ್ಲಿ ಯಾವುದಾದರೂ ಸಂಬಂಧ ನೋಡಬೇಕೆಂದೂ ಅಪ್ಪ ಅಮ್ಮ ಇಬ್ಬರು ಇಳಿವಯಸ್ಸಿನಲ್ಲಿ ಇದೇ ನೋವಿನಿಂದ ಜೀವ ಹಿಡಿದುಕೊಂಡಿದ್ದಾರೆಂದೂ ಹೇಳಿ ಕಳಿಸಿದ್ದರು. ನಾನು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಅವರು ಬಂದು ಹೋದ ನಾಲ್ಕೇ ದಿನಕ್ಕೆ ನನ್ನ ಮದುವೆಯಾಯಿತು. ಇದರ ನೆನಪಿನಿಂದ ನಾನೊಂದು ಕ್ರಿಮಿಯಾಗಿ ಹೋಗುತ್ತೇನೆ.



CASAP-39-173-KN

"ಆ ಮೇಲೆ ಮೈಸೂರಿಗೆ ಎಷ್ಟೋಬಾರಿ ಹೋಗಿದ್ದೇನೆ. ತಂಗಿಯ ಮನೆಯನ್ನೂ ಹುಡುಕಿಕೊಂಡು ಹೋಗಿ ಮಾತಾಡಿಸಿಕೊಂಡು ಬರಬೇಕೆಂಬ ಆದಮ್ಯ ಆಸೆಯನ್ನು ಹಾಗೇ ತಡೆದುಕೊಂಡಿದ್ದೇನೆ. ಯಾಕಂದರೆ ನನ್ನ ಬಗ್ಗೆ ಆವಳಿಗೆ ಅದೆಷ್ಟು ತಿರಸ್ಕಾರವಿದೆಯೋ ಗೊತ್ತಿಲ್ಲ!

"ಆದರೆ, ಏಳೆಂಟು ವರ್ಷದ ಮಗುವಾಗಿದ್ದಾಗ ಆಕೆ ಹೇಗೆ ನನ್ನ ಜೀವದ ಜೀವವಾಗಿದ್ದಾಳೆಂಬ ನೆನಪಿನಿಂದ ಕಣ್ಣು ಮಂಜಾಗುತ್ತದೆ. ಒಂದು ಘಟನೆ ಹೇಳುತ್ತೇನೆ. ಒಮ್ಮೆ ಊರಲ್ಲಿ ಯಾರೋ ಮುದುಕರು ತೀರಿಹೋದರು. ಮನೆಯಲ್ಲಿ ಅದೇ ಮಾತು. ಏನೆಂದೂ ಅರ್ಥವಾಗದಿದ್ದರೂ, ಅಲ್ಲೇ ಓಡಾಡಿಕೊಂಡಿದ್ದ ತಂಗಿಯ ಕಿವಿಗೆ ಎಲ್ಲವೂ ಬಿದ್ದಿರಬೇಕು. ಆ ಮೇಲೆ ನನ್ನನ್ನು ಕರೆದು ಗುಟ್ಟಾಗಿ, 'ಅಣ್ಣಾ, ಸಾಯೋದು ಅಂದ್ರೆ ಏನಣ್ಣಾ?' ಅಂದ್ಲು. ನಾನು ನನಗೆ ತಿಳಿದ ನಾಲ್ಕು ಮಾತು ಹೇಳಿದೆ. ಮಗುವಿನ ಮನಸ್ಸಿನಲ್ಲಿ ಭಯದ ಮುದ್ರೆಯೊತ್ತಿರಬೇಕು. ಆಗ ನನಗದು ಗೊತ್ತಾಗಲಿಲ್ಲ. ಮತ್ತೆ ಕೆಲವು ದಿನಗಳಾದ ಮೇಲೆ, ಅಟ್ಟದ ಮೇಲಿನಿಂದ ಯಾವುದೋ ಪಾತ್ರೆ ತೆಗೆಯುವಾಗ ಆಕಸ್ಮಾತ್ ಏಣಿಯಿಂದ ಕೆಳಗುರುಳಿಬಿಟ್ಟಳು. ಪೆಟ್ಟು ಜೋರಾಗಿ ಬಿದ್ದಿತ್ತು. ನಾನು ಜಗುಲಿಯಲ್ಲಿದ್ದವನು ಒಳಗೆ ಧಾವಿಸಿದೆ. ಪುಟ್ಟ ಹುಡುಗಿ ನನ್ನ ಕಾಲನ್ನು ತಬ್ಬಿಕೊಂಡು, 'ಅಣ್ಣಾ ನಾನು ಸತ್ತು ಹೋಗಿದ್ದೇನೆಯೋ ಜೀವ ಇದೆಯೋ ಮೊದಲು ನೋಡಣ್ಣಾ" ಎಂದು ಬಿಕ್ಕಿದಳು. ಈ ಘಟನೆ ಯಾಕೆ ಹಸಿರಾಗಿ ನನ್ನ ಮನಸ್ಸಿನಲ್ಲಿ ನಿಂತು ಹೋಗಿದೆಯೋ ಗೊತ್ತಿಲ್ಲ!"

"ಎಳೆಯ ಜೀವಗಳೇ ನಮ್ಮ ಮನಸ್ಸನ್ನು ಗಾಢವಾಗಿ ಆಕ್ರಮಿಸಬಹುದೂಂತ ಕಾಣುತ್ತೆ!"

"ನಿನ್ನ ಮಾತು ನಿಜವಿರಬಹುದು ಅಂತ ಕಾಣುತ್ತೆ ಮಾಲಿನಿ. ನಾನು ಬೆಂಗಳೂರಿಗೆ ಬಂದ ಪ್ರಾರಂಭದಲ್ಲಿ, ನಾನು ಎತ್ತಿಕೊಂಡು ಆಡಿಸಿದ ತೊಟ್ಟಿಲಲ್ಲಿ ತೂಗಿದ, ಅಕ್ಕನ ಮಕ್ಕಳ ನೆನಪಿನಿಂದ ಈ ಓದು ಕಾಲೇಜಿನ ಸಂಬಂಧಗಳನ್ನೆಲ್ಲಾ ಕಿತ್ತೊಗೆದು, ಊರಿಗ್ಗೆ ಓಡಿಹೋಗಬೇಕೆನ್ನಿಸುತ್ತಿತ್ತು. ಅಕ್ಕಂದಿರ ಮಕ್ಕಳೆಲ್ಲಾ ನಮ್ಮ ಮನೆಯಲ್ಲೇ ಬೆಳೆದದ್ದು ಹೆಚ್ಚು. ಊರಿಗೆ ಹೋದ ಮೇಲೂ ಶಾಲೆಗೆ ರಜ ಸಿಕ್ಕಿತೆಂದರೆ ಸಾಕು; ನಮ್ಮ ಮನೆಗೆ ಓಡಿ ಬರುತ್ತಿದ್ದವು. ನಮ್ಮ ಮನೆಯಲ್ಲಿ ಯಾವ ಸುಖ ಕಂಡಿದ್ದವೋ ನಾ ಬೇರೆ ಕಾಣೆ! ನಮ್ಮ ಭಾವಂದಿರೆಲ್ಲಾ ನಮ್ಮೂರಿನ ಲೆಕ್ಕಕ್ಕೆ ತುಂಬ ಶ್ರೀಮಂತರು. ಯಾವುದಕ್ಕೂ ಕೊರತೆಯಿಲ್ಲ. ಈ ಹುಡುಗರು ನಮ್ಮ ಮನೆಗೆ ಬಂದರೆ ಅಡಿಕೆ ಕೊನೆ ಹೊರುವುದು, ಎಮ್ಮೆ ಕರುವಿಗೆ ಹಂಟೆ, ಹೊಂಬಳ ತಂದು ಹಾಕುವುದು, ಅಡಿಕೆ ಸುಲಿಯುವುದು ಮುಂತಾದ ಕೆಲಸಗಳನ್ನು ಧಾರಾಳವಾಗಿ ಮಾಡಿಸಿಕೊಳ್ಳುತ್ತಿದ್ದವು. ಒಂದು ಲೋಟ ಬೆಳ್ಳಗಿರುವ ಕಾಫಿ ಕೂಡ ಅವುಗಳ ಪಾಲಿಗೆ ಸಿಕ್ಕುತ್ತಿರಲಿಲ್ಲ. ಸಂಜೆಯಾಯಿತೆಂದರೆ ಎಲ್ಲ ಹುಡುಗರೂ ಸುತ್ತ ಕೂತು, 'ಕಥೆ ಹೇಳು ಮಾವಾ, ಕಥೆ ಹೇಳು' ಎಂದು ಪೀಡಿಸಿ ನಾನು ಸುಳ್ಳುಸುಳ್ಳೆ ಕಥೆಗಳನ್ನು ಹೇಳಿದರೆ ಅತ್ಯುತ್ಸಾಹದಿಂದ ಕೇಳಿ ಖುಷಿ ಪಡುತ್ತಿದ್ದವು.

"ನನ್ನ ಕಿರಿಯಕ್ಕನ ಮಗುವೊಂದು ಬೆಳೆದದ್ದು ನಮ್ಮ ಮನೆಯಲ್ಲಿ. ನಮ್ಮ ಮನೆಗೆ ಅತ್ಯಂತ ಹತ್ತಿರದ ಅಂಗಡಿಯಿರುವುದು ಹನ್ನೆರಡು ಮೈಲಿ ದೂರದ ಕೊಪ್ಪದಲ್ಲಿ ಎಂದು ನಿನಗೆ ಹೇಳಿರಬೇಕಲ್ಲ. ಒಂದು ಸಾರಿ ಶಾಲೆಯಲ್ಲಿ ಯಾರೋ ಹುಡುಗರು ಬಲೂನು ತಂದಿದ್ದನ್ನು ನೋಡಿತಂತೆ. 'ಮಾವಾ, ನಂಗೂ ಹಾಂಗಿದ್ದೇ ಒಂದು ಕೊಪ್ಪದಿಂದ ತಂದ್ಕೊಡ್ತಿಯಾ?" ಅಂತ ಕೇಳಿತು. ಮುಂದಿನ ವಾರ ನಾನು ವೀಳ್ಯದೆಲೆ ವ್ಯಾಪಾರಕ್ಕೆ ಕೊಪ್ಪಕ್ಕೆ ಹೋದವನು ಮೂರು ಕಾಸು ಕೊಟ್ಟು ಒಂದು ದೊಡ್ಡ ರಬ್ಬರ್ ಬಲೂನ್ ಕೊಂಡು ತಂದೆ. ಮಗು ಚಳಿಗಾಲವಾದ್ದರಿಂದ, ಮುರುವಿನ ಒಲೆಯ ಬಳಿ ಚಳಿಕಾಯಿಸುತ್ತಾ, ಅಜ್ಜನ ತೊಡೆಯ ಮೇಲೆ ಕೂತಿತ್ತು. ಅಲ್ಲಿಗೆ ಹೋಗಿ ಕೊಟ್ಟೆ. ಅದರ ಮುಖ ಹೇಗೆ ಸಂತೋಷದಿಂದ ಅರಳಿತು. ನೋಡು! 'ಉಫ್' ಅಂತ ಊದಿತು. ಒಂದೇ ಕ್ಷಣದಲ್ಲಿ ಬಲೂನು ಕೈಯಿಂದ ಜಾರಿ, ಒಲೆಯಲ್ಲಿ ಉರಿಯುತ್ತಿದ್ದ ಕೆಂಡದ ಮೇಲೆ ಬಿದ್ದು ಉರಿದು ಹೋಯಿತು.


"ಈ ಘಟನೆ ಯಾಕೆ ನನ್ನ ಮನಸ್ಸಿನಲ್ಲಿ ಮಾಸದೇ ಉಳಿದಿದೆ, ಯಾಕೆ ಇದನ್ನೆಲ್ಲಾ ನಿನಗೆ ಹೇಳುತ್ತಿದ್ದೇನೆ ಗೊತ್ತಿಲ್ಲ ಮಾಲಿನಿ. ಈಗ ಈ ಹುಡುಗರು

ಅಂದ ಮೇಲೆ, ನಮ್ಮ ಪತ್ರಿಕೆಗಳ ಮಟ್ಟ ಎಂಥದ್ದೆಂದು ಬೇಜಾರಾಯಿತು. ಆದರೆ ಇದರಿಂದೇನೂ ನಾನು ನಿರಾಶನಾಗಲಿಲ್ಲ. ಬೈಗಳಿಂದ ಕೊಬ್ಬಿ ಮೆರೆಯುವ ರಾಜಕಾರಣಿಯಂತೆ, ಬರಹಗಳು ತಿರಸ್ಕೃತವಾದಷ್ಟು ಹೆಚ್ಚು ಹೆಚ್ಚು ಉತ್ಸಾಹದಿಂದ ಬರೆಯತೊಡಗಿದೆ. ತುರ್ತು ಪರಿಸ್ಥಿತಿಯ ಸಮಯದಲ್ಲಿ ದೇಶದ ಸ್ಥಿತಿಗತಿಗಳನ್ನು ವರ್ಣಿಸುವ ಖಂಡಕಾವ್ಯವೊಂದನ್ನು, ವೆಂಕಟೇಶ್ವರ ಸುಪ್ರಭಾತದ ದಾಟಿಯಲ್ಲಿ ಬರೆದೆ. ಇದು ಆಕಾಶವಾಣಿ ದೆಹಲಿ ಮತ್ತು ಬೆಂಗಳೂರು ಕೇಂದ್ರಗಳಿಂದ ಏಕಕಾಲದಲ್ಲಿ ತಿರಸ್ಕೃತವಾಯಿತು!"

"ಹೀಗಾಗುವುದಕ್ಕೆ ಕಾರಣವೇನೆಂದು ಎಂದಾದರೂ ಯೋಚಿಸಿದಿರಾ?"

"ಯೋಚಿಸದೆ ಏನು ?" ಒಮ್ಮೆ ವಿಮರ್ಶಕ ಮಿತ್ರರಿಗೆ ಇದನ್ನೆಲ್ಲಾ ತೋರಿಸಿದೆ. ಅವರ ಮುಖ್ಯ ಟೀಕೆಯೆಂದರೆ, ನಾನು ಬರೆಯುವ ಕಥೆಗಳು ಬದುಕಿನ ಸಹಜತೆಯಿಂದ ದೂರವಾಗಿ ಕೇವಲ ಕಲ್ಪಿತ ಲಹರಿಗಳಾಗಿರುತ್ತವೆ ಅನ್ನುವುದು. ಇದು ನನಗೆ ಹೌದೆನಿಸಿತು. ಆದ್ದರಿಂದ ಅನುಭವದ ತೀವ್ರತೆಯಿರುವ ಯಾವುದಾದರೂ ಘಟನೆಯನ್ನು ಕಥೆಯಾಗಿ ಬರೆಯಬೇಕೆಂದುಕೊಂಡೆ. ಆದರೆ ಬೆಂಗಳೂರಿಗೆ ಬಂದ ಮೇಲೆ ನನಗೆ ಅನುಭವದ ಭಾರವೇ ಇಲ್ಲ ಅನ್ನಿಸಿತು. ಕನ್ನಡದ ಮಹಾ ಲೇಖಕರು ವರ್ಷಾನುಗಟ್ಟಲೆ ನಗರದಲ್ಲಿ ನೆಲೆಸಿದ್ದರೂ ಹಳ್ಳಿಗಳ ಬಗ್ಗೆಯೇ ಹೆಚ್ಚಾಗಿ ಕಥೆ ಬರೆದಿರುವುದು ಮತ್ತು ಕನ್ನಡದ ಶ್ರೇಷ್ಠ ಕೃತಿಗಳೆಲ್ಲಾ ಬಹುಮಟ್ಟಿಗೆ ಹಳ್ಳಿಯ ಜೀವನವನ್ನೇ ಕುರಿತಿರುವುದು ನನ್ನ ಗಮನ ಸೆಳೆಯಿತು. ನನ್ನ ಹಳ್ಳಿಯ ಅರ್ಧ ಬದುಕನ್ನು ಪಟ್ಟಣದ ಇನ್ನರ್ಧ ಬದುಕನ್ನು ಕಲಬೆರಕೆ ಮಾಡಿ ಒಂದು ಕಥೆ ರಚಿಸಿದೆ. ನನ್ನ ಕಥೆ ಒಬ್ಬ ಯುವಕ. ಹಳ್ಳಿಯ ಕೆಸರಿನಲ್ಲಿ ಹುಟ್ಟಿ ಬೆಳೆದವನು. ತಾನು ಓದಿದ ಬರವಣಿಗೆಯ ಪ್ರಭಾವದಿಂದ ನಗರ ಜೀವನಕ್ಕೆ ಮರುಳಾಗಿ, ಒಂದು ಹೊತ್ತಿನ ಊಟಕ್ಕೂ ಯೋಚಿಸಬೇಕಾದಂಥ ಪರಿಸ್ಥಿಯಿದ್ದ ಮನೆಯಲ್ಲಿ, ಅಮ್ಮನಿಗೆ ಏಕೈಕ ಒಡವೆಯಾಗಿದ್ದ ತಾಯಿಯ ತವರು ಮನೆಯವರು ಕೊಟ್ಟ ಚಿನ್ನದ ಕಡಗ ಕದ್ದು ನಗರಕ್ಕೆ ಓಡಿ ಬರುತ್ತಾನೆ. ಆ ಒಡವೆಯನ್ನು ಗಿರವಿಗಿಟ್ಟು, ಹೇಗೋ ಕೆಲಸ ಸಂಪಾದಿಸಿ ಮುಂದೆ ಭಾರೀ ಶ್ರೀಮಂತನಾಗುತ್ತಾನೆ. ಹಳೆಯ ನೆನಪನ್ನು ಕಿತ್ತೊಗೆದು, ಅಪ್ಪ, ಅಮ್ಮ ಎಲ್ಲರನ್ನು ಮರೆಯುತ್ತಾನೆ. ಮದುವೆಯಾದ ಮೇಲೆ ತನ್ನ ಹೆಂಡತಿಗೆ ತಾಯಿ-ತಂದೆಯ ಬಗ್ಗೆ ಇರುವ ಪ್ರೀತಿ ತಿಳಿದಾಗ ತನ್ನ ಅಪ್ಪ, ಅಮ್ಮನ ನೆನಪಾಗುತ್ತದೆ. ಕ್ಷಣದಲ್ಲಿ ಹೋಗಿ ಅವರನ್ನು ನೋಡಬೇಕೆಂದುಕೊಳ್ಳುತ್ತಾನೆ. ಹಳೆಯ ನೆನಪಿನಿಂದ ಗಿರವಿ ಅಂಗಡಿಗೆ ಹೋಗುತ್ತಾನೆ. ಅವನು ಗಿರವಿಯಿಟ್ಟ ಕಡಗ ಇರುವುದಿಲ್ಲ. ಅದಕ್ಕಿಂತ ಬೆಡಗಿನ ಕಡಗಗಳಿವೆ ಅನ್ನುತ್ತಾನೆ ಅಂಗಡಿಯವ. ಒಪ್ಪಿಗೆಯಿಲ್ಲ, ಹೇಗೋ ಹಳೆಯ ಒಡವೆ ಕೊಂಡವರ ಪತ್ತೆ ಹಚ್ಚಿ, ಅವರ ಕಾಲಿಗೆ ಬಿದ್ದು, ಒಂದಕ್ಕೆ ನಾಲ್ಕರಷ್ಟು ಬೆಲೆ ತೆತ್ತು, ಕೊಂಡು ಊರಿಗೆ ಮರಳುತ್ತಾನೆ. ಅಪ್ಪ, ಅಮ್ಮ ಇಬ್ಬರೂ ವಯಸ್ಸಿನ ಭಾರದಿಂದ, ಬಡತನದ ಬೇಗೆಯಿಂದ ಜರ್ಜರಿತರಾಗಿ ಇವನ ಗುರುತು ಕೂಡ ಹಿಡಿಯುವ ಸ್ಥಿತಿಯಲ್ಲಿರುವುದಿಲ್ಲ. "ನೋಡಮ್ಮಾ! ನಿನ್ನ ಕಳೆದುಹೋದ ಆಭರಣಗಳನ್ನು ಮರಳಿ ತಂದಿದ್ದೇನೆ." ಅನ್ನುತ್ತಾನೆ. ತಾಯಿ ಮಗನ ತಲೆಗೂದಲು ನೇವರಿಸಿ ಕಂಬನಿ ತುಂಬಿ ಹೇಳುತ್ತಾಳೆ. "ಮಗು, ನಾನು ಕಳೆದುಕೊಂಡ ಚಿನ್ನದ ಒಡವೆಯನ್ನು ನೀನು ಮರಳಿ ತರಬಲ್ಲೆ; ಆದರೆ ನಾನು ಕಳೆದುಕೊಂಡ ಚಿನ್ನದಂತಹ ಕಂದನನ್ನು ಮರಳಿ ಕೊಡಬಲ್ಲೆಯಾ?"

"ಕಥೆಯನ್ನು ಇಲ್ಲಿಗೇ ನಿಲ್ಲಿಸಿದ್ದೆ. ಬರೆದ ಮೇಲೆ ಹೃದಯ ತುಂಬಾ ಭಾರವಾಗಿತ್ತು. ಈ ಕಥೆ ಪತ್ರಿಕೆಯಲ್ಲಿ ಪ್ರಕಟವಾಗುತ್ತದೆ. ಅಮ್ಮ ಇದನ್ನು ಓದುತ್ತಾಳೆ. ಆಗ ಅವಳ ಪ್ರತಿಕ್ರಿಯೆ ಏನಿರಬಹುದು ಎಂಬ ಯೋಚನೆಯಿಂದ ರಾತ್ರಿಯೆಲ್ಲ ನಿದ್ದೆ ಬರಲಿಲ್ಲ. ಕಥೆ ಮೊದಲೇ ಹೇಳಿದ ಹಾಗೆ ತಿರಸ್ಕೃತವಾಗಿ ಮರಳಿ ಬಂತು. ಒಂದು ದೃಷ್ಟಿಯಿಂದ ಒಳ್ಳೆಯದೇ ಆಯಿತು. ಕಥೆ ಸ್ವೀಕೃತವಾದರೆ ಕಪ್ಪು ಕಾಗದದ ಮೇಲೆ ಮುದ್ರಿಸುವ ಸಂಪಾದಕರು, ಅಸ್ವೀಕೃತ ಎಂಬ ಸೂಚನೆಯನ್ನು, ಮುದ್ದಾದ ಅಕ್ಷರಗಳಲ್ಲಿ, ಪಿತ್ತಳೆ ವರ್ಣದ ಕಾಗದದ ಮೇಲೆ ಮೋಹಕವಾಗಿ ಮುದ್ರಿಸಿ ಕಳಿಸುತ್ತಾರೆ. ಅದನ್ನು ನೋಡುವುದೇ ಒಂದು ಸಂತೋಷ. ಒಮ್ಮೆ ನನ್ನ ಹಳೆಯ ಸಂಗ್ರ


ಕೋರೈಸುವ ಬಿಳಿಪು ಯಾರೇ
ನೋಡಲಿ, ಒಂದೇ ಮಾತು...
ಇದು ಖಂಡಿತ
ಡೆಟ್
ಡಿಟರ್ಜೆಂಟ್
ಬಿಲ್ಲೆಯ ಒಗೆತ
Supreme
Det

ಹವನ್ನು ತೆಗೆದಾಗ, ಒಂದೇ ಪತ್ರಿಕೆಯಿಂದ ಹದಿನೇಳು ಕಥೆಗಳು ಮರಳಿ ಬಂದದ್ದು ಗೊತ್ತಾಯಿತು. ಎಲ್ಲಕ್ಕೂ ವಿಷಾದ. ಈ ರೀತಿ ದಿನಕ್ಕೆ ಎಷ್ಟೊಂದು ಪತ್ರಗಳನ್ನು ಕಳಿಸಬೇಕು? ನಮ್ಮ ಪತ್ರಿಕಾ ಸಂಪಾದಕರು [illegible] ಬದುಕನ್ನು ಬದುಕುತ್ತಿದ್ದಾರೆ ಎಂದು ದುಃಖವಾಯಿತು. ಒಂದು ದಿನ ಅವರ ಮನೆಗೆ ಹೋಗಿ, "[illegible] [illegible] ಹೇಗೆ? [illegible]" [illegible]

"[illegible] ನೆಯೂ ಹೊಳೆಯಿತು. [illegible] ನಾನು ಸಂಘಟಿಸಬಾರದೇಕೆ? ಬೆಂಗಳೂರಲ್ಲೊಂದು ಲೈಬ್ರರಿಯ ರೀತಿಯ ದೊಡ್ಡ ಕಟ್ಟಡ [illegible] ಬರಹ [illegible] ಸಹಾಯಕವಾಗುವುದೆಂದೂ ಯೋಚಿಸಿದ್ದೆ. ಇದೂ ಕಾರ್ಯರೂಪಕ್ಕೆ ಬರಲಿಲ್ಲ!"

"ಸಧ್ಯ. ದೇವರು ದೊಡ್ಡವನು!"

"[illegible] ಸ್ನೇಹ, ಭೇಟಿ, ಮಾತುಕತೆ ಕುರಿತು ಒಂದು ಕಥೆ ಬರೆಯಬಾರದೇಕೆ?"

"ತುಂಬಾ ಒಳ್ಳೆಯ ಯೋಚನೆ. ನೀವು ಕಳಿಸುವುದಕ್ಕೆ ಮೊದಲೇ ಈ ಕಥೆ ವಾಪಸು ಬಂದರೆ ಆಶ್ಚರ್ಯವಿಲ್ಲ."

"ನೀನೇನು ಮಹಾ ವಿಮರ್ಶಕನೋ?"

"ಮಹಾ ಅಲ್ಲದಿದ್ದರೂ ವಿಮರ್ಶಕ ಹಾದಿಯಿಂದ [illegible] ಅಧ್ಯಯನವಾಗಬಹುದು. ಒಂದು ಸಿಂಹ [illegible] ಮಹಿಳಾ ಪತ್ರಿಕೆಗೆ ನಾನು ಖಾಯಂ ವಿಮರ್ಶಕನು. ಈ ಬಗ್ಗೆ ನಮಗೆ ತರಬೇತಿಯನ್ನು ಕೊಟ್ಟಿದ್ದಾರೆ. ನಿಮ್ಮ ಈ ಅನುಭವಗಳು ಕಥೆಯಾಗಲು ಸಾಧ್ಯವೇ ಇಲ್ಲ. ನೀವು ಹೇಳಿದ ಎಲ್ಲಾ ಘಟನೆಗಳು ಒಂದು ತುಂಡು ವರದಿಯಾಗಬಲ್ಲವೇ ಹೊರತು, ಅವುಗಳು ಮೂಲಭೂತ ಅರ್ಥದಲ್ಲಿ ಸಾಂಕೇತಿಕವಾಗಲಾರದೆ ಪೇಲವವಾಗಿವೆ. ಯಾವುದೇ ಘಟನೆಯನ್ನು ಕಥೆಯಾಗಿ ಹೇಳಬೇಕಾದರೂ ಅದು ಬರಿದಲ್ಲ ಒಂದು ಪಾತಳಿಯಲ್ಲಿ ಸಾಮಾಜಿಕವಾಗಿ ಕೂಡ ಮಹತ್ವ ಪಡೆದಿರಬೇಕಾಗುತ್ತದೆ. ನಿಮ್ಮ ಈ ಗೋಳಿನ ಕಥೆ ಸಮಾಜದ ಯಾವುದೇ ಸಮಸ್ಯೆಯ ಮೇಲೂ ಬೆಳಕು ಚೆಲ್ಲುವುದಿಲ್ಲವೆಂಬುದನ್ನು ಮುಖ್ಯವಾಗಿ ಗಮನಿಸಬೇಕು. ನೀವು ಗೊಳೋ ಅಂದದ್ದು ಸಾಹಿತ್ಯವಾಗಲಾರದು."

ಟ್ಯಾಕ್ಸಿ ಮೈಸೂರು ನಗರವನ್ನು ಸಮೀಪಿಸಿತು. ಒಂದು ಕಾಲದ ನನ್ನ ಕನಸಿನ ನಗರ. ಈಗ ಕನಸೆಲ್ಲ ಎಕ್ಸ್ಟರದಲ್ಲಿ ಕರಗಿ ಹೋಗಿವೆ. ನನ್ನ ತಂಗಿ ಈ ನಗರದಲ್ಲಿದ್ದಾಳೆ. ಆದರೂ ನಾನಿಲ್ಲಿಗೆ ಇಷ್ಟು ಸಾರಿ ಬಂದಾಗಲೂ ಅವಳನ್ನು ನೋಡಿಲ್ಲ. ಕಂಡರೂ ನನಗವಳ ಗುರುತಿಲ್ಲ. ಹೋಟೆಲಿನಲ್ಲಿ [illegible] ಊಟ ಕತ್ತರಿಸಿದೆವು. "ನಿಮ್ಮ ಆಫೀಸಿಗೆ ನಾಳೆ ಹೋಗುತ್ತೇನೆ" ಅಂದೆ. ವಿಶ್ರಾಂತಿಯ ನಂತರ, "ನೋಡಬೇಕಾದ ಸ್ಥಳಗಳಾವವು?" ಅಂದಳು. "ಚಾಮುಂಡಿ ಬೆಟ್ಟ, ಅರಮನೆ, ಪ್ರಾಣಿಸಂಗ್ರಹಾಲಯ, ಬೃಂದಾವನ" ಅಂದವನು, "ಹಾಗೇ ರಾಮಕೃಷ್ಣಾಶ್ರಮಕ್ಕೂ ಹೋಗೋಣ" ಎಂದೆ.

"ಆಶ್ರಮ?"

"[illegible] ನನ್ನ ಬದುಕಿನ ಅಮೂಲ್ಯ [illegible] ಅಲ್ಲಿ ಕಳೆದಿದ್ದೇನೆ. ರಾಮಕೃಷ್ಣರ ಬಗ್ಗೆ ಒಮ್ಮೆ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ ಏರ್ಪಡಿಸಿದ್ದರು. ನಮ್ಮನ್ನು ಐದು ದಿನಗಳ ಕಾಲ ಮೈಸೂರಿಗೆ ಕರೆಸಿದ್ದರು. ಆಗ ನನ್ನ ಹೃದಯದಲ್ಲಿ ಸಂನ್ಯಾಸಿಯಾಗುವ ಉತ್ಕಟ ಆಕಾಂಕ್ಷೆ ಉರಿಯುತ್ತಿತ್ತು. ಸ್ಪರ್ಧೆಯಲ್ಲಿ ಮೊದಲ ಬಹುಮಾನ ಬರಲಿ ಎಂದು ರಾಮಕೃಷ್ಣರನ್ನು ಪ್ರಾರ್ಥಿಸಿದ್ದೆ. ಸಂನ್ಯಾಸಿ [illegible] ಮೊದಲ ಬಹುಮಾನದ

ಹಂಬಲ ಎರಡೂ ಹೇಗೆ ಏಕಕಾಲದಲ್ಲಿ ಹೃದಯ ತುಂಬಿಕೊಂಡಿದ್ದವು ಎಂದು ಈಗ ಮಾತ್ರ ಆಶ್ಚರ್ಯ ವಾಗುತ್ತದೆ."

ಸಂಜೆ ಮತ್ತೆಲ್ಲ ಓಡಾಡಿ, ಬೃಂದಾವನದತ್ತ ಹೊರಟೆವು.

"ಮದುವೆಯಾದ ಮೊದಲ ದಿನಗಳಲ್ಲಿ ನನ್ನಾಕೆ ಸೌಮ್ಯಳ ಜೊತೆ ಇಲ್ಲಿಗೆ ಬಂದಿದ್ದೆ. ಆಗ ನಮ್ಮಿಬ್ಬರಲ್ಲೂ ಎಂಥಾ ತೀವ್ರ ಪ್ರೀತಿಯಿತ್ತು! ನನಗೇ ನಂಬಲು ಸಾಧ್ಯವಿಲ್ಲ."

"ನಿಮ್ಮ, ನಿಮ್ಮ ಹೆಂಡತಿಯ ನಡುವಿನ ದುರಂತ ಯಾವುದರಿಂದ ಎಂದು ಎಂದಾದರೂ ಯೋಚಿಸಿದ್ದೀರಾ ? ಸಂಬಂಧ ಮೊದಲಿನ ಹಾಗಾಗಲು ಸಾಧ್ಯವೇ ಇಲ್ಲ ಅನ್ನುತ್ತೀರಾ ?"

"ಎಂದಾದರೂ ಯೋಚಿಸುವುದೇನು ಬಂತು? ಯಾವಾಗಲೂ ಅದೇ ಯೋಚನೆ. ಆದರೆ ಬೇರೆಯವರ ಬಳಿ ಹೇಳಿಕೊಂಡಾಗಲೇ ಅದು ಹೆಚ್ಚು ಸ್ಪಷ್ಟವಾಗುತ್ತೇಂತ ಕಾಣುತ್ತೆ. ನಾವಿಬ್ಬರೂ ಪರಸ್ಪರ ಹೋರಾಟದ ಬದುಕು ನಡೆಸ್ತೀವಿ. ಪ್ರೀತಿಗಾಗಿ, ಅಂತಸ್ತಿಗಾಗಿ, ಭಾಷೆಗಾಗಿ."

"ಭಾಷೆಗಾಗಿ?"

"ಹೌದು; ನನ್ನ ಹೆಂಡತಿಯ ಭಾಷೆ ಯಾವುದೆಂದು ಇದುವರೆಗೂ ನನಗೆ ಗೊತ್ತಿಲ್ಲ. ಮದುವೆಗೆ ಮೊದಲು, ಹೊರಗೆ ನಮ್ಮೆಲ್ಲರ ಜೊತೆ ಕನ್ನಡ ಹಾಗೂ ಇಂಗ್ಲಿಷಿನಲ್ಲಿ ಸಂಭಾಷಣೆ ನಡೆಸುತ್ತಿದ್ದರೂ ಮನೆಯಲ್ಲಿ ಬೇರೆ ಭಾಷೆಯೆಂದು ನನಗೆ ಗೊತ್ತಿತ್ತು. ಆದರೆ ಅದು ತುಳು ಇರಬೇಕೆಂದು ನಾನು ತಿಳಿದಿದ್ದೆ. ನಮ್ಮೂರಿಗೆ ದಕ್ಷಿಣ ಕನ್ನಡ ಜಿಲ್ಲೆಯವರ ಸಂಪರ್ಕದಿಂದಾಗಿ ಒಂದಿಷ್ಟು ತುಳು ಪ್ರವೇಶಿಸಿತ್ತು. ಒಂದೆರಡು ವಾಕ್ಯಗಳನ್ನು ಹಾಗೂ ಕೆಲವು ಅಮೂಲ್ಯ ಬೈಗುಳದ ಪದಗಳನ್ನೂ ಕಲಿತುಕೊಂಡಿದ್ದೆ. ಅವರಲ್ಲೇ ಹೇಗೋ ಅಡ್ಜಸ್ಟ್ ಮಾಡಿಕೊಂಡು ಹೋಗಬಹುದೆಂದು ಧೈರ್ಯವಾಗಿದ್ದೆ.

"ಮದುವೆಯ ಮೊದಲ ರಾತ್ರಿ. ಕೋಣೆ ಪ್ರವೇಶಿಸಿದರೆ ಇಂದ್ರನ ಅರಮನೆಯ ಹಾಗೆ ಶೃಂಗರಿಸಿದ್ದಾರೆ. ಹಂಸತೂಲಿಕಾತಲ್ಪವನ್ನು ಮೀರುವ ಪಲ್ಲಂಗ. ನಮ್ಮೂರ ಗುಡಿಸಲ ನೆನಪಾಗಿ, ಈ ನೆಲದ ಮೇಲೆ ಮಲಗುವುದೂ ಲಗ್ಜುರಿ ಅನಿಸಿತು. ಮಂಚದ ಮೇಲೆ, ಅಪ್ಸರೆಯಂತೆ ಶೃಂಗರಿಸಿಕೊಂಡು, ಕಿಟಕಿಯತ್ತ ದೃಷ್ಟಿ ಹರಿಸಿ ಕೂತಿದ್ದ ಸೌಮ್ಯ. ಈ ಅಪಾರ ಸೌಂದರ್ಯರಾಶಿ ನನ್ನದೆನಿಸಿ ಹೆಮ್ಮೆಯಾಯಿತು.

ಸಮೀಪಿಸಿ, "ದಾನೆ ಬೊಕ್ಕ?" ಎಂದೆ.

"ನನ್ನ ಮುಖವನ್ನೇ ದಿಟ್ಟಿಸಿ ನೋಡಿದಳು. ಅವಳ ಭಾಷೆ ನನಗೆ ಗೊತ್ತು ಎಂಬ ಹೆಮ್ಮೆಯಿಂದ ಕೆನ್ನೆಯ ಬಳಿ ಬಗ್ಗಿ, "ಕೈಪು ಎಂಚಿನ?" ಎಂದು ನನಗೆ ಗೊತ್ತಿದ್ದ ಎರಡನೆಯ ಹಾಗೂ ಕೊನೆಯ ತುಳು ವಾಕ್ಯವನ್ನು ಹೇಳಿಬಿಟ್ಟೆ! ದಿಗ್ಭ್ರಮೆಗೊಂಡು ಎದ್ದು ನಿಂತಳು.

"ಯಾವ ಸೀಮೆ ಭಾಷೆ ನೀವು ಆಡ್ತಾ ಇರೋದು?"

"ನಿಮ್ಮ ಭಾಷೇನೇ. ತುಳು ಕಣೆ ನಾನಾಡ್ತಾ ಇರೋದು."

"ತುಳು ? ಜಗತ್ತಿನಲ್ಲಿ ಹಾಗೊಂದು ಭಾಷೆ ಇದೆಯೆಂದು ನಂಗೆ ಗೊತ್ತಾದದ್ದೇ ಇವತ್ತು !"

"ಹೌದಾ? ಮತ್ತೆ ನೀವಾಡೋದು ಯಾವ ಭಾಷೆ?"

"ಅದು ಬೇರೆ."

"ಆ ಕ್ಷಣದಿಂದಲೇ ಸಮಸ್ಯೆ ಶುರುವಾಯಿತು. ಭಾಷೆ ಯಾವುದೆಂದು ಅವಳು ಹೇಳಲೇಯಿಲ್ಲ. ಮನೆಯಲ್ಲಿ, ನಾನು ಎದುರಿಗಿದ್ದಾಗಲೂ ಗುಟ್ಟಿನ ಮಾತಾಡುವುದಕ್ಕೆ, ಅಪ್ಪ ಮಗಳ ನಡುವೆ ಆತ್ಮೀಯ ಸಂಭಾಷಣೆಗೆ ಅದೇ ಭಾಷೆ. ಹಾಗೆ ಮಾತನಾಡುವಾಗ ಮಧ್ಯ ನನ್ನ ಹೆಸರು ಬಂದರಂತೂ ನನ್ನನ್ನು ಹೊಗಳುತ್ತಿದ್ದಾರೋ. ಬಯ್ಯುತ್ತಿದ್ದಾರೋ ಒಂದೂ ಗೊತ್ತಾಗದೆ ಪೆದ್ದು ಮೋರೆ ಹಾಕಿಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಒಣಗಿದ ತರಲೆಗಳನ್ನು ರಾಶಿ ಮಾಡಿ, ಕೈಯಿಂದ ಹಿಸುಕಿದರೆ ಉಂಟಾಗುವ ಶಬ್ದದಂಥ ಆ ಭಾಷೆಯನ್ನು ಕೇಳುವ ಕರ್ಮ ಬೇರೆ. ಅರ್ಥವಾಗದ ಸಂಕಟ ಬೇರೆ. ಹೇಗಾದರೂ ಮಾಡಿ ಅದು ಯಾವ ಭಾಷೆಯೆಂದು ಕಂಡುಹಿಡಿಯಲೇ ಬೇಕೆಂದು ನಿರ್ಧರಿಸಿದೆ. ಕೊಂಕಣಿ ಭಾಷೆಯಿರಬಹುದೆಂಬ ಸಂದೇಹ ಬಂದಿದ್ದರಿಂದ, ಅದೇ ಕಾರಣಕ್ಕಾಗಿ ಸಿಂಡಿಕೇಟ್ ಬ್ಯಾಂಕಿನಲ್ಲೊಂದು ಖಾತೆ ತೆರೆದು [illegible] ಕಲಿತೆ. ಮನೆಯಲ್ಲಿ ಅವಳೊಂದಿಗೆ. ನನ್ನಷ್ಟಕ್ಕೆ ನಾನೇ ಎಂಬಂತೆ ಆ ವಾಕ್ಯಗಳನ್ನು ಹೇಳಿದೆ. [illegible]

ಅನ್ನಲಿಲ್ಲ; 'ಉಪ್ಪಿನಕಾಯಿ' ಅನ್ನಲಿಲ್ಲ. ನಿರ್ಲಿಪ್ತ ಮುಖಭಾವ. ಅಂತೂ ಅದು ಅಲ್ಲವೆಂದು ಗೊತ್ತಾಯಿತು. ಕನ್ನಡ ಅಲ್ಲ. ತುಳು ಅಲ್ಲ. ಕೊಂಕಣಿ ಅಲ್ಲ. ಸಾಹಿತ್ಯ ಅಕಾಡಮಿಯಿಂದ ಪುರಸ್ಕೃತವಾದ ಯಾವುದೇ ಭಾರತೀಯ ಭಾಷೆಯಲ್ಲ. ಅವರ ಜಪಾನೀ ಭಾಷೆಯಿರಬಹುದೆಂದು ಅನುಮಾನ ನನಗೆ ಮೊದಲಿನಿಂದಲೂ ಇದ್ದೇಯಿದೆ. ಹಾಗೆಯೇ ಚೀನಿ ಭಾಷೆಯಾಗಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ!"

"ಇದನ್ನೇ ದೊಡ್ಡದು ಮಾಡಿಕೊಂಡು ಹೋಗಬಾರದಿತ್ತು!"

"ಹಾಗಲ್ಲ. ಈ ಕಥೆಗೆ ಸಾಮಾಜಿಕ ಮಹತ್ವ ಇಲ್ಲ ಎಂದೆಯಲ್ಲ; ಅದಕ್ಕೆ ಹೇಳಿದೆ. ಭಾಷಾ ಸಮಸ್ಯೆ ಭಾರತದ ಜ್ವಲಂತ ಸಮಸ್ಯೆ. ಇಷ್ಟೇ ಅಲ್ಲ ಮಾಲಿನ ಸಾಮಾಜಿಕ ಅಂತಸ್ತಿನ ವಿಚಾರ ತೆಗೆದುಕೋ: ಅವರ ಮನೆಯಲ್ಲಿ ಚೆಲ್ಲುವ ಅನ್ನದಲ್ಲಿ ಎಷ್ಟೋ ಸಂಸಾರಗಳು ಸುಖ ಜೀವನ ನಡಸಬಹುದು. ಬೆಳ್ಳಿ ಬಂಗಾರದ ವಿಚಾರ ಮೊದಲೇ ಹೇಳಿದ್ದೆನಲ್ಲ. ಈ ಆಭರಣಗಳ, ಪಾತ್ರೆಗಳ ಮೆರವಣಿಗೆಯ ಬಗ್ಗೆ ನನಗೆ ಅತೀವ ತಿರಸ್ಕಾರ. ಇವರ ದೇವತೆಗಳು ಕೂಡಾ ತುಂಬಾ ಶ್ರೀಮಂತರು. ನಮ್ಮ ಕಡೆಯ ಹಾಗೆ ಬಡ ದೇವತೆಗಳಲ್ಲ. ನಮ್ಮೂರಿನ ಮಕ್ಕಿ-ಗದ್ದೆಯ ಕಲ್ಲಿನ ಗಣಪತಿಯ ವಿಗ್ರಹಕ್ಕೆ, ಮಣ್ಣ ಬಿಂದಿಗೆಯಿಂದ, ನೆಲದ ಚಿಲುಮೆಯ ನೀರಿನ ಅಭಿಷೇಕಮಾಡಿ, ಕಾಡುಮಲ್ಲಿಗೆ ಹೂವೇರಿಸಿ, ಕಾರ್ತೀಕದಲ್ಲಿ ಮಣ್ಣಿನ ಹಣತೆಯಲ್ಲಿ ಎಣ್ಣೆ ದೀಪ ಉರಿಸುವ ಸಂಸಾರದಿಂದ ಬಂದವನು ನಾನು; ಬೆಳ್ಳಿಯ ಗಣೇಶನ ಮೂರ್ತಿಗೆ ಬೆಳ್ಳಿಯ ಸೊಡರಿನಲ್ಲಿ ತುಪ್ಪದ ದೀಪ ಹಚ್ಚಿಟ್ಟು, ಹಾಲಿನ ಅಭಿಷೇಕ ಮಾಡಿ ಬೆಳ್ಳಿಯ ತಟ್ಟೆಯಲ್ಲಿ ಚಿನ್ನದ ಅಕ್ಷತೆ ಬಟ್ಟಲಿಂದ ಮಂತ್ರಾಕ್ಷತೆ ಎಸೆಯುವ ಸಂಸಾರದಿಂದ ಬಂದ ಸೌಮ್ಯ. ಇವೆಲ್ಲ ಮೊದಲಿಗೆ ಗೌಣವಾಗಿ ಕಾಣಿಸಿದ್ದು ಕ್ರಮೇಣ ಪ್ರಬಲವಾಗಿ, ವೈಮನಸ್ಯಕ್ಕೆ ಕಾರಣವಾದವು."

"ಆದರೂ ದಾಂಪತ್ಯದ ಇಷ್ಟು ವರ್ಷಗಳ ನಂತರ ನೀವು ಹೊಂದಿಕೊಳ್ಳುವ ಸಾಧ್ಯತೆಯಿತ್ತು. ಅದರಲ್ಲೂ ಒಂದು ಮಗುವಾದ ಮೇಲೆ. ಅಂದಹಾಗೆ ನಿಮ್ಮ ಮಗನ ಹೆಸರೇನಂದಿರಿ?"

"ವೆಂಕಟ್ರಮಣಯ್ಯ."

"ಇದ್ಯಾವ ಹೆಸರು?"

"ಬೇಜಾರು ಮಾಡಬೇಡ. ಇಲ್ಲೂ ಒಂದು ಕಥೆ ಇದೆ. ಇದು ನನ್ನ ತಂದೆಯ ಹೆಸರು. ನನಗೆ ಗಂಡು ಮಗುವಾದಾಗ. ನಾಮಕರಣದ ದಿನ. ಸೌಮ್ಯಳ ನೆಂಟರಿಷ್ಟರೆಲ್ಲ ಸೇರಿದ್ದರು. ಎಲ್ಲರೂ ಆಧುನಿಕ ಕಾಲದ ದೇವರ ಹೆಸರು ಹೇಳಿದರು. ನನ್ನ ದೃಷ್ಟಿ ಬೇರೆ. ನಾವು ಮಗುವಿಗೆ ಇಡುವ ಹೆಸರು ಕೇವಲ ಹೆಸರು ಮಾತ್ರ ಆಗಿರಬೇಕೇ ಹೊರತು ಅನಗತ್ಯ ಅದಕ್ಕೆ ಯಾವ ಅರ್ಥವೂ ಇರಬಾರದು. ಹೆಸರು ಕೇಳಿದ ತಕ್ಷಣ ಅದು ಹಿಂದುವೋ ಕ್ರಿಶ್ಚಿಯನ್ನೋ, ಭಾರತದವನೋ ಸೌದಿ ಅರೇಬಿಯಾದವನೋ, ಹೆಣ್ಣೋ ಗಂಡೋ, ಮನುಷ್ಯನೋ ಮೃಗವೋ ಯಾವುದೂ ಗೊತ್ತಾಗಬಾರದು. ಆದರೆ ಅಂತಹ ಹೆಸರು ಯಾವುದಿದೆ? ಅಂದರು.

'ಟಿಂಗ್' ಎಂದು ಯಾಕಿಡಬಾರದು?" ಅಂದೆ. ಮಾವನವರು ಟಿಂಗ್ ಎಂದು ಹಾರಿಬಿದ್ದರು. 'ಟಾಕ್ಸ್' ಎಂದಿಡೋಣ" ಎಂದೆ. "ಯಾವುದೂ ಬೇಡ; ಪ್ರಿಟಾಪ್ರೊಟ್ಟಿ ಎಂದಿಡೋಣ" ಎಂದೆ. ಯಾರೂ ಉಸಿರೆತ್ತಲಿಲ್ಲ. ನಾಮಕರಣದ ಸಮಾರಂಭದ ವಾತಾವರಣ ಗಹನ ಗಂಭೀರವಾಯಿತು. ಕಡೆಗೆ ನಾನು 'ವೆಂಕಟ್ರಮಣಯ್ಯ ಎಂದು ನನ್ನ ತಂದೆಯ ಹೆಸರಿಡೋಣ; ಯಾರೂ ಆಕ್ಷೇಪಣೆ ಮಾಡಕೂಡದು' ಎಂದು ಕಟ್ಟಪ್ಪಣೆ ಮಾಡಿದೆ. ಅವರೂ ಅಜ್ಜನ ಹೆಸರಿಡುವ ಸಂಪ್ರದಾಯದವರಾದ್ದರಿಂದ ಮುಂದೆ ಮಾತೇಯಿಲ್ಲ.

"ನನ್ನ ಮಗ ವೆಂಕಟರಮಣಯ್ಯ ಮತ್ತು ನನ್ನ ಅಪ್ಪ ವೆಂಕಟರಮಣಯ್ಯ ಇವರನ್ನು ಹೋಲಿಸಿಕೊಂಡು ಎಷ್ಟೋ ವೇಳೆ ಆಶ್ಚರ್ಯಪಡುತ್ತೇನೆ. ಮಗನಿಗೀಗ ಒಂಭತ್ತು ವರ್ಷ. ಈ ವಯಸ್ಸಿಗೆ ಇವನ ಬಟ್ಟೆಬರೆಗೆ ಖರ್ಚುಮಾಡಿದ ಅರ್ಧದಷ್ಟನ್ನು ಅಪ್ಪ ಇಡೀ ಜೀವಮಾನದಲ್ಲಿ ಬಟ್ಟೆ ಹೊಲಿಸಲು ಖರ್ಚು ಮಾಡಿರಲಿಲ್ಲ. ಇಷ್ಟೆಲ್ಲ ಯಾಕೆ? ನನಗೊಂದು . ಚಡ್ಡಿ ಹೊಲಿಸಿದ್ದೇ ಆರನೆಯ ವರ್ಷಕ್ಕೆ. ಅದೂ ಮೊದಲ ದಿನ ಬರೀ ಅಂಗಿ ಹಾಕಿಕೊಂಡು ಸ್ಕೂಲಿಗೆ ಹೋಗಿದ್ದೆ. ಚಡ್ಡಿ

ಹಾಕಿಕೊಂಡು ಬರದಿದ್ದರೆ ನಾಳೆಯಿಂದ ಸ್ಕೂಲಿಗೆ ಸೇರಿಸುವುದಿಲ್ಲ ಅಂದುಬಿಟ್ಟರು. ಮೇಷ್ಟರು. ಅಪ್ಪನಿಗೆ ಆಶ್ಚರ್ಯ. "ಒಂದ್ನೇ ಕ್ಲಾಸಿಗೆ ಬರೋ ಹುಡ್ಗರೂ ಚಡ್ಡಿ ಹಾಕ್ಕೊಂಡು ಬರೋಕಂದ್ರೆ ಮೇಸ್ಟ್ರ? ಎಂಥಾ ಕಲಿಗಾಲ ಬಂತಪ್ಪಾ" ಎಂದು ಮರುಗಿದರು. ಮಗ ವೆಂಕಟರಮಣಯ್ಯನಿಗೆ ಹತ್ತು ಹೆಜ್ಜೆ ನಡೆಯಲು ವಾಹನ ಬೇಕು. ಒಂದೂ ಸಾರಿಯೂಮುಂಡಿ ತರಚಿಕೊಂಡಿದ್ದಿಲ್ಲ. ಕಾಲಿಗೆ ಮುಳ್ಳು ಚುಚ್ಚಿಗೊತ್ತಿಲ್ಲ. ಅಪ್ಪ ವೆಂಕಟರಮಣಯ್ಯನ ಅಂಗಾಲು ತುಂಬಾ ಆಣೆಗಳು. ಹತ್ತೊಂಭತ್ತು ಸಾರಿ ಅಡಿಕೆ ಮರದಿಂದ ಬಿದ್ದು ಮೈ ಮುರಿದುಕೊಂಡಿದ್ದಾರೆ. ಹನ್ನೆರಡೂ ಮೈಲಿ ದೂರದ ಕೊಪ್ಪಕ್ಕೆ ಇವತ್ತೂ ನಡೆದು ಹೋಗಿ ಬರುತ್ತಾರೆ."

"ನೀವು ಏನೇ ಹೇಳಿದ್ರೂ, ಹೆಂಡತಿಯ ಜೊತೆ ಮಾತು ಬಿಡುವಂಥಾದ್ದು ಏನೂ ನಡೆದಿಲ್ಲಾಂತಲೂ ನಂಗನ್ನಿಸುತ್ತೆ?!"

"ಮಾಲಿನಿ; ನನಗಿವೆಲ್ಲಾ ಯಾಕೆ ಬೋರು ಗೊತ್ತಾ? ಸಂಸಾರದಲ್ಲಿ ಸುಖ, ದುಃಖ ಯಾವುದರ ಬಗ್ಗೆ ತೀವ್ರತೆಯೂ ಇಲ್ಲ. ಶ್ರೀಮಂತವಾಗಿರುವ ಮನೆ, ಬೆಳ್ಳಗೆ ಚಂದವಾಗಿರೋ ಹೆಂಡತಿ; ಕೈ ತುಂಬಾ ಸಂಬಳ ಬರೋ ಕೆಲ್ಸ; ಇಂಗ್ಲೀಷು ಮಾತಾಡುವ ಮಗ. ಯಾರಿಗೆ ಬೇಕು ಹೇಳು ಈ ಪ್ರಾಣ–ಬಾಣ ? ಮದುವೆಯಾಗಿ ಇಷ್ಟು ವರ್ಷಗಳಾದ್ರೂ ಸೌಮ್ಯ ಒಂದು ದಿನ ಒಂದು ಹನಿ ಕಣ್ಣೀರು ಹಾಕಿಲ್ಲಾಂದ್ರೆ, ನಾವೆಂಥಾ ದರಿದ್ರ ಬದುಕು ಬಾಳ್ತಿದ್ದೀವೀಂತ ನೀನೇ ಊಹಿಸ್ಕೋ. ನನಗಿವೆಲ್ಲಾ ಆಸೆಗಳು, ಹುಚ್ಚು ಆಸೆಗಳು. ಸೌಮ್ಯ ಅಳಬೇಕು: ಅವಳ ಕಣ್ಣೀರಿನಿಂದ ನನ್ನೆದೆ ತೊಯ್ಯಬೇಕು. ಆದರೆ ಈ ಯೌವನದ ಆಸೆಗಳೆಲ್ಲ ಕ್ರಮೇಣ ಮುದಿಯಾಗಿ ಸಾಯುತ್ತಿವೆ. ಅವಳಿಗೇನೆಂದ್ರೆ ಯಾವಾಗಲೂ ನಾನವಳ ಎದುರಿಗಿರಬೇಕಂತೆ. ಮೂರು ಹೊತ್ತು ಹ್ಯಾಪು ಮೋರೆ ಹಾಕಿಕೊಂಡು ಹೆಂಡತಿಯ ಸೆರಗಿನ ಹಿಂದೆ ಸುತ್ತೋ ಗಂಡಸರನ್ನ ಕಂಡ್ರೆ ನಂಗೆ ಅಸಹ್ಯವಾಗುತ್ತೆ."

"ಮಿಸ್ಟರ್!" ಎಂದಳು; ದನಿ ಗಡುಸಾಗಿತ್ತು. ನೋಡಿದೆ.

"ಹೆಂಡ್ತೀನ ಮನೇಲಿ ಬಿಟ್ಟು ಯಾವ್ದೋ ಹುಡುಗಿಯ ಸೆರಗಿನ ಹಿಂದೆ ಸುತ್ತುತ್ತಾ ಇರೋರ್ನ ಕಂಡ್ರೆ ಅಸಹ್ಯ ಆಗಲ್ವ?"

"ಮಾಲಿನಿ, ನಿನ್ನ ಮಾತಿನ ತೀವ್ರತೆಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದ್ರೆ ನನ್ನ ಅಂತರಂಗ ನಿಂಗೆ ಗೊತ್ತಾಗಲ್ಲ."

"ಸಾಕು ನಿಲ್ಸಿ. ತನ್ನ ಭಾವನೆ ಅರ್ಥ ಮಾಡಿಕೊಳ್ಳಲಾಗದ, ತನ್ನ ಮಗನನ್ನೇ ಪ್ರೀತಿಸದ, ತನ್ನ ಜೊತೆಯಿರುವುದಕ್ಕೂ ಅಸಹ್ಯಪಟ್ಟುಕೊಳ್ಳುವ ಗಂಡನ ಜೊತೆ ಇರಬೇಕಾದರೂ ಆಕೆ ಜೀವದಿಂದಿರುವುದು ಆಶ್ಚರ್ಯ. ನನಗೀಗ ಅನ್ಸುತ್ತೆ, ನಿಮ್ಮ ಪರಿಚಯದ ಬದಲು ನಿಮ್ಮ ಹೆಂಡತಿಯ ಪರಿಚಯ ಆಗಿ, ಅವಳ ಜೊತೆ ಇಲ್ಲಿಗೆ ಬಂದಿದ್ರೆ ಅವಳು ಹೇಳೋ ಕಥೆ ಹ್ಯಾಗಿರ್ತಿತ್ತೂಂತ."

"ಮಾಲಿನಿ, ಪ್ರತಿಯೊಂದು ಪ್ರಾಣಿಯ ಹೃದಯದಲ್ಲೂ ತನ್ನನ್ನೇ ಹೀರೋವನ್ನಾಗುಳ್ಳ ಒಂದು ಬೃಹದ್ಕಾದಂಬರಿ ಇರುತ್ತದೆಂದು ನನಗೆ ಗೊತ್ತು. ಪ್ರತಿಯೊಬ್ಬನು ಹೇಳುವ ಘಟನೆಗಳಿಗೂ ಅನಿವಾರ್ಯವಾಗಿ ಆತನೇ ನಾಯಕನಾಗಿರುತ್ತಾನೆ. ಈ ಕಥೆಯನ್ನು ನೀನು ಹೇಳಿದ್ರೆ ಬೇರೆ ಅರ್ಥ. ನನ್ನ ಹೆಂಡತಿ ಹೇಳಿದ್ರೆ ಬೇರೆ ಅರ್ಥ. ಅಪ್ರಮಾದ ಸಾ[illegible]ಗನು ಹೇಳಿದ್ರೆ ಬೇರೆ ಅರ್ಥ ಬರುತ್ತೆಂದು ನನಗೆ ಗೊತ್ತು."

"ಹಾಗೆ ಹೇಳೋದ್ರಿಂದ ತಪ್ಪಿಸಿಕೊಂಡ ಹಾಗಲ್ಲ. ಬದುಕು, ಬದುಕು ಅಂತ ಬಡಬಡಿಸ್ತಿರೋ ನಿಮಗೆ ಸಿಕ್ಕೋದು ಅದರ ನೆರಳು ಮಾತ್ರ. ಇಷ್ಟೆಲ್ಲಾ ಮಾತಾಡೋ ನೀವು ಯಾಕೆ ಹಳ್ಳಿಗೇ ಹೋಗಬಾರ್ದು? [illegible] ನಿಮಗೆ ನೆನಪು ಮಾಡಿಕೊಂಡು ಅಳೋಕೆ ಹ[illegible] ಬೇಕು. ಸುಖವಾಗಿ ಬದುಕೋದಕ್ಕೆ, ಬಯ್ಯೋದಕ್ಕೆ ಪೇಟೆ ಬೇಕು. ಹಳ್ಳಿಗೆ ಹೋದ್ರೆ ಕೆಲ್ಸ ಇಲ್ಲಾಂತೀರಾ? ಕೂಲಿ ಕೆಲ್ಸ ಮಾಡಿ; ದನ ಮೇಯಿಸಿ; ಬೀದಿ ಕಸ ಗುಡಿಸಿ. ಬದುಕಿನ ಆಸೆ ಅಷ್ಟು ತೀವ್ರವಾಗಿರೋರು ಪೇಟೆ ರುಚಿ ಬಿಡಬೇಕು!"

ಮೌನ, ಮತ್ತೂ ಮೌನ. ಪ್ರತಿಭಟನೆ ಅನಿರೀಕ್ಷಿತವಾಗಿದ್ದರೂ ಆಶ್ಚರ್ಯವೇನೂ ಆಗಿರಲಿಲ್ಲ. ಮಾತಿನಿಂದ ಸುಖವಿಲ್ಲವೆಂದು ನಾನೂ ಉಸಿರೆತ್ತಲಿಲ್ಲ.

ಮಾಲಿನಿ ಮತ್ತೆ ಸೌಮ್ಯವಾದಳು.

ಸಂಜೆ ಏಳರ ಸಮಯ. ಇನ್ನೇನು ಈಗ ದೀಪಗಳು ಉರಿಯಬೇಕು. ಮಾಲಿನಿಯ ಮುಖ ನೋಡಿದೆ.

"ನನ್ನನ್ನು ಮದುವೆಯಾಗಲು ಸಿದ್ಧರಿದ್ದೀರಾ?" ಅಂದಳು.

ಜಗ್ಗನೆ ಸಾವಿರ ದೀಪಗಳು ಬೆಳಗಿದವು. ವರ್ಣಮಯ ಕಾರಂಜಿಗಳು ಚಿಮ್ಮಿದವು. ಕ್ಷಣದಲ್ಲಿ ಬೃಂದಾವನ ಗಂಧರ್ವಲೋಕವಾಗಿಹೋಯಿತು.

ಅವಳ ಕಣ್ಣುಗಳನ್ನೇ ನೇರವಾಗಿ ದಿಟ್ಟಿಸುತ್ತ ಹೇಳಿದೆ.

"ಇಪ್ಪತ್ತರ ಮೊದಲ ದಿನಗಳಲ್ಲಿರುವ ನೀನು; ನಲವತ್ತರ ಕೊನೆಯ ಕ್ಷಣಗಳಲ್ಲಿರುವ ನಾನು– ಮತ್ತು ಮದುವೆ !"

"ಹಾಗಲ್ಲ; ಒಂದು ವರ್ಷಕ್ಕೆ ಕಾಂಟ್ರ್ಯಾಕ್ಟ್ ಮಾಡಿಕೊಳ್ಳೋಣ. ಮನಸ್ಸಿಗೆ ಬಂದಹಾಗೆ ಬದುಕೋಣ. ಪರಸ್ಪರ ಪ್ರೀತಿ ಗಾಢವಾಗಿದ್ದರೆ 'ಛೆ! ಇನ್ನೊಂದೇ ವರ್ಷಕ್ಕೆ ನಾವು ಬೇರೆ ಆಗುತ್ತೇವಲ್ಲ' ಅನ್ನಿಸಿ ಪ್ರೀತಿ ಮತ್ತಷ್ಟು ತೀವ್ರವಾಗುತ್ತದೆ. ಅಥವಾ ಪ್ರೀತಿಯಿಲ್ಲದಿದ್ದರೆ 'ಇನ್ನೊಂದೇ ವರ್ಷ ತಾನೇ?' ಎಂದು ನಿರಾತಂಕವಾಗಿ ಕಳೆಯಬಹುದು!"

"ಮಾಲಿನೀ..."

"ಒಂದು ಕ್ಷಣ ಕನಸು ಕಟ್ಟಿದಿರಾ ? ಇವೆಲ್ಲಾ ನನ್ನ ಮಾತಲ್ಲ. ನನಗೊಬ್ಬ ಸ್ನೇಹಿತನಿದ್ದ. ಅವನು ಹೇಳಿದ ಮಾತುಗಳು. ಅವನನ್ನೊಮ್ಮೆ ಗಾಢವಾಗಿ ಪ್ರೀತಿಸುತ್ತಿದ್ದೆ."

"ಹೌದೇ? 'ಪ್ರೀತಿಸುತ್ತಿದ್ದೆ' ಅಂದರೇನರ್ಥ? ಈಗ?"

"ನನಗೆ ಇಂಥಾ ತಲೆಹರಟೆಯ ಹುಚ್ಚು ಕಲ್ಪನೆಗಳಲ್ಲೆಲ್ಲಾ ನಂಬಿಕೆಯಿಲ್ಲ. ನನ್ನ ಅವನ ಪರಿಚಯವಾದದ್ದು ಕಾಲೇಜು ದಿನಗಳಲ್ಲಿ. ಅವನಷ್ಟು ಸ್ಫುರದ್ರೂಪಿ, ದೃಢಕಾಯ ಗಂಡನ್ನು ನಾನು ಕಂಡೇ–ಯಿಲ್ಲ. ಆದರೆ ಒಂದು ಬಗೆಯ ಅಂತರ್ಮುಖಿ. ತಲೆಮಾರಿನವರು ಕೂತು ಉಂಡರೂ ಕರಗದ ಆಸ್ತಿ. ಅವನಿಗೆ ಎಂಥ ಸುಂದರವಾದ ಮನೆಯಿತ್ತು ಅಂತೀರಿ! ಅವನ ಅಪ್ಪ, ಅಮ್ಮ ಅಮೇರಿಕಾಕ್ಕೆ ಹೋದವರು ಮಗನನ್ನು ಅಲ್ಲಿಗೇ ಕರೆಸಿಕೊಳ್ಳಲು ಪ್ರಯತ್ನಿಸಿದರು. ಈತ ನಿರಾಕರಿಸಿ ಇಲ್ಲಿಯೇ ಉಳಿದ. ಆಗಾಗ್ಗೆ ಬೌದ್ಧ ಮಂದಿರಗಳಿಗೆ ಹೋಗಿ ಬರುತ್ತಿದ್ದ. ನನಗೊಮ್ಮೆ ಮದುವೆಯ ಕಾಂಟ್ರ್ಯಾಕ್ಟಿನ ವಿಚಾರ ಹೇಳಿದ. ನಾನು ತಮಾಷೆಯೆಂದು ನಕ್ಕುಬಿಟ್ಟೆ. ಹೀಗೆಯೇ ಮದುವೆಯಾಗಿ, ಬೇರೆಲ್ಲಾ ಸಂಬಂಧಗಳನ್ನು ಕಡಿದುಕೊಂಡು, ಕೈಯ್ಯಲ್ಲಿ ಒಂದು ಕಾಸನ್ನು ಇಟ್ಟುಕೊಳ್ಳದೇ, ನಿಷ್ಕಾರಣವಾಗಿ ಊರು ಸುತ್ತಬೇಕೆಂದೂ, ಗಂಜಿಯೋ, ನೀರೋ ಸಿಕ್ಕಿದ್ದು ಕುಡಿದು, ಸಿಕ್ಕದಿದ್ದಾಗ ಉಪವಾಸವಿದ್ದು, ಬರೀ ನೆಲದ ಮೇಲೆ ಮಲಗಿ ಕಾಲ ಕಳೆಯಬೇಕೆಂದೂ ಅವನ ಆಸೆಯಂತೆ.

"ಒಂದು ದಿನ ಅವನು ನನ್ನನ್ನು ಕ್ಯಾಂಡಿ ಎಂಬಲ್ಲಿ ಕರೆದುಕೊಂಡು ಹೋದ. ಇದು ಸಿಲೋನಿನ ಬೌದ್ಧರ ಸುಪ್ರಸಿದ್ಧ ಯಾತ್ರಾ ಸ್ಥಳ. ಇಲ್ಲಿ ಬುದ್ಧನ ದಂತ ದೇವಾಲಯವಿದೆ. ಅವನೊಡನೆ, ಮರದ ನೆರಳಿನಲ್ಲಿ ಕೂತಾಗ, "ಬುದ್ಧ ಹೋದ; ಅವನ ಬೋಧನೆಗಳೂ ಹೋದವು. ಅವನ ಹಲ್ಲಿಗೆ ಮಾತ್ರ ಗೋಪುರ! ಇದರಿಂದ ನಿನಗೇನನ್ನಿಸುತ್ತೆ ?" ಅಂದ.

ನಾನು "ಬುದ್ಧ ಹೋದ; ಅವನ ಬೋಧನೆಗಳೂ ಹೋದವು. ಅವನ ಹಲ್ಲಿಗೆ ಮಾತ್ರ ಗೋಪುರ ಅಂತ ಅನ್ನಿಸುತ್ತೆ" ಅಂದೆ. ಆದರೆ ಅವನು ತುಂಬಾ ಸೀರಿಯಸ್ಸಾಗಿದ್ದ. ಮುಖ ಕೋಪದಿಂದ ಉರಿಯಿತು. "ನೀನೊಂದು ಶುದ್ಧ ಕತ್ತೆ," ಅಂದ. ಅನಿರೀಕ್ಷಿತ ಕೋಪದಿಂದ ಕಂಗಾಲಾದ ನಾನು, ಏನು ಹೇಳಲೂ ತೋಚದೆ, ಹೆಗಲ ಮೇಲೆ ಕೈ ಹಾಕಿ, "ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ" ಅಂದೆ. 'ರಾಕ್ಷಸಿ' ಎಂದು ಕೂಗಿ, ನನ್ನನ್ನು ರಭಸವಾಗಿ ತಳ್ಳಿ ಓಡಿ ಹೋದ. ಅದೇ ಕೊನೆ. ಮತ್ತವನನ್ನು ನೋಡಲಿಲ್ಲ. ಮರುದಿನ ಮನೆಯಲ್ಲಿ ಕೂತಿದ್ದಾಗ, ಅವನು ತನ್ನ ಮನೆಗೆ ಬೆಂಕಿ ಹಚ್ಚಿ ಓಡಿಹೋದನೆಂದು ಯಾರೋ ಸುದ್ದಿ ತಂದರು. ಧಾವಿಸಿದೆ. ಒಂದು ಕಾಲದಲ್ಲಿ ನಾನು ಕನಸು ಕಟ್ಟಿದ್ದ ವರ್ಣರಂಜಿತ ಮನೆ ಭಸ್ಮೀಭೂತವಾಗಿ, ಕರಕಲು ಅಸ್ಥಿಪಂಜರ ಮಾತ್ರ ಉಳಿದುಕೊಂಡಿತ್ತು!"

ಈ ಮಾತಾಡುವ ವೇಳೆಗೆ, ನಾನು, ಮಾಲಿನಿ ಚಿಲುಮೆಗಳೊಂದರ ಬಳಿ, ಮರದ ಕೆಳಗೆ ಕುಳಿತಿದ್ದ "ಯಾಕೋ ಬಾಯಾರಿಕೆ" ಅಂದಳು. "ನೂರು ಕಾರಂಜಿಗಳಲ್ಲಿ ನೀರು ಉಕ್ಕುತ್ತಿದೆ; ಆದರೆ ಕುಡಿಯಲು ನೀರಿಲ್ಲ" ಅಂದಳು. "ಹೋಗಲಿ. ಗೇಟಿನ ಹತ್ತಿರ ಹೋಗಿ, ಒಂದಿಷ್ಟು ದ್ರಾಕ್ಷಿ ಹಣ್ಣಾದರ

ಆರೋಗ್ಯದಾಯಕ ಪೇಯಕ್ಕಿಂತ ಕಡಿಮೆ ಸಲ್ಲದು.”

ಕೇವಲ

ಕೋಂಪ್ಲಾನ್

ಪ್ರತಿ ದೇಹಕ್ಕೆ ಅತ್ಯವಶ್ಯಕವಾಗಿರುವ 23 ಪೋಷಕಾಂಶಗಳನ್ನು ಒಳಗೊಂಡಿರುವ ಸಂಪೂರ್ಣ ಆರೋಗ್ಯದಾಯಕ ಪೇಯ.



ಸ್ವಾಸ್ಥ್ಯ ಮತ್ತು ಶಕ್ತಿಗಾಗಿ, ಪ್ರತಿಯೊಬ್ಬರ ದೇಹಕ್ಕೆ ಪ್ರತಿ ದಿನ ಅತ್ಯವಶ್ಯಕವಾಗಿರುವ, ಪ್ರೋಟೀನ್‌ಗಳು, ವಿಟಮಿನ್‌ಗಳು, ಖನಿಜದ್ರವ್ಯಗಳು, ಕಾರ್ಬೋಹೈಡ್ರೇಟ್‌ಗಳು ಮತ್ತು ಇತರ ಪೋಷಕಾಂಶಗಳು, ಕೇವಲ ಕೋಂಪ್ಲಾನ್‌ನಲ್ಲಿ ವೈಜ್ಞಾನಿಕವಾಗಿ ನಿಯೋಜಿತ ಪ್ರಮಾಣದಲ್ಲಿವೆ. ಊಟ ಮಾಡಲು ನಿರಾಕರಿಸುವ ಹಟವಾದಿ ಮಕ್ಕಳಿಗೆ ಹೇಳಿಸಿದ್ದು. ಹೆಚ್ಚಾಗಿ ಊಟಕ್ಕೂ ಬಿಡುವಿಲ್ಲದ ಅವಸರದ ಪತಿಗಳಿಗೆ ಆದರ್ಶವಾಗಿದೆ. ಆರೋಗ್ಯ ಚೆನ್ನಾಗಿರದೆ ಊಟ ಒಗ್ಗದ ಕುಟುಂಬದ ಹಿರಿಯರಿಗೆ ಉತ್ತಮ. ಆಯಾಸದಿಂದ ಊಟವೇ ಬೇಡವೆನಿಸುವ ನಿಮಗೆ ಮತ್ತೂ ಉತ್ತಮ.

ನೆನಪಿಡಿರಿ, ಡಾಕ್ಟರರು ಸಂಪೂರ್ಣ ಪೋಷಕಾಹಾರವಾಗಿ ಹೆಚ್ಚಾಗಿ ಕೋಂಪ್ಲಾನ್‌ನ್ನು ಶಿಫಾರಸು ಮಾಡುತ್ತಾರೆ.

ಕೋಂಪ್ಲಾನ್ ಪ್ಲೇನ್ ಮತ್ತು ಸ್ವಾದಿಷ್ಟವಾದ ಚಾಕ್‌ಲೇಟ್, ಏಲಕ್ಕಿ-ಕೇಸರಿ ಮಾತ್ರವಲ್ಲದೆ ಮಕ್ಕಳು ಮೆಚ್ಚುವ ಹೊಸ ಸ್ಟ್ರಾಬೆರಿ ಸ್ವಾದಗಳಲ್ಲಿಯೂ ದೊರೆಯುತ್ತದೆ!

ಪ್ರೋಟೀನ್	ರಿಬೋಫ್ಲೇವಿನ್
ಕೊಬ್ಬು	ನಿಕೋಟಿನಾಮೈಡ್
ಕಾರ್ಬೋಹೈಡ್ರೇಟ್	ಕ್ಯಾಲ್ಸಿಯಮ್ ಪ್ಯಾಂಟೋಥಿನೇಟ್
ಕ್ಯಾಲ್ಸಿಯಮ್	ಕೋಲಿನ್
ಫೋಸ್ಫರಸ್	ಪೈರಿಡೋಕ್ಸಿನ್ (ಬಿ6)
ಸೋಡಿಯಮ್	ವಿಟಮಿನ್ ಬಿ12
ಕ್ಲೋರೈಡ್ (ಸಿ ಎಲ್ ಆಗಿ)	ಫಾಲಿಕ್ ಆಸಿಡ್
ಪೊಟ್ಯಾಶಿಯಮ್	ವಿಟಮಿನ್ ಸಿ
ಅಯರ್ನ್	ವಿಟಮಿನ್ ಡಿ
ಅಯೋಡಿನ್	ವಿಟಮಿನ್ ಇ
ವಿಟಮಿನ್ ಎ	ವಿಟಮಿನ್ ಕೆ
ವಿಟಮಿನ್ ಬಿ1	

ಹಾಲನ್ನು ಬೆರಸಬೇಕಾಗಿಲ್ಲ



ಸಂಪೂರ್ಣ ವಾದದ್ದು

ಕೋಂಪ್ಲಾನ್ ಸಂಪೂರ್ಣ ಆರೋಗ್ಯದಾಯಕ ಪೇಯ.

CASGC-39.173 KAN

ತರೋಣ" ಎಂದೆ. ಇಬ್ಬರೂ ಹೊರಟೆವು.

"ನೀನಿಲ್ಲೇ ಇರು. ನಾನು ಹೋಗಿ ತರ್ರೀನಿ." ಎಂದು ಸರಸರನೆ ಹೆಜ್ಜೆ ಹಾಕಿ ಗೇಟಿನ ಬಳಿ ಬಂದೆ. ಒಂದು ಕ್ಷಣ ನಿಂತೆ. ದ್ರಾಕ್ಷಿಯೆಂದರೆ ಸೌಮ್ಯಳಿಗೆ ಪ್ರಾಣ !

ಹಣ್ಣು ಕೊಂಡವನು ಅಲ್ಲೆಯಿದ್ದ ಚಿಲುಮೆಯ ನೀರಲ್ಲಿ ತೊಳೆದು ಕರವಸ್ತ್ರದಲ್ಲಿ ಕಟ್ಟಿಕೊಂಡು ಮಾಲಿನಿಯಿದ್ದಲ್ಲಿಗೆ ಬಂದೆ.

ಎಲ್ಲಿದ್ದಾಳೆ ಮಾಲಿನಿ? ಸುತ್ತ ಮುತ್ತ ನೋಡಿದೆ; ಇಲ್ಲ. ಆದರೆ! ನನ್ನ ಜೊತೆ ಕೈಗಾಡಿಯುವರೆಗೂ ಬಂದವಳೋ ಏನು ಕಥೆ? ಅಲ್ಲಿಗೆ ಮರಳಿದೆ. ಇಲ್ಲ! ಮತ್ತೆ ಮೊದಲು ನಿಂತ ಜಾಗಕ್ಕೇ ಬಂದೆ; ಕಾಣಲಿಲ್ಲ. ಬಹುಶಃ ಮರದ ಕೆಳಗೇ ಇರಬಹುದು. ಓಡುತ್ತಾ ಓಡುತ್ತಾ, ಹೊರಟ ಜಾಗಕ್ಕೇ ಬಂದೆ. ಹುಲ್ಲಿನ ಮೇಲೆ ಮಾತ್ರ ನಾವು ಕೂತ ಅಸ್ಪಷ್ಟ ಮುದ್ರೆಗಳು.

ಓಡುತ್ತಾ ನಡೆದೆ. ಕಂಡ ಕಂಡ ಹುಡುಗಿಯರನ್ನೆಲ್ಲಾ ಮಾಲಿನಿ ಇರಬಹುದೇ, ಮಾಲಿನಿ ಇರಬಹುದೇ ಎಂದು ನೋಡಿದೆ. ಗಟ್ಟಿಯಾಗಿ ಕೂಗುವ ಹಾಗೂ ಇಲ್ಲ. ಎದೆಯ ಬಡಿತ ಜೋರಾಯಿತು. ಓಡಿದೆ; ಓಡಿದೆ.

ಗಕ್ಕನೆ ನಿಂತುಬಿಟ್ಟೆ ! ಹೌದು; ಓಡುವುದರಲ್ಲಾಗಲಿ ಹುಡುಕುವುದರಲ್ಲಾಗಲಿ ಅರ್ಥವಿಲ್ಲ. ನನಗಿದು ಮೊದಲೇ ಗೊತ್ತಾಗಬೇಕಾಗಿತ್ತು. ಆಕೆ ಉದ್ದೇಶಪೂರ್ವಕವಾಗಿಯೇ ತಪ್ಪಿಸಿಕೊಂಡಿದ್ದಾಳೆಂಬುದು ಸ್ಪಷ್ಟ. ರೂಮಿಗೆ ಹೋಗಿ ನೋಡಬಹುದು, ಆದರೆ, ಬೇರೆ ರೂಮು ಹುಡುಕುವುದನ್ನು ಸಿಲೋನಿನಿಂದ ಬಂದ ಮಾಲಿನಿಗೆ ಕಲಿಸಬೇಕಿಲ್ಲ. ನನಗೆ ತೀರಾ ವಿರುದ್ಧ ಗುಣದ ಹುಡುಗಿ. ನಾನು ಇಂತಹ ಅಪರಿಚಿತಳ ಸ್ನೇಹವೇ ಬೇಕೆಂದು ಮೇಲುನೋಟಕ್ಕೆ ಅಂದುಕೊಂಡಿದ್ದರೂ, ಮಾಲಿನಿ ಎಂಬ ಹೆಸರಿನವಳನ್ನೇ ಆರಿಸಿಕೊಂಡಿದ್ದು, ಅವಳು ಹಳ್ಳಿಯವಳೆಂದು ಗೊತ್ತಾದ ಮೇಲೇ ಆತ್ಮೀಯವಾಗಿ ಪತ್ರ ಬರೆದದ್ದು ಇವು, ನನಗೇ ಗೊತ್ತಾಗದ ಹಾಗೆ ಅಂತರಗಂದಲ್ಲಿ, ಹೊಸದನ್ನು ಸ್ವೀಕರಿಸಲಾಗದ ಸ್ಥಿತಿಯಿದ್ದುದರ ಸೂಚನೆಯಿರಬಹುದು.


ಮತ್ತೇ ಮರದಡಿ ಬಂದೆ. ವೇಳೆ ಮೀರುತ್ತಿತ್ತು. ಜಗ್ಗನೆ ದೀಪಮಾಲೆ ಆರಿಹೋಯಿತು. ಮಂಕು ಬಡಿದ ಬೃಂದಾವನ; ಬತ್ತಿ ಹೋದ ನೀರಿನ ಚಿಲುಮೆಗಳು.

ಹಸಿರು ಹುಲ್ಲಿನ ನೆಲದ ಮೇಲೆ ಮೈಚೆಲ್ಲಿ ಕೈಚಾಚಿ ನಿರಂಬಳವಾಗಿ ಮಲಗಿ ನಿದ್ರಿಸಿದೆ. ✡

ಸಾವಿರಾರು ವರ್ಷಗಳಿಂದ ಗುಹೆಯಲ್ಲಡಗಿದ ಕತ್ತಲೆ ಒಂದು ಸಣ್ಣ ಬೆಂಕಿಕಡ್ಡಿ ಗೀರುವುದರಿಂದ ಅಂಜಿ ಓಡಿಹೋಗುತ್ತದೆ. ಬೆಳಕು ನೆಲೆಸುತ್ತದೆ. ಎಂದು ನಾವು ತಿಳಿದುಕೊಂಡಿದ್ದೇವೆ. ಹಾಗೆಯೇ ನಮ್ಮಲ್ಲಿರುವ ಅಸಮಾನತೆಗಳನ್ನು ಒಂದೇ ಒಂದು ಮುಷ್ಟಿ ಎತ್ತಿ ಪ್ರತಿಭಟಿಸುವುದರ ಮೂಲಕ ಸಮೂಲ ನಾಶ ಮಾಡಿಬಿಡುತ್ತೇವೆನ್ನುವುದೂ ಮೂರ್ಖತನದ ಮಾತು. ಗುಹೆಯನ್ನೆಲ್ಲ ಬೆಳಗಲು ಬೇಕಾಗುವ ಬೆಳಕಿನ. ಸಾವಿರ ಪಟ್ಟು ಪ್ರತಿಭಟನೆ, ಪ್ರಯತ್ನಗಳಿಂದ ಮಾತ್ರ ಸಾವಿರಾರು ವರ್ಷಗಳ ಅಸಮಾನತೆಯನ್ನು ಕೊನೆಗೊಳಿಸಲು ಸಾಧ್ಯ.

- ಅಜ್ಞಾನಿ

Printed & published by P. S. Bhat for the Jayakarnataka News Printers Ltd., at the Samyukta Karnataka Press, Koppikar Road, Hubli-580 020. Rep: Bombay: V. Satyamurthy Phone: 522412; Calcutta: H. Muzamdar 45-4233; Madras: A. K. Subramanian Phone: 842201; New Delhi: P. R. Chopra Phone: 224130.


ವಿವಾ
ದಿನವಿಡೀ ಕಸುವನ್ನು ಒದಗಿಸುತ್ತದೆ.
ರಾತ್ರಿ, ಆರಾಮವನ್ನಿತ್ತು ನೀವು ಬೆಳಗ್ಗೆ ಉಲ್ಲಸಿತರಾಗಿ, ಸತ್ವಶಾಲಿಯಾಗಿರುವಂತೆ ಮಾಡುತ್ತದೆ.
ವಿವಾ ದಿನವಿಡೀ ಕಸುವನ್ನು ಒದಗಿಸುತ್ತದೆ!
ವಿವಾದ ಆಧುನಿಕ ಫಾರ್ಮುಲಾದಲ್ಲಿ ಅಧಿಕ ಶಕ್ತಿದಾಯಕ ಮಾಲ್ಟ್ ಹಾಗೂ ಅಧಿಕ ಅಂಗಾಂಶ-ನಿರ್ಮಾಣಕ ಪ್ರೋಟೀನ್‌ಗಳು ಇವೆ. ಇವು ಕಾರ್ಯಕಲಾಪಗಳಿಗಾಗಿ ನಿಮ್ಮ ಆಂತರಿಕ ಬಲವನ್ನು ಹೆಚ್ಚಿಸುತ್ತವೆ.
ವಿವಾ. ರಾತ್ರಿಯಲ್ಲಿ ಆರಾಮವನ್ನಿತ್ತು ಹೊಸ ತ್ರಾಣವನ್ನುಂಟುಮಾಡುತ್ತದೆ!
ರಾತ್ರಿ ಮಲಗುವ ಸಮಯದಲ್ಲಿ ತೆಗೆದುಕೊಂಡ ಒಂದು ಕಪ್ ಬಿಸಿ ವಿವಾ ನಿಮಗೆ ಆರಾಮವನ್ನಿತ್ತು, ಪೋಷಣೆಯನ್ನು ನೀಡುತ್ತದೆ ಮತ್ತು ನೀವು ನಿದ್ದೆಯಿಂದ ಏಳುವಾಗ ಉಲ್ಲಸಿತರಾಗಿ, ಸತ್ವಶಾಲಿಯಾಗಿ ಇರುವಂತೆ ಮಾಡುತ್ತದೆ.
JiL
ಜಗತ್‌ಜಿತ್ ಇಂಡಸ್ಟ್ರೀಸ್ ಲಿಮಿಟೆಡ್,
ಪಿ. ಓ. ಜಗತ್‌ಜಿತ್ ನಗರ್,
ಜಿಲ್ಲಾ ಕಪೂರ್‌ಥಲಾ (ಪಂಜಾಬ್)
ViVA
The Day and Night Health Drink
BUILDS UP STAMINA
ನಿಮಗೆ ಗೊತ್ತಿತ್ತೇ?
ಡಾಕ್ಟರರ ಹೇಳಿಕೆಯ ಪ್ರಕಾರ ನಿದ್ದೆಯು ಹೊಸ ಕಸುವನ್ನು ಪಡೆಯುವ ಅವಧಿಯನ್ನು ಒದಗಿಸುತ್ತದೆ. ಮಾತ್ರವಲ್ಲ ಶರೀರ ನಿರ್ಮಾಣದ ಪ್ರಕ್ರಿಯೆಗಳನ್ನೂ ಶರೀರವನ್ನು ಸರಿಪಡಿಸುವ ಕ್ರಿಯೆಯನ್ನೂ ಹೆಚ್ಚಿಸುತ್ತದೆ.
DEPTH OF SLEEP
Hours
0 1 2 3 4 5 6 7 8
ವಿಜ್ಞಾನವು ನಿದ್ದೆಯನ್ನು ತಿರುವುಗಳ ಸರಣಿಯ ರೂಪದಲ್ಲಿ ತೋರಿಸುತ್ತದೆ. ವಿವಾ ನಿಮಗೆ ಆರಾಮವನ್ನಿತ್ತು ಯೋಗ್ಯ ಹಂತದಲ್ಲಿ ನೀವು ನಿದ್ದೆ ಮಾಡುವಂತೆ ಸಹಾಯ ಮಾಡುತ್ತದೆ. ನಿಮಗೆ ಪೋಷಣೆಯನ್ನಿತ್ತು ನೀವು ಉಲ್ಲಸಿತರಾಗಿ ನಿದ್ದೆಯಿಂದ ಏಳುವಂತೆ ಮಾಡುತ್ತದೆ.
ವಿವಾ
ಹಗಲಿನ ಮತ್ತು ರಾತ್ರಿಯ ಆರೋಗ್ಯ ಪೇಯ.
ASP/JIL/IB/78

KASTURI PRICE : 1–25 Regd. No. KRNG

Registered with the Registrar of Newspapers for India under No. 3533/57

